ಮೈಸೂರು ವಿಶ್ವವಿದ್ಯಾನಿಲಯ

# UNIVERSITY OF MYSORE



## 2018–19ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಯ ಅನುಪಾಲನಾ ವರದಿ

## ANNUAL AUDIT REPORT (REPLIES) FOR THE YEAR 2018-19

ಮೈಸೂರು ವಿಶ್ವವಿದ್ಯಾನಿಲಯ

# UNIVERSITY OF MYSORE



# 2018–19ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಯ ಅನುಪಾಲನಾ ವರದಿ

# ANNUAL AUDIT REPORT (REPLIES) FOR THE YEAR 2018-19

**2018–19ನೇ ವರ್ಷದಲ್ಲಿ ಮೈಸೂರು ವಿಶ್ವವಿದ್ಯಾಲಯದಲ್ಲಿ ಸೇವೆ ಸಲ್ಲಿಸಿರುವ ಅಧಿಕಾರಿಗಳ ಹೆಸರು, ಹುದ್ದೆ ಮತ್ತು ಅವಧಿಯ ವಿವರಗಳು.**

| ಕ್ರ.ಸಂ | ಪದನಾಮ ಮತ್ತು ಹೆಸರು | ಸೇವಾ ಅವಧಿ |
|---|---|---|
| 1 | ಕುಲಪತಿಗಳು | ಪ್ರೊ.ಸಿ. ಬಸವರಾಜು (ಪ್ರಭಾರ)<br>01.04.2018 ರಿಂದ 02.05.2018<br>ಡಾ. ನಿಂಗಮ್ಮ ಸಿ ಬೆಟ್ಸೂರ್ (ಪ್ರಭಾರ)<br>03.05.2018 ರಿಂದ 26.05.2018<br>ಪ್ರೊ. ಟಿ.ಕೆ.ಉಮೇಶ್ (ಪ್ರಭಾರ)<br>26.05.2018 ರಿಂದ 22.09.2018<br>ಪ್ರೊ. ಆಯಿಷಾ ಎಂ ಶೆರೀಫ್ (ಪ್ರಭಾರ)<br>22.09.2018 ರಿಂದ 16.11.2018<br>ಪ್ರೊ.ಜಿ. ಹೇಮಂತ್‌ಕುಮಾರ್<br>16.11.2018 ರಿಂದ 31.03.2019 |
| 2 | ಕುಲಸಚಿವರು (ಆಡಳಿತ) | ಶ್ರೀಮತಿ ಭಾರತಿ.ಡಿ<br>01.04.2018 ರಿಂದ 13.06.2018<br>ಪ್ರೊ. ಆರ್. ರಾಜಣ್ಣ<br>14.06.2018 ರಿಂದ 22.02.2019<br>ಪ್ರೊ. ಲಿಂಗರಾಜಗಾಂಧಿ<br>22.02.2019 ರಿಂದ 31.03.2019 |
| 3 | ಕುಲಸಚಿವರು (ಮೌಲ್ಯಮಾಪನ) | ಪ್ರೊ॥ ಜೆ.ಸೋಮಶೇಖರ್<br>01.04.2018 ರಿಂದ 22.02.2019<br>ಡಾ.ಕೆ.ಎಂ ಮಹದೇವನ್<br>22.02.2019 ರಿಂದ 31.03.2019 |
| 4 | ಹಣಕಾಸು ಅಧಿಕಾರಿಗಳು | ಪ್ರೊ॥ ಮಹದೇವಪ್ಪ<br>01.04.2018 ರಿಂದ 31.03.2019 |
| 9 | ಲೆಕ್ಕಪರಿಶೋಧನಾಅವಧಿ | 2018–19 (01.04.2018 ರಿಂದ 31.03.2019) |
| 10 | ಲೆಕ್ಕಪರಿಶೋಧನೆಆರಂಭದ ದಿನಾಂಕ | 15.04.2019 |
| 11 | ಲೆಕ್ಕಪರಿಶೋಧನೆ ಮುಕ್ತಾಯದ ದಿನಾಂಕ ಮತ್ತು ತೆಗೆದುಕೊಂಡ ಮಾನವ ದಿನಗಳು | 22.09.2020<br>2035 |

| | | |
|---|---|---|
| 12 | ಲೆಕ್ಕ ಪರಿಶೋಧನಾತಂಡ | ಶ್ರೀಮತಿ ಸುಮಿತ್ರ , ಲೆಕ್ಕಪರಿಶೋಧನಾಧಿಕಾರಿಗಳು<br>ಶ್ರೀ ಲೋಕೇಶ್, ಲೆಕ್ಕಪರಿಶೋಧನಾಧಿಕಾರಿಗಳು<br>ಶ್ರೀ ಆನಂದ.ಕೆ, ಲೆಕ್ಕಪರಿಶೋಧನಾಧಿಕಾರಿಗಳು<br>ಶ್ರೀಮತಿ ಸವಿತಾಐ.ಎಂ , ಲೆಕ್ಕಪರಿಶೋಧನಾಧಿಕಾರಿಗಳು<br>ಡಾ.ಹೆಚ್.ಪಿ ವೆಂಕಟೇಶ, ಲೆಕ್ಕಪರಿಶೋಧನಾಧಿಕಾರಿಗಳು(ಪ)<br>ಶ್ರೀಮತಿ ಪ್ರತಿಭಾ, ಲೆಕ್ಕಪರಿಶೋಧನಾಧಿಕಾರಿಗಳು<br>ಶ್ರೀ ಅಣ್ಣೇಗೌಡ, ಲೆಕ್ಕಪರಿಶೋಧನಾಧಿಕಾರಿಗಳು<br>ಶ್ರೀ ಆರ್.ಮಂಜುನಾಥ್ ಲೆಕ್ಕಪರಿಶೋಧನಾಧಿಕಾರಿಗಳು<br>ಶ್ರೀ ಮೋಹನ್‌ಕುಮಾರ್.ಡಿ.ಸಿ ಲೆಕ್ಕಪರಿಶೋಧನಾಧಿಕಾರಿಗಳು<br>ಶ್ರೀ ಜಗನ್ನಾಥ್.ಎಂ.ಎನ್ ಲೆಕ್ಕಪರಿಶೋಧನಾಧಿಕಾರಿಗಳು(ಸ್ವ.ವೇ)<br>ಶ್ರೀ ರಮೇಶ ಲೆಕ್ಕಾಧೀಕ್ಷಕರು<br>ಶ್ರೀ ಚಂದ್ರಪ್ರಸಾದ್ ಲೆಕ್ಕಾಧೀಕ್ಷಕರು<br>ಶ್ರೀ ಸುಧಾಕರ್ ಲೆಕ್ಕಾಧೀಕ್ಷಕರು<br>ಶ್ರೀ ಶಿವಲಿಂಗೇಗೌಡ ಕೆ.ಎನ್ ಲೆಕ್ಕಾಧೀಕ್ಷಕರು<br>ಶ್ರೀಮತಿ ನಿರ್ಮಲಕುಮಾರಿ, ಲೆಕ್ಕಾಧೀಕ್ಷಕರು<br>ಶ್ರೀ ಪ್ರಿಯರಂಜನ್, ಲೆಕ್ಕಾಧೀಕ್ಷಕರು<br>ಶ್ರೀ ಮಧುಚಂದ್ರ, ಲೆಕ್ಕಾಧೀಕ್ಷಕರು<br>ಶ್ರೀಮತಿ ಸರ್ವಮಂಗಳಮ್ಮ ಲೆಕ್ಕಸಹಾಯಕರು<br>ಶ್ರೀ ಹರೀಶ ಲೆಕ್ಕಸಹಾಯಕರು<br>ಶ್ರೀಮತಿ ದಿವ್ಯಎನ್ ಲೆಕ್ಕಸಹಾಯಕರು<br>ಶ್ರೀಮತಿ ಸೌಮ್ಯ.ಹೆಚ್.ಎಸ್, ಲೆಕ್ಕಸಹಾಯಕರು<br>ಶ್ರೀಮತಿ ಅಶ್ವಿನಿ.ಎಸ್, ಲೆಕ್ಕಸಹಾಯಕರು<br>ಶ್ರೀ ಅಭಿಲಾಷ್.ಪಿ ಲೆಕ್ಕಸಹಾಯಕರು<br>ಕು. ತೇಜಸ್ವಿನಿ.ಬಿ.ಎನ್, ಲೆಕ್ಕಸಹಾಯಕರು<br>ಶ್ರೀ ನಾಗೇಂದ್ರ ಹೆಚ್ ಕೆ ಲೆಕ್ಕಸಹಾಯಕರು<br>ಶ್ರೀಮತಿ ರೂಪ ಲೆಕ್ಕಸಹಾಯಕರು<br>ಶ್ರೀ ಬಾಲರಾಜ್‌ಎನ್ ಲೆಕ್ಕಸಹಾಯಕರು<br>ಶ್ರೀಮತಿ ಗೀತಾ ಲೆಕ್ಕಸಹಾಯಕರು<br>ಶ್ರೀಮತಿ ನುಝಹತ್‌ಫಾತಿಮಾ, ಲೆಕ್ಕಸಹಾಯಕರು<br>ಶ್ರೀ ಚಂದ್ರಶೇಖರ್, ಲೆಕ್ಕಸಹಾಯಕರು |
| 13 | ಲೆಕ್ಕ ಪರಿಶೋಧನಾ ವರದಿಯ ಪುನರ್ ಪರಿಶೀಲನಾಧಿಕಾರಿಗಳು | ಡಾ: ಸಿದ್ದರಾಜು, ಕೆ.ಎಸ್.ಎ.ಎಸ್.<br>ಅಪರ ನಿರ್ದೇಶಕರು<br>ಕರ್ನಾಟಕರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ<br>ಪ್ರಾಂತೀಯಕಛೇರಿ–ಮೈಸೂರು |
| 15 | ಲೆಕ್ಕ ಪರಿಶೋಧನಾ ವರದಿಯ ಪುನರ್ ಪರಿಶೀಲನಾ ದಿನಾಂಕ | 06.04.2021 |

**2018–19ನೇ ವರ್ಷದ ಮೈಸೂರು ವಿಶ್ವವಿದ್ಯಾನಿಲಯದ ವಾರ್ಷಿಕ ಲೆಕ್ಕಪರಿಶೋಧನಾ ವರದಿಯಲ್ಲಿ ಕಂಡು ಬಂದ ಆಕ್ಷೇಪಣೆಗಳು ಹಾಗೂ ವಸೂಲಾತಿಗಳ ವಿವರ.**

| ಕ್ರ. ಸಂ | ಕಂಡಿಕೆ ಸಂಖ್ಯೆ | ವಿವರ | ಆಕ್ಷೇಪಣೆಗೆ ಸೂಚಿಸಿದ ಮೊತ್ತ (ರೂ.ಗಳಲ್ಲಿ) | ವಸೂಲಾತಿಗೆ ಸೂಚಿಸಿದ ಮೊತ್ತ (ರೂ.ಗಳಲ್ಲಿ) |
|---|---|---|---|---|
| | | **ಅಧ್ಯಾಯ–1**<br>**ಪ್ರಸ್ತಾವನೆ** | | |
| 1 | 1 | ಹಿಂದಿನ ವರ್ಷಗಳ ಲೆಕ್ಕ ತಪಾಸಣಾ ವರದಿಗಳ ಕಂಡಿಕೆಗಳ ತೀರುವಳಿ ಬಗ್ಗೆ. | – | – |
| | | **ಅಧ್ಯಾಯ–2**<br>**ಮೈಸೂರು ವಿಶ್ವವಿದ್ಯಾನಿಲಯದ ಸ್ಥೂಲ ನೋಟ** | | |
| 2 | 2.1 | ವಿಶ್ವವಿದ್ಯಾನಿಲಯದ ಸ್ಥಾಪನೆಯ ಹಿನ್ನೆಲೆ | – | – |
| 3 | 2.2 | ವಿಶ್ವವಿದ್ಯಾನಿಲಯದ ಸಾಂಸ್ಥಿಕ ರಚನೆ | – | – |
| 4 | 2.3 | ವಿಶ್ವವಿದ್ಯಾನಿಲಯದ ಸಮಿತಿಗಳು | – | – |
| 5 | 2.4 | ವಿಶ್ವವಿದ್ಯಾನಿಲಯದ ಅಧಿಕಾರಿಗಳ ಆಂತರಿಕ ಹೊಣೆಗಾರಿಕೆಗಳ ಸ್ಥೂಲ ಪರಿಚಯ | – | – |
| | | **ಅಧ್ಯಾಯ–3**<br>**ವಿಶ್ವವಿದ್ಯಾನಿಲಯದ ಹಣಕಾಸು ಪರಿಸ್ಥಿತಿ** | | |
| 6 | 3.1 | ವಿಶ್ವವಿದ್ಯಾನಿಲಯಕ್ಕೆ ಹಣಕಾಸಿನ ಹರಿವು | – | – |
| 7 | 3.2 | ವಿಶ್ವವಿದ್ಯಾನಿಲಯದ ನಿಧಿ | – | – |
| 8 | 3.3 | ವಿಶ್ವ ವಿದ್ಯಾನಿಲಯದ ಬೇಡಿಕೆ, ವಸೂಲಾತಿ ಹಾಗೂ ಬಾಕಿ ವಿವರಗಳು | – | – |
| | | **ಅಧ್ಯಾಯ–4**<br>**ವಿಶ್ವವಿದ್ಯಾನಿಲಯದಆಯವ್ಯಯ** | | |
| 9 | 4.1 | ಆಯವ್ಯಯ ಅಂದಾಜುಗಳು | – | – |
| 10 | 4.2 | ವಿಶ್ವವಿದ್ಯಾನಿಲಯದ ಯುವರಾಜ ಕಾಲೇಜು (ಸ್ವಾಯತ್ತ)ಗೆ ಪ್ರತ್ಯೇಕ ಆಯವ್ಯಯ ಅಂದಾಜುಗಳನ್ನು ತಯಾರಿಸಿರುವುದು | – | – |
| 11 | 4.3 | ಪುನರ್ವಿನಿಯೋಗ (Re-appropriation) ಮಾಡಿಯೂ ಎರಡು ಶೀರ್ಷಿಕೆಗಳಲ್ಲಿ ಶೇ.10ಕ್ಕಿಂತಲೂ ಹೆಚ್ಚು ವೆಚ್ಚ ಮಾಡಿರುವುದು | – | – |
| 12 | 4.4 | ಪುನರ್ವಿನಿಯೋಗ (Re-appropriation) ಮಾಡಿಕೊಳ್ಳದೆಯೇ ಹೆಚ್ಚುವರಿ ವೆಚ್ಚ ಭರಿಸಿರುವುದು | – | – |
| | | **ಅಧ್ಯಾಯ–5**<br>**ವಿಶ್ವವಿದ್ಯಾನಿಲಯದ ಲೆಕ್ಕಪತ್ರ ನಿರ್ವಹಣೆ** | | |
| 13 | 5.1 | ವಿಶ್ವವಿದ್ಯಾನಿಲಯವು ಅಳವಡಿಸಿಕೊಂಡಿರುವ ಲೆಕ್ಕಪದ್ಧತಿ | – | – |
| 14 | 5.2 | ಮಾಸಿಕ ಲೆಕ್ಕಗಳ ಸಲ್ಲಿಕೆ | – | – |
| 15 | 5.3 | ವಾರ್ಷಿಕ ಲೆಕ್ಕಪತ್ರಗಳು | – | – |
| | | **ಅಧ್ಯಾಯ–6**<br>**ಹಣಕಾಸು ವಿಭಾಗ** | | |
| 16 | 6.1. | 2018–19ನೇ ಸಾಲಿನ ವಿಶ್ವವಿದ್ಯಾನಿಲಯದ ವ್ಯವಹರಣೆಯ ವಿವರಗಳು | – | – |
| 17 | 6.2 | 2018–19ನೇ ಸಾಲಿನ ವಾರ್ಷಿಕ ಲೆಕ್ಕಪತ್ರದ ವಿವರಗಳು | – | – |
| 18 | 6.3 | ವಿಶ್ವವಿದ್ಯಾನಿಲಯದ ಯುವರಾಜ ಕಾಲೇಜಿನ (ಸ್ವಾಯತ್ತ) ಆರ್ಥಿಕ ಪರಿಸ್ಥಿತಿ | – | – |
| 19 | 6.4 | ನಿಯಂತ್ರಣವಿಲ್ಲದ ಅನುದಾನದ ವರ್ಗಾವಣೆಗಳು | – | – |
| 20 | 6.5 | ಕೆಲವು ಬ್ಯಾಂಕ್ ಖಾತೆಗಳನ್ನು ಮುಕ್ತಾಯಗೊಳಿಸಿ ಅವುಗಳಲ್ಲಿದ್ದ ಶಿಲ್ಕನ್ನು ಬೇರೆ ಖಾತೆಗಳಿಗೆ ಜಮೆ ಮಾಡಿರುವುದು. | – | – |

| | | | | |
|---|---|---|---|---|
| 21 | 6.6 | ಆಯವ್ಯಯದಲ್ಲಿ ಅವಕಾಶವಿಲ್ಲದಿದ್ದರೂ ಮಾಡಿರುವ ವೆಚ್ಚಗಳು | – | – |
| 22 | 6.7 | ಪಿಂಚಣಿ ನಿಧಿ ಖಾತೆಯ 2017–18ನೇ ಸಾಲಿನ ಆಖೈರು ಶಿಲ್ಕಿಗೂ 2018–19ನೇ ಸಾಲಿಗೆ ಪ್ರಾರಂಭಿಕ ಶಿಲ್ಕಿಗೂ ವ್ಯತ್ಯಾಸವಿರುವುದು | – | – |
| 23 | 6.8 | ಅಮಾನತ್ತು(Suspense Account) ಖಾತೆಯಲ್ಲಿ ಹಣ ಲಭ್ಯವಿಲ್ಲದಿದ್ದರೂ ಧನಾದೇಶಗಳನ್ನು ಬರೆದಿರುವುದು ಹಾಗೂ ಬ್ಯಾಂಕ್ ಲೆಕ್ಕಗಳೊಂದಿಗೆ ಮಾಹೆವಾರು ಲೆಕ್ಕ ಸಮನ್ವಯಗೊಳಿಸದಿರುವುದು | – | – |
| 24 | 6.9 | ವಿಶ್ವವಿದ್ಯಾನಿಲಯದ ಬೇಡಿಕೆ, ಸ್ವೀಕೃತಿ ಹಾಗೂ ಬಾಕಿ ವಿವರಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸದಿರುವುದು | – | – |
| 25 | 6.10 | ವಿಶ್ವವಿದ್ಯಾನಿಲಯದ ನಿಧಿಯ ಹೂಡಿಕೆಯಲ್ಲಿ ನಿಯಮ ಪಾಲನೆ ಮಾಡದಿರುವುದು | – | – |
| 26 | 6.11 | ವಿಶ್ವವಿದ್ಯಾನಿಲಯದ ಉದ್ಯೋಗಿಗಳ ಸಹಕಾರ ಸಂಘದಲ್ಲಿ ಹೂಡಿಕೆ ಮಾಡಿರುವುದು | 3,28,898 | – |
| 27 | 6.12 | ಯುವರಾಜ ಕಾಲೇಜಿನಲ್ಲಿ ನಿಶ್ಚಿತ ಅವಧಿ ಠೇವಣಿ (ಎಫ್‌ಡಿಆರ್) ಗಳಲ್ಲಿ ಹಣ ಹೂಡಿಕೆ ಮತ್ತು ನಿರ್ವಹಣೆಯಲ್ಲಿ ನಿಯಮಗಳನ್ನು ಪಾಲನೆ ಮಾಡದಿರುವುದು | – | – |
| 28 | 6.13 | ಪಿಂಚಣಿ ಖಾತೆಯಿಂದ ನಿಶ್ಚಿತ ಠೇವಣಿಗಳಲ್ಲಿ ಹೂಡಿಕೆ ಮಾಡಿರುವ ದಾಖಲಾತಿಗಳನ್ನು ಹಾಜರುಪಡಿಸದಿರುವ ಬಗ್ಗೆ | – | – |
| 29 | 6.14 | ಬ್ಯಾಂಕಿಗೆ ಇರಸಾಲು ಮಾಡಿದ ಮೊತ್ತ ರೂ.20,13,996/–ಗಳು ಬ್ಯಾಂಕ್ ಲೆಕ್ಕದಲ್ಲಿ ಬಾರದೇ ಇರುವುದು | – | 20,13,996 |
| 30 | 6.15 | ತಪ್ಪು ಜಮೆ ಮತ್ತು ತಪ್ಪು ವೆಚ್ಚಗಳ ವಿವರಗಳನ್ನು ಒದಗಿಸದಿರುವುದು | – | – |
| 31 | 6.16 | ನಗದು ಪುಸ್ತಕವನ್ನು ನಿರ್ವಹಿಸದಿರುವುದು/ಅಸಮರ್ಪಕ ನಿರ್ವಹಣೆ | – | – |
| 32 | 6.17 | ವಿಶ್ವವಿದ್ಯಾನಿಲಯದ ಕಾನೂನು ಸಲಹೆಗಾರರು, ನಿವೃತ್ತ ನ್ಯಾಯಾಧೀಶರು ಹಾಗೂ ಸಂದರ್ಶಕ ಪ್ರಾಧ್ಯಾಪಕರಿಗೆ ಪಾವತಿಸಿದ ವೃತ್ತಿ ಶುಲ್ಕ ಮತ್ತು ಗೌರವ ಧನದಿಂದ ಆದಾಯ ತೆರಿಗೆ ಟಿ.ಡಿ.ಎಸ್ ಮಾಡದಿರುವುದು | – | 21,216 |
| 33 | 6.18 | ವಾರ್ಷಿಕ ನಿರ್ವಹಣೆ ಸೇವೆ ಒದಗಿಸಿದ ಸಂಸ್ಥೆಯ ಬಿಲ್ಲಿನಿಂದ ಆದಾಯ ತೆರಿಗೆ ಟಿ.ಡಿ.ಎಸ್ ಮಾಡದಿರುವುದು | – | 8,800 |
| 34 | 6.19 | ಸಾಮಗ್ರಿ ಸರಬರಾಜು ಮತ್ತು ಸೇವೆ ಒದಗಿಸಿದ ಸಂಸ್ಥೆಗಳಿಗೆ ಪಾವತಿಸಿದ ಬಿಲ್ಲುಗಳಿಂದ ಜಿ.ಎಸ್.ಟಿ, ಟಿ.ಡಿ.ಎಸ್ ಕಟಾಯಿಸದಿರುವುದು | – | 21,97,581 |
| 35 | 6.20 | ನಿಯಮ ಬಾಹಿರವಾಗಿ ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳಲ್ಲಿ ಹಣ ಡ್ರಾ ಮಾಡಿರುವುದು | 30,37,698 | – |
| 36 | 6.21 | ಡಿ.ಸಿ ಬಿಲ್ಲಿನಲ್ಲಿ ವೆಚ್ಚ ಭರಿಸಬೇಕಾದ ಬಿಲ್ಲುಗಳಿಗೆ ಎ.ಸಿ ಬಿಲ್ಲಿನ ಮೂಲಕ ಹಣ ಡ್ರಾ ಮಾಡಿರುವುದು | 4,23,526 | – |
| 37 | 6.22 | 2018–19ನೇ ಸಾಲಿನಲ್ಲಿ ಯು.ಜಿ.ಸಿ/ಇತರೆ ಬಾಹ್ಯ ಏಜೆನ್ಸಿಗಳಿಂದ ವಿವಿಧ ಯೋಜನೆಗಳಿಗೆ ಬಿಡುಗಡೆಯಾದ ಅನುದಾನಕ್ಕೆ ಹಣ ಬಳಕೆ ಪ್ರಮಾಣ ಪತ್ರ ಸಲ್ಲಿಸದಿರುವುದು | – | – |
| 38 | 6.23 | ಯು.ಪಿ.ಇ ಯೋಜನೆಯಡಿ ವಿಶ್ವವಿದ್ಯಾನಿಲಯದ ವಿವಿಧ ಪ್ರಯೋಗಾಲಯಗಳ ಉಪಕರಣಗಳ ವಾರ್ಷಿಕ ನಿರ್ವಹಣೆಯ ವೆಚ್ಚವನ್ನು ಮುಂಗಡವಾಗಿ ಪಾವತಿಸಿರುವುದು | 27,44,125 | – |
| 39 | 6.24 | ಭದ್ರತಾ ಠೇವಣಿಯ ಬ್ಯಾಂಕ್ ಗ್ಯಾರಂಟಿಯ ನೈಜತೆ ಬಗ್ಗೆ ಬ್ಯಾಂಕಿನಿಂದ ದೃಢೀಕರಣ ಪಡೆಯದೇ ಗುತ್ತಿಗೆ ಕರಾರು ಮಾಡಿಕೊಂಡಿರುವುದು. | – | – |
| 40 | 6.25 | ಇತಿಹಾಸಅಧ್ಯಯನ ವಿಭಾಗದಲ್ಲಿ ಸಮಗ್ರತಾದೃಷ್ಟಿ ಮತ್ತುಅಭಿವೃದ್ಧಿಯರಾಷ್ಟ್ರೀಯಕಾರ್ಯಾಗಾರ ವ್ಯವಸ್ಥೆಯ ಸಂಬಂಧಕರೆದಿರುವರೆನ್ನಲಾದ ದರಪಟ್ಟಿಗಳಲ್ಲಿನ ನ್ಯೂನತೆಗಳು | 1,81,000 | – |
| 41 | 6.26 | ವಿಶ್ವವಿದ್ಯಾನಿಲಯದ ತಾತ್ಕಾಲಿಕ ಉದ್ಯೋಗಿಗಳ ಭವಿಷ್ಯ ನಿಧಿ ವಂತಿಕೆಯ ದಂಡ ಹಾಗೂ ಬಡ್ಡಿ ಪಾವತಿಸಿರುವುದು | – | 52,598 |

| | | | | |
|---|---|---|---|---|
| 42 | 6.27 | ಮಹಾರಾಜ ಕಾಲೇಜಿನಲ್ಲಿ ಸೆಲ್ಫ್‌ಚೆಕ್ ಮೂಲಕ ಬ್ಯಾಂಕ್‌ನಿಂದ ಹಣ ಡ್ರಾ ಮಾಡಿರುವುದು | 4,13,845 | – |
| 43 | 6.28 | ಅಣುಜೀವ ವಿಜ್ಞಾನ ಅಧ್ಯಯನ ವಿಭಾಗದಲ್ಲಿ ಡಿ.ಎಸ್.ಟಿ ಅನುದಾನದ ಯೋಜನೆಯಡಿ ಭರಿಸಿರುವ ವಾಸ್ತವಿಕ ವೆಚ್ಚ ಹಾಗೂ ಹಣ ಬಳಕೆ ಪ್ರಮಾಣ ಪತ್ರದಲ್ಲಿ ವ್ಯತ್ಯಾಸಗಳಿರುವುದು | 1,68,564 | – |
| 44 | 6.29 | ಲೇಖನ ಸಾಮಗ್ರಿ ಖರೀದಿ ಟೆಂಡರ್‌ನ ಭದ್ರತಾ ಠೇವಣಿಯ ವಿವರಗಳನ್ನು ಹಾಜರುಪಡಿಸದಿರುವುದು | – | – |
| 45 | 6.30 | ಪ್ರಯಾಣ ಭತ್ಯೆ ಪಾವತಿಗೆ ಸಂಬಂಧಿಸಿದ ಪೂರಕ ಲೆಕ್ಕಪತ್ರ ದಾಖಲೆಗಳನ್ನು ಹಾಜರುಪಡಿಸದಿರುವುದು | 2,38,377 | – |
| 46 | 6.31 | 98ನೇ ಘಟಿಕೋತ್ಸವಕ್ಕೆ ಚಿನ್ನದ ಪದಕ ಖರೀದಿಯಲ್ಲಿ ರೂ.4520/–ಗಳನ್ನು ಹೆಚ್ಚುವರಿಯಾಗಿ ಪಾವತಿಸಿರುವುದು | – | 4,520 |
| 47 | 6.32 | ಕಾಮಗಾರಿ ಬಿಲ್ಲನ್ನು ಡಿ.ಸಿ ಬಿಲ್ಲಿನ ಮೂಲಕ ಪಾವತಿಸಿರುವ ಕುರಿತು | 31,470 | – |
| 48 | 6.33 | ಭದ್ರತಾ ಠೇವಣಿ ಮೊತ್ತವನ್ನು ಖಾತೆಗೆ ಜಮಾ ಮಾಡಿಕೊಳ್ಳದಿರುವುದರಿಂದ ರೂ.30,220/– ಬಡ್ಡಿ ನಷ್ಟವಾಗಿರುವುದು | – | 30,220 |
| 49 | 6.34 | ಆಂತರಿಕ ನಿಯಂತ್ರಣಾ ವ್ಯವಸ್ಥೆಯಕೊರತೆ | – | – |
| 50 | 6.35 | ವಕೀಲರುಗಳ ಬಿಲ್ಲುಗಳಲ್ಲಿ ಕಟಾಯಿಸಲಾದ ಆದಾಯ ತೆರಿಗೆಯನ್ನು ಆದಾಯತೆರಿಗೆ ಇಲಾಖೆಗೆ ಜಮಾ ಮಾಡಿರುವುದಕ್ಕೆ ಲೆಕ್ಕಪತ್ರ ದಾಖಲೆಗಳನ್ನು ಹಾಜರುಪಡಿಸದಿರುವುದು | – | 1,53,910 |
| **ಅಧ್ಯಾಯ–7<br>ಶೈಕ್ಷಣಿಕ ವಿಭಾಗ** | | | | |
| 51 | 7.1 | ಪ್ರವೇಶಾತಿ ಶುಲ್ಕ ಸರ್ಕಾರದಿಂದ ಮರುಭರಿಕೆಯಾಗದಿರುವುದು ಮತ್ತು ವಿದ್ಯಾರ್ಥಿಗಳಿಂದ ಕಡಿಮೆ ಶುಲ್ಕ ವಸೂಲಾತಿ ಮಾಡಿರುವುದು | – | 6,57,88,682 |
| 52 | 7.2 | ಸಂಯೋಜಿತ ಕಾಲೇಜುಗಳಿಂದ ಸಂದಾಯವಾಗಬೇಕಾದ ಶುಲ್ಕವನ್ನು ವಸೂಲಿಸದಿರುವುದು | – | 5,04,84,573 |
| 53 | 7.3 | ವಿದ್ಯಾರ್ಥಿ ವೇತನದ ಶುಲ್ಕ ಹಿಂಭರಿಕೆ ಮಾಡಿಕೊಳ್ಳದೇ ಮಂಡ್ಯ ಸ್ನಾತಕೋತ್ತರ ಕೇಂದ್ರದ ಬ್ಯಾಂಕ್ ಖಾತೆಯಿಂದ ವಿಶ್ವವಿದ್ಯಾನಿಲಯದ ಖಾತೆಗಳಿಗೆ ಶುಲ್ಕದ ಮೊತ್ತ ಜಮಾ ಮಾಡಿರುವುದು | – | 64,865 |
| 54 | 7.4 | ಮಾನಸಗಂಗೋತ್ರಿ ಶಿಕ್ಷಣ ಸಂಸ್ಥೆಯ ಪ್ರವೇಶಾತಿ ಶುಲ್ಕದಲ್ಲಿ ನೌಕರರಿಗೆ ಮುಂಗಡ ನೀಡಿರುವುದು | – | 27,000 |
| **ಅಧ್ಯಾಯ–8<br>ಆಡಳಿತ ವಿಭಾಗ** | | | | |
| 55 | 8.1 | ಶ್ರೇಣಿ ವಹಿಯನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸದಿರುವುದು | – | – |
| 56 | 8.2 | ವಿಶ್ವವಿದ್ಯಾನಿಲಯದ ವಿವಿಧ ವಿಭಾಗಗಳಲ್ಲಿ ಸ್ವೀಕೃತಿ ಮೊತ್ತವನ್ನು ಕಡಿಮೆ ಜಮೆ ಮಾಡಿರುವುದು ಹಾಗೂ ವಿಳಂಬವಾಗಿ ಜಮೆ ಮಾಡಿರುವುದು | – | 2,79,980 |
| 57 | 8.3 | ವಿಶ್ವವಿದ್ಯಾನಿಲಯದ 7 ಅಧ್ಯಯನ ವಿಭಾಗಗಳಿಗೆ ನೇಮಕ ಮಾಡಿದ 20 ಮಂದಿ ಸಹಾಯಕ ಪ್ರಾಧ್ಯಾಪಕರುಗಳ ನೇಮಕಾತಿಯ ಅವಧಿ ವಿಸ್ತರಿಸಿರುವುದು | 54,00,000 | – |
| 58 | 8.4 | ಶ್ರೀಮತಿ ನಿರ್ಮಲ.ಎನ್, ಶೀಘ್ರ ಲಿಪಿಗಾರರು, ಆಡಳಿತ ವಿಭಾಗ ಇವರಿಗೆ ಹೆಚ್ಚುವರಿಯಾಗಿ ವೇತನ ಮತ್ತು ಭತ್ಯೆಗಳನ್ನು ಪಾವತಿಸಿರುವುದು | – | 95,292 |
| 59 | 8.5 | ಸರ್ಕಾರದ ಮಾರ್ಗಸೂಚಿಗಳನ್ನು ಉಲ್ಲಂಘಿಸಿ ತಾತ್ಕಾಲಿಕ ಹಾಗೂ ಸಂಚಿತ ವೇತನದ ಬೋಧಕೇತರ ನೌಕರರನ್ನು ನೇಮಕ ಮಾಡಿಕೊಂಡು ವೇತನ ಪಾವತಿಸಿರುವುದು | 14,93,11,778 | – |
| 60 | 8.6 | ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಸ್ನಾತಕೋತ್ತರ ಅಧ್ಯಯನ ಮತ್ತು ಸಂಶೋಧನಾ ವಿಭಾಗದ ಶ್ರೀ ಪ್ರದೀಪ್‌ಕುಮಾರ್.ಬಿ. ತಾಂತ್ರಿಕ ಸಹಾಯಕರವರಿಗೆ ಹೆಚ್ಚುವರಿ ವೇತನ ಪಾವತಿಸಿರುವುದು | – | 24,000 |
| 61 | 8.7 | ಶ್ರೀ ಎಸ್.ಜಗನ್ನಾಥ್, ಸಂಶೋಧನಾ ಸಹಾಯಕರು, ಗ್ರೇಡ್–1, ಪ್ರಾಚ್ಯ | – | – |

| | | | | |
|---|---|---|---|---|
| | | ವಿದ್ಯಾ ಸಂಶೋಧನಾಲಯ ವಿಭಾಗ ಇವರಿಗೆ ವಯೋ ನಿವೃತ್ತಿ ದಿನಾಂಕವನ್ನು ವಿಸ್ತರಿಸಿ ವೇತನಪಾವತಿಸಿರುವುದು | | |
| 62 | 8.8 | ಯೋಜನೆ ಮತ್ತು ವಾಸ್ತು ಶಿಲ್ಪ ವಿದ್ಯಾಸಂಸ್ಥೆಗೆ ಬೋದಕರನ್ನು ನೇಮಕ ಮಾಡಿಕೊಳ್ಳುವಾಗ ನಿಯಮಗಳನ್ನು ಪಾಲನೆ ಮಾಡಿರುವುದಕ್ಕೆ ಸಂಬಂಧಿಸಿದ ದಾಖಲಾತಿಗಳನ್ನು ಹಾಜರುಪಡಿಸದಿರುವುದು | 77,24,124 | – |
| 63 | 8.9 | ಹೆಚ್ಚುವರಿಯಾಗಿ ಮನೆ ಬಾಡಿಗೆ ಭತ್ಯೆಯನ್ನು ಪಾವತಿಸಿರುವುದರಿಂದ ವಿಶ್ವವಿದ್ಯಾನಿಲಯಕ್ಕೆ ಆರ್ಥಿಕ ನಷ್ಟ ಉಂಟಾಗಿರುವುದು | – | 2,25,160 |
| 64 | 8.10 | ಕಾಲೇಜು ಅಭಿವೃದ್ಧಿ ಮಂಡಳಿಯ ಪರಿಶೀಲನಾ ತಂಡದ ಸದಸ್ಯರು/ಸಿಬ್ಬಂದಿಗಳಿಗೆ ಗೌರವ ಸಂಭಾವನೆಯನ್ನು ನಿಯಮ ಬಾಹಿರವಾಗಿ ಪಾವತಿಸಿರುವುದು | 6,81,500 | – |
| 65 | 8.11 | ತಾತ್ಕಾಲಿಕ ಗುಮಾಸ್ತ ಕಮ್ ಬೆರಳಚ್ಚುಗಾರರವರಿಗೆ ಕೆಲಸ ನಿರ್ವಹಿಸದ ಅವಧಿಗೆ ವೇತನ ಪಾವತಿ ಮಾಡಿರುವುದರಿಂದ ವಿಶ್ವವಿದ್ಯಾನಿಲಯಕ್ಕೆ ರೂ.2,20,430/-ಗಳ ನಷ್ಟವಾಗಿರುವುದು | – | 2,20,430 |
| 66 | 8.12 | ಸರ್ಕಾರದ ಆದೇಶಗಳು, ವಿಶ್ವವಿದ್ಯಾನಿಲಯದ ಅಧಿನಿಯಮ, ನಿಯಮ ಮತ್ತು ಪರಿನಿಯಮಗಳನ್ನು ಉಲ್ಲಂಘಿಸಿ, ನಿವೃತ್ತದಾರರಿಗೆ ಹಳೆಯ ಪಿಂಚಣಿಯೋಜನೆಯನ್ನು ಜಾರಿಗೊಳಿಸಿರುವುದು | – | 5,27,051 |
| 67 | 8.13 | ನೂತನ ಪಿಂಚಣಿ ಯೋಜನೆಗೆ ಒಳಪಡುವ ನೌಕರರ ಪಿಂಚಣಿ ವಂತಿಕೆಯನ್ನು ಎನ್.ಪಿ.ಎಸ್ ಖಾತೆಗೆ ಜಮೆ ಮಾಡಿರುವ ವಿವರಗಳನ್ನು ಹಾಜರುಪಡಿಸದಿರುವ ಬಗ್ಗೆ | 1,50,25,009 | – |
| 68 | 8.14 | ವಿಶ್ವವಿದ್ಯಾನಿಲಯದ ವಿವಿಧ ಭವನಗಳು, ಕಟ್ಟಡಗಳು ಹಾಗೂ ಸಭಾಂಗಣಗಳ ಬಾಡಿಗೆಯಲ್ಲಿ ಮತ್ತು ಈಜು ಕೊಳದ ಟಿಕೆಟ್‌ಗಳಲ್ಲಿ ಜಿ.ಎಸ್.ಟಿ ಸಂಗ್ರಹಿಸಿ ಸರ್ಕಾರದ ಲೆಕ್ಕಕ್ಕೆ ಜಮೆ ಮಾಡದಿರುವುದು | – | 20,43,955 |
| 69 | 8.15 | ಪರೀಕ್ಷೆಗಳು ಹಾಗೂ ಉತ್ತರ ಪತ್ರಿಕೆಗಳ ಮೌಲ್ಯಮಾಪನ ಕಾರ್ಯಗಳಲ್ಲಿ ಕರ್ತವ್ಯ ನಿರ್ವಹಿಸಿದ ಯು.ಜಿ.ಸಿ/ಯು.ಜಿ.ಸಿ. ಯೇತರ(UGC/Non-UGC) ಬೋಧಕರುಗಳಿಗೆ ಪ್ರಯಾಣ ಭತ್ಯೆ, ದಿನಭತ್ಯೆ ಹಾಗೂ ಸ್ಥಳೀಯ ಭತ್ಯೆಯನ್ನು ಪಾವತಿಸಿರುವುದು | – | 33,16,974 |
| 70 | 8.16 | ವಿಶ್ವವಿದ್ಯಾನಿಲಯದ ಖಾಯಂ ಸಿಬ್ಬಂದಿ ವರ್ಗದವರಿಗೆ ಗೌರವಧನ/ಪರೀಕ್ಷಾ ಸಂಭಾವನೆ/ವಾರ್ಷಿಕ ಸಂಭಾವನೆಯನ್ನು ನಿಯಮ ಬಾಹಿರವಾಗಿ ಪಾವತಿಸಿರುವುದು | – | 5,14,423 |
| 71 | 8.17 | ಮಹಾರಾಜ ಕಾಲೇಜಿನ ವಾರ್ಷಿಕ ಸಂಚಿಕೆ "ಅನಂತಯಾತ್ರೆ"ಯನ್ನು ಟೆಂಡರ್ ಕರೆಯದೆ ಖಾಸಗಿ ಮುದ್ರಣಾಲಯದಿಂದ ಮುದ್ರಿಸಿಕೊಂಡಿರುವುದು | 1,89,400 | – |
| 72 | 8.18 | ಮಾನಸಗಂಗೋತ್ರಿಯ ಸ್ನಾತಕೋತ್ತರ ಗ್ರಂಥಾಲಯದಲ್ಲಿ ಕೆ.ಟಿ.ಪಿ.ಪಿ ಕಾಯ್ದೆ ಅನುಸರಿಸದೆ ವಿವಿಧ ಸಾಮಗ್ರಿಗಳನ್ನು ಖರೀದಿಸಿರುವುದು | 4,86,656 | – |
| 73 | 8.19. | ಪ್ರಯೋಗಾಲಯ ಉಪಕರಣ ಖರೀದಿ ಸಂಬಂಧ ಗುತ್ತಿಗೆ ಕರಾರು ಮಾಡಿಕೊಳ್ಳದೇ ಬಿಲ್ಲು ಪಾವತಿಸಿರುವುದು | – | – |
| 74 | 8.20 | "ಡಾಟಾ ಅನಾಲಿಸಿಸ್ ಅಂಡ್ ಲರ್ನಿಂಗ್ 2018" ಅಂತರರಾಷ್ಟ್ರೀಯ ಸಮ್ಮೇಳನಕ್ಕೆ ಸಾಮಗ್ರಿ ಖರೀದಿ/ಸೇವೆ ಪಡೆಯುವಾಗ ಪಾರದರ್ಶಕತೆ ನಿಯಮಗಳನ್ನು ಪಾಲನೆ ಮಾಡದಿರುವುದು. | 1,24,040 | – |
| 75 | 8.21 | ವಿಶ್ವವಿದ್ಯಾನಿಲಯದ ನೌಕರರಿಗೆ ಪಾವತಿಸಿರುವ ಮತ್ತು ವಸೂಲಾತಿಯಾಗಿರುವ ಗೃಹ ನಿರ್ಮಾಣ ಮುಂಗಡದ ವಿವರಗಳನ್ನು ಹಾಜರುಪಡಿಸದಿರುವುದು | – | – |
| 76 | 8.22 | ವಿಶ್ವವಿದ್ಯಾನಿಲಯದ ವಿವಿಧ ವಿಭಾಗಗಳಲ್ಲಿ ಪಾವತಿಗೆ ಸಂಬಂಧಿಸಿದಂತೆ ದಾಖಲೆಗಳನ್ನು ಹಾಜರುಪಡಸದಿರುವುದು | 4,43,93,164 | – |

| | | | | |
|---|---|---|---|---|
| 77 | 8.23 | ಟೆಂಡರ್ ಪ್ರಕ್ರಿಯೆ ಕೈಗೊಳ್ಳದೆ ಸರಕು/ಸೇವೆಗಳನ್ನು ಬಿಡಿ ಬಿಡಿಯಾಗಿ ದರಪಟ್ಟಿ ಕರೆದು ಖರೀದಿಸಿರುವುದು | 12,34,029 | – |
| 78 | 8.24 | ವಿಶ್ವವಿದ್ಯಾನಿಲಯದ ಆಸ್ತಿ ವಹಿ ಪರಿಶೀಲನೆ. | – | – |
| 79 | 8.25 | 2018–19ನೇ ಸಾಲಿನ ಸಿಂಡಿಕೇಟ್ ಸಭೆಯ ತೀರ್ಮಾನಗಳಿಗೆ ಸರ್ಕಾರದಿಂದ ಅನುಮೋದನೆ ಪಡೆದಿರುವ ಆದೇಶ ಪ್ರತಿಗಳನ್ನು ಹಾಜರುಪಡಿಸದಿರುವುದು | – | – |
| 80 | 8.26 | ಸ್ವಚ್ಛತಾ ಕಾರ್ಯಕ್ಕೆ ಸಂಬಂಧಿಸಿದಂತೆ ಪಾವತಿಸಿರುವ ಮೊತ್ತದ ಸಂಪೂರ್ಣ ಲೆಕ್ಕಪತ್ರ ದಾಖಲೆಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸದಿರುವಕುರಿತು | 5,64,18,650 | – |
| 81 | 8.27 | ಸರ್.ಎಂ. ವಿಶ್ವೇಶ್ವರಯ್ಯ ಸ್ನಾತಕೋತ್ತರ ಕೇಂದ್ರದಲ್ಲಿ ಸ್ವಂತ ಚೆಕ್ ಮೂಲಕ ಹಣ ಡ್ರಾ ಮಾಡಿ, ವೋಚರ್‌ಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸದಿರುವುದು. | – | 2,32,738 |
| 82 | 8.28 | ಡಿ.ಡಿ (ಬೇಡಿಕೆ ಹುಂಡಿ) ಹಾಗೂ ಧನಾದೇಶಗಳು ನಗದೀಕರಣಗೊಂಡಿರುವ ದಾಖಲೆಗಳನ್ನು ಹಾಜರುಪಡಿಸದಿರುವುದು | 61,93,249 | 20,000 |
| 83 | 8.29 | ವಿಶ್ವವಿದ್ಯಾನಿಲಯದ ವಿದ್ಯಾರ್ಥಿನಿಲಯಗಳಿಗೆ ಮುಖ್ಯ ಅಡುಗೆಯವರು ಹಾಗೂ ಸಹಾಯಕ ಅಡುಗೆಯವರ ಸೇವೆಯನ್ನು ಪಡೆಯಲು ಹಳೆಯ ಟೆಂಡರ್‌ದಾರರನ್ನು ಮುಂದುವರೆಸಿರುವುದು | 1,87,77,303 | – |
| 84 | 8.30 | ತಾತ್ಕಾಲಿಕ/ಸಂಚಿತ ವೇತನದಡಿಯಲ್ಲಿ ಬೋಧಕ ನೌಕರರನ್ನು ನೇಮಕಾತಿ ಮಾಡಿಕೊಂಡಿರುವ ಕಡತಗಳನ್ನು ಹಾಜರುಪಡಿಸದಿರುವುದು. | 13,85,58,798 | – |
| 85 | 8.31 | ಪರಿಷ್ಕೃತ ವೇತನ ಶ್ರೇಣಿಯಲ್ಲಿ ಮೂಲ ವೇತನವನ್ನು ತಪ್ಪಾಗಿ ನಿಗದಿಪಡಿಸಿ ಹೆಚ್ಚುವರಿ ಪಾವತಿಸಿರುವುದು | – | 8,724 |
| 86 | 8.32 | ವಾರ್ಷಿಕ ದಾಸ್ತಾನು ಪರಿಶೀಲನಾ ವರದಿಯನ್ನು ಹಾಜರುಪಡಿಸದಿರುವುದು | – | – |
| 87 | 8.33 | ಪ್ರಯಾಣ ಭತ್ಯೆ ಬಿಲ್ಲನ್ನು ಕಾಲ ವಿಳಂಬ ವಿನಾಯಿತಿ ಪಡೆಯದೆಯೆ ಪಾವತಿಸಿರುವುದು. | – | 70,549 |
| 88 | 8.34 | ವೈದ್ಯಕೀಯ ವೆಚ್ಚಕ್ಕಾಗಿ ಮುಂಗಡ ಪಾವತಿಸಿ ಹೊಂದಾಣಿಕೆ ಬಿಲ್ಲುಗಳ ವಿವರಗಳನ್ನು ಲೆಕ್ಕತ ನಿಖೆಗೆ ಹಾಜರುಪಡಿಸದಿರುವುದು. | 5,37,500 | – |
| **ಅಧ್ಯಾಯ–9<br>ಮೌಲ್ಯಮಾಪನ ವಿಭಾಗ (ಪರೀಕ್ಷಾಂಗ)** | | | | |
| 89 | 9.1 | 2018–19ನೇ ಸಾಲಿನಲ್ಲಿ ಅಂಕಪಟ್ಟಿ ಮುದ್ರಣ ಮತ್ತು ವಿತರಣೆಯಲ್ಲಿನ ಸಂಖ್ಯೆಗಳಲ್ಲಿ ವ್ಯತ್ಯಾಸಗಳಿರುವುದು | – | – |
| 90 | 9.2 | 2018–19ನೇ ಸಾಲಿನಲ್ಲಿ ಅಂಕಪಟ್ಟಿ ಖರೀದಿಗೆ ಸಂಬಂಧಿಸಿದಂತೆ ಉಪ ದಾಸ್ತಾನು ವಹಿ ನಿರ್ವಹಿಸದಿರುವುದು | 90,54,032 | – |
| 91 | 9.3 | ಗುತ್ತಿಗೆಯ ಕರಾರಿನ ಅವಧಿ ಮುಗಿದ ನಂತರವೂ ಮತ್ತೆ ಎರಡು ವರ್ಷಗಳ ಗುತ್ತಿಗೆ ಕರಾರು ಮಾಡಿಕೊಂಡು, ದರ ಪರಿಷ್ಕರಿಸಿ ಹಣ ಪಾವತಿಸಿರುವುದು | 6,77,585 | – |
| 92 | 9.4 | ದೂರ ವ್ಯಾಪಿ (Outreach) ಹಾಗೂ ವಿಶೇಷ (Specialised) ಕೋರ್ಸ್‌ನ ವಿದ್ಯಾರ್ಥಿಗಳ ಆನ್‌ಲೈನ್ ಪರೀಕ್ಷಾ ಕಾರ್ಯಗಳ ನಿರ್ವಹಣೆ ಟೆಂಡರ್ ಪ್ರಕ್ರಿಯೆಯ ನ್ಯೂನತೆಗಳು | 2,12,06,700 | – |
| 93 | 9.5 | ಪ್ರಶ್ನೆ ಪತ್ರಿಕೆಗಳ ಮುದ್ರಣಕ್ಕೆ ಏಜೆನ್ಸಿ ಆಯ್ಕೆ ಮಾಡುವಾಗ ಪಾರದರ್ಶಕತೆಯ ನಿಯಮಗಳನ್ನು ಪಾಲನೆ ಮಾಡದಿರುವುದು ಹಾಗೂ ಕರಾರಿನದರಕ್ಕಿಂತ ಹೆಚ್ಚು ದರದಲ್ಲಿ ಬಿಲ್ಲು ಪಾವತಿ ಮಾಡಿರುವುದು. | 45,60,023 | – |
| 94 | 9.6 | ವಿಶ್ವವಿದ್ಯಾನಿಲಯವು ನಡೆಸುವ ಪರೀಕ್ಷೆಗಳಿಗೆ ಬಾರ್‌ಕೋಡ್ ಮತ್ತು ಒ.ಎಂ.ಆರ್ ಅಳವಡಿಸಿರುವ ಉತ್ತರ ಪತ್ರಿಕೆಗಳ ಸರಬರಾಜು ಸಂಬಂಧಕರೆಯಲಾದ ಟೆಂಡರ್‌ನಲ್ಲಿನ ನ್ಯೂನತೆಗಳು | 1,00,01,880 | – |

| | | | | |
|---|---|---|---|---|
| 95 | 9.7 | ವಿಶ್ವವಿದ್ಯಾನಿಲಯದ ವಿವಿಧ ಪರೀಕ್ಷೆಗಳಿಗೆ ಸಂಬಂಧಪಟ್ಟಂತೆ ಮುದ್ರಣಾಲಯಕ್ಕೆ ಡಬಲ್ ಡಮ್ಮಿ ವೈಟ್ ಮ್ಯಾಪ್‌ಲಿತೊ ಪೇಪರ್‌ಗಳ ಸರಬರಾಜಿಗಾಗಿ ಆಹ್ವಾನಿಸಲಾದ ಟೆಂಡರ್ ಪ್ರಕ್ರಿಯೆಯ ನ್ಯೂನತೆಗಳು | 94,45,640 | 1,28,655 |
| 96 | 9.8 | ಕೆ.ಟಿ.ಪಿ.ಪಿ ಕಾಯ್ದೆ–2000 ರ ನಿಯಮ ಉಲ್ಲಂಘಿಸಿ, ವಾಹನ ಬಾಡಿಗೆ ಪಡೆದು ಪಾವತಿ ಮಾಡಿರುವುದು ಮತ್ತು ಹೆಚ್ಚುವರಿಯಾಗಿ ಜಿ.ಎಸ್.ಟಿಯನ್ನು ಪಾವತಿಸಿರುವ ಕುರಿತು | 9,76,374 | 94,394 |
| 97 | 9.9 | ಮೆ॥ ಜೆರಾಕ್ಸ್ ಇಂಡಿಯಾ ಲಿಮಿಟೆಡ್, ಬೆಂಗಳೂರು ರವರಿಗೆ ಪಾವತಿಸಿರುವ ಬಗ್ಗೆ | 2,49,904 | – |
| 98 | 9.10 | ಪರೀಕ್ಷಾ ಕಾರ್ಯಕ್ಕಾಗಿ ಹೊರಗುತ್ತಿಗೆಗೆ ನೀಡಿದ್ದ ಸಂಸ್ಥೆಯ ಕಾರ್ಯ ನಿರ್ವಹಣೆಯಲ್ಲಿ ಸಹಕರಿಸಿದ ವಿಶ್ವವಿದ್ಯಾನಿಲಯದ ಅಧಿಕಾರಿ/ಸಿಬ್ಬಂದಿಗೆ ವಿಶ್ವವಿದ್ಯಾನಿಲಯದಿಂದ ಹೆಚ್ಚುವರಿ ಸಂಭಾವನೆ ಪಾವತಿಸಿರುವುದು | – | 23,000 |

| | | | | |
|---|---|---|---|---|
| **ಅಧ್ಯಾಯ–10**<br>**ವಿದ್ಯಾರ್ಥಿಕ್ಷೇಮಪಾಲನಾ ನಿರ್ದೇಶನಾಲಯ** | | | | |
| 99 | 10.1 | ವಿದ್ಯಾರ್ಥಿನಿಲಯಗಳಲ್ಲಿ ಆಹಾರ ಸರಬರಾಜು ಮಾಡಿಕೊಳ್ಳಲು ಆಹ್ವಾನಿಸಿರುವ ಟೆಂಡರ್ ಪ್ರಕ್ರಿಯೆಯಲ್ಲಿ ಕಂಡು ಬಂದಿರುವ ನ್ಯೂನತೆಗಳು. | 2,69,27,996 | – |
| 100 | 10.2 | ವಿದ್ಯಾರ್ಥಿನಿಲಯಗಳಿಗೆ ಕೋಳಿ ಮಾಂಸ ಖರೀದಿಸುವಾಗ ಪಾರದರ್ಶಕತೆಯ ನಿಯಮಗಳನ್ನು ಪಾಲನೆ ಮಾಡದಿರುವುದು | 11,54,898 | – |
| 101 | 10.3 | ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳ ಭೋಜನ ವೆಚ್ಚಕ್ಕಾಗಿ ಮುಂಗಡ ನೀಡಲಾಗಿದ್ದು, ಎನ್.ಡಿ.ಸಿಯನ್ನು ಹಾಜರುಪಡಿಸದೇ ನೇರವಾಗಿ ಎ.ಸಿ ಹುಂಡಿಯ ಮೊತ್ತವನ್ನು ಜಮೆ ಮಾಡಿರುವುದು | – | – |
| 102 | 10.4. | ವಿದ್ಯಾರ್ಥಿನಿಲಯದಲ್ಲಿ ವಾಸ್ತವ್ಯ ಮಾಡಿರುವ ಸಂಶೋಧನಾ ವಿದ್ಯಾರ್ಥಿಗಳಿಂದ ಮನೆ ಬಾಡಿಗೆ ಭತ್ಯೆರೂ.15,67,360/–ಗಳನ್ನು ವಸೂಲಿಸದಿರುವುದು. | – | 15,67,360 |
| 103 | 10.5 | ಮಹಿಳಾ ಸಂಶೋಧನಾ ವಿದ್ಯಾರ್ಥಿಗಳ ಶಿಷ್ಯ ವೇತನದಿಂದ ಮನೆ ಬಾಡಿಗೆ ಭತ್ಯೆಕಟಾಯಿಸದಿರುವುದು | – | 58,500 |
| 104 | 10.6 | 2013–14 ರಿಂದ 2018–19ನೇ ಸಾಲಿನ ವರೆಗೆ ಸರ್ಕಾರದ ವತಿಯಿಂದ ಬರಬೇಕಾದ ವಿದ್ಯಾರ್ಥಿ ವೇತನ ಮತ್ತು ಅಧಿಕ ಭೋಜನ ವೆಚ್ಚದ ಮೊತ್ತವನ್ನು ಮರು ಹಿಂಭರ್ತಿ ಮಾಡಿಕೊಳ್ಳದಿರುವುದು | – | – |
| 105 | 10.7 | ಅಡಿಗೆ ಅನಿಲ ಸಿಲಿಂಡರ್‌ಗಳ ಖರೀದಿ ಬಿಲ್ಲಿನ ಮೊತ್ತಕ್ಕಿಂತ ಹೆಚ್ಚುವರಿ ಪಾವತಿಸಿರುವುದು | – | 21,782 |
| **ಅಧ್ಯಾಯ–11**<br>**ಇಂಜಿನಿಯರಿಂಗ್ ವಿಭಾಗ** | | | | |
| 106 | 11.1 | ಟೆಂಡರ್ ಅವಧಿಯು ಮುಗಿದಿದ್ದರೂ ಭದ್ರತಾ ಸೇವೆಯ ಹೊರ ಗುತ್ತಿಗೆಯನ್ನು ಮುಂದುವರೆಸಿರುವುದು ಹಾಗೂ ಭದ್ರತಾ ಠೇವಣಿ ಕಡಿಮೆ ಪಡೆದಿರುವುದು | 1,27,86,362 | – |
| 107 | 11.2 | ಕಾಮಗಾರಿಗೆ ನಿಗದಿಪಡಿಸಿರುವ ಟೆಂಡರ್ ದರಕ್ಕಿಂತ ಹೆಚ್ಚುವರಿಯಾಗಿ ಗುತ್ತಿಗೆದಾರರಿಗೆ ಪಾವತಿಸಿರುವುದು. | – | 88,530 |
| 108 | 11.3 | ಕಾಮಗಾರಿಗಳ ಅನುಮೋದಿತ ದರಕ್ಕಿಂತ ಕಾಮಗಾರಿ ಬಿಲ್ಲುಗಳಲ್ಲಿ | – | 1,90,139 |

| | | | | |
|---|---|---|---|---|
| | | ಹೆಚ್ಚುವರಿಯಾಗಿ ಪಾವತಿಸಿರುವುದು. | | |
| 109 | 11.4 | ಒಂದೇ ರೀತಿಯ ಕಾಮಗಾರಿಗಳನ್ನು ಒಗ್ಗೂಡಿಸಿ ಇ–ಟೆಂಡರ್ ಕರೆಯುವ ಬದಲು ಬಿಡಿ ಬಿಡಿಯಾಗಿ ಮ್ಯಾನುಯಲ್ ಟೆಂಡರ್ ಮೂಲಕ ನಿರ್ವಹಿಸಿರುವುದು | – | – |
| 110 | 11.5 | ಮೈಸೂರು ವಿಶ್ವವಿದ್ಯಾನಿಲಯದ ಒಡೆತನದ ವಾಣಿಜ್ಯ ಸಂಕೀರ್ಣಗಳು, ಎಸ್.ಟಿ.ಡಿ ಬೂತ್‌ಗಳು ಮತ್ತು ಕ್ಯಾಂಟೀನ್‌ಗಳಿಂದ ಬಾಕಿಯಿರುವ ಬಾಡಿಗೆ ವಸೂಲಾತಿ ಬಗ್ಗೆ. | – | 4,41,406 |
| 111 | 11.6 | ವಿಶ್ವವಿದ್ಯಾನಿಲಯದ ವಸತಿ ಗೃಹಗಳ ಬಾಡಿಗೆಯ ಬೇಡಿಕೆ, ವಸೂಲಿ ಮತ್ತು ಬಾಕಿ (ಡಿ.ಸಿ.ಬಿ) ವಿವರಗಳು | – | 21,96,512 |
| 112 | 11.7 | ಕಾಮಗಾರಿ ಬಿಲ್ಲುಗಳಲ್ಲಿ ರೂ.71,344/–ಗಳಷ್ಟು ಕಡಿಮೆ ರಾಜಧನ ಕಟಾಯಿಸಿರುವುದು | – | 71,344 |
| 113 | 11.8 | ವಿಶ್ವವಿದ್ಯಾನಿಲಯದ ವಿವಿಧ ವಿಭಾಗಗಳು ಹಾಗೂ ಅಣುಜೀವ ವಿಜ್ಞಾನ ಮತ್ತು ಸಾವಯವ ರಸಾಯನ ವಿಜ್ಞಾನ ಅಧ್ಯಯನ ವಿಭಾಗ ಹಾಗೂ ಜೆನೆಟಿಕ್ಸ್ ಮತ್ತು ಜೀನೊಮಿಕ್ಸ್ ಅಧ್ಯಯನ ವಿಭಾಗಕ್ಕೆ ಸರಬರಾಜು ಮಾಡಲಾಗಿರುವ ಪೀಠೋಪಕರಣಗಳ ಗುಣಮಟ್ಟದ ಬಗ್ಗೆ ಪ್ರಮಾಣಪತ್ರ ಹಾಜರುಪಡಿಸದಿರುವುದು | 70,11,959 | – |
| 114 | 11.9 | ಅಧ್ಯಾಪಕೇತರ ತಾತ್ಕಾಲಿಕ ನೌಕರರಿಂದ ವಸತಿ ಗೃಹಗಳ ಬಾಡಿಗೆ ವಸೂಲಿ ಬಗ್ಗೆ ದಾಖಲೆಗಳನ್ನು ಹಾಜರುಪಡಿಸದಿರುವುದು | – | – |
| **ಅಧ್ಯಾಯ–12<br>ಯುವರಾಜಕಾಲೇಜು(ಸ್ವಾಯತ್ತ)** | | | | |
| 115 | 12.1 | ಯುವರಾಜ ಕಾಲೇಜು ಕಾಮಗಾರಿ ಬಿಲ್ಲುಗಳಲ್ಲಿ ಕಾರ್ಯಪಾಲಕ ಇಂಜಿನಿಯರ್‌ರವರು ಅಳತೆ ಪರಿಶೀಲನೆ ದಾಖಲಿಸದಿರುವುದು | 1,65,043 | – |
| 116 | 12.2 | ಯುವರಾಜ ಕಾಲೇಜಿನಲ್ಲಿ ಅಂಕಪಟ್ಟಿಗಳ ಮುದ್ರಣ ವೆಚ್ಚದ ವಿವರಗಳು ಹಾಗೂ ದಾಸ್ತಾನು ಸ್ವೀಕೃತಿ ಮತ್ತು ವಿತರಣಾ ವಹಿಯನ್ನು ಲೆಕ್ಕಪರಿಶೋಧನಗೆ ಹಾಜರುಪಡಿಸದಿರುವುದು | – | – |
| 117 | 12.3 | ಯುವರಾಜ ಕಾಲೇಜು ಕಾಮಗಾರಿಗಳ ಅಳತೆ ಪುಸ್ತಕಗಳನ್ನು ಪರಿಶೀಲನೆಗೆ ಹಾಜರುಪಡಿಸದಿರುವುದು | 1,45,500 | – |
| 118 | 12.4 | ಯುವರಾಜ ಕಾಲೇಜಿನಲ್ಲಿ ವಿದ್ಯಾರ್ಥಿ ವೇತನಕ್ಕೆ ಸಂಬಂಧಿಸಿದ ಲೆಕ್ಕಪತ್ರ ದಾಖಲೆಗಳನ್ನು ಹಾಜರುಪಡಿಸದಿರುವುದು | – | – |
| | | **ಒಟ್ಟು ಮೊತ್ತ** | **55,69,86,599** | **13,33,08,859** |

**–ಸಹಿ–**
**ಅಪರ ನಿರ್ದೇಶಕರು**
**ಕರ್ನಾಟಕರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ**
**ಪ್ರಾಂತೀಯಕಛೇರಿ, ಮೈಸೂರು ವಿಭಾಗ, ಮೈಸೂರು**

**1. ಹಿಂದಿನ ವರ್ಷಗಳ ಲೆಕ್ಕ ತಪಾಸಣಾ ವರದಿಗಳ ಕಂಡಿಕೆಗಳ ತೀರುವಳಿ ಬಗ್ಗೆ :–**

ವಿಶ್ವವಿದ್ಯಾನಿಲಯದ 1988–89 ರಿಂದ 2017–18 ರವರೆಗಿನ ಲೆಕ್ಕಪರಿಶೋಧನಾ ವರದಿಗಳಲ್ಲಿನ ಆಕ್ಷೇಪಣಾ ಕಂಡಿಕೆಗಳ ಮತ್ತು ವಸೂಲಾತಿ ಕಂಡಿಕೆಗಳ ಮೊತ್ತ, ತೀರುವಳಿಯಾದ ಮೊತ್ತ ಹಾಗೂ ಬಾಕಿ ಉಳಿದಿರುವ ಮೊತ್ತಗಳ ವಿವರಗಳು ಕೆಳಕಂಡಂತಿರುತ್ತದೆ.

| | ಆಕ್ಷೇಪಣಾ ಕಂಡಿಕೆಗಳ ಸಂಖ್ಯೆ | ಮೊತ್ತ (ರೂ.ಗಳಲ್ಲಿ) | ವಸೂಲಾತಿ ಕಂಡಿಕೆಗಳ ಸಂಖ್ಯೆ | ಮೊತ್ತ (ರೂ.ಗಳಲ್ಲಿ) |
|---|---|---|---|---|
| 1988–89 ರಿಂದ 2016–17 ರವರೆಗೆ ಬಾಕಿಯಿದ್ದುದು | 780 | 453,59,22,757 | 577 | 47,58,13,191 |
| 2017–18ನೇ ಸಾಲಿನಲ್ಲಿ ಸೇರ್ಪಡೆ | 95 | 91,10,80,864 | 68 | 4,01,50,497 |
| **ಒಟ್ಟು** | **875** | **544,70,03,621** | **645** | **51,59,63,688** |
| ತೀರುವಳಿಯಾಗಿರುವುದು | 50 | 47,53,45,896 | 32 | 6,15,51,173 |
| **2017–18 ರ ಅಂತ್ಯಕ್ಕೆ ಬಾಕಿ ಉಳಿದುದು** | **825** | **497,16,57,725** | **613** | **45,44,12,515** |

ಬಾಕಿ ಉಳಿದಿರುವ ಕಂಡಿಕೆಗಳನ್ನು ಸಕಾಲದಲ್ಲಿ ತೀರುವಳಿ ಮಾಡದೆ ಇರುವುದರಿಂದ ನೌಕರರ ವರ್ಗಾವಣೆ, ನಿವೃತ್ತಿ, ಗುತ್ತಿಗೆಗಳ ಮುಕ್ತಾಯ ಇತ್ಯಾದಿ ಕಾರಣಗಳಿಂದ ವಸೂಲಿಸ ಬೇಕಾದ ಮೊತ್ತಗಳನ್ನು ವಸೂಲಿಸಲಾಗದೆಯೇ ವಿಶ್ವವಿದ್ಯಾನಿಲಯಕ್ಕೆ ನಷ್ಟ ಉಂಟಾಗುವ ಸಂಭವವಿರುತ್ತದೆ. ಕರ್ನಾಟಕ ಬಜೆಟ್ ಕೈಪಿಡಿಯ ನಿಯಮ–303ರ ಪ್ರಕಾರ ಲೆಕ್ಕಪರಿಶೋಧನಾ ವರದಿಗಳಲ್ಲಿನ ಆಕ್ಷೇಪಣೆಗಳಿಗೆ ಉತ್ತರಿಸುವ ಮತ್ತು ಲೆಕ್ಕಪರಿಶೋಧನೆಯಲ್ಲಿ ಎತ್ತಿದ ಇತರೆ ವಿಷಯಗಳನ್ನು ಇತ್ಯರ್ಥಗೊಳಿಸುವ ಹೊಣೆಗಾರಿಕೆಯು ಲೆಕ್ಕಪರಿಶೋಧನಾ ಕಂಡಿಕೆಗಳ ಸ್ವರೂಪ ಮತ್ತು ಜವಾಬ್ದಾರಿ ಗನುಗುಣವಾಗಿ ಬಟವಾಡೆ ಅಧಿಕಾರಿಗಳು, ನಿಯಂತ್ರಣ ಅಧಿಕಾರಿಗಳು ಹಾಗೂ ವಿಶ್ವವಿದ್ಯಾನಿಲಯದ ಮುಖ್ಯಸ್ಥರದ್ದಾಗಿರುತ್ತದೆ. ಲೆಕ್ಕ ಪರಿಶೋಧನಾ ಆಕ್ಷೇಪಣೆಗಳ ಬಗ್ಗೆ ನಿಗಾ ಇಡಲು ವಿಶ್ವವಿದ್ಯಾನಿಲಯವು ಬಜೆಟ್ ಕೈಪಿಡಿಯ ನಿಯಮ–305ರ ಅನುಸಾರ ನಮೂನೆ–21ರಲ್ಲಿ ಲೆಕ್ಕಪರಿಶೋಧನಾ ಆಕ್ಷೇಪಣೆಗಳ ವಹಿಯನ್ನು ನಿರ್ವಹಿಸಬೇಕಿದ್ದು, ವಿಶ್ವವಿದ್ಯಾನಿಲಯವು ಸದರಿ ವಹಿಯನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲ. ವರ್ಷದಿಂದ ವರ್ಷಕ್ಕೆ ಲೆಕ್ಕಪರಿಶೋಧನಾ ಕಂಡಿಕೆಗಳು ಸಂಚಯವಾಗುತ್ತಾ ಹೋದಲ್ಲಿ ಹಳೆಯ ಕಂಡಿಕೆಗಳ ತೀರುವಳಿಗೆ ದಾಖಲಾತಿಗಳನ್ನು ಒದಗಿಸಿ ತೀರುವಳಿ ಮಾಡಿಸುವುದು ಶ್ರಮದಾಯಕವಾಗುತ್ತದೆ. ಆಕ್ಷೇಪಣೆ ಕಂಡಿಕೆಗಳಿಗೆ ಪೂರಕ ದಾಖಲಾತಿಗಳೊಡನೆ ಸೂಕ್ತ ಅನುಪಾಲನಾ ವರದಿ ನೀಡುವ ಮೂಲಕ ಹಾಗೂ ವಸೂಲಾತಿ ಮೊತ್ತವನ್ನು

ವಿಶ್ವವಿದ್ಯಾನಿಲಯದ 1988–89 ರಿಂದ 2017–18ನೇ ಸಾಲಿನವರೆಗಿನ ವಾರ್ಷಿಕ ಲೆಕ್ಕಪರಿಶೋಧನಾ ವರದಿಗಳ ಆಕ್ಷೇಪಣೆ ಮತ್ತು ವಸೂಲಾತಿ ಕಂಡಿಕೆಗಳಿಗೆ ಅನುಪಾಲನಾ ವರದಿಯನ್ನು ವಿಶ್ವವಿದ್ಯಾನಿಲಯದ ಅಧಿನಿಯಮದ ಪ್ರಕಾರ ಸಿದ್ಧಪಡಿಸಿ ಸರ್ಕಾರಕ್ಕೆ ಮತ್ತು ತಮ್ಮ ಕಛೇರಿಗೆ ಸಲ್ಲಿಸಲಾಗಿರುತ್ತದೆ. ಹಾಗೂ ಸರ್ಕಾರದ ಅದೇಶದಂತೆ ಅಡಹಾಕ್ ಸಮಿತಿ ಸಭೆ ನಡೆಸಿ ಆಕ್ಷೇಪಣೆ ಮತ್ತು ವಸೂಲಾತಿ ಕಂಡಿಕೆಗಳ ತೀರುವಳಿಯಾಗಿರುವ ಬಗ್ಗೆ ಕಂಡಿಕೆಯಲ್ಲಿ ಪ್ರಸ್ತಾಪಿಸಿಲಾಗಿರುತ್ತದೆ.

ಸರ್ಕಾರದ ಆದೇಶ ಮತ್ತು ತಮ್ಮ ನಿರ್ದೇಶನದಂತೆ 2020–21ನೇ ಸಾಲಿನ ಲೆಕ್ಕಪರಿಶೋಧನಾ ಕಾರ್ಯದ ಅಂತಿಮ ವಾರದಲ್ಲಿ 2016–17ನೇ ಸಾಲಿನ 26 ಕಂಡಿಕೆಗಳು ಮತ್ತು ಮತ್ತು 2017–18ನೇ ಸಾಲಿನ 114 ಕಂಡಿಕೆಗಳು ಸೇರಿದಂತೆ ಒಟ್ಟು 140 ಆಕ್ಷೇಪಣೆ ಮತ್ತು ವಸೂಲಾತಿ ಕಂಡಿಕೆಗಳ ಅನುಸರಣಾ ವರದಿ/ದಾಖಲಾತಿಗಳನ್ನು ಪರಿಶೋಧನಾ ತಂಡಗಳಿಗೆ ಒದಗಿಸಲಾಗಿದ್ದು, ಹಿಂದಿನ ಸಾಲುಗಳ ಪರಿಶೋಧನಾ ವರದಿಯ ಕಂಡಿಕೆಗಳ ತೀರುವಳಿ ಬಗ್ಗೆ ಅಗತ್ಯ ಕ್ರಮವಹಿಸುತ್ತಿರುವುದಾಗಿ ನಿವೇದಿಸಿದೆ.

| | |
|---|---|
| ಸಂಬಂಧಿಸಿದವರಿಂದ ವಸೂಲಿಸಿ ಕೈಗೊಂಡ ಕ್ರಮಗಳ ದಾಖಲೆಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವ ಮೂಲಕ ಕಂಡಿಕೆಗಳ ತೀರುವಳಿಗೆ ಕ್ರಮವಹಿಸಲು ಸೂಚಿಸಿದೆ.<br>1988–89 ರಿಂದ 2017–18ನೇ ಸಾಲಿನ ವರೆಗೆ ಬಾಕಿ ಇರುವ ಆಕ್ಷೇಪಣೆ ಮತ್ತು ವಸೂಲಾತಿ ಕಂಡಿಕೆಗಳ ವಿವರಗಳನ್ನು **ಅನುಬಂಧ–1**ರಲ್ಲಿ, ತೀರುವಳಿಯಾಗಿರುವ ವಿವರಗಳನ್ನು **ಅನುಬಂಧ–1(ಎ)** ಮತ್ತು ಬಾಕಿ ಉಳಿದಿರುವ ಕಂಡಿಕೆಗಳ ವಿವರಗಳನ್ನು **ಅನುಬಂಧ–1(ಬಿ)** ನಲ್ಲಿ ನೀಡಲಾಗಿದೆ ಹಾಗೂ ವಿಶ್ವವಿದ್ಯಾನಿಲಯದ ಅಂಗ ಸಂಸ್ಥೆಗಳ ಆಕ್ಷೇಪಣೆ ಮತ್ತು ವಸೂಲಾತಿ ಕಂಡಿಕೆಗಳ ವಿವರಗಳನ್ನು **ಅನುಬಂಧ–2**ರಲ್ಲಿ ನೀಡಲಾಗಿದೆ. | |
| **ಅಧ್ಯಾಯ–2**<br>**ಮೈಸೂರು ವಿಶ್ವವಿದ್ಯಾನಿಲಯದ ಸ್ಥೂಲ ನೋಟ**<br>**2.1 ವಿಶ್ವವಿದ್ಯಾನಿಲಯದ ಸ್ಥಾಪನೆಯ ಹಿನ್ನೆಲೆ:**<br>ಮೈಸೂರು ವಿಶ್ವವಿದ್ಯಾನಿಲಯವು ಮೈಸೂರು ಸಂಸ್ಥಾನದ ಮಹಾರಾಜರಾಗಿದ್ದ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ರವರ ಆಳ್ವಿಕೆಯ ಕಾಲದಲ್ಲಿ ಜುಲೈ 27, 1916 ರಂದು ಸ್ಥಾಪನೆಯಾಯಿತು. ಇದು ಸನ್ಮಾನ್ಯ ಮಹಾರಾಜಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ (1884–1940) ಹಾಗೂ ದಿವಾನರಾದ ಶ್ರೀ ಸರ್.ಎಂ.ವಿಶ್ವೇಶ್ವರಯ್ಯ (1860–1962) ರವರ ಸತತ ಪ್ರಯತ್ನದ ಫಲ. ಅದುವರೆಗೆ ಮದರಾಸು ವಿಶ್ವವಿದ್ಯಾನಿಲಯದೊಡನೆ ಸಂಯೋಜನೆ ಹೊಂದಿದ್ದ ಮೈಸೂರಿನ ಮಹಾರಾಜ ಕಾಲೇಜು ಹಾಗೂ ಬೆಂಗಳೂರಿನ ಸೆಂಟ್ರಲ್ ಕಾಲೇಜುಗಳು ಹೊಸದಾಗಿ ಪ್ರಾರಂಭವಾದ ಮೈಸೂರು ವಿಶ್ವವಿದ್ಯಾನಿಲಯದ ಭಾಗಗಳಾದವು. ಮೈಸೂರು ವಿಶ್ವವಿದ್ಯಾನಿಲಯವು ಅಂದಿನ ಬ್ರಿಟಿಷ್ ಭಾರತದ ಸರಹದ್ದಿನ ಹೊರಗೆ ಸ್ಥಾಪನೆಗೊಂಡ ಮೊದಲ, ದೇಶದ ಆರನೆಯ ಹಾಗೂ ಕರ್ನಾಟಕ ರಾಜ್ಯದ ಪ್ರಥಮ ವಿಶ್ವವಿದ್ಯಾನಿಲಯವಾಗಿರುತ್ತದೆ. ಮೊದಲಿಗೆ ಸಂಲಗ್ನಗೊಳಿಸುವ ವಿಶ್ವವಿದ್ಯಾನಿಲಯವಾಗಿದ್ದ ಮೈಸೂರು ವಿಶ್ವವಿದ್ಯಾನಿಲಯವು ವಿಶ್ವವಿದ್ಯಾನಿಲಯ ಧನ ಸಹಾಯ ಆಯೋಗದ ಮಾನ್ಯತೆಯನ್ನು ಪಡೆದು 3ನೇ ಮಾರ್ಚ್ 1956ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಅಧಿನಿಯಮ–1956ರ ಮೂಲಕ ಸ್ವಾಯತ್ತ ವಿಶ್ವವಿದ್ಯಾನಿಲಯವಾಗಿ ರೂಪುಗೊಂಡಿತು. ರಾಷ್ಟ್ರಕವಿ ಕುವೆಂಪು ರವರಿಂದ 1960 ರಲ್ಲಿ ಆಕ್ಸ್‌ಫರ್ಡ್ ವಿಶ್ವವಿದ್ಯಾನಿಲಯ ಮುದ್ರಣಾಲಯದ ಮಾದರಿಯಲ್ಲಿ ಸ್ಥಾಪನೆಗೊಂಡ ಪ್ರಸಾರಾಂಗ ಹಾಗೂ 8,00,000ಕ್ಕೂ ಹೆಚ್ಚು ಗ್ರಂಥಗಳು, 2400 ಬಗೆಯ ನಿಯತ ಕಾಲಿಕಗಳು ಹಾಗೂ 1,00,000ದಷ್ಟು ಸಂಪುಟಗಳ ನಿಯತ ಕಾಲಿಕಗಳ ಸಂಗ್ರಹವುಳ್ಳ ಸುಸಜ್ಜಿತ ಗ್ರಂಥಾಲಯವನ್ನು ಹೊಂದಿರುವುದು ವಿಶ್ವವಿದ್ಯಾನಿಲಯದ ಹೆಗ್ಗಳಿಕೆ.<br>ಭಾರತದ ಪ್ರಮುಖ ವಿಶ್ವವಿದ್ಯಾನಿಲಯಗಳಲ್ಲೊಂದಾದ ಮೈಸೂರು ವಿಶ್ವವಿದ್ಯಾನಿಲಯವು 39 ಪ್ರಮುಖ ವಿಭಾಗಗಳನ್ನು ಹೊಂದಿದ್ದು, ಸಂಶೋಧನಾ ಚಟುವಟಿಕೆಗಳ ಜೊತೆಗೆ ಒಟ್ಟು 65 ವಿಷಯಗಳಲ್ಲಿ | ಮಾಹಿತಿಯನ್ನು ಪರಿಗಣಿಸಿದೆ |

| | |
|---|---|
| ಸ್ನಾತಕೋತ್ತರ ಪದವಿ ಮತ್ತು ಡಿಪ್ಲೋಮಾ ಸರ್ಟಿಫಿಕೇಟ್ (ಪ್ರಮಾಣಪತ್ರ) ಕೋರ್ಸುಗಳನ್ನು ನಡೆಸುತ್ತಿದೆ.<br>2015–16ರಲ್ಲಿ ನಡೆದ ವಿಶ್ವವಿದ್ಯಾನಿಲಯದ ಶತಮಾನೋತ್ಸವ ಕಾರ್ಯಕ್ರಮದ ಅಂಗವಾಗಿ ವಿಶ್ವದ ಶ್ರೇಷ್ಠ 8 ಮಂದಿ ನೋಬೆಲ್ ಪ್ರಶಸ್ತಿ ಪುರಸ್ಕೃತ ವಿದ್ವಾಂಸರುಗಳು ವಿಶ್ವವಿದ್ಯಾನಿಲಯದಲ್ಲಿ ಪ್ರಚಲಿತ ವಿಷಯಗಳ ಬಗ್ಗೆ ಉಪನ್ಯಾಸಗಳನ್ನು ನೀಡಿರುತ್ತಾರೆ. 2016ರ ಜನವರಿ ಮಾಹೆಯಲ್ಲಿ 103ನೇ ಭಾರತೀಯ ವಿಜ್ಞಾನ ಕಾಂಗ್ರೆಸ್, ಡಿಸೆಂಬರ್ ಮಾಹೆಯಲ್ಲಿ 40ನೇ ಭಾರತೀಯ ಸಮಾಜ ವಿಜ್ಞಾನ ಕಾಂಗ್ರೆಸ್‌ನ್ನು ವಿಶ್ವವಿದ್ಯಾನಿಲಯದಲ್ಲಿ ಸಂಘಟಿಸಲಾಗಿರುತ್ತದೆ.<br>ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ–2000ರನ್ವಯ ವಿಶ್ವವಿದ್ಯಾನಿಲಯದ ಆಡಳಿತ ಮತ್ತು ಕಾರ್ಯ ಚಟುವಟಿಕೆಗಳು ನಡೆಯುತ್ತಿದ್ದು, ಸದರಿ ಅಧಿನಿಯಮದ ಪ್ರಕರಣ–47(3)ರ ಅಡಿ ಪ್ರದತ್ತವಾದ ಅಧಿಕಾರದನ್ವಯ ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆಯ ಮೈಸೂರು ಪ್ರಾಂತೀಯ ಕಛೇರಿಯಿಂದ ಮೈಸೂರು ವಿಶ್ವವಿದ್ಯಾನಿಲಯದ 2018–19ನೇ ಸಾಲಿನ ಲೆಕ್ಕಪರಿಶೋಧನೆಯನ್ನು ಕೈಗೊಳ್ಳಲಾಗಿರುತ್ತದೆ. | |
| **2.2 ವಿಶ್ವವಿದ್ಯಾನಿಲಯದ ಸಾಂಸ್ಥಿಕ ರಚನೆ**<br>ಮೈಸೂರು ವಿಶ್ವವಿದ್ಯಾನಿಲಯವು ದಿನಾಂಕ:27–07–1916ರಲ್ಲಿ ಪ್ರಾರಂಭಗೊಂಡಿದ್ದು, ಪ್ರಸ್ತುತ ಮೈಸೂರು, ಚಾಮರಾಜನಗರ, ಹಾಸನ ಹಾಗೂ ಮಂಡ್ಯ ಜಿಲ್ಲೆಗಳ ವಿದ್ಯಾರ್ಥಿಗಳಿಗೆ ಉನ್ನತ ಶಿಕ್ಷಣ ನೀಡುವಕಾರ್ಯ ವ್ಯಾಪ್ತಿಯನ್ನು ಹೊಂದಿರುತ್ತದೆ. ವಿಶ್ವವಿದ್ಯಾನಿಲಯದ ಆಡಳಿತದ ಪ್ರಮುಖ ಸಾಂಸ್ಥಿಕ ರಚನೆಯು ಈ ಕೆಳಗಿನಂತಿರುತ್ತದೆ.<br> | ಮಾಹಿತಿಯನ್ನು ಪರಿಗಣಿಸಿದೆ |

| | |
|---|---|
| **2.3 ವಿಶ್ವವಿದ್ಯಾನಿಲಯದ ಸಮಿತಿಗಳು:** | ಮಾಹಿತಿಗಾಗಿ |

| ಕ್ರ ಸಂ | ಮಂಡಳಿ/ಸಮಿತಿಯ ಹೆಸರು | ಅಧಿನಿಯಮದಲ್ಲಿನ ಅವಕಾಶ | ಸಮಿತಿಯಅಧ್ಯಕ್ಷರು |
|---|---|---|---|
| 1 | ಸಿಂಡಿಕೇಟ್ | ಪ್ರಕರಣ–28(1) | ಕುಲಪತಿಗಳು |
| 2 | ಶಿಕ್ಷಣ ಮಂಡಳಿ | ಪ್ರಕರಣ–30(1) | ಕುಲಪತಿಗಳು |
| 3 | ಹಣಕಾಸು ಸಮಿತಿ | ಪ್ರಕರಣ–32(1) | ಕುಲಪತಿಗಳು |
| 4 | ಯೋಜನೆ, ಉಸ್ತುವಾರಿ ಮತ್ತುಮೌಲ್ಯಮಾಪನ ಮಂಡಳಿ | ಪ್ರಕರಣ–35(2) | ಕುಲಪತಿಗಳು |
| 5 | ಕಾಲೇಜು ಅಭಿವೃದ್ಧಿ ಮಂಡಳಿ | ಕ.ರಾ.ವಿ.ವಿ ಕಾಯ್ದೆ–2000ದ ಅನುಸಾರ ಹಾಗೂ ಪರಿನಿಯಮದ ಅನುಸಾರ ದಿ.23–08–2006ರಿಂದ | ಕುಲಪತಿಗಳು |

| | |
|---|---|
| **2.4 ವಿಶ್ವವಿದ್ಯಾನಿಲಯದ ಅಧಿಕಾರಿಗಳ ಆಂತರಿಕ ಹೊಣೆಗಾರಿಕೆಗಳ ಸ್ಥೂಲ ಪರಿಚಯ** | ಮಾಹಿತಿಗಾಗಿ |

| ಕ್ರ ಸಂ | ಪ್ರಾಧಿಕಾರ | ಹೊಣೆಗಾರಿಕೆ |
|---|---|---|
| 1 | ಕುಲಪತಿಗಳು | ಪ್ರಕರಣ–15ರ ಅನುಸಾರ ಕುಲಪತಿಗಳು ವಿಶ್ವವಿದ್ಯಾನಿಲಯದ ಸಿಂಡಿಕೇಟ್, ಶಿಕ್ಷಣ ಮಂಡಳಿ ಹಾಗೂ ಹಣಕಾಸು ಸಮಿತಿಯ ಪದನಿಮಿತ್ತ ಅಧ್ಯಕ್ಷರಾಗಿರುತ್ತಾರೆ. ಈ ಸಮಿತಿಗಳ ಸಭೆಗಳನ್ನು ತಾನು ಅಥವಾ ತಾನು ಅಧಿಕಾರ ನೀಡಿರುವ ಅಧಿಕಾರಿಗಳ ಮೂಲಕ ಲಿಖಿತವಾಗಿ ಸಭಾ ಸೂಚನೆ ಹೊರಡಿಸುವ ಮೂಲಕ ಕರೆಯುವ ಮತ್ತು ಸಮಿತಿಗಳ ನಿರ್ಣಯಗಳನ್ನು ಜಾರಿಗೊಳಿಸುವ ಅಧಿಕಾರವನ್ನು ಹೊಂದಿರುತ್ತಾರೆ. ಕರ್ನಾಟಕ ವಿಶ್ವವಿದ್ಯಾನಿಲಯದ ಅಧಿನಿಯಮ, ಪರಿನಿಯಮಗಳು, ಅಧ್ಯಾದೇಶಗಳು, ಕಾನೂನು ಕಾಯ್ದೆಗಳ ಉಪಬಂಧಗಳು ಪಾಲನೆಯಾಗಿರುವುದನ್ನು ನೋಡಿಕೊಳ್ಳುವ ಅಗತ್ಯ ಅಧಿಕಾರವನ್ನು ಹೊಂದಿರುತ್ತಾರೆ. |
| 2 | ಕುಲಸಚಿವರು (ಆಡಳಿತ) | ಪ್ರಕರಣ–17ರ ಅನುಸಾರ ಕುಲಸಚಿವರು (ಆಡಳಿತ) ರವರು ವಿಶ್ವವಿದ್ಯಾನಿಲಯದ ಪೂರ್ಣಕಾಲಿಕ ಅಧಿಕಾರಿಯಾಗಿದ್ದು ಸಿಂಡಿಕೇಟ್ ಹಾಗೂ ಶಿಕ್ಷಣ ಮಂಡಳಿಗಳ ಪದನಿಮಿತ್ತ ಕಾರ್ಯದರ್ಶಿಮತ್ತು ಹಣಕಾಸು ಸಮಿತಿಯ ಪದನಿಮಿತ್ತ ಸದಸ್ಯರಾಗಿರುತ್ತಾರೆ. ವಿಶ್ವವಿದ್ಯಾನಿಲಯದ ದಾಖಲೆಗಳು, ಮೊಹರು ಹಾಗೂ ಕುಲಪತಿಗಳು ಮತ್ತು ಸಿಂಡಿಕೇಟ್‌ಗಳು ತಮಗೆ ವಹಿಸಿಕೊಟ್ಟ ಇತರೆ ಆಸ್ತಿಗಳ ಅಭಿರಕ್ಷಕರಾಗಿರುತ್ತಾರೆ ಮತ್ತು ವಿಶ್ವವಿದ್ಯಾನಿಲಯದ ಅಧಿಕೃತ ಪತ್ರ ವ್ಯವಹಾರಗಳನ್ನು |

| | | | |
|---|---|---|---|
| | | ಸಂಬಂಧಿಸಿದ ಪ್ರಾಧಿಕಾರಗಳೊಡನೆ ಮಾಡುವುದು, ಸಿಂಡಿಕೇಟ್ ಹಾಗೂ ಶಿಕ್ಷಣ ಮಂಡಳಿಗಳ, ವ್ಯಾಸಂಗ ಶಾಖೆಗಳ ಹಾಗೂ ಅಧ್ಯಯನ ಮಂಡಳಿಗಳ ಸಭಾ ಸೂಚನಾ ಪತ್ರಗಳನ್ನು ಹೊರಡಿಸುವ ಮತ್ತು ನಿರ್ಣಯಗಳ ನಡವಳಿಗಳನ್ನು ನಿರ್ವಹಿಸುವ ಕಾರ್ಯಗಳನ್ನು ಮಾಡುತ್ತಾರೆ. ವಿಶ್ವವಿದ್ಯಾನಿಲಯದ ಪ್ರಾಧಿಕಾರಗಳು ನಡೆಸುವ ಸಭೆಗಳ ಸಭಾ ಕಾರ್ಯ ಸೂಚಿಯನ್ನು ಹಾಗೂ ಸಭೆ ನಡೆದಒಂದು ತಿಂಗಳೊಳಗೆ ಸಭಾ ನಡವಳಿಗಳನ್ನು ಮಾನ್ಯ ಕುಲಾಧಿಪತಿಗಳು ಮತ್ತು ಸರ್ಕಾರಕ್ಕೆ ಕಳುಹಿಸಿಕೊಡುವ ಜವಾಬ್ದಾರಿಯನ್ನು ಹೊಂದಿರುತ್ತಾರೆ. ವಿಶ್ವವಿದ್ಯಾನಿಲಯದ ಪರಿನಿಯಮಗಳು, ಅಧ್ಯಾದೇಶಗಳು ಮತ್ತು ನಿಬಂಧನೆಗಳಲ್ಲಿ ನಿಗದಿಪಡಿಸಿರುವ ಹಾಗೂ ಕಾಲ ಕಾಲಕ್ಕೆ ಕುಲಪತಿಗಳು ಪ್ರತ್ಯಾಯೋಜಿಸುವ ಅಧಿಕಾರಗಳನ್ನು ನಿರ್ವಹಿಸುತ್ತಾರೆ. | |
| 3 | ಕುಲಸಚಿವರು (ಪರೀಕ್ಷಾಂಗ) | ಪ್ರಕರಣ–18ರ ಅನುಸಾರ ಕುಲಸಚಿವರು (ಪರೀಕ್ಷಾಂಗ) ರವರು ವಿಶ್ವವಿದ್ಯಾನಿಲಯದ ಪೂರ್ಣಕಾಲಿಕ ಅಧಿಕಾರಿಯಾಗಿದ್ದು ಸಿಂಡಿಕೇಟ್ ಹಾಗೂ ಶಿಕ್ಷಣ ಮಂಡಳಿ, ಹಣಕಾಸು ಸಮಿತಿ ಹಾಗೂ ಎಲ್ಲಾ ವ್ಯಾಸಂಗ ಶಾಖೆಗಳ ಪದನಿಮಿತ್ತ ಸದಸ್ಯರಾಗಿರುತ್ತಾರೆ. ಪರೀಕ್ಷೆಗಳನ್ನು ನಡೆಸುವ ಮತ್ತು ಅದಕ್ಕೆ ಸಂಬಂಧಿಸಿದ ಪೂರಕ ಕರ್ತವ್ಯಗಳನ್ನು ನಿರ್ವಹಿಸುತ್ತಾರೆ. | |
| 4 | ವಿತ್ತಾಧಿಕಾರಿ (ಹಣಕಾಸು ಅಧಿಕಾರಿ) | ಪ್ರಕರಣ–19ರ ಅನುಸಾರ ವಿತ್ತಾಧಿಕಾರಿ (ಹಣಕಾಸು ಅಧಿಕಾರಿ) ರವರು ವಿಶ್ವವಿದ್ಯಾನಿಲಯದ ಪೂರ್ಣಕಾಲಿಕ ಅಧಿಕಾರಿಯಾಗಿದ್ದು ಶಿಕ್ಷಣ ಮಂಡಳಿಯ ಪದನಿಮಿತ್ತ ಸದಸ್ಯ ಹಾಗೂ ಹಣಕಾಸು ಸಮಿತಿಯ ಪದನಿಮಿತ್ತ ಕಾರ್ಯದರ್ಶಿಯಾಗಿರುತ್ತಾರೆ. ಇವರು ಹಣಕಾಸು ಸಮಿತಿಯ ನಿಯಂತ್ರಣದಲ್ಲಿ ವಿಶ್ವವಿದ್ಯಾನಿಲಯದ ಪರಿನಿಯಮಗಳು, ಅಧ್ಯಾದೇಶಗಳು ಮತ್ತು ನಿಬಂಧನೆಗಳಲ್ಲಿ ನಿಗದಿಪಡಿಸಿರುವ ಹಾಗೂ ಕಾಲ ಕಾಲಕ್ಕೆ ಕುಲಪತಿಗಳು ಹಾಗೂ ಕುಲ ಸಚಿವರು (ಆಡಳಿತ) ರವರು ಪ್ರತ್ಯಾಯೋಜಿಸುವ ಅಧಿಕಾರಗಳು ಮತ್ತು ಕರ್ತವ್ಯಗಳನ್ನು ನಿರ್ವಹಿಸುತ್ತಾರೆ. | |

## ಅಧ್ಯಾಯ–3

## ವಿಶ್ವವಿದ್ಯಾನಿಲಯದ ಹಣಕಾಸು ಪರಿಸ್ಥಿತಿ

### 3.1 ವಿಶ್ವವಿದ್ಯಾನಿಲಯಕ್ಕೆ ಹಣಕಾಸಿನ ಹರಿವು :

ವಿಶ್ವವಿದ್ಯಾನಿಲಯಕ್ಕೆ ಈ ಕೆಳಕಂಡವುಗಳು ಪ್ರಮುಖ ಹಣಕಾಸಿನ ಮೂಲಗಳಾಗಿರುತ್ತವೆ

ಅ) ಆಂತರಿಕ ಮೂಲಗಳಿಂದ ಆದಾಯ: ವಿದ್ಯಾರ್ಥಿಗಳ ಪ್ರವೇಶ ಶುಲ್ಕಗಳು, ಸ್ಕೀಂ–ಬಿ ಕೋರ್ಸುಗಳ ಪ್ರವೇಶ ಶುಲ್ಕ, ಪರೀಕ್ಷಾ ಶುಲ್ಕಗಳು, ವಿಶ್ವವಿದ್ಯಾನಿಲಯಗಳ ಕಟ್ಟಡಗಳ ಬಾಡಿಗೆ, ತೋಟಗಾರಿಕೆ ಉತ್ಪನ್ನಗಳು, ಕಾಲೇಜುಗಳ ಸಂಯೋಜನಾ ಶುಲ್ಕಗಳು ಹಾಗೂ ಇತ್ಯಾದಿ, ವಿಶ್ವವಿದ್ಯಾನಿಲಯದ ನಿಧಿಯ ಹೂಡಿಕೆ ಮೇಲಿನ ಬಡ್ಡಿಯಿಂದ ಬರುವಆದಾಯ.

ಆ) ರಾಜ್ಯ ಸರ್ಕಾರವು ವೇತನ–ಭತ್ಯೆಗಳಿಗಾಗಿ, ಪಿಂಚಣಿಗಾಗಿ ನೀಡುವ ಅನುದಾನ ಹಾಗೂ ಅಭಿವೃದ್ಧಿ

2018–19ನೇ ಸಾಲಿನ ಮೈಸೂರು ವಿಶ್ವವಿದ್ಯಾನಿಲಯಕ್ಕೆ ಆಂತರಿಕ ಮೂಲ ಆದಾಯವಾದ ವಿದ್ಯಾರ್ಥಿಗಳ ಪ್ರವೇಶ ಶುಲ್ಕಗಳು, ಸ್ಕೀ–ಬಿ–ಕೋರ್ಸುಗಳ ಪ್ರವೇಶ ಶುಲ್ಕ ಪರೀಕ್ಷಾ ಶುಲ್ಕಗಳು ವಿಶ್ವವಿದ್ಯಾನಿಲಯದ ಕಟ್ಟಡಗಳ ಬಾಡಿಗೆ ತೋಟಗಾರಿಕೆ ಉತ್ಪನ್ನಗಳು, ಕಾಲೇಜುಗಳ ಸಂಯೋಜನಾ ಶುಲ್ಕಗಳು, ಹಾಗೂ ಮತ್ತಿತರ ಶುಲ್ಕಗಳು, ವೇತನ ಭತ್ಯೆಗಳಿಗಾಗಿ, ಪಿಂಚಣಿ ಸಂಬಂಧ ರಾಜ್ಯ ಸರ್ಕಾರವು ನೀಡುವ ಅನುದಾನ ಹಾಗೂ ಅಭಿವೃದ್ಧಿ ಕಾರ್ಯಗಳ ಅನುದಾನ ಹಾಗೂ ಅಭಿವೃದ್ಧಿ ಕಾರ್ಯಗಳ ಅನುದಾನ ಮೂಲಗಳಾಗಿದ್ದು, ಈ ಅನುದಾನಗಳನ್ನು ಅಭಿವೃದ್ಧಿ ಯೋಜನೆಗಳಿಗಾಗಿ

<table>
<tr>
<td>
ಅನುದಾನ<br><br>
ಇ) ಕೇಂದ್ರ ಮತ್ತುರಾಜ್ಯ ಸರ್ಕಾರಗಳು ಸಂಶೋಧನೆ ಮತ್ತುಅಭಿವೃದ್ಧಿಗಾಗಿ ನೀಡುವ ಅನುದಾನ.<br><br>
ಈ) ರಾಷ್ಟ್ರೀಯ ಮತ್ತುಅಂತರರಾಷ್ಟ್ರೀಯ ಸಂಸ್ಥೆಗಳು/ಏಜೆನ್ಸಿಗಳು ಸಂಶೋಧನೆ ಮತ್ತುಅಭಿವೃದ್ಧಿಗಾಗಿ ನೀಡುವ ಅನುದಾನ<br><br>
ಉ) ಸಾರ್ವಜನಿಕರಿಂದ ಬರುವ ದತ್ತಿಗಳುಹಾಗೂ ಕೊಡುಗೆಗಳು<br><br>


</td>
<td>
ವಿನಿಯೋಗಿಸಿಕೊಳ್ಳಲಾಗುತ್ತದೆ.<br><br>
ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಸಂಶೋಧನೆ ಮತ್ತು ಅಭಿವೃದ್ಧಿಗಾಗಿ ಬಿಡುಗಡೆ ಮಾಡುವ ಅನುದಾನಗಳ ಮೂಲಗಳಿಂದ ಬರುವ ಹಣಕಾಸಿನ ಹರಿವು ಆಗಿರುತ್ತದೆ.<br><br>
ರಾಷ್ಟ್ರೀಯ ಮತ್ತು ಅಂತರ ರಾಷ್ಟ್ರೀಯ ಸಂಸ್ಥೆಗಳು/ಏಜೆನ್ಸಿಗಳಿಂದ ಅಭಿವೃದ್ಧಿ ಮತ್ತು ಸಂಶೋಧನಾ ಕಾರ್ಯಗಳಿಗೆ ನೀಡುವ ಅನುದಾನ ಸಾರ್ವಜನಿಕರಿಂದ ಬರುವ ದತ್ತಿಗಳು, ಹಾಗೂ ಕೊಡುಗೆಗಳು ಕೂಡ ವಿಶ್ವವಿದ್ಯಾನಿಲಯದ ಹಣಕಾಸಿನ ಮೂಲವಾಗಿರುತ್ತದೆ.<br><br>
ಮೇಲೆ ವಿವರಿಸಿದ ಬಾಬ್ತುಗಳಿಂದ ಹಣದ ಹರಿವು ಇದ್ದು ವಿಶ್ವವಿದ್ಯಾನಿಲಯದ ವ್ಯಾಪ್ತಿಯ ಅಭಿವೃದ್ಧಿ ಕಾರ್ಯಗಳು, ಸಂಶೋಧನೆ ಮತ್ತಿತರ ಚಟುವಟಿಕೆಗಳ ಕಾರ್ಯಗಳನ್ನು ಕೈಗೊಳ್ಳಲಾಗುತ್ತದೆ. ಈ ಸಂದರ್ಭದಲ್ಲಿ ಸಂಬಂಧಪಟ್ಟ ವಿಭಾಗ/ಇಲಾಖೆಗಳಿಗನುಗುಣವಾಗಿ ವಿಶ್ವವಿದ್ಯಾನಿಲಯದ ಹಣದ ಹರಿವಿನ ಮೂಲಗಳನ್ನು ಸದ್ಬಳಕೆ ಮಾಡಿ ಕೊಳ್ಳಲಾಗುತ್ತದೆ.
</td>
</tr>
<tr>
<td>
3.2 ವಿಶ್ವವಿದ್ಯಾನಿಲಯದ ನಿಧಿ :<br><br>
ಕರ್ನಾಟಕ ವಿಶ್ವವಿದ್ಯಾನಿಲಯಗಳ ಅಧಿನಿಯಮ–2000ದಲ್ಲಿನ ಪ್ರಕರಣ–46ರ ಅನುಸಾರ ಮೈಸೂರು ವಿಶ್ವವಿದ್ಯಾನಿಲಯವು ತನ್ನದೇ ಆದ ನಿಧಿಯನ್ನು ಹೊಂದಿದ್ದು, ಈ ನಿಧಿಗೆ ಸಂಬಂಧಿಸಿದ ಬ್ಯಾಂಕ್ ಖಾತೆಗಳ ವಿವರಗಳು, ರಾಜ್ಯ ಸರ್ಕಾರದಿಂದ ಬಂದಿರುವ ಅನುದಾನಗಳು, ಯುಜಿಸಿಯ ಅಭಿವೃದ್ಧಿ ಅನುದಾನ ಮತ್ತು ಇತರೆ ಅನುದಾನಗಳ ಬಗ್ಗೆ ಹಾಗೂ ವಿಶ್ವವಿದ್ಯಾನಿಲಯದ 34 ಬ್ಯಾಂಕ್ ಖಾತೆಗಳ ಸ್ವೀಕೃತಿ ಮತ್ತು ಪಾವತಿ ವಿವರಗಳನ್ನು ಕ್ರೋಢೀಕರಿಸಿ ವಿಶ್ವವಿದ್ಯಾನಿಲಯದ ಹಣಕಾಸು ಸಮಿತಿ
</td>
<td>
ಕರ್ನಾಟಕ ವಿಶ್ವವಿದ್ಯಾನಿಲಯಗದ ಅಧಿನಿಯಮ 2000ರ ಪ್ರಕರಣ–46ರ ಪ್ರಕಾರ ಮೈಸೂರು ವಿಶ್ವವಿದ್ಯಾನಿಲಯವು ನಿಧಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರದಿಂದ ಬಿಡುಗಡೆಯಾಗುವ ಅನುದಾನ ಯು.ಜಿ.ಸಿ ಅಭಿವೃದ್ಧಿ ಮತ್ತು ಇತರೆ ಅನುಪಾತಗಳನ್ನು ಬ್ಯಾಂಕ್ ಖಾತೆಗಳಲ್ಲಿರಿಸುವ ಸ್ವೀಕೃತಿ ಮತ್ತು ಪಾವತಿಯ ವಿವರಗಳನ್ನು ಕ್ರೋಢೀಕರಿಸಿ ಸಂಬಂಧಪಟ್ಟ ಸಮಿತಿಗಳ ಅನುಮೋದನೆಯನ್ನು ಪಡೆಯಲು ಸೂಕ್ತ ಕ್ರಮವಹಿಸಲಾಗಿರುತ್ತದೆ. ಹಾಗೂ ಪ್ರತಿ ತಿಂಗಳ ಪ್ರಾರಂಭಿಕ ಶಿಲ್ಕು, ಜಮೆಗಳು ಮತ್ತು
</td>
</tr>
</table>

| | |
|---|---|
| ಹಾಗೂ ಸಿಂಡಿಕೇಟ್ ಸಭೆಯ ಮುಂದೆ ಮಂಡಿಸಿ ಅನುಮೋದನೆ ಪಡೆಯಬೇಕಾಗಿರುತ್ತದೆ.<br>ಕರ್ನಾಟಕ ವಿಶ್ವವಿದ್ಯಾನಿಲಯಗಳ ಅಧಿನಿಯಮ– 2000ದ ಅಧ್ಯಾಯ–VIರಲ್ಲಿನ ಪ್ರಕರಣ–46ರ ಅನುಸಾರ ವಿಶ್ವವಿದ್ಯಾನಿಲಯಕ್ಕೆ ಸ್ವೀಕೃತವಾಗುವ ಕೇಂದ್ರ ಸರ್ಕಾರದ ಅನುದಾನ, ರಾಜ್ಯ ಸರ್ಕಾರದ ಅನುದಾನ, ಕೊಡುಗೆಗಳು, ದತ್ತಿಗಳು, ವಿವಿಧ ರೀತಿಯ ಶುಲ್ಕಗಳು, ವಿದೇಶಿ ಸರ್ಕಾರ/ಸಂಸ್ಥೆಗಳಿಂದ ಸ್ವೀಕೃತವಾದ ಅನುದಾನಗಳು, ದೇಣಿಗೆ ಹಾಗೂ ಇತರೆ ಸಂಪನ್ಮೂಲಗಳ ಮೊಬಲಗುಗಳು ವಿಶ್ವವಿದ್ಯಾನಿಲಯದ ನಿಧಿಯಾಗಿದ್ದು, ಈ ನಿಧಿಯನ್ನು ರಾಷ್ಟ್ರೀಕೃತ/ಅನುಸೂಚಿತ ಬ್ಯಾಂಕ್‌ಗಳಲ್ಲಿ ನಿರ್ವಹಿಸಲಾಗಿರುತ್ತದೆ. | ಸಂದಾಯಗಳು, ಕೊಡುಗೆಗಳು, ದತ್ತಿಗಳು, ವಿವಿಧ ರೀತಿಯ ಶುಲ್ಕಗಳು, ವಿದೇಶಿ, ಸರ್ಕಾರ/ಸಂಸ್ಥೆಗಳಿಂದ ಸ್ವೀಕೃತವಾದ ಅನುದಾನಗಳು, ದೇಣಿಗೆ ಹಾಗೂ ಇತರೆ ಸಂಪನ್ಮೂಲಗಳ ಮೊಬಲಗುಗಳು ವಿಶ್ವವಿದ್ಯಾನಿಲಯದ ನಿಧಿಯಾಗಿದ್ದು ಈ ನಿಧಿಯ ವ್ಯವಹಾರಗಳನ್ನು ರಾಷ್ಟ್ರೀಕೃತ/ಅನುಸೂಚಿತ ಬ್ಯಾಂಕ್‌ಗಳಲ್ಲಿ ನಿರ್ವಹಿಸಲಾಗಿರುತ್ತದೆ.<br>ಈ ನಿಟ್ಟಿನಲ್ಲಿ ಸದರಿ ಕಂಡಿಕೆ 3.2 ರ ಆಕ್ಷೇಪಣೆಯನ್ನು ಕೈ ಬಿಡುವಂತೆ ಕೋರಲಾಗಿದೆ. |
| **3.3 ವಿಶ್ವವಿದ್ಯಾನಿಲಯದ ಬೇಡಿಕೆ, ವಸೂಲಾತಿ ಹಾಗೂ ಬಾಕಿ ವಿವರಗಳು :**<br>ವಿಶ್ವವಿದ್ಯಾನಿಲಯವು ಜೋಡಿ ನಮೂದು ಸಂಚಯನ ಲೆಕ್ಕ ಪದ್ಧತಿಯನ್ನು (Accrual Double Entry Accounting System) ಅಳವಡಿಸಿಕೊಳ್ಳದಿರುವುದರಿಂದ ವಿಶ್ವವಿದ್ಯಾನಿಲಯಕ್ಕೆ ಹಿಂದಿನ ವರ್ಷಗಳಿಂದ ಬರಬೇಕಾದ ಬಾಕಿ ಹಾಗೂ ವಿಶ್ವವಿದ್ಯಾನಿಲಯವು ಪಾವತಿಸಬೇಕಾದ ಹಿಂದಿನ ವರ್ಷಗಳ ಬಾಕಿ ಅಂದರೆ ಹೊಣೆಗಾರಿಕೆಯನ್ನು ಲೆಕ್ಕ ಪರಿಶೋಧನೆಯಲ್ಲಿ ಖಚಿತಪಡಿಸಲು ಸಾಧ್ಯವಾಗಿರುವುದಿಲ್ಲ. ಹೀಗಾಗಿ ಪ.ಜಾತಿ/ವರ್ಗಗಳ ಹಾಗೂ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ವಿಶ್ವವಿದ್ಯಾನಿಲಯವು ಸರ್ಕಾರದ ಆದೇಶಾನುಸಾರ ನೀಡಿರುವ ಪ್ರವೇಶ ಶುಲ್ಕ ರಿಯಾಯಿತಿ ಮೊತ್ತ ಸರ್ಕಾರದಿಂದ ಹಿಂಭರ್ತಿಯಾಗದೇ ಹಲವು ವರ್ಷಗಳಿಂದ ಬಾಕಿ ಇದ್ದು, ಇದು ವಾರ್ಷಿಕ ಲೆಕ್ಕಗಳಲ್ಲಿ ಬಿಂಬಿತವಾಗಿರುವುದಿಲ್ಲ. ಇದಲ್ಲದೆ ವಿಶ್ವವಿದ್ಯಾನಿಲಯಗಳ ಆಸ್ತಿಗಳಿಂದ ಬರಬೇಕಾದ ರಾಜಸ್ವದ ಬೇಡಿಕೆ, ಸಂಗ್ರಹಣೆ ಮತ್ತು ಬಾಕಿ ತಃಖ್ತೆಯನ್ನು ಕೂಡ ವಿಶ್ವವಿದ್ಯಾನಿಲಯವು ತಯಾರಿಸಿರುವುದಿಲ್ಲ. ಕಾಲ ಕಳೆದಂತೆ ಈ ಬಾಕಿ ಮೊತ್ತಗಳು ವಸೂಲಾತಿ ಯಾಗದೇ ಬಿಟ್ಟು ಹೋಗಿ ವಿಶ್ವವಿದ್ಯಾನಿಲಯಕ್ಕೆ ನಷ್ಟವಾಗುವ ಸಂಭವವಿರುತ್ತದೆ. | ವಿಶ್ವವಿದ್ಯಾನಿಲಯಕ್ಕೆ ಹಿಂದಿನ ವರ್ಷಗಳಿಂದ ಬರಮೇಕಾದ ಬಾಕಿ ಹಾಗೂ ವಿಶ್ವವಿದ್ಯಾನಿಲಯವು ಪಾವತಿಸಬೇಕಾದ ಹಿಂದಿನ ವರ್ಷಗಳ ಬಾಕಿ ಬಗ್ಗೆ ಸಂಬಂಧಪಟ್ಟ ಇಲಾಖೆಗಳಲ್ಲಿ ಲೆಡ್ಜರುಗಳನ್ನು ತೆರೆದು ಮಾಹಿತಿಯನ್ನು ಕಾಲಕಾಲಕ್ಕೆ ನಿರ್ವಹಿಸಲಾಗುತ್ತಿದೆ. ಸರ್ಕಾರ ದಿಂದ ಹಿಂಬರ್ತಿಯಾಗದ ವಿವರಗಳನ್ನು ಪರಿಶಿಷ್ಟಜಾತಿ/ವರ್ಗಗಳು, ಹಾಗೂ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳ ಪ್ರವೇಶ ಶುಲ್ಕ ರಿಯಾಯಿತಿ ಮೊತ್ತದ ವಿವರಗಳನ್ನು ಹಾಗೂ ರಾಜಸ್ವದ ಬೇಡಿಕೆ ಸಂಗ್ರಹಣೆ ಮತ್ತು ಬಾಕಿಯ ಮಾಹಿತಿಯನ್ನು ಪ್ರತ್ಯೇಕವಾಗಿ ಪಡೆದು ನಿರ್ವಹಿಸಲು ಕ್ರಮಕೈಗೊಳ್ಳಲಾಗಿರುತ್ತದೆ.<br>ಮುಂದುವರಿದು ಕಂಡಿಕೆ 3.3 ರಲ್ಲಿ ಪ್ರಸ್ತಾಪಿಸಿ ಸೂಚಿಸಿರುವ ಅಂಶಗಳ ಮೇರೆಗೆ ಕ್ರಮ ಕೈಗೊಂಡು ನಿಯಮದಂತೆ ಬೇಡಿಕೆ ವಸೂಲಾತಿ ಮತ್ತು ಬಾಕಿ ವಿವರಗಳನ್ನು ನಿರ್ವಹಿಸಲು ಕ್ರಮವಹಿಸಲಾಗುವುದೆಂಬ ಅಂಶವನ್ನು ಲೆಕ್ಕಪರಿಶೋಧನೆಯ ಗಮನಕ್ಕೆ ತರಲಾಗಿದೆ.<br>ಈ ನಿಟ್ಟಿನಲ್ಲಿ ಸದರಿ ಆಕ್ಷೇಪಿತ ಕಂಡಿಕೆಯನ್ನು ಕೈ ಬಿಡುವಂತೆ ಕೋರಲಾಗಿದೆ. |
| **ಅಧ್ಯಾಯ–4**<br>**ವಿಶ್ವವಿದ್ಯಾನಿಲಯದಆಯವ್ಯಯ**<br>**4.1 ಆಯವ್ಯಯ ಅಂದಾಜುಗಳು :**<br>ಕರ್ನಾಟಕ ವಿಶ್ವವಿದ್ಯಾನಿಲಯಗಳ ಅಧಿನಿಯಮ–2000ದ ಪ್ರಕರಣ–48(1)ರ ಅನುಸಾರ ವಿಶ್ವವಿದ್ಯಾನಿಲಯದ ಪರಿನಿಯಮಗಳಲ್ಲಿ ನಿಗದಿಪಡಿಸಲಾದ ದಿನಾಂಕದೊಳಗೆ ವಿಶ್ವವಿದ್ಯಾನಿಲಯದ ವಿತ್ತಾಧಿಕಾರಿಯ ನೆರವಿನೊಡನೆ ಮುಂಬರುವ ವರ್ಷದ ವಾರ್ಷಿಕ ಆಯವ್ಯಯ ಅಂದಾಜುಗಳನ್ನು ತಯಾರಿಸಿ ಹಣಕಾಸು ಸಮಿತಿಯ ಪರಿಶೀಲನೆಯೊಂದಿಗೆ ಶಿಕ್ಷಣ ಮಂಡಳಿಯ ಮುಂದೆ | ಕರ್ನಾಟಕ ವಿಶ್ವವಿದ್ಯಾನಿಲಯಗಳ ಅಧಿನಿಯಮ–2000ದ ಪ್ರಕರಣ–48(1)ರ ಅನುಸಾರ ವಿಶ್ವವಿದ್ಯಾನಿಲಯದ ಪರಿನಿಯಮಗಳಲ್ಲಿ ನಿಗದಿತ ದಿನಾಂಕದೊಳಗೆ ವಿಶ್ವವಿದ್ಯಾನಿಲಯದ ಸಕ್ಷಮ ಪ್ರಧಿಕಾರದ ಪರಿಶೀಲನೆಯೊಂದಿಗೆ ಅನುಮೋದನೆ ಪಡೆಯಲಾಗಿದೆ, (ಸಕ್ಷಮ ಪ್ರದಕಾರದ ನಡವಳಿಗಳ ಪ್ರತಿ ಲಗತ್ತಿಸಿದೆ.)<br>2018–19 ನೇ ಸಾಲಿನ ಆಯವ್ಯಯದ ಸಂಕ್ಷಿಪ್ತಿ ಕೆಳಕಂಡಂತಿರುತ್ತದೆ |

ಮಂಡಿಸಬೇಕಾಗಿರುತ್ತದೆ. ದಿನಾಂಕ:17.03.2018ರಂದು ನಡೆದ 4ನೇ ತ್ರೈಮಾಸಿಕ ಹಣಕಾಸು ಸಮಿತಿ ಸಭೆಯಲ್ಲಿ ಹಾಗೂ 24.03.2018ರಂದು ನಡೆದ ಸಿಂಡಿಕೇಟ್ ಸಭೆಯಲ್ಲಿ ಆಯವ್ಯಯವನ್ನು ಮಂಡಿಸಿ ಅನುಮೋದನೆ ಪಡೆಯಲಾಗಿದೆ. ವಿಶ್ವವಿದ್ಯಾನಿಲಯದ 2018–19ನೇ ಸಾಲಿನ ಆಯವ್ಯಯ ಅಂದಾಜುಗಳ ವಿವರಗಳು ಈ ಕೆಳಕಂಡಂತಿರುತ್ತದೆ.

| ಕ್ರಸಂ | ವಿವರಗಳು | ಮೊತ್ತ (ರೂ.ಗಳಲ್ಲಿ) |
|---|---|---|
| 1 | 2018–19ನೇ ಸಾಲಿನ ಆಯವ್ಯಯಅಂದಾಜಿನಆರಂಭ ಶಿಲ್ಕು | 262,38,70,960 |
| 2 | 2018–19ನೇ ಸಾಲಿನ ನಿರೀಕ್ಷಿತ ಸ್ವೀಕೃತಿ | 405,68,22,840 |
| 3 | ಒಟ್ಟು ಲಭ್ಯತೆ (2 + 3) | 668,06,93,800 |
| 4 | ನಿರೀಕ್ಷಿತ ವೆಚ್ಚಗಳು | 381,25,78,940 |
| 5 | 2018–19ನೇ ಸಾಲಿನ ಅಂತಿಮ ಶಿಲ್ಕು | 286,81,14,860 |

2017–18ರ ಆಯವ್ಯಯ ಅಂದಾಜಿನಲ್ಲಿ ಅಂತಿಮ ಶಿಲ್ಕು ಎಲ್ಲಾ ಬ್ಯಾಂಕ್ ಖಾತೆಗಳು ಸೇರಿ ರೂ.75,90,16,888/–ಗಳಿದ್ದು, 2018–19ರ ಆಯವ್ಯಯದಲ್ಲಿ ಪ್ರಾರಂಭಿಕ ಶಿಲ್ಕಾಗಿ ರೂ.262,38,70,960/–ಗಳನ್ನು ತೆಗೆದುಕೊಂಡಿರುವುದು ಆಯವ್ಯಯವನ್ನು ಜವಾಬ್ದಾರಿಯಿಂದ ತಯಾರಿಸಿಲ್ಲದಿರುವ ಹಾಗೂ ಹಣಕಾಸು ಸಮಿತಿಯಲ್ಲಿ ಸರಿಯಾಗಿ ಪರಿಶೀಲನೆಯಾಗದಿರುವುದನ್ನು ಬಿಂಬಿಸುತ್ತದೆ. 2018–19ನೇ ಸಾಲಿನ ಆಯವ್ಯಯ ಅಂದಾಜಿನಲ್ಲಿ ಹಾಗೂ ವಾರ್ಷಿಕ ಲೆಕ್ಕಪತ್ರಗಳಲ್ಲಿ 32 ಬ್ಯಾಂಕ್ ಖಾತೆಗಳ ಆರಂಭಿಕ ಶಿಲ್ಕುಗಳನ್ನು ಮಾತ್ರ ತೆಗೆದುಕೊಂಡಿದ್ದು, ಆನ್‌ಲೈನ್ ಪ್ರೋಗ್ರಾಂ(ಕಾಯ್ದಿರಿಸಿರುವುದು) ಹಾಗೂ ಆನ್‌ಲೈನ್ ಪ್ರೋಗ್ರಾಂ(ಎಸ್ಕ್ರೋ) ಖಾತೆಗಳ ಆರಂಭಿಕ ಶಿಲ್ಕುಗಳು ಬಿಟ್ಟು ಹೋಗಿರುತ್ತವೆ. ಈ ಮೊತ್ತಗಳು ಕ್ರಮವಾಗಿ ರೂ.3,15,095/– ಹಾಗೂ ರೂ.18,209/–ಗಳಿದ್ದು, ಲೆಕ್ಕಪರಿಶೋಧನೆಗೆ ವಿಶ್ವವಿದ್ಯಾನಿಲಯದ ವಿತ್ತಾಧಿಕಾರಿಗಳು ದೃಢೀಕರಿಸಿ ನೀಡಿರುವ ಲೆಕ್ಕಪತ್ರಗಳ ವಿವರಣಾ ಪಟ್ಟಿಯಲ್ಲಿ ಈ ಎರಡೂ ಖಾತೆಗಳ ಮೊತ್ತಗಳನ್ನು ಸೇರಿಸಿರುತ್ತಾರೆ.

ಮುಂದಿನ ವರ್ಷದ ಆಯವ್ಯಯ ಅಂದಾಜುಗಳನ್ನು ಚಾಲ್ತಿ ವರ್ಷದಲ್ಲಿ ತಯಾರಿಸುವಾಗ ಹಿಂದಿನ ವರ್ಷದ ನಿಖರವಾದ ಅಂತಿಮ ಶಿಲ್ಕನ್ನು ವಾರ್ಷಿಕ ಲೆಕ್ಕಗಳಿಂದ ತೆಗೆದುಕೊಂಡು ಚಾಲ್ತಿ ವರ್ಷದ ನಿರೀಕ್ಷಿತ ರಾಜಸ್ವವನ್ನು ಸೇರಿಸಿಕೊಂಡು, ಲಭ್ಯವಿರುವ ಒಟ್ಟು ಮೊತ್ತದಿಂದ ಚಾಲ್ತಿ ವರ್ಷದ ನಿರೀಕ್ಷಿತ ವೆಚ್ಚಗಳನ್ನು ಕಳೆದಾಗ ಚಾಲ್ತಿ ವರ್ಷದ ಅಂತಿಮ ಶಿಲ್ಕನ್ನು ಅಂದಾಜಿಸ ಬಹುದಾಗಿರುತ್ತದೆ. ಈ ಮೊತ್ತವನ್ನು

| ಕ್ರಸಂ | ವಿವರಗಳು | ಮೊತ್ತ (ರೂ.ಗಳಲ್ಲಿ) |
|---|---|---|
| 1 | 2018–19ನೇ ಸಾಲಿನ ಆಯವ್ಯಯ ಅಂದಾಜಿನ ಆರಂಭ ಶಿಲ್ಕು | 262,38,70,960 |
| 2 | 2018–19ನೇ ಸಾಲಿನ ನಿರೀಕ್ಷಿತ ಸ್ವೀಕೃತಿ | 405,68,22,840 |
| 3 | ಒಟ್ಟು ಲಭ್ಯತೆ (2 + 3) | 668,06,93,800 |
| 4 | ನಿರೀಕ್ಷಿತ ವೆಚ್ಚಗಳು | 381,25,78,940 |
| 5 | 2018–19ನೇ ಸಾಲಿನ ಅಂತಿಮ ಶಿಲ್ಕು | 286,81,14,860 |

ಮೇಲಿನ ಕೋಷ್ಟಕದಲ್ಲಿ ವಿವರಿಸಿರುವಂತೆ 2017–18 ನೇ ಸಾಲಿನ ಅಯವ್ಯಯ ಅಂದಾಜಿನಲ್ಲಿ ಅಂತಿಮ ಶಿಲ್ಕು ರೂ. 75,90,16,880/– ಗಳನ್ನು ಪರಿಗಣಿಸಿ, ರೂ. 262,38,70,960/– ಗಳನ್ನು ತಗೆದುಕೊಂಡಿರುವುದಕ್ಕೆ ಸಂಭಂದಿಸಿದಂತೆ ಈ ಕೆಳಗಿನ ಅಂಶಗಳನ್ನು ಲೆಕ್ಕಪರಿಶೋಧನಾ ಗಮನಕ್ಕೆ.

2017–18 ನೇ ಸಾಲಿನ ಅಯವ್ಯಯದಲ್ಲಿ ಅಂತಿಮ ಶಿಲ್ಕು ರೂ. 75,90,16,888/– ಕೇವಲ ಆಯವ್ಯಯದ ಅಂದಾಜುಗಳಾಗಿರುತ್ತದೆ. ಆದರೆ 2018–19 ನೇ ಸಾಲಿನ ಆಯವ್ಯಯ ತಯಾರಿಕೆಯಲ್ಲಿ 2017–18 ನೇ ಸಾಲಿನ ಪರಿಷ್ಕೃತವಾಗಿ ಅಂದಾಜಿಸಿರುವ (ಆಯವ್ಯಯ ಪುಸ್ತಕದ ಕಾಲಂ 6) ಅಂತಿಮ ಶಿಲ್ಕು ರೂ. 262,38,70,960/– ಗಳು ಪ್ರಸ್ತುತ ಅಂತಿಮ ಶಿಲ್ಕುಗಳಾಗಿರುತ್ತದೆ. ಆರ್ಥಿಕ ನಿಯಮಗಳನುಸಾರ ಪ್ರಸ್ತುತ ಅಂತಿಮ ಶಿಲ್ಕನ್ನೇ ಪರಿಗಣಿಸಬೇಕಗಿರುವುದ್ದರಿಂದ, ರೂ.262,38,70,960/– ಗಳನ್ನು ಪರಿಗಣಿಸಲಾಗಿದೆ. ಎಂಬುದನ್ನು ತಮ್ಮ ಅವಗಾಹನೆಗಾಗಿ ತರಲಾಗಿದೆ.

ಆನ್‌ಲೈನ್ ಪ್ರೊಗ್ರಾಮ್ಸ್ (ರಿಸರ್ವ್) ಹಾಗೂ ಆನ್‌ಲೈನ್ ಪ್ರೊಗ್ರಾಮ್ಸ್ (ಎಸ್ಕ್ರೋ) ಖಾತೆಗಳ ಆರಂಭ ಶಿಲ್ಕು ಬಿಟ್ಟು ಹೋಗಿರುತ್ತದೆ. ಈ ಖಾತೆಗಳ ಮೊಬಲಗು ರೂ.3,15,095/– ಹಾಗೂ 18,209/– ಗಳಾಗಿದ್ದು, ಲೆಕ್ಕ ಪರಿಶೋಧನೆಗೆ ವಿಶ್ವವಿದ್ಯಾನಿಲಯದ ವಿತ್ತಾಧಿಕಾರಿಗಳು ದೃಢೀಕರಿಸಿ ನೀಡಿರುವ ವಿವರಣಾ ಪಟ್ಟಿಯಲ್ಲಿ ಈ ಎರಡು ಖಾತೆಗಳ ಮೊತ್ತವನ್ನು ಸೇರಿಸಿರುತ್ತಾರೆ. ಅಂತಿಮವಾಗಿ ಆರಂಭಿಕ ಶಿಲ್ಕು ರೂ.393,83,68,673/–ಗಳಾಗುತ್ತದೆ. ವಿಶ್ವವಿದ್ಯಾನಿಲಯದ ವಾರ್ಷಿಕ ಪತ್ರಗಳಲ್ಲಿ ಆರಂಭಿಕ ಶಿಲ್ಕುನಲ್ಲಿ ಮಾರ್ಪಾಡುಗಳನ್ನು ಅಳವಡಿಸಿಕೊಳ್ಳಲು ಸೂಚಿಸಿದೆ. ಆದರೆ ಈ ಬಗ್ಗೆ ಕೆಳಗಿನ ಅಂಶವನ್ನು ಲೆಕ್ಕ ಪರಿಶೋಧನೆಯ ಗಮನಕ್ಕೆ ತರಲಾಗಿದೆ.

ಆನ್‌ಲೈನ್ ಪ್ರೊಗ್ರಾಮ್ಸ್ ಖಾತೆಗೆ ಜಮಾವಾಗುವ ಆದಾಯ ಶೇ.30 ರಷ್ಟನ್ನು ಆನ್‌ಲೈನ್ ಪ್ರೊಗ್ರಾಮ್ಸ್ ಖಾತೆಯಲ್ಲಿರಿಸಿಕೊಳ್ಳಲಾಗಿದೆ.(ವಿಶ್ವವಿದ್ಯಾನಿಲಯ ಹಾಗೂ ದೆಹಲಿ ಕಛೇರಿಯೊಂದಿಗೆ ಒಡಂಬಡಿಕೆ ಯನ್ವಯದಂತೆ (MOU ಪ್ರತಿ ಲಗತ್ತಿಸಿದೆ) ಇನ್ನುಳಿದ ಶೇ.70 ರಷ್ಟನ್ನು ಆನ್‌ಲೈನ್ ಪ್ರೊಗ್ರಾಮ್ಸ್ (ರಿಸರ್ವ್) ಹಾಗೂ ಆನ್‌ಲೈನ್ ಪ್ರೊಗ್ರಾಮ್ಸ್ (ಎಸ್ಕ್ರೋ) ಖಾತೆಗೆ ಜಮಾವಾಗಿರುತ್ತದೆ. ಈ ಮೊಬಲಗಿಗೆ ವಿಶ್ವವಿದ್ಯಾನಿಲಯಕ್ಕೆ ಯಾವುದೇ ವೆಚ್ಚಮಾಡಲು ಅವಕಾಶ ಇಲ್ಲದ ಕಾರಣ, 2018–19ನೇ ಸಾಲಿಗೆ

| | |
|---|---|
| ಮುಂದಿನ ವರ್ಷದ ಆಯವ್ಯಯ ಅಂದಾಜಿಗೆ ಆರಂಭಿಕ ಶಿಲ್ಕಾಗಿ ಪರಿಗಣಿಸಬೇಕು. ಅಲ್ಲದೇಆರಂಭಿಕ ಶಿಲ್ಕಿನಲ್ಲಿ ಕೇವಲ ಉಳಿತಾಯ ಖಾತೆಗಳ ಮೊತ್ತಗಳನ್ನು ಮಾತ್ರ ತೆಗೆದುಕೊಳ್ಳದೇ, ವಿಶ್ವವಿದ್ಯಾನಿಲಯವು ಹೂಡಿಕೆ ಮಾಡಿರುವ ಮೂಲ ಮೊತ್ತವನ್ನು ಆರಂಭಿಕ ಶಿಲ್ಕಿಗೆ, ಹೂಡಿಕೆಯ ಮೇಲೆ ಪ್ರಾಪ್ತವಾಗುವ ಬಡ್ಡಿಯನ್ನು ರಾಜಸ್ವ ಸ್ವೀಕೃತಿಗೆ ಪರಿಗಣಿಸಲು ಸೂಚಿಸಿದೆ. | ಅಯವ್ಯಯ ಅಂದಾಜುಗಳಿಗೆ ಸದರಿ ಖಾತೆಗಳ ಆರಂಭ ಶಿಲ್ಕನ್ನು ಪರಿಗಣಿಸಿರುವುದಿಲ್ಲ ಎಂಬ ಅಂಶವನ್ನು ಲೆಕ್ಕಪರಿಶೋಧನೆಯ ಗಮನಕ್ಕೆ ತರಲಾಗಿದೆ.<br><br>ಈ ನಿಟ್ಟಿನಲ್ಲಿ ಆಕ್ಷೇಪಿತ ಕಂಡಿಕೆ 4.1 ರ ಆಕ್ಷೇಪಣೆಯನ್ನು ಕೈ ಬಿಡುವಂತೆ ನಿವೇದಿಸಲಾಗಿದೆ. |
| 4.2 **ವಿಶ್ವವಿದ್ಯಾನಿಲಯದ ಯುವರಾಜ ಕಾಲೇಜು(ಸ್ವಾಯತ್ತ)ಗೆ ಪ್ರತ್ಯೇಕ ಆಯವ್ಯಯ ಅಂದಾಜುಗಳನ್ನು ತಯಾರಿಸಿರುವುದು :**<br>2018–19 ನೇ ಸಾಲಿನ ಯುವರಾಜ ಕಾಲೇಜು (ಸ್ವಾಯತ್ತ), ಮೈಸೂರು ವಿಶ್ವವಿದ್ಯಾನಿಲಯ ಮೈಸೂರು ಕಛೇರಿಯ ಲೆಕ್ಕ ಪರಿಶೋಧನೆಗೆ ಹಾಜರುಪಡಿಸಲಾದ ಲೆಕ್ಕಪತ್ರಗಳನ್ನು ಪರಿಶೀಲಿಸಿದಾಗ ಕಾಲೇಜು ವತಿಯಿಂದ ಯೋಜನೆ ಮತ್ತು ಯೋಜನೇತರ ಕಾರ್ಯಕ್ರಮಗಳಡಿ ಸ್ವೀಕೃತಿ ಹಾಗೂ ಪಾವತಿಗಳ ಆಯವ್ಯಯ ಅಂದಾಜನ್ನು ತಯಾರಿಸಿ ವೆಚ್ಚ ಭರಿಸುತ್ತಿರುವುದನ್ನು ಗಮನಿಸಲಾಗಿದೆ. ಆದರೆ ಯುವರಾಜ ಕಾಲೇಜಿನ ಖಾಯಂ ನೌಕರರ ವೇತನ, ಭತ್ಯೆಗಳು, ಕಟ್ಟಡ ನಿರ್ವಹಣೆ, ವೈದ್ಯಕೀಯ ವೆಚ್ಚಗಳು, ನೌಕರರಿಗೆ ನೀಡಲಾಗುವ ಮುಂಗಡಗಳ ಆಯವ್ಯಯ ಅಂದಾಜುಗಳನ್ನು ಮೈಸೂರು ವಿಶ್ವವಿದ್ಯಾನಿಲಯದ ಮೂಲ ಆಯವ್ಯಯ ಅಂದಾಜಿನಲ್ಲಿ ಸೇರಿಸಿ ಮಾಡಲಾಗಿರುತ್ತದೆ. ಹೀಗೆ ಎರಡು ಕಡೆಗಳಲ್ಲಿ ಆಯವ್ಯಯ ಅಂದಾಜುಗಳನ್ನು ಸಿದ್ಧಪಡಿಸುತ್ತಿರುವುದಕ್ಕೆ ವಿವರಣೆ ನೀಡಲು ವಿಚಾರಣೆ ಪತ್ರ ಸಂ:28/2020–21, ದಿ:11.09.2020ರಲ್ಲಿ ಕೋರಲಾಗಿದ್ದರೂ, ಯಾವುದೇ ವಿವರಣೆಯನ್ನು ನೀಡಿರುವುದಿಲ್ಲ. ಹಿಂದಿನ ಲೆಕ್ಕ ಪರಿಶೋಧನಾವರದಿಗಳಲ್ಲಿ ಕೂಡ ಈ ಬಗ್ಗೆ ಆಕ್ಷೇಪಿಸಲಾಗಿದ್ದರೂ ಅದೇ ಕ್ರಮವನ್ನು ಮುಂದುವರಿಸಿಕೊಂಡು ಬಂದಿರುವುದನ್ನು ಗಮನಿಸಲಾಗಿದೆ.<br>ಯುವರಾಜ ಕಾಲೇಜಿಗೆ ಯು.ಜಿ.ಸಿ ವತಿಯಿಂದ ಶೈಕ್ಷಣಿಕ ಹಾಗೂ ಪರೀಕ್ಷಾ ಕಾರ್ಯಗಳ ಸ್ವಾಯತ್ತತೆಯನ್ನು ನೀಡಿ ಅಭಿವೃದ್ಧಿ ಕಾರ್ಯಗಳಿಗೆ ಅಭಿವೃದ್ಧಿ ಅನುದಾನವನ್ನು ನೀಡಲಾಗುತ್ತಿದೆ. ಆದರೆ ಆರ್ಥಿಕ ಸ್ವಾಯತ್ತತೆ ಹಾಗೂ ಆಡಳಿತಾತ್ಮಕ ಸ್ವಾಯತ್ತತೆಯನ್ನು ಯು.ಜಿ.ಸಿ ವತಿಯಿಂದಾಗಲಿ/ ಸರ್ಕಾರದ ವತಿಯಿಂದಾಗಲೀ ನೀಡಿರುವ ಬಗ್ಗೆ ಯಾವುದೇ ಅಧ್ಯಾದೇಶಗಳು/ ಆದೇಶಗಳನ್ನು ಹಾಜರುಪಡಿಸಿರುವುದಿಲ್ಲ. | ಯುವರಾಜ ಕಾಲೇಜಿನ ಖಾಯಂ ನೌಕರರ ವೇತನ, ಭತ್ಯೆಗಳು, ಕಟ್ಟಡ ನಿರ್ವಹಣೆ, ಮೈಸೂರು ವೈದ್ಯಕೀಯ ವೆಚ್ಚಗಳು, ನೌಕರರಿಗೆ ನೀಡಲಾಗುವ ಮುಂಗಡಗಳ ಆಯವ್ಯಯ ಅಂದಾಜುಗಳನ್ನು ಮೈಸೂರು ವಿಶ್ವವಿದ್ಯಾನಿಲಯದ ಮೂಲ ಆಯವ್ಯಯ ಅಂದಾಜಿನಲ್ಲಿ ಸೇರಿಸಿ ತಯಾರಿಸಲಾಗುತ್ತಿದೆ ಇದನ್ನು ಹೊರತು ಪಡಿಸಿ ಯುವರಾಜ ಕಾಲೇಜು ಸ್ವಾಯತ್ತ ಸಂಸ್ಥೆಯಾಗಿದ್ದು ರಾಜ್ಯ ಸರ್ಕಾರದವತಿಯಿಂದಾಗಲಿ, ವಿಶ್ವವಿದ್ಯಾನಿಲಯದವತಿಯಿಂದಾಗಲಿ ಯಾವುದೇ ಅನುದಾನ ಕಾಲೇಜಿಗೆ ಬಿಡುಗಡೆಯಾಗಿರುವುದಿಲ್ಲ ಕಾಲೇಜಿನ ಸ್ವಯಂ ಆರ್ಥಿಕ ಮೂಲಗಳಿಂದ ಕ್ರೋಢೀಕೃತವಾಗುವ ಆದಾಯದಿಂದ ಕಾಲೇಜಿನ ವಾರ್ಷಿಕ ಚಟುವಟಿಗಳನ್ನು ನಿರ್ವಹಿಸಲಾಗುತ್ತಿದೆ, ಪ್ರಸುತ್ತ ಕಾಲೇಜಿನಲ್ಲಿ 200 ಅತಿಥಿ ಉಪನ್ಯಾಸಕರು ಮತ್ತು 49 ತಾತ್ಕಾಲಿಕ ಅಧ್ಯಾಪಕೇತರ ನೌಕರರ ಮಾಸಿಕ ವೇತನ, ಕಾಲೇಜಿನಲ್ಲಿ 20 ವಿಭಾಗಗಳಿದ್ದು ಸದರಿ ವಿಭಾಗಗಳಿಗೆ ಮೂಲ ಸೌಕರ್ಯ ಮತ್ತು ಕಾಲೇಜಿನ ಇನ್ನಿತರೆ ನಿರ್ವಹಣೆಗಳನ್ನು ಕಾಲೇಜಿನಲ್ಲಿ ಕ್ರೋಢೀಕೃತವಾಗುವ ಸಂಪನ್ಮೂಲದಿಂದಲೇ ಭರಿಸುತ್ತಿರುವ ಸಂಬಂಧ ಈ ವೆಚ್ಚಗಳಿಗೆ ಸಂಬಂಧಿಸಿದಂತೆ ಪ್ರತ್ಯೇಕ ಆಯವ್ಯಯ ತಯಾರಿಸಲಾಗಿತ್ತಿದೆ.<br><br>ಮುಂದುವರಿದು ಕಾಲೇಜಿನ ಆಡಳಿತ ನಿರ್ವಹಣೆ ಮತ್ತು ಆರ್ಥಿಕ ನಿರ್ವಹಣೆ ಮಾಡುವ ಸಂಬಂಧ ಕಾಲೇಜಿನ ಆಡಳಿತ ಮಂಡಳಿ ಸಮಿತಿ ಮತ್ತು ಹಣಕಾಸು ಸಮಿತಿಯು ಚಾಲ್ತಿಯಲ್ಲಿದ್ದು ಯಾವುದೇ ಆಡಳಿತಾತ್ಮಕ ನಿರ್ಣಯ ಕೈಗೊಳ್ಳಲು ಕಾಲೇಜು ಆಡಳಿತ ಮಂಡಳಿ ಸಮಿತಿಯಲ್ಲಿ ನಿರ್ಣಯಿಸಲಾಗುತ್ತದೆ ಆರ್ಥಿಕ ಚಟುವಟಿಗಳಿಗೆ ಸಂಬಂಧಿಸಿದಂತೆ ಹಣಕಾಸು ಸಮಿತಿಯ ಅನುಮೋದನೆ ಪಡೆಯಲಾಗುವುದು ಕಾಲೇಜಿನಲ್ಲಿ ಪ್ರತ್ಯೇಕ ಆಯವ್ಯಯ ತಯಾರಿಸುತ್ತಿದ್ದರೂ ಸಹ ರೂ.25000/–ಗಳ ವೆಚ್ಚ ಮೀರುವ ಹುಂಡಿಗಳ ಪಾವತಿ ಸಂಬಂಧ ಕಾಲೇಜಿನ ಆಡಳಿತ ಮಂಡಳಿ ಸಮಿತಿಯ ಅಧ್ಯಕ್ಷರಾದ ಮಾನ್ಯ ಕುಲಪತಿಗಳ ಅನಿಮೋದನೆ ಪಡೆದೇ ವೆಚ್ಚ ಮಾಡಲಾಗುವುದು.<br><br>ಮೇಲಿನ ಎಲ್ಲಾ ಅಂಶಗಳನ್ನು ಲೆಕ್ಕಪರಿಶೋಧನೆಯ ಅವಗಾಹನೆಗೆ ತರುತ್ತಾ ಸದರಿ ಲೆಕ್ಕ ಪರಿಶೋಧನೆಯಲ್ಲಿ ಆಕ್ಷೇಪಿಸಿರುವ ಆಕ್ಷೇಪಣೆಯ ಕಂಡಿಕೆಯನ್ನು ಕೈ ಬಿಡುವಂತೆ ನಿವೇದಿಸಲಾಗಿದೆ. |

**4.3 ಪುನರ್ವಿನಿಯೋಗ (Re-appropriation) ಮಾಡಿಯೂ ಹೆಚ್ಚು ವೆಚ್ಚ ಮಾಡಿರುವುದು :–**

2018–19ನೇ ಸಾಲಿನ ಆಯವ್ಯಯವನ್ನು ಹಾಗೂ ವಾರ್ಷಿಕ ಲೆಕ್ಕಪತ್ರ ದಾಖಲೆಗಳನ್ನು ಪರಿಶೀಲಿಸಿದಾಗ ಬಹುತೇಕ ವಹಿವಾಟು ಶೀರ್ಷಿಕೆಗಳಡಿ ಆಯವ್ಯಯ ಅವಕಾಶಕ್ಕಿಂತಲೂ ಹೆಚ್ಚುವರಿಯಾಗಿ ವೆಚ್ಚ ಭರಿಸಿರುವುದು ಕಂಡು ಬಂದಿರುತ್ತದೆ.ಈ ಸಂಬಂಧ ವಿಶ್ವವಿದ್ಯಾನಿಲಯದಲ್ಲಿ 2018–19ನೇ ಸಾಲಿನ ಆಯವ್ಯಯ ಅಂದಾಜಿನ ಕೆಲವು ಶೀರ್ಷಿಕೆಗಳಾದ ಭಾಗ–1(ಸಾಮಾನ್ಯ ರೆವೆನ್ಯೂ ಖಾತೆ), ಭಾಗ–2 (ಪರೀಕ್ಷಾ ಖಾತೆ), ಭಾಗ–3 (ಮೂಲ ಭೂತ ಸೌಕರ್ಯ ನಿಧಿ) ಹಾಗೂ ಭಾಗ–4(ಸಹೋದ್ಯಮ ಕೋರ್ಸ್)ಗಳ ವೆಚ್ಚಗಳಿಗೆ ಎದುರಾಗಿ 10 ವಹಿವಾಟು ಶೀರ್ಷಿಕೆಗಳಿಗೆ ಮರು ಹೊಂದಾಣಿಕೆ ಮಾಡಿಕೊಳ್ಳಲು ಪರಿಷ್ಕೃತ ಅಂದಾಜನ್ನು ತಯಾರಿಸಿ ದಿನಾಂಕ:11.01.2019 ರಂದು ನಡೆದ ಮೂರನೇ ತ್ರೈಮಾಸಿಕ ಹಣಕಾಸು ಸಮಿತಿ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯಲಾಗಿರುತ್ತದೆ. ವಿವರಗಳನ್ನು **ಅನುಬಂಧ–3ರಲ್ಲಿ** ನೀಡಲಾಗಿದೆ. ಆದರೆ ಹೀಗೆ ಮರು ಹೊಂದಾಣಿಕೆ ಮಾಡಿಕೊಂಡ ನಂತರವೂ ಕೂಡ ಪ.ಜಾ/ಪ.ವರ್ಗದವರ ಉತ್ತಮೀಕರಣ ಶೀರ್ಷಿಕೆಯಡಿ ರೂ.33,97,630/–(ಶೇ.7.2ರಷ್ಟು), ಪರೀಕ್ಷಾ ಕಾರ್ಯ ಮತ್ತು ಹೊರಗುತ್ತಿಗೆ ವಹಿವಾಟು ಶೀರ್ಷಿಕೆಯಡಿ ರೂ.89,39,357/–(ಶೇ.179ರಷ್ಟು), ಬೆರಳಚ್ಚು ಮತ್ತು ಸ್ವಚ್ಛತಾ ಕಾರ್ಯ ವ್ಯವಹಾರ ಶೀರ್ಷಿಕೆಯಡಿ ರೂ.1,14,18,650/–(ಶೇ.25ರಷ್ಟು) ಪರಿಷ್ಕೃತ ಆಯವ್ಯಯಕ್ಕಿಂತ ಹೆಚ್ಚುವರಿಯಾಗಿ ವೆಚ್ಚ ಮಾಡಲಾಗಿರುತ್ತದೆ.

2018–19ನೇ ಸಾಲಿನ 3ನೇ ತ್ರೈಮಾಸಿಕ "ಹಣಕಾಸು ಸಮಿತಿ" ಸಭೆಯಲ್ಲಿ ಮರು ಹೊಂದಾಣಿಕೆ ಮಾಡಿಕೊಂಡ ನಂತರವೂ ಕೂಡ "ಪರೀಕ್ಷಾ ಕಾರ್ಯ–307" ಮತ್ತು ಐಡಿಎಫ್ ಖಾತೆಯ "ಇತರೆ–189" ಶೀರ್ಷಿಕೆಗಳಲ್ಲಿ ನಿಗದಿ ಪಡಿಸಿರುವುದಕ್ಕಿಂತ ವೆಚ್ಚ ಮಾಡಲಾಗಿರುವ ಮೊಬಲಗು ಕ್ರಮವಾಗಿ ರೂ.1,39,39,357/– ಮತ್ತು ರೂ.26,05,094–00 ಗಳು ಒಟ್ಟಾರೆ ವೆಚ್ಚವಾಗಿದ್ದು, ಸದರಿ ವೆಚ್ಚಗಳಿಗೆ ಸಂಬಂಧಿಸಿದಂತೆ ಈ ಶೀರ್ಷಿಕೆಗಳಿಗೆ 2019–20ನೇ ಸಾಲಿನ ಆಯವ್ಯಯ ಅಂದಾಜುಗಳನ್ನು ತಯಾರಿಸುವಾಗ 2018–19ನೇ ಸಾಲಿನ ಪರಿಷ್ಕೃತ ಅಂದಾಜಿನ ಕಾಲಂ 6 ನಲ್ಲಿ ಕ್ರಮವಾಗಿ ರೂ.1,40,00,000/– ಮತ್ತು ರೂ.35,00,000/– ಗಳನ್ನು ಪರಿಗಣಿಸಿ, ಪರಿಷ್ಕರಿಸಿ, 2019–20ನೇ ಸಾಲಿನ ಆಯವ್ಯಯ ಅಂದಾಜನ್ನು ತಯಾರಿಸಲಾಗಿದೆ. 2019–20ನೇ ಸಾಲಿನ ಆಯವ್ಯಯ ಅಂದಾಜುಗಳನ್ನು ದಿನಾಂಕ 22–03–2019 ಮತ್ತು 25–03–2019 ಹಾಗೂ 07–06–2019 ರಂದು ಕ್ರಮವಾಗಿ ನಡೆದ "ಹಣಕಾಸು ಸಮಿತಿ", ಸಿಂಡಿಕೇಟ್ ಸಮಿತಿ ಹಾಗೂ ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ಅನುಮೋದನೆ ಪಡೆಯಲಾಗಿದೆ ಎಂಬುದನ್ನು ತಮ್ಮ ಅವಗಾಹನೆಗಾಗಿ ತರಲಾಗಿದೆ.

ಹಾಗೆಯೇ 262–ಸ್ವಚ್ಛತಾ ಕಾರ್ಯ ಸಿಬ್ಬಂದಿ/ಸಫಾಯಿ ಕರ್ಮಚಾರಿ ನೌಕರರು/ಅಡುಗೆ ಸಹಾಯಕರುಗಳ ವೇತನಕ್ಕೆ ರೂ.2,25,00,000/– ಗಳಿಂದ ರೂ.3,60,00,000/– ಗಳಿಗೆ 3ನೇ ತ್ರೈಮಾಸಿಕದ ಹಣಕಾಸು ಸಮಿತಿ ಸಭೆಯಲ್ಲಿ ಮರು ಹೊಂದಾಣಿಕೆ ಮಾಡಿಕೊಂಡಿದ್ದರೂ ಸಹ 2018–19ನೇ ಸಾಲಿನಲ್ಲಿ ಈ ಶೀರ್ಷಿಕೆಗೆ ಒಟ್ಟು ರೂ.5,64,18,650/– ಗಳು ವೆಚ್ಚವಾಗಿರುತ್ತದೆ. ಆದಾಗ್ಯೂ 2019–20ನೇ ಸಾಲಿನ ಆಯವ್ಯಯ ತಯಾರಿಸಿದಾಗಲೂ ಸಹ ಮೇಲಿನ ಮೊಬಲಿಗೆ ಆಯವ್ಯಯ ಅಂದಾಜನ್ನು ಪರಿಷ್ಕರಿಸಿ ಕೊಳ್ಳಲಾಗಿದೆ.

ಆದರೆ ಸ್ವಚ್ಛತಾ ಕಾರ್ಯ ಸಿಬ್ಬಂದಿ, ಸಫಾಯಿ ಕರ್ಮಚಾರಿ ಸಿಬ್ಬಂದಿ ಹಾಗೂ ಅಡುಗೆ ಸಹಾಯಕರ ಸೇವೆಯು ವಿಶ್ವವಿದ್ಯಾನಿಲಯಕ್ಕೆ ಅತ್ಯಾವಶ್ಯಕತೆ ಇರುವ ಸಿಬ್ಬಂದಿವರ್ಗಗಳಾಗಿರುತ್ತವೆ, ಮತ್ತು ಸದರಿಯವರಿಗೆ ವೇತನ ನೀಡುವುದು ವಿಶ್ವವಿದ್ಯಾನಿಲಯಕ್ಕೆ ಅತ್ಯಂತ ಪ್ರಮುಖವಾದ ಹಾಗೂ ಅನಿವಾರ್ಯವಾದ ವೆಚ್ಚವಾಗಿದೆ. ಹಾಗೆಯೇ 2018–19ನೇ ಸಾಲಿನ ಆಯವ್ಯಯದಲ್ಲಿ ಒಟ್ಟು ರೂ.266.37 ಕೋಟಿಗೆ ಅಂದಾಜಿಸಲಾಗಿದ್ದು, ಒಟ್ಟು ರೂ.251.13 ಕೋಟಿಗಳು ಮಾತ್ರ ವೆಚ್ಚವಾಗಿದ್ದು, ರೂ.15.24 ಕೋಟಿಗಳಷ್ಟು ವೆಚ್ಚದಲ್ಲಿ ವಿಶ್ವವಿದ್ಯಾನಿಲಯ ಮಿತವ್ಯಯ ಸ್ಥಾಪಿಸಿರುತ್ತದೆ. ಒಟ್ಟಾರೆ ವೆಚ್ಚ ರೂ.251.15 ಕೋಟಿಗಳಲ್ಲಿ ಈ ವೆಚ್ಚವು ಒಳಗೊಂಡಿರುತ್ತದೆ ಎಂಬುದನ್ನು ತಮ್ಮ ಗಮನಕ್ಕೆ ತರಲಾಗಿದೆ. ಮುಂದೆ ಈ ರೀತಿ ಮರುಕಳಿಸದಂತೆ ಎಚ್ಚರ ವಹಿಸಲಾಗುವುದು ಹಾಗೂ ವೆಚ್ಚಗಳನ್ನು ನಿರ್ವಹಿಸಲಾಗುವುದು ಎಂಬ ಅಂಶವನ್ನು ಲೆಕ್ಕಪರಿಶೋಧನೆಯ ಗಮನಕ್ಕೆ ತರಲಾಗಿದೆ.

ಈ ನಿಟ್ಟಿನಲ್ಲಿ ಸದರಿ ಕಂಡಿಕೆ ಆಕ್ಷೇಪಣೆಯನ್ನು ಕೈ ಬಿಡುವಂತೆ ನಿವೇದಿಸಲಾಗಿದೆ.

**4.4 ಪುನರ್ವಿನಿಯೋಗ(Re-appropriation) ಮಾಡಿಕೊಳ್ಳದೆಯೇ ಹೆಚ್ಚುವರಿ ವೆಚ್ಚ ಭರಿಸಿರುವುದು :**

**ಅನುಬಂಧ–4**ರಲ್ಲಿ ತಿಳಿಸಿರುವಂತೆ ವಿಶ್ವವಿದ್ಯಾನಿಲಯದಲ್ಲಿ 15 ವಿವಿಧ ವಹಿವಾಟು ಶೀರ್ಷಿಕೆಗಳಡಿ ಆಯವ್ಯಯದಲ್ಲಿ ರೂ.186,99,60,000/– ಗಳನ್ನು ನಿಗದಿಪಡಿಸಲಾಗಿದ್ದು, ನಿಗದಿಪಡಿಸಿರುವುದಕ್ಕಿಂತ ಹೆಚ್ಚುವರಿಯಾಗಿ ರೂ.249,46,56,024/– ಗಳನ್ನು ವೆಚ್ಚ ಭರಿಸಲಾಗಿದ್ದು, ಇದಕ್ಕೆ ಹಣಕಾಸು ಸಮಿತಿ ಹಾಗೂ ಸಿಂಡಿಕೇಟ್ ಸಭೆಯಲ್ಲಿ ಅನುಮೋದನೆಯಾಗಿರುವ ಬಗ್ಗೆ ದಾಖಲೆಗಳನ್ನು ಒದಗಿಸುವಂತೆ ವಿಚಾರಣಾ ಪತ್ರ ಸಂಖ್ಯೆ:136/2020–21,ದಿ:08.06.2020ನ್ನು ನೀಡಿದ್ದರೂ ಸಹ ದಾಖಲೆಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲ. ಇದಕ್ಕೆ ಸೂಕ್ತ ಸಮಜಾಯಿಷಿ ನೀಡಲು ಸೂಚಿಸಿದೆ.

2018–19ನೇ ಸಾಲಿನಲ್ಲಿ ವಿವಿಧ ಶೀರ್ಷಿಕೆಗಳಿಗೆ ಆಯವ್ಯಯದಲ್ಲಿ ನಿಗದಿಪಡಿಸಿರುವುದಕ್ಕಿಂತ ಹೆಚ್ಚುವರಿ ವೆಚ್ಚ ಮಾಡಲು ಪುನರ್ವಿನಿಯೋಗ (**Re-appropriation**) ಮಾಡಿರುವ ಬಗ್ಗೆ **"ಹಣಕಾಸು ಸಮಿತಿ"** ಸಭೆ ಸಿಂಡಿಕೇಟ್ ಸಭೆ ಮತ್ತು ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ಅನುಮೋದನೆ ಪಡೆಯಲಾಗಿದೆ.

ಅನುಮೋದನೆ ಪಡೆಯಲಾದ ಸಭೆಯ ದಿನಾಂಕದ ವಿವರಗಳನ್ನು ಮಾಹಿತಿಗಾಗಿ ವಿವರಿಸಿ ಲಗತ್ತಿಸಿಲಾಗಿದೆ.

| ಕ್ರ ಸಂ | ಸಿಂಡಿಕೇಟ್ ಸಭೆ ದಿನಾಂಕ | ಹಣಕಾಸು ಸಮಿತಿ ಸಭೆ ದಿನಾಂಕ | ವಿದ್ಯಾವಿಷಯಕ ಪರಿಷತ್ ಸಭೆ ದಿನಾಂಕ |
|---|---|---|---|
| 01 | 25.03.2019 ಮತ್ತು 30.05.2019 | 22.03.2019 | 07.06.2019 |

ಈ ನಿಟ್ಟಿನಲ್ಲಿ ಸದರಿ ಕಂಡಿಕೆ 4.4 ರ ಆಕ್ಷೇಪಣೆಯನ್ನು ಕೈ ಬಿಡುವಂತೆ ನಿವೇದಿಸಲಾಗಿದೆ.

## ಅಧ್ಯಾಯ–5

## ವಿಶ್ವವಿದ್ಯಾನಿಲಯದ ಲೆಕ್ಕಪತ್ರ ನಿರ್ವಹಣೆ

**5.1 ವಿಶ್ವವಿದ್ಯಾನಿಲಯವು ಅಳವಡಿಸಿಕೊಂಡಿರುವ ಲೆಕ್ಕಪದ್ಧತಿ :–**

ವಿಶ್ವವಿದ್ಯಾನಿಲಯದ ಲೆಕ್ಕಗಳನ್ನು ಏಕನಮೂದು ಪದ್ಧತಿಯಲ್ಲಿ ನಿರ್ವಹಿಸುತ್ತಿರುವುದಾಗಿ ತಿಳಿಸಿರುತ್ತಾರಾದರೂ ಲೆಕ್ಕಪತ್ರ ನಿರ್ವಹಣೆಗೆ ಯಾವುದೇ ನಮೂನೆಗಳನ್ನು ವಿನ್ಯಾಸಗೊಳಿಸಿ ಸಕ್ಷಮ ಪ್ರಾಧಿಕಾರದ ಅನುಮೋದನೆ ಪಡೆದು ಅಳವಡಿಸಿಕೊಂಡಿರುವುದಿಲ್ಲ. ವಿಶ್ವವಿದ್ಯಾನಿಲವು ನಿರ್ವಹಿಸುತ್ತಿರುವ ಯೋಜನೆವಾರು ಬ್ಯಾಂಕ್ ಖಾತೆಗಳಲ್ಲಿನ ಸ್ವೀಕೃತಿ ಮತ್ತು ಪಾವತಿಗಳನ್ನಾಧರಿಸಿ ಜಮೆ ಮತ್ತು ಪಾವತಿ ತಃಖ್ತೆಗಳನ್ನು ತಯಾರಿಸಿ, ಅವುಗಳನ್ನು ಕ್ರೋಢೀಕರಿಸಿ ವಾರ್ಷಿಕ ಲೆಕ್ಕ ಪತ್ರಗಳನ್ನು ತಯಾರಿಸಲಾಗಿರುತ್ತದೆ. ಲೆಕ್ಕಪತ್ರ ತಯಾರಿಕೆಗೆ ಏಕ ನಮೂದು ಲೆಕ್ಕ ಪದ್ಧತಿಯಲ್ಲಿ ನಿರ್ವಹಿಸುವಂತಹ ಸಾಲ ಮತ್ತು ಮುಂಗಡಗಳು, ಆಸ್ತಿ ಮತ್ತು ಋಣ ತಃಖ್ತೆಗಳಂತಹ ನಮೂನೆಗಳು ವಾರ್ಷಿಕ ಲೆಕ್ಕಪತ್ರಗಳಲ್ಲಿ ಇರುವುದಿಲ್ಲ. ಜೋಡಿ ನಮೂದು ಲೆಕ್ಕ ಪದ್ಧತಿಯನ್ನು ಅಳವಡಿಸಿಕೊಳ್ಳುವುದರಿಂದ ವಿಶ್ವವಿದ್ಯಾನಿಲಯದ ಲೆಕ್ಕ ಪತ್ರಗಳ ವೈಜ್ಞಾನಿಕ ನಿರ್ವಹಣೆಯಾಗುವುದರ ಜೊತೆಗೆ ವಿಶ್ವವಿದ್ಯಾನಿಲಯದ ಆಸ್ತಿ ಮತ್ತು ಹೊಣೆಗಾರಿಕೆಗಳ ಸ್ಪಷ್ಟ

ಪ್ರಸ್ಥಾವಿತ ಕಂಡಿಕೆಯಲ್ಲಿನ ವಿಷಯಕ್ಕೆ ಸಂಬಂಧಿಸಿದಂತೆ ಸದರಿ ಕಂಡಿಕೆಯಲ್ಲಿ ಸೂಚಿತವಾಗಿರುವಂತೆ ಹಾಲಿ ವಿಶ್ವವಿದ್ಯಾನಿಲಯದಲ್ಲಿ ಅನುಸರಿಸಲಾಗುತ್ತಿರುವ/ನಿರ್ವಹಿಸುತ್ತಿರುವ ಏಕನಮೂದು ಲೆಕ್ಕ ಪದ್ಧತಿಗಿಂತ ದ್ವಿನಮೂನೆ ಪದ್ಧತಿ ಅಳವಡಿಸಿಕೊಳ್ಳವುದು ಹೆಚ್ಚು ನಿಖರ ಮತ್ತು ಸುಧಾರಿತ ಪದ್ಧತಿ ಎಂಬ ಅಂಶವನ್ನು ಮನಗಾಣಲಾಗಿದೆ, ಸುಧಾರಿತ ಲೆಕ್ಕಪದ್ಧತಿಯಾದ ದ್ವಿನಮೂನೆ ಲೆಕ್ಕ ಪದ್ಧತಿಯನ್ನು ಅಳವಡಿಸಿಕೊಳ್ಳುವ ಕಾರ್ಯ ಪ್ರಗತಿಯಲ್ಲಿದೆ

ಈ ಸಂಬಂಧದ ವಿವರಗಳನ್ನು ಮುಂದಿನ ಲೆಕ್ಕ ತನಿಖೆಗೆ ಹಾಜರುಪಡಿಸಲು ಕ್ರಮವಹಿಸಲಾಗುವುದು ಎಂಬ ಅಂಶವನ್ನು ಲೆಕ್ಕ ತನಿಖೆ ಅವಗಾಹನೆಗೆ ತರಲಾಗಿದೆ.

| | |
|---|---|
| ಚಿತ್ರಣ ದೊರೆಯುವುದರಿಂದ ಆಡಳಿತಾತ್ಮಕ ನಿರ್ಧಾರಗಳನ್ನು ಕೈಗೊಳ್ಳಲು ಹಾಗೂ ಆಸ್ತಿಗಳ ಸಂರಕ್ಷಣೆಗೆ ಅನುಕೂಲವಾಗುವುದರಿಂದ ಈ ಬಗ್ಗೆ ಪರಿಶೀಲಿಸಲು ಸೂಚಿಸಿದೆ. | |
| **5.2 ಮಾಸಿಕ ಲೆಕ್ಕಗಳ ಸಲ್ಲಿಕೆ :**<br><br>ಮೈಸೂರು ವಿಶ್ವವಿದ್ಯಾನಿಲಯವು ತನ್ನ ನಿಧಿಗೆ ಸಂಬಂಧಿಸಿದಂತೆ ಜಮೆ ಮತ್ತು ಖರ್ಚುಗಳನ್ನು ತೋರಿಸುವ ಕ್ರೋಢೀಕೃತ ವಿವರಣೆಯನ್ನು, ಅಂದರೆ ಪ್ರತಿ ತಿಂಗಳ ಪ್ರಾರಂಭಿಕ ಶಿಲ್ಕು, ಜಮೆಗಳು ಮತ್ತು ಸಂದಾಯಗಳು ಹಾಗೂ ಅಂತಿಮ ಶಿಲ್ಕು ವಿವರಗಳುಳ್ಳ ಮಾಸಿಕ ಲೆಕ್ಕಗಳನ್ನು (Monthly Account) ಮುಂಬರುವ ತಿಂಗಳ 20ನೇ ದಿನಾಂಕದೊಳಗೆ ಕರ್ನಾಟಕ ಆರ್ಥಿಕ ಸಂಹಿತೆಯ ಅನುಚ್ಛೇದ-301(8)ರಲ್ಲಿ ಸೂಚಿಸಿರುವಂತೆ ಅಪರ ನಿರ್ದೇಶಕರು, ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ, ಮೈಸೂರು ರವರಿಗೆ ಕಳುಹಿಸಬೇಕಾಗಿರುತ್ತದೆ. ಆದರೆ ವಿಶ್ವವಿದ್ಯಾನಿಲಯವು ಈ ಕ್ರಮವನ್ನು ಅನುಸರಿಸುತ್ತಿರುವುದಿಲ್ಲ. | ಪ್ರಸ್ಥಾವಿತ ಕಂಡಿಕೆಯಲ್ಲಿ ಸೂಚಿತವಾಗಿರುವಂತೆ ವಿಶ್ವವಿದ್ಯಾನಿಲಯದ ಮಾಸಿಕ ಜಮಾ ಮತ್ತು ಖರ್ಚುಗಳಿಗೆ ಸಂಬಂಧಿಸಿದ ಲೆಕ್ಕಪತ್ರಗಳನ್ನು ಕರ್ನಾಟಕ ಆರ್ಥಿಕ ಸಂಹಿತೆಯಲ್ಲಿ ಸೂಚಿತವಾಗಿರುವ ನಿಯಮಾನುಸಾರ ಅಪರ ನಿರ್ದೇಶಕರು ಕರ್ನಾಟಕ ರಾಜ್ಯ ಲೆಕ್ಕ ಪರಿಶೋಧನಾ ಮತ್ತು ಲೆಕ್ಕ ಪತ್ರ ಇಲಾಖೆಗೆ ನಿಗದಿವಾಗಿ ಸಲ್ಲಿಸಲು ಕ್ರಮವಹಿಸಲಾಗುವುದು ಎಂಬ ಅಂಶವನ್ನು ಅವಗಾಹನೆಗೆ ತರಲಾಗಿದೆ. |
| **5.3 ವಾರ್ಷಿಕ ಲೆಕ್ಕಪತ್ರಗಳು :**<br><br>ಕರ್ನಾಟಕ ವಿಶ್ವವಿದ್ಯಾನಿಲಯಗಳ ಅಧಿನಿಯಮ-2000ದಲ್ಲಿನ ಪ್ರಕರಣ-47(3) ರಂತೆ ವಿಶ್ವವಿದ್ಯಾನಿಲಯದ ಸಿಂಡಿಕೇಟ್‌ನಿಂದ ಅಂಗೀಕೃತಗೊಂಡ ವಾರ್ಷಿಕ ಲೆಕ್ಕಪತ್ರಗಳನ್ನು ಏಪ್ರಿಲ್ ಮಾಹೆಯಲ್ಲಿ ತಪಾಸಣೆ ಮಾಡಬೇಕಾಗಿರುತ್ತದೆ. ವಿಶ್ವವಿದ್ಯಾನಿಲಯವು 2018-19ನೇ ಸಾಲಿನ ವಾರ್ಷಿಕ ಲೆಕ್ಕಪತ್ರಗಳಿಗೆ ದಿನಾಂಕ:06.06.2019 ರಂದು ಹಣಕಾಸು ಸಮಿತಿಯಿಂದ ಹಾಗೂ ದಿನಾಂಕ:07.06.2019ರಂದು ಶಿಕ್ಷಣ ಮಂಡಳಿಯಿಂದ ಅನುಮೋದನೆ ಪಡೆದಿರುತ್ತದೆ ಹಾಗೂ ವಿಶ್ವವಿದ್ಯಾನಿಲಯದ ಪತ್ರ ಸಂಖ್ಯೆ:ಹಶಾ-52/99/2018-19,ದಿನಾಂಕ:13.11.2019ರೊಡನೆ ವಾರ್ಷಿಕ ಲೆಕ್ಕಪತ್ರಗಳನ್ನು ಪ್ರಧಾನ ನಿರ್ದೇಶಕರು ಬೆಂಗಳೂರು ರವರಿಗೆ ಸಲ್ಲಿಸಲಾಗಿರುತ್ತದೆ. ವಾರ್ಷಿಕ ಲೆಕ್ಕಗಳಲ್ಲಿನ ವಿವರಗಳನ್ನು **ಅನುಬಂಧ-5**ರಲ್ಲಿ ನೀಡಲಾಗಿದೆ. | ಸದರಿ ಕಂಡಿಕೆಯಲ್ಲಿನ ವಿವರಗಳ ಅನ್ವಯ ವಿಶ್ವವಿದ್ಯಾನಿಲಯದ ವಾರ್ಷಿಕ ಲೆಕ್ಕ ಪತ್ರಗಳನ್ನು ಪ್ರಧಾನ ನಿರ್ದೇಶಕರು ಕರ್ನಾಟಕ ರಾಜ್ಯ ಲೆಕ್ಕಪರಿಶೋಧನಾ ಮತ್ತು ಲೆಕ್ಕಪತ್ರ ಇಲಾಖೆ ಬೆಂಗಳೂರು ಇವರಿಗೆ ಸಲ್ಲಿಸಲಾಗಿದೆ. |
| **ಲೆಕ್ಕಪರಿಶೋಧನೆಯ ಫಲಿತಾಂಶಗಳು**<br>**ಅಧ್ಯಾಯ-6**<br>**ಹಣಕಾಸು ವಿಭಾಗ**<br>**6.1. 2018-19ನೇ ಸಾಲಿನ ವಿಶ್ವವಿದ್ಯಾನಿಲಯದ ವ್ಯವಹರಣೆಯ ವಿವರಗಳು :**<br>ವಿಶ್ವವಿದ್ಯಾನಿಲಯದ ಬ್ಯಾಂಕ್ ಪುಸ್ತಕಗಳು ಹಾಗೂ ನಗದು ಪುಸ್ತಕಗಳ ಅನ್ವಯ 2018-19ನೇ ಸಾಲಿನ ವ್ಯವಹರಣೆಯ ವಿವರಗಳು ಈ ಕೆಳಕಂಡಂತಿರುತ್ತವೆ. | ವಿಶ್ವವಿದ್ಯಾನಿಲಯದ ವ್ಯಾಪ್ತಿಯ ವಿಭಾಗ/ಇಲಾಖೆಗಳಲ್ಲಿ ನಿರ್ವಹಿಸಲಾಗಿರುವ ಬ್ಯಾಂಕ್ ಪುಸ್ತಕಗಳು ಹಾಗೂ ನಗದು ಪುಸ್ತಕಗಳನ್ನು ನಿರ್ವಹಿಸಿ ಸೂಕ್ತ ರೀತಿಯಲ್ಲಿ ಜಮೆ ಮತ್ತು ಖರ್ಚುಗಳ ವಿವರಗಳನ್ನು ನಮೂದಿಸಿಲಾಗಿರುತ್ತದೆ. |

| ವಿಶ್ವವಿದ್ಯಾನಿಲಯದ 2018–19ನೇ ಸಾಲಿನ ಆರ್ಥಿಕ ಸ್ಥಿತಿಗತಿಯ ವಿವರ | | | | |
|---|---|---|---|---|
| ಕ್ರ.ಸಂ | ವಿವರಗಳು | | ಮೊತ್ತ (ರೂ.ಗಳಲ್ಲಿ) | ಮೊತ್ತ (ರೂ.ಗಳಲ್ಲಿ) |
| 1 | ಪ್ರಾ.ಶಿಲ್ಕು | | | 1040916826 |
| 2 | ಆದಾಯ (**ಭಾಗ–1**) | ಅನುದಾನಗಳು | 1698459687 | 6744103536 |
| | | ಶುಲ್ಕಗಳು ಮತ್ತು ಇತರೆ | 1367842787 | |
| | | ಬಡ್ಡಿ | 268711045 | |
| | **ಒಟ್ಟು** | | **3335013519** | |
| | ಹೊಂದಾಣಿಕೆಗಳು (**ಭಾಗ–2**) | ನಿಶ್ಚಿತ ಠೇವಣಿ ಹಿಂಪಡೆದಿರುವುದು | 1065213089 | |
| | | ಇತರೆ ಸ್ವೀಕೃತಿ | 1525185772 | |
| | | ಆಂತರಿಕ ವರ್ಗಾವಣೆಗಳು | 813934446 | |
| | | ತಪ್ಪಾಗಿಜಮೆಯಾದದ್ದು | 4756710 | |
| | **ಒಟ್ಟು** | | **3409090017** | |
| | **ಒಟ್ಟು** | | | **7785020362** |
| 3 | ವೆಚ್ಚ (**ಭಾಗ–1**) | ಪಾವತಿಗಳು | 2998158985 | 7203235407 |
| | ಹೊಂದಾಣಿಕೆಗಳು (**ಭಾಗ–2**) | ನಿಶ್ಚಿತ ಠೇವಣಿಯಲ್ಲಿ ಹೂಡಿಕೆಗಳು | 2027987109 | |
| | | ಇತರೆ | 1361377222 | |
| | | ಆಂತರಿಕ ವರ್ಗಾವಣೆಗಳು | 813934445 | |
| | | ತಪ್ಪಾಗಿ ಖರ್ಚು ಬಿದ್ದದ್ದು | 1777642 | |
| 4 | ಅಂ.ಶಿಲ್ಕು (ನಗದು ಪುಸ್ತಕದನ್ವಯ) | | | 581784955 |
| 5 | ಅಂ.ಶಿಲ್ಕು (ಬ್ಯಾಂಕ್ ಪಾಸ್ ಪುಸ್ತಕದನ್ವಯ) | | | 739968528 |
| 6 | ವ್ಯತ್ಯಾಸ(ನಗದಾಗದ ಧನಾದೇಶಗಳು) | | | 158183573 |

ವಿವರಗಳನ್ನು ಪ್ರತ್ಯೇಕವಾಗಿ **ಅನುಬಂಧ–6ರಲ್ಲಿ** ವಿವರಿಸಲಾಗಿದೆ.

ವಿಶ್ವವಿದ್ಯಾನಿಲಯದ 2018–19ನೇ ಸಾಲಿನ ವಾರ್ಷಿಕ ಲೆಕ್ಕಗಳ ಪ್ರಕಾರ ಅಂತಿಮ ಶಿಲ್ಕು

ನಿಶ್ಚಿತ ಠೇವಣಿಯಲ್ಲಿನ ಹೂಡಿಕೆ ಮತ್ತು ಹಿಂಪಡೆದ ವಿವರಗಳನ್ನು ಪರಿಶೀಲಿಸಿ ದಾಖಲಿಸಲಾಗಿರುತ್ತದೆ.

ತಪ್ಪು ಜಮೆ ಮತ್ತು ಖರ್ಚುಗಳ ವಿವರಗಳನ್ನು ಸರಿಪಡಿಸಿಕೊಳ್ಳಲಾಗಿರುತ್ತದೆ.

ಅಂತಿಮ ಶಿಲ್ಕಿನ ವಿವರಗಳಿಗೆ ಸಂಬಂಧಿಸಿದಂತೆ 2018–19ನೇ ಸಾಲಿನಲ್ಲಿ ವಿತರಿಸಿದ ಧನಾದೇಶಗಳು ಆ ವರ್ಷದಲ್ಲಿ ನಗದಾಗದ ಸಂಬಂಧ ವ್ಯತ್ಯಾಸಗಳು ಕಂಡು ಬಂದಿದ್ದು ಬ್ಯಾಂಕ್ ಪಾಸ್‌ಪುಸ್ತಕಗಳ ವ್ಯವಹರಣೆಗಳನ್ನು ಪರಿಶೀಲಿಸಿ ಸರಿಪಡಿಸಿಕೊಳ್ಳಲು ಕ್ರಮವಹಿಸಲಾಗಿರುತ್ತದೆ.

ನಿಶ್ಚಿತ ಠೇವಣಿ ಸಂಬಂಧಿಸಿದಂತೆ 2018–19ನೇ ಸಾಲಿನ ಹೂಡಿಕೆ ಮತ್ತು ಹಿಂಪಡೆದ ಹಾಗೂ ಪರಿಪಕ್ವತೆಯ ವಿವರಗಳನ್ನು ವಹಿಗಳಲ್ಲಿ ದಾಖಲಿಸಿ ನಿರ್ವಹಿಸಲಾಗಿರುತ್ತದೆ.

| | |
|---|---|
| ರೂ.437,78,58,343/–ಗಳಿದ್ದು, ಇದು ನಿಶ್ಚಿತ ಠೇವಣಿಯ ಮೊತ್ತವನ್ನು ಸಹ ಒಳಗೊಂಡಿರುತ್ತದೆ. ಲೆಕ್ಕಪರಿಶೋಧನೆಯ ಸಮಯದಲ್ಲಿ ತಯಾರಿಸಿದ ನಗದು ಪುಸ್ತಕಗಳ ಕ್ರೋಢೀಕೃತ ಲೆಕ್ಕಗಳ ಅನ್ವಯ ಅಂತಿಮ ಶಿಲ್ಕು ರೂ.58,17,84,955/– ಇದ್ದು, ಇದರೊಡನೆ ನಿಶ್ಚಿತ ಠೇವಣಿಯ ಮೊತ್ತ ರೂ.379,68,36,355/–ಗಳನ್ನು ಕೂಡಿದಾಗ ಅಂತಿಮ ಶಿಲ್ಕು ರೂ.437,86,21,310/–ಗಳಾಗಿದ್ದು, ವಾರ್ಷಿಕ ಲೆಕ್ಕಗಳಲ್ಲಿ ತೋರಿಸಿರುವ ಅಂತಿಮ ಶಿಲ್ಕಿಗೂ ನಗದು ಪುಸ್ತಕಗಳ ಕ್ರೋಢೀಕೃತ ಲೆಕ್ಕಗಳ ಅಂತಿಮ ಶಿಲ್ಕಿಗೂ ರೂ.7,62,967/–ಗಳ ವ್ಯತ್ಯಾಸವಿರುತ್ತದೆ. ವಿಶ್ವವಿದ್ಯಾನಿಲಯವು ಹಾಜರು ಪಡಿಸಿರುವ ನಿಶ್ಚಿತ ಠೇವಣಿಗಳ ದೃಢೀಕೃತ ತಃಖ್ತೆಯ ಒಟ್ಟು ಮೊತ್ತಕ್ಕೆ ರೂ.379,68,36,355/–ಗಳು ತಾಳೆಯಾಗುತ್ತದೆ. ವಿಶ್ವವಿದ್ಯಾಲಯವು ನಿಶ್ಚಿತ ಠೇವಣಿಯ ವಹಿ (ಹೂಡಿಕೆ ವಹಿ) ಯನ್ನು ನಿರ್ವಹಿಸಿರುವುದಿಲ್ಲ. ಹೀಗಾಗಿ ಹಾಜರು ಪಡಿಸಿದ ನಿಶ್ಚಿತ ಠೇವಣಿಗಳ ಬ್ಯಾಂಕ್ ದೃಢೀಕರಣ ತಃಖ್ತೆಗಳ ಆಧಾರದಲ್ಲಿ ಹೂಡಿಕೆ ಮೊತ್ತದ ವಿವರಗಳನ್ನು ತಯಾರಿಸಿದ್ದು ಬ್ಯಾಂಕ್‌ವಾರು ಹೂಡಿಕೆ ವಿವರಗಳನ್ನು ಪ್ರತ್ಯೇಕವಾಗಿ ವಿವರಿಸಲಾಗಿದೆ. ಹೂಡಿಕೆ ವಹಿ ನಿರ್ವಹಿಸದಿರುವುದರಿಂದ ಯಾವುದೇ ನಿಶ್ಚಿತ ಠೇವಣಿ ದುರುಪಯೋಗವಾದಲ್ಲಿ, ದುರುಪಯೋಗ ಪ್ರಕರಣಗಳು ಬೆಳಕಿಗೆ ಬರದೇ ಮುಚ್ಚಿ ಹೋಗುವ ಸಾಧ್ಯತೆ ಇರುವುದರಿಂದ ಹೂಡಿಕೆ ವಹಿಯನ್ನು ನಿರ್ವಹಣೆ ಮಾಡಿ, ಕೈಗೊಂಡ ಕ್ರಮದ ಬಗ್ಗೆ ಲೆಕ್ಕಪರಿಶೋಧನೆಗೆ ಮಾಹಿತಿ ನೀಡಲು ಸೂಚಿಸಿದೆ.<br><br>ವಿಶ್ವವಿದ್ಯಾನಿಲಯವು ನಿರ್ವಹಿಸುತ್ತಿರುವ ಒಟ್ಟು 34 ಖಾತೆಗಳಲ್ಲಿ ಇರುವ ನಗದಾಗದ ಧನಾದೇಶಗಳ ಮೊತ್ತ ರೂ.15,81,83,573/–ಗಳಾಗಿದ್ದು, ವಿವರಗಳನ್ನು **ಅನುಬಂಧ–7 ರಲ್ಲಿ** ನೀಡಲಾಗಿದೆ. ನಗದು ಪುಸ್ತಕದ ಅಂತಿಮ ಶಿಲ್ಕನ್ನು ಬ್ಯಾಂಕ್ ಪಾಸ್ ಪುಸ್ತಕದ ಅಂತಿಮ ಶಿಲ್ಕಿನೊಡನೆ ಪ್ರತಿ ಮಾಹೆ ಲೆಕ್ಕ ಸಮನ್ವಯ ಮಾಡದಿರುವುದು ಈ ರೀತಿ ನಗದಾಗದ ಧನಾದೇಶಗಳ ಶಿಲ್ಕು ಬಾಕಿ ಉಳಿಯಲು ಕಾರಣವಾಗಿರುತ್ತದೆ. ನಗದಾಗದಿರುವ ಎಲ್ಲಾ ಧನಾದೇಶಗಳ ಚಾಲ್ತಿಯಅವಧಿ ಮೀರಿರುವುದರಿಂದ ಈ ಧನಾದೇಶಗಳನ್ನು ರದ್ದುಪಡಿಸಿ ನಗದು ಪುಸ್ತಕದಲ್ಲಿ ಸ್ವೀಕೃತಿ ಪಡೆದು ಲೆಕ್ಕ ಸಮನ್ವಯಗೊಳಿಸಲು ಮತ್ತು ಪ್ರತಿ ಮಾಹೆ ಲೆಕ್ಕಸಮನ್ವಯ ಕಾರ್ಯ ನಿರ್ವಹಿಸಲು ತಿಳಿಸಿದೆ. ಈ ಕುರಿತು ಕೈಗೊಂಡ ಕ್ರಮದ ವಿವರಗಳನ್ನು ಮುಂದಿನ ಲೆಕ್ಕಪರಿಶೋಧನೆಗೆ ಅನುಪಾಲನಾ ವರದಿಯೊಂದಿಗೆ ಸಲ್ಲಿಸಲು ಸೂಚಿಸಿದೆ. | 34 ಖಾತೆಗಳಿಗೆ ಸಂಬಂಧಪಟ್ಟ ನಗದಾಗದ ಧನಾದೇಶಗಳ ವಿವರಗಳನ್ನು ಬ್ಯಾಂಕಿನ ಬ್ಯಾಂಕ್‌ಸ್ಕ್ರೋಲ್‌ನೊಂದಿಗೆ ತಾಳೆ ಮಾಡಿ ಪರಿಶೀಲಿಸಲಾಗಿರುತ್ತದೆ ಹಾಗೂ ಅವಧಿ ಮೀರಿದ ಧನಾದೇಶಗಳನ್ನು ರದ್ದು ಪಡಿಸಿ ನಗದು ಪುಸ್ತಕದ ಲೆಕ್ಕಕ್ಕೆ ತೆಗುದುಕೊಂಡು ಲೆಕ್ಕ ಸಮನ್ವಯತೆಯನ್ನು ನಿರ್ವಹಿಸಲಾಗಿರುತ್ತದೆ.<br><br>ಈ ಸಂಬಂಧ ಸದರಿ ಕಂಡಿಕೆ ಸಂಖ್ಯೆ:6.1ರ ಆಕ್ಷೇಪಣೆಯನ್ನು ಕೈ ಬಿಡುವಂತೆ ನಿವೇದಿಸಲಾಗಿದೆ. |
| **6.2 2018–19ನೇ ಸಾಲಿನ ವಾರ್ಷಿಕ ಲೆಕ್ಕಪತ್ರದ ವಿವರಗಳು :**<br><br>ವಿಶ್ವವಿದ್ಯಾನಿಲಯವು 2018–19ನೇ ಸಾಲಿನ ವಾರ್ಷಿಕ ಲೆಕ್ಕಪತ್ರಗಳಲ್ಲಿರುವಂತೆ 32 ಕಾರ್ಯಕ್ರಮಗಳ ಅಡಿ ಪ್ರತ್ಯೇಕ ಬ್ಯಾಂಕ್ ಖಾತೆಗಳನ್ನು ನಿರ್ವಹಿಸಿರುವುದಾಗಿ ತೋರಿಸಿದ್ದು, ಬ್ಯಾಂಕ್ ಖಾತೆವಾರು ಸ್ವೀಕೃತಿ, ಪಾವತಿ ನಮೂನೆಗಳನ್ನು ನಿರ್ವಹಿಸಲಾಗಿದೆ. ಆದರೆ ಆನ್‌ಲೈನ್ ಕಾರ್ಯಕ್ರಮ (ಮೀಸಲು) ಖಾತೆಯ ರೂ.315095/– ಹಾಗೂ ಆನ್‌ಲೈನ್ ಕಾರ್ಯಕ್ರಮ (ಎಸ್ಕ್ರೋ) ಖಾತೆಯ ರೂ.18,209/–ಗಳ ಅಂತಿಮ ಶಿಲ್ಕುಗಳು 2018–19ನೇ ಸಾಲಿನ ವಾರ್ಷಿಕ ಲೆಕ್ಕಗಳಲ್ಲಿ ಬಿಟ್ಟು ಹೋಗಿರುತ್ತವೆ. ಈ ನಮೂನೆಗಳಲ್ಲಿನ ನಮೂದುಗಳನ್ನು ಪರಿಶೀಲಿಸಿದಾಗ ಸ್ವೀಕೃತಿ ಮತ್ತು ಪಾವತಿಗಳನ್ನು ಎರಡು ಭಾಗಗಳಾಗಿ | ಆನ್‌ಲೈನ್ ಪ್ರೋಗ್ರಾಮ್ (ರಿಸರ್ವ್) ಹಾಗೂ ಆನ್‌ಲೈನ್ ಪ್ರೋಗ್ರಾಮ್(ಎಸ್ಕ್ರೋ) ಖಾತೆಗಳ ಮೊಬಲಗು ಕ್ರಮವಾಗಿ ರೂ.3,15,095/– ಹಾಗೂ ರೂ.18,209/–ಗಳಾಗಿರುತ್ತದೆ. ಸದರಿ ವಿವರಗಳನ್ನು ವಿಶ್ವವಿದ್ಯಾನಿಲಯದ ವಿತ್ತಾಧಿಕಾರಿಗಳು ದೃಡೀಕರಿಸಿ ನೀಡಿರುವ ವಿವರಣಾ ಪಟ್ಟಿಯಲ್ಲಿ ಈ ಎರಡೂ ಖಾತೆಗಳ ಮೊತ್ತವು ಸೇರ್ಪಡೆಯಾಗಿರುತ್ತದೆ. ಅಂತಿಮವಾಗಿ ಆರಂಭ ಶಿಲ್ಕು ರೂ.393,83,68,673/–ಗಳಾಗುವುದು ವಿಶ್ವವಿದ್ಯಾನಿಲಯದ ವಾರ್ಷಿಕ ಪತ್ರಗಳಲ್ಲಿ ಆರಂಭಿಕ ಶಿಲ್ಕುಗಳನ್ನು ಮಾರ್ಪಡಿಸಿ ಅಳವಡಿಸಿಕೊಳ್ಳಲು ಸಂಬಂಧಪಟ್ಟವರಿಗೆ ಸೂಚಿಸಲಾಗಿರುತ್ತದೆ. ಹಾಗೂ ಈ ಬಗ್ಗೆ ಸೂಕ್ತ ಕ್ರಮ |

ಮಾಡಿಕೊಳ್ಳಲಾಗಿದ್ದು ಅನುದಾನ, ಬಡ್ಡಿ, ವಿಶ್ವವಿದ್ಯಾನಿಲಯದ ರಾಜಸ್ವ ಮುಂತಾದವುಗಳನ್ನು ಸ್ವೀಕೃತಿ ವಿಭಾಗದ ಭಾಗ–1ರಲ್ಲಿ ಹಾಗೂ ಬೇರೆ ಬ್ಯಾಂಕ್ ಖಾತೆಗಳಿಂದ ಮಾಡಿಕೊಂಡ ವರ್ಗಾವಣೆಗಳು, ಠೇವಣಿಗಳು, ಇದಿರು ನಮೂದುಗಳು (Contra entries) ಮುಂತಾದವುಗಳನ್ನು ಸ್ವೀಕೃತಿ ವಿಭಾಗದ ಭಾಗ–2ರಲ್ಲಿ ತೆಗೆದುಕೊಳ್ಳಲಾಗಿದೆ. ಅದೇ ರೀತಿ ಸಾಮಾನ್ಯ ವೆಚ್ಚಗಳನ್ನು ಪಾವತಿ ವಿಭಾಗದ ಭಾಗ–1ರಲ್ಲಿ ಹಾಗೂ ಬೇರೆ ಬ್ಯಾಂಕ್ ಖಾತೆಗಳಿಗೆ ಮಾಡಿದ ವರ್ಗಾವಣೆಗಳು, ಹಿಂಪಾವತಿಸಿದ ಠೇವಣಿಗಳು, ಇದಿರು ನಮೂದುಗಳು (Contra entries) ಮುಂತಾದವುಗಳನ್ನು ವೆಚ್ಚ ವಿಭಾಗದ ಭಾಗ–2ರಲ್ಲಿ ತೆಗೆದುಕೊಳ್ಳಲಾಗಿದೆ. ಲೆಕ್ಕಗಳಲ್ಲಿ ರಾಜಸ್ವ ಸ್ವೀಕೃತಿ ಮತ್ತು ವೆಚ್ಚಗಳು, ಬಂಡವಾಳ ಸ್ವೀಕೃತಿ ಮತ್ತು ವೆಚ್ಚಗಳು ಹಾಗೂ ಸಾಲಗಳು ಮತ್ತು ಮುಂಗಡಗಳು ಮುಂತಾದ ವರ್ಗೀಕರಣವಾಗಲೀ ಅಥವಾ ಅಂತಹ ವರ್ಗೀಕರಣಕ್ಕೆ ಪೂರಕವಾದ ನಮೂನೆಗಳಲ್ಲಿ ಲೆಕ್ಕಪತ್ರಗಳ ನಿರ್ವಹಣೆಯನ್ನಾಗಲೀ ಮಾಡಿರುವುದಿಲ್ಲ. ವಿಶ್ವವಿದ್ಯಾನಿಲಯದಲ್ಲಿ ಪ್ರತ್ಯೇಕವಾಗಿ ಹಣಕಾಸು ಶಾಖೆಯಿದ್ದರೂ ಕೂಡ ಹಣಕಾಸು ಹಾಗೂ ಲೆಕ್ಕಪತ್ರ ನಿರ್ವಹಣೆಯಲ್ಲಿ ಶಿಸ್ತುಬದ್ಧ ಕ್ರಮಗಳನ್ನು ಅನುಸರಿಸುತ್ತಿರುವುದು ಕಂಡು ಬಂದಿರುವುದಿಲ್ಲ.

**2018–19ನೇ ಸಾಲಿನ ವಾರ್ಷಿಕ ಲೆಕ್ಕಗಳ ಪ್ರಕಾರ ಆರ್ಥಿಕ ಪರಿಸ್ಥಿತಿ ವಿವರ ಕೆಳಗಿನಂತಿವೆ.**

| **2018–19ನೇ ಸಾಲಿನ ವಾರ್ಷಿಕ ಲೆಕ್ಕಗಳ ಪ್ರಕಾರ** | | | | |
|---|---|---|---|---|
| **ಕ್ರ ಸಂ** | **ವಿವರ** | | **ಮೊತ್ತ (ರೂ.ಗಳಲ್ಲಿ)** | **ಮೊತ್ತ (ರೂ.ಗಳಲ್ಲಿ)** |
| 1 | 2018–19ನೇ ಸಾಲಿನ ಪ್ರಾರಂಭಿಕ ಶಿಲ್ಕು | | | 394,24,42,642 |
| 2 | ಸ್ವೀಕೃತಿ | ಭಾಗ–1 | 386,68,01,303 | |
| | | ಭಾಗ–2 | 486,84,64,826 | 873,52,66,129 |
| 3 | **ಒಟ್ಟು ಮೊತ್ತ (1 + 2)** | | | **1267,77,08,771** |
| 4 | ಪಾವತಿ | ಭಾಗ–1 | 3,36,41,35,864 | |
| | | ಭಾಗ–2 | 4,93,57,14,564 | 8,29,98,50,428 |
| 5 | 2018–19ನೇ ಸಾಲಿನ ಅಂತಿಮ ಶಿಲ್ಕು (3–4) | | | 4,37,78,58,343 |

ವಿಶ್ವವಿದ್ಯಾನಿಲಯದ ಪ್ರಸ್ತುತ ಸಾಲಿನ ಆದಾಯ ಮತ್ತು ವೆಚ್ಚಗಳನ್ನು ಕಳೆದ ಎರಡು ವರ್ಷಗಳ ಆದಾಯ ಮತ್ತು ವೆಚ್ಚಗಳ ಅಂಕಿ ಅಂಶಗಳೊಡನೆ ತುಲನೆ ಮಾಡಿ ನೋಡಿದಾಗ ಪ್ರಾಯೋಜಿತ ಕಾರ್ಯಕ್ರಮಗಳಡಿ 2016–17ನೇ ಸಾಲಿಗಿಂತ 2017–18ನೇ ಸಾಲಿನಲ್ಲಿ ಅನುದಾನ ಸ್ವೀಕೃತಿಯಲ್ಲಿ ಇಳಿಮುಖವಾಗಿದ್ದು, 2018–19ನೇ ಸಾಲಿನಲ್ಲಿ ಸ್ವಲ್ಪ ಏರಿಕೆ ಕಂಡು ಬಂದರೂ 2016–17ನೇ ಸಾಲಿನ ಮಟ್ಟದಲ್ಲಿ ಸ್ವೀಕೃತಿಯಾಗಿರುವುದಿಲ್ಲ. ಈ ಯೋಜನೆಯಡಿ ವೆಚ್ಚದಲ್ಲೂ ಕೂಡ ಇಳಿಮುಖವಾಗಿರುವುದನ್ನು ಕೈಗೊಳ್ಳಲಾಗಿದೆ.

ಆನ್‌ಲೈನ್ ಪ್ರೋಗ್ರಾಮ್ ಖಾತೆಗೆ ಜಮೆಯಾಗುವ ಆದಾಯ ಶೇ.30 ರಷ್ಟನ್ನು ಆನ್‌ಲೈನ್ ಪ್ರೋಗ್ರಾಮ್ ಖಾತೆಯಲ್ಲಿರಿಸಿಕೊಳ್ಳಲಾಗಿದೆ. (ವಿಶ್ವವಿದ್ಯಾನಿಲಯದ ಹಾಗೂ ದೆಹಲಿ ಕಛೇರಿಯೊಂದಿಗೆ ಒಡಂಬಡಿಕೆಯನ್ವಯದಂತೆ (MOU ಪ್ರತಿ ಲಗತ್ತಿಸಿದೆ) ಇನ್ನುಳಿದ ಶೇ.7 ರಷ್ಟನ್ನು ಆನ್‌ಲೈನ್ ಪ್ರೋಗ್ರಾಮ್ (ರಿಸರ್ವ್) ಹಾಗೂ ಆನ್‌ಲೈನ್ ಪ್ರೋಗ್ರಾಮ್(ಎಸ್ಕ್ರೋ) ಖಾತೆಗೆ ಜಮೆಯಾಗಿರುತ್ತದೆ. ಈ ಮೊಬಲಗಿಗೆ ವಿಶ್ವವಿದ್ಯಾನಿಲಯಕ್ಕೆ ಯಾವುದೇ ವೆಚ್ಚ ಭರಿಸಲು ಅವಕಾಶವಿಲ್ಲದ ಕಾರಣ 2018–19ನೇ ಸಾಲಿಗೆ ಆಯವ್ಯಯ ಅಂದಾಜುಗಳಿಗೆ ಸದರಿ ಖಾತೆಗಳ ಆರಂಭ ಶಿಲ್ಕನ್ನು ಪರಿಗಣಿಸಿರುವುದಿಲ್ಲವೆಂಬ ಅಂಶವನ್ನು ಲೆಕ್ಕಪರಿಶೋಧನೆಯ ಗಮನಕ್ಕೆ ತರಲಾಗಿದೆ.

ಈ ಸಂಬಂಧ ಸದರಿ ಕಂಡಿಕೆಯ ಆಕ್ಷೇಪಣೆಯನ್ನು ಕೈ ಬಿಡುವಂತೆ ನಿವೇದಿಸಲಾಗಿದೆ.

ಗಮನಿಸಲಾಗಿದೆ. ಬಹುತೇಕ ಈ ಅನುದಾನ ಸಂಶೋಧನಾ ಚಟುವಟಿಕೆಗಳಿಗೆ ಸಂಬಂಧಿಸಿದ್ದಾಗಿದ್ದು, ವಿಶ್ವವಿದ್ಯಾನಿಲಯದಂತಹ ಬೋಧನೆ ಮತ್ತು ಸಂಶೋಧನೆಯ ಉನ್ನತ ಶಿಕ್ಷಣ ಸಂಸ್ಥೆಯಲ್ಲಿ ಈ ತೆರನಾದ ಬೆಳವಣಿಗೆ ಆರೋಗ್ಯಕರವಾದುದಲ್ಲವಾದ್ದರಿಂದ ಸಂಬಂಧಿತ ಪ್ರಾಧಿಕಾರವು ಪ್ರಾಯೋಜಿತ ಕಾರ್ಯಕ್ರಮಗಳ ಪ್ರಗತಿಯನ್ನು ನಿಯಮಿತವಾಗಿ ಮೌಲ್ಯಮಾಪನ ಮಾಡಿದ್ದಲ್ಲಿ, ಈ ಬಗೆಯ ಋಣಾತ್ಮಕ ಬೆಳವಣಿಗೆಯನ್ನು ತಪ್ಪಿಸಬಹುದಾಗಿತ್ತು ಎಂದು ಅಭಿಪ್ರಾಯಿಸಿದೆ. ಇದೇತೆರನಾದ ಸ್ವೀಕೃತಿ ಹಾಗೂ ವೆಚ್ಚಗಳಲ್ಲಿನ ಕುಸಿತವನ್ನು ಯುಪಿಇ, ಶ್ರೇಷ್ಠತಾ ಸಂಸ್ಥೆ ಹಾಗೂ ರೂಸಾ ಲೆಕ್ಕ ಶೀರ್ಷಿಕೆಗಳಲ್ಲಿ ಕಂಡು ಬಂದಿದ್ದು ಇವುಗಳನ್ನು ಕೆಳಗಿನ ರೇಖಾನಕ್ಷೆಯಲ್ಲಿ ಬಿಂಬಿಸಲಾಗಿದೆ.






**6.3 ವಿಶ್ವವಿದ್ಯಾನಿಲಯದ ಯುವರಾಜ ಕಾಲೇಜಿನ(ಸ್ವಾಯತ್ತ) ಆರ್ಥಿಕ ಪರಿಸ್ಥಿತಿ :**

ಯುವರಾಜ ಕಾಲೇಜಿನ ಚಾಲ್ತಿಯಲ್ಲಿರುವ/ಚಾಲ್ತಿಯಲ್ಲಿಲ್ಲದ ಎಲ್ಲಾ ಬ್ಯಾಂಕ್ ಖಾತೆಗಳ ವಿವರಗಳನ್ನು ಹಾಜರುಪಡಿಸುವಂತೆ ಲೆಕ್ಕಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ:14/2019–20, ದಿನಾಂಕ:12.02.2020ನ್ನು ನೀಡಲಾಗಿದ್ದು, ಲೆಕ್ಕಪರಿಶೋಧನೆಗೆ ಹಾಜರುಪಡಿಸಲಾದ ಚಾಲ್ತಿಯಲ್ಲಿರುವ ಕಾಲೇಜಿನ ಬ್ಯಾಂಕ್ ಖಾತೆಗಳ ಆರ್ಥಿಕ ವಹಿವಾಟಿನ ವಿವರಗಳನ್ನು ನಗದು ಪುಸ್ತಕ, ಬ್ಯಾಂಕ್ ಪಾಸು ಪುಸ್ತಕಗಳ/ಬ್ಯಾಂಕ್ ಸ್ಟೋಲ್ ಹಾಗೂ ಧನಾದೇಶ ಡ್ರಾ ಮಾಡಿದ ತಃಖ್ತೆ ಆಧಾರದ ಮೇಲೆ ಪರಿಶೀಲಿಸಲಾಗಿದೆ. 2018–19ನೇ ಸಾಲಿನಲ್ಲಿ ಒಟ್ಟು ಹದಿನೇಳು (17) ವಿವಿಧ ಬ್ಯಾಂಕ್ ಖಾತೆಗಳ ಮೂಲಕ ವ್ಯವಹರಣೆ ನಡೆಸಲಾಗಿದ್ದು, ವಿವರಗಳು ಈ ಕೆಳಕಂಡಂತಿವೆ.

| ವಿವರ | ಮೊಬಲಗು (ರೂ. ಗಳಲ್ಲಿ) |
|---|---|
| ಆರಂಭಿಕ ಶಿಲ್ಕು ದಿನಾಂಕ: 01.04.2018 ರಂತೆ | 4,77,46,264 |
| **ಕೂಡಿರಿ** : 2018–19 ನೇ ಸಾಲಿನ ಸ್ವೀಕೃತಿ | 15,71,83,130 |
| **ಒಟ್ಟು ಮೊತ್ತ** | **20,49,29,394** |
| **ಕಳೆಯಿರಿ** : 2018–19 ನೇ ಸಾಲಿನ ಪಾವತಿ | 13,80,97,064 |
| ಅಂತಿಮ ಶಿಲ್ಕು ದಿನಾಂಕ: 31.03.2019 ರಅಂತ್ಯಕ್ಕೆ | 6,68,32,330 |

2018–19ನೇ ಸಾಲಿನ ವಿಶ್ವವಿದ್ಯಾನಿಲಯದ ಯುವರಾಜ ಕಾಲೇಜಿನಲ್ಲಿ ಒಟ್ಟು (17) ಹದಿನೇಳು ವಿವಿಧ ಬ್ಯಾಂಕ್ ಖಾತೆಗಳನ್ನು ನಿರ್ವಹಿಸುತ್ತಿದ್ದು ಈ ಎಲ್ಲಾ ಹದಿನೇಳು ಖಾತೆಗಳಲ್ಲಿ ವಿವಿಧ ಬಗೆಯ ವ್ಯವಹಾರಗಳನ್ನು ನಿರ್ವಹಿಸುತ್ತಿದ್ದು, ಆರ್ಥಿಕ ವಹಿವಾಟುಗಳಾದ ಆದಾಯ ಮತ್ತು ವೆಚ್ಚಗಳನ್ನು ನಗದು ಪುಸ್ತಕದಲ್ಲಿ ದಾಖಲಿಸಿ ವಿವರಗಳನ್ನು ಬ್ಯಾಂಕ್ ಸ್ಟೋಲ್‌ಗಳೊಂದಿಗೆ ಪರಿಶೀಲಿಸಿ ನಮೂದಿಸಲಾಗಿರುತ್ತದೆ ಹಾಗೂ ಸದರಿ ವಿವರಗಳನ್ನು 2018–19ನೇ ಸಾಲಿನ ಲೆಕ್ಕಪರಿಶೋಧನಾ ತಂಡಕ್ಕೆ ಪರಿಶೀಲನೆಗಾಗಿ ಒದಗಿಸಲಾಗಿದ್ದು ಪರಿಶೀಲನೆಯಾಗಿರುತ್ತದೆ.

ಮುಂದುವರಿದು ಅನುಬಂಧ–9 ರಲ್ಲಿ ವಿವರಸಲಾಗಿರುವ ನಗದಾಗದ ಧನಾದೇಶಗಳ ಬಗ್ಗೆ ಕ್ರಮವಹಿಸಿ 2018–19ನೇ ಸಾಲಿನ (ಮಾರ್ಚ್ 2018) ಬ್ಯಾಂಕ್ ಸ್ಟೋಲ್‌ನೊಂದಿಗೆ ಪರಿಶೀಲಿಸಿ ತಾಳೆ ಮಾಡಲಾಗಿದ್ದು (3) ಮೂರು ತಿಂಗಳ ಅವಧಿ ಮುಗಿದಿರುವ ಧನಾದೇಶಗಳ ಮೊತ್ತವನ್ನು ಚಾಲ್ತಿ ಸಾಲಿನ ನಗದು ಪುಸ್ತಕದ ಲೆಕ್ಕಕ್ಕೆ ತೆಗೆದುಕೊಳ್ಳಲು ಕ್ರಮವಹಿಸಲಾಗಿರುತ್ತದೆ ಎಂಬ ಅಂಶವನ್ನು ಲೆಕ್ಕ ಪರಿಶೋಧನೆಯ ಗಮನಕ್ಕೆ ತರಲಾಗಿದೆ.

| | |
|---|---|
| ಬ್ಯಾಂಕ್ ಸ್ಕ್ರೋಲ್‌ನ ಪ್ರಕಾರಅಂತಿಮ ಶಿಲ್ಕು ದಿನಾಂಕ: 31.03.2019 ರಅಂತ್ಯಕ್ಕೆ | 7,26,99,761 |
| **ವ್ಯತ್ಯಾಸ** | **58,67,431** |

ಆರ್ಥಿಕ ಪರಿಸ್ಥಿತಿ ತ:ಖ್ತೆ ಯ ವಿವರವನ್ನು **ಅನುಬಂಧ–8ರಲ್ಲಿ** ಲಗತ್ತಿಸಿದೆ.

**ಆರ್ಥಿಕ ಪರಿಸ್ಥಿತಿಯಂತೆ ವ್ಯತ್ಯಾಸದ ಮೊತ್ತಕ್ಕೆ ವಿವರ**

| **ಕ್ರ. ಸಂ.** | **ವಿವರ** | **ಮೊತ್ತ** | **ವ್ಯತ್ಯಾಸಕ್ಕೆಕಾರಣ** |
|---|---|---|---|
| 1 | ಸಾಮಾನ್ಯ ರಾಜಸ್ವ ಖಾತೆ(ಜಿ.ಆರ್.ಎ) | 30,31,591 | ನಗದಾಗದ ಧನಾದೇಶಗಳು |
| 2 | ಶುಲ್ಕ ಮತ್ತು ಸಂಭಾವನೆ ಖಾತೆ | 10,84,672 | ನಗದಾಗದ ಧನಾದೇಶಗಳು |
| 3 | ಪಠ್ಯೇತರಚಟುವಟಿಕೆಖಾತೆ | 1,32,882 | ನಗದಾಗದ ಧನಾದೇಶಗಳು |
| 4 | ವಾಚನಾಲಯ, | 2,830 | ನಗದಾಗದ ಧನಾದೇಶಗಳು |
| 5 | ಭಾಗಶಃ ಸ್ವಯಂ ಹಣ ವ್ಯವಹರಣೆ ಖಾತೆ | 11,43,228 | ನಗದಾಗದ ಧನಾದೇಶಗಳು |
| 6 | SBI-UGC | 4,72,228 | ನಗದಾಗದ ಧನಾದೇಶಗಳು |
| ಒಟ್ಟು | | **5867431** | |

ನಗದಾಗದ ಧನಾದೇಶಗಳ ವಿವರವನ್ನು **ಅನುಬಂಧ–9**ರಲ್ಲಿ ನೀಡಲಾಗಿದೆ.

ಈ ನಿಟ್ಟಿನಲ್ಲಿ ಕಂಡಿಕೆ ಸಂಖ್ಯೆ 6.3 ರ ಆಕ್ಷೇಪಣೆಯನ್ನು ತೀರುವಳಿಗೊಳಿಸುವಂತೆ ಈ ಮೂಲಕ ಕೋರಲಾಗಿದೆ.

**6.4 ನಿಯಂತ್ರಣವಿಲ್ಲದಅನುದಾನದ ವರ್ಗಾವಣೆಗಳು :**

ವಿಶ್ವವಿದ್ಯಾನಿಲಯದಲ್ಲಿ 2018–19ನೇ ಸಾಲಿನಲ್ಲಿ 32 ಬ್ಯಾಂಕ್ ಖಾತೆಗಳನ್ನು ನಿರ್ವಹಿಸಲಾಗುತ್ತಿದ್ದು, ಅವಶ್ಯಕತೆ ಬಿದ್ದಾಗಲೆಲ್ಲಾ ಒಂದು ಕಾರ್ಯಕ್ರಮದ ಬ್ಯಾಂಕ್ ಖಾತೆಯಿಂದ ಮತ್ತೊಂದು ಕಾರ್ಯಕ್ರಮದ ಬ್ಯಾಂಕ್‌ಖಾತೆಗೆ ಆಗಾಗ್ಗೆ ವರ್ಗಾಯಿಸಿರುವುದು ಕಂಡು ಬಂದಿರುತ್ತದೆ. ನಿರ್ದಿಷ್ಟ ಕಾರ್ಯಕ್ರಮ/ಉದ್ದೇಶಕ್ಕಾಗಿ ತೆರೆದ ಬ್ಯಾಂಕ್ ಖಾತೆಯಲ್ಲಿನ ಹಣವನ್ನು ಸದರಿ ಕಾರ್ಯಕ್ರಮದ ಉದ್ದೇಶಕ್ಕೆ ಮಾತ್ರವೇ ಬಳಸಬೇಕಾಗಿರುತ್ತದೆ. ಆದರೆ ವಿಶ್ವವಿದ್ಯಾನಿಲಯದ ಒಂದು ಕಾರ್ಯಕ್ರಮದ ಬ್ಯಾಂಕ್ ಖಾತೆಯಲ್ಲಿ ಅನುದಾನ ಲಭ್ಯವಿಲ್ಲದಿದ್ದಾಗ ಮತ್ತೊಂದು ಕಾರ್ಯಕ್ರಮದ ಬ್ಯಾಂಕ್ ಖಾತೆಯಿಂದ ಅನುದಾನವನ್ನು ಹೀಗೆ ವರ್ಗಾಯಿಸುವುದು ಸಮರ್ಥನೀಯವಾದ ಕ್ರಮವಾಗಿರುವುದಿಲ್ಲ. 2017–18ನೇ ಸಾಲಿನ ವಿಶ್ವವಿದ್ಯಾನಿಲಯದ ವಾರ್ಷಿಕ ಲೆಕ್ಕಗಳಲ್ಲಿ 34 ಬ್ಯಾಂಕ್ ಖಾತೆಗಳಿದ್ದು, 2018–19ನೇ ಸಾಲಿನ ಲೆಕ್ಕಗಳಲ್ಲಿ ಇವು 32 ಆಗಿರುತ್ತವೆ. ಕೈಬಿಟ್ಟಿರುವ ಬ್ಯಾಂಕ್ ಖಾತೆಗಳು {ಆನ್‌ಲೈನ್(ಮೀಸಲು) ಹಾಗೂ ಆನ್‌ಲೈನ್(ಎಸ್ಕ್ರೋ)} ಈಗಲೂ ಚಾಲ್ತಿಯಲ್ಲಿವೆಯೆ? ಅಥವಾ ಅವುಗಳನ್ನು ಮುಚ್ಚಿ ಬೇರೆ ಬ್ಯಾಂಕ್ ಖಾತೆಗಳಿಗೆ ಮೊತ್ತಗಳನ್ನು ವರ್ಗಾವಣೆ ಮಾಡಿಕೊಳ್ಳಲಾಗಿದೆಯೇ ಎಂಬ ಬಗ್ಗೆ ಲೆಕ್ಕಪರಿಶೋಧನೆಗೆ

ವಿಶ್ವವಿದ್ಯಾನಿಲಯದ ಕಾರ್ಯ ವ್ಯಾಪ್ತಿಯಲ್ಲಿ ವಿವಿಧ ಬಾಬ್ತುಗಳಿಗೆ 32 ಬ್ಯಾಂಕ್ ಖಾತೆಗಳು ಕಾರ್ಯನಿರ್ವಹಿಸುತ್ತಿದ್ದು ಒಂದೊಂದು ಬ್ಯಾಂಕ್ ಖಾತೆಯಲ್ಲಿ ಒಂದೊಂದು ವಿಷಯದ ಕಾರ್ಯವನ್ನು ನಿರ್ವಹಿಸಲಾಗುತ್ತಿದೆ ಈ ಸಂದರ್ಭದಲ್ಲಿ ಒಂದು ಯೋಜನೆಯ ನಿರ್ವಹಣೆ ಮತ್ತು ವಿಶ್ವವಿದ್ಯಾನಿಲಯದ ಸಿಬ್ಬಂದಿ ವರ್ಗದವರಿಗೆ ಸಂಬಂಧಪಟ್ಟ ಅನುದಾನವು ಸಕಾಲದಲ್ಲಿ ಬಿಡುಗಡೆಯಾಗದ ಸಂದರ್ಭದಲ್ಲಿ ಹಾಗೂ ಒಂದು ಯೋಜನೆಯ ಕಾರ್ಯಕ್ಕೆ ಅನುದಾನ ಸಕಾಲಕ್ಕೆ ಬಿಡುಗಡೆಯಾಗದ ಸಂದರ್ಭದಲ್ಲಿ ತಾತ್ಕಾಲಿಕ(ವ್ಯವಸ್ಥೆ) ನಿರ್ವಹಣೆಗಾಗಿ ಒಂದು ಖಾತೆಯಿಂದ ಮತ್ತೊಂದು ಖಾತೆಗೆ ಹಣ ವರ್ಗಾವಣೆ ಮಾಡಿಕೊಂಡು ಸಂಬಂಧಪಟ್ಟ ಯೋಜನೆಗೆ ಅಥವ ಖಾತೆಗೆ ಅನುದಾನ ಬಿಡುಗಡೆಯಾದ ನಂತರ ಹಣ ಡ್ರಾ ಮಾಡಿದ ಖಾತೆಗೆ ಅದೇ ಅನುದಾನವನ್ನು ಭರ್ತಿ ಮಾಡಲಾಗುವುದು ಎಂಬ ಅಂಶವನ್ನು ಲೆಕ್ಕಪರಿಶೋಧನೆಯ ಗಮನಕ್ಕೆ ತರಲಾಗಿದೆ. ಮುಂದುವರಿದು ಉಳಿಕೆ 2 ಖಾತೆಗಳಾದ (1) ಆನ್‌ಲೈನ್(ಮೀಸಲು) ಹಾಗೂ (2) ಆನ್‌ಲೈನ್ (ಎಸ್ಕ್ರೋ) ಖಾತೆಗೆ ಸಂಬಂಧಿಸಿದಂತೆ ಆನ್‌ಲೈನ್(ಮೀಸಲು) ಖಾತೆ ಸಂಖ್ಯೆ:50100062940329 ಹಾಗೂ ಆನ್‌ಲೈನ್(ಎಸ್ಕ್ರೋ) ಖಾತೆ

ವಿಶ್ವವಿದ್ಯಾನಿಲಯವು ಮಾಹಿತಿಯನ್ನು ಒದಗಿಸಿರುವುದಿಲ್ಲ. ಆದುದರಿಂದ ಮುಂದಿನ ಲೆಕ್ಕಪರಿಶೋಧನೆಗೆ ಈ ಮಾಹಿತಿಗಳನ್ನು ಒದಗಿಸಲು ಸೂಚಿಸಿದೆ.

ಸಂಖ್ಯೆ:5020007531292 ಈ ಎರಡೂ ಖಾತೆಗಳು 2018–19ನೇ ಸಾಲಿನಲ್ಲಿ ಕಾರ್ಯಪ್ರವೃತ್ತಿಯಾಗಿದ್ದು ಈ ಖಾತೆಗಳಿಗೆ ಸಂಬಂಧಿಸಿದ ವ್ಯವಹಾರಗಳು ನಿರ್ವಹಣೆಯ ಚಾಲ್ತಿಯಲ್ಲಿರುತ್ತದೆ. ಈ ಸಂಬಂಧ ಸಂಬಂಧಪಟ್ಟ ಖಾತೆಗಳ ವಿವರಗಳನ್ನು ಮಾಹಿತಿಗಾಗಿ ಇದರೊಂದಿಗೆ ಲಗತ್ತಿಸಲಾಗಿದೆ.

ಈ ನಿಟ್ಟಿನಲ್ಲಿ ಸದರಿ ಕಂಡಿಕೆ ಸಂಖ್ಯೆ:6.4 ರ ಆಕ್ಷೇಪಣೆಯನ್ನು ಕೈ ಬಿಡಲು ನಿವೇದಿಸಿದೆ.

**6.5 ಕೆಲವು ಬ್ಯಾಂಕ್ ಖಾತೆಗಳನ್ನು ಮುಕ್ತಾಯಗೊಳಿಸಿ ಅವುಗಳಲ್ಲಿದ್ದ ಶಿಲ್ಕನ್ನು ಬೇರೆ ಖಾತೆಗಳಿಗೆ ಜಮೆ ಮಾಡಿರುವುದು :**

ವಿಶ್ವವಿದ್ಯಾನಿಲಯವು ಹಾಜರುಪಡಿಸಿದ ನಗದು ಪುಸ್ತಕಗಳನ್ನು ಪರಿಶೀಲಿಸಿದಾಗ ಕೆಲವು ಖಾತೆಗಳನ್ನು ಮುಕ್ತಾಯಗೊಳಿಸಿ ಬೇರೆ ಖಾತೆಗಳಿಗೆ ಹಣ ವರ್ಗಾವಣೆ ಮಾಡಿ ಜಮೆ ಮಾಡಿಕೊಂಡಿರುವುದು ಕಂಡು ಬಂದಿದ್ದು, ವಿವರಗಳು ಕೆಳಕಂಡಂತಿರುತ್ತದೆ.

| ಕ್ರ. ಸಂ | ಮುಕ್ತಾಯಗೊಳಿಸಲಾದ ಕಾರ್ಯಕ್ರಮದ ಬ್ಯಾಂಕ್ ಖಾತೆ | ಹಣ ಜಮೆ ಮಾಡಿಕೊಂಡ ಖಾತೆ | ಮೊತ್ತ |
|---|---|---|---|
| 1 | ನಿರ್ದೇಶಕರು, ಐ.ಸಿ.ಡಿ.ಎಫ್– ಖಾತೆ ಸಂಖ್ಯೆ:64002725688 | ಸಾಮಾನ್ಯ ರಾಜಸ್ವ ಖಾತೆ (ಜಿಆರ್‌ಎ) | ರೂ.32,13,681/ |
| 2 | ಸ್ನಾತಕೋತ್ತರ ದೈಹಿಕ ಶಿಕ್ಷಣ ಮತ್ತು ಕ್ರೀಡಾ ವಿಭಾಗ ಖಾತೆ ಸಂಖ್ಯೆ:54035420208 | ಸಾಮಾನ್ಯ ರಾಜಸ್ವ ಖಾತೆ (ಜಿಆರ್‌ಎ) | ರೂ.14,42,292/ |
| 3 | ಖಾತೆ ಸಂಖ್ಯೆ:54007591062 | ಪ್ರಾಯೋಜಿತ ಯೋಜನೆಗಳ ಕಾರ್ಯಕ್ರಮಗಳ ಖಾತೆ | ರೂ.25,30,714/– |
| 4 | ಖಾತೆ ಸಂಖ್ಯೆ:64121931298 | ಪ್ರಾಯೋಜಿತ ಯೋಜನೆಗಳ ಕಾರ್ಯಕ್ರಮಗಳ ಖಾತೆ | ರೂ.46,69,001/– |
| 5 | ಖಾತೆ ಸಂಖ್ಯೆ:54007590104 | ಪ್ರಾಯೋಜಿತ ಯೋಜನೆಗಳ ಕಾರ್ಯಕ್ರಮಗಳ ಖಾತೆ | ರೂ.8,36,000/– |
| | | **ಒಟ್ಟು ಮೊತ್ತ** | **1,26,97,688** |

ಕಂಡಿಕೆ 6.5 ರ ಕ್ರಮ ಸಂಖ್ಯೆ:1 ರಿಂದ 5 ರವರೆಗಿನ ಬ್ಯಾಂಕ್ ಖಾತೆಗಳು ಈ ಮೊದಲು ಹಲವು ಯೋಜನೆಗಳ ಕಾರ್ಯ ಪ್ರಗತಿಯಲ್ಲಿದ್ದುದರಿಂದ ಸಂಬಂಧಪಟ್ಟ ಖಾತೆಗಳಿಗನುಗುಣವಾಗಿ ಕಾರ್ಯ ನಿರ್ವಹಿಸಲಾಗುತ್ತಿತ್ತು. ಆದರೆ ಸದರಿ ಖಾತೆ ಯೋಜನೆಗಳು/ವ್ಯವಹಾರಗಳು ಮುಕ್ತಾಯವಾದುದರಿಂದ ಹಾಗೂ ಈ ಖಾತೆಗಳಲ್ಲಿ ದೈನಂದಿನ ಕಾರ್ಯ ಚಟುವಟಿಕೆಗಳು ಕಡಿಮೆಯಾದ ಹಿನ್ನಲೆಯಲ್ಲಿ ಸದರಿ ಖಾತೆಗಳನ್ನು ಮುಕ್ತಾಯಗೊಳಿಸಿ ಪ್ರಸ್ತುತ ಚಾಲ್ತಿಯಲ್ಲಿರುವಂತಹ ಖಾತೆಗಳಿಗೆ ಮೇಲೆ ವಿವರಿಸಲಾದ ಕ್ರಮ ಸಂಖ್ಯೆ:01 ರಿಂದ 5 ರವರೆಗಿನ ಖಾತೆಗಳನ್ನು ಮುಕ್ತಾಯಗೊಳಿಸಿ ಸದರಿ ಖಾತೆಗಳಲ್ಲಿ ಲಭ್ಯವಿದ್ದಂತಹ ಹಣವನ್ನು ವರ್ಗಾವಣೆ ಮಾಡಲಾಗಿದೆ. ಎಂಬ ಅಂಶವನ್ನು ಲೆಕ್ಕಪರಿಶೋಧನೆಯ ಗಮನಕ್ಕೆ ತರಲಾಗಿದೆ.

ಈ ತರುವಾಯ ಸದರಿ ಕಂಡಿಕೆಯ ಆಕ್ಷೇಪಣೆಯನ್ನು ಕೈ ಬಿಡುವಂತೆ ನಿವೇದಿಸಲಾಗಿದೆ.

**6.6 ಆಯವ್ಯಯದಲ್ಲಿ ಅವಕಾಶವಿಲ್ಲದಿದ್ದರೂ ಮಾಡಿರುವ ವೆಚ್ಚಗಳು :–**

2018–19ನೇ ಸಾಲಿನ ಆಯವ್ಯಯ ಅಂದಾಜು ಪಟ್ಟಿ ಹಾಗೂ ವಾರ್ಷಿಕ ಲೆಕ್ಕಪತ್ರ ದಾಖಲೆಗಳನ್ನು ಪರಿಶೀಲಿಸಿದಾಗಒಟ್ಟು 13 ವಿವಿಧ ವಹಿವಾಟು ಶೀರ್ಷಿಕೆಗಳು ಆಯವ್ಯಯದಲ್ಲಿ ಸೇರಿರದಿದ್ದರೂ, ಇವುಗಳಡಿ ಸ್ವೀಕೃತಿ ರೂ.37,91,62,556/–ಹಾಗೂ ವೆಚ್ಚ ರೂ.46,83,43,238/–ಗಳಿದ್ದು, ವಿವರಗಳನ್ನು **ಅನುಬಂಧ–**

ಕಂಡಿಕೆ 6.6 ರಲ್ಲಿ ಪ್ರಸ್ತಾಪಿಸಿರುವಂತೆ 13 ವಿವಿಧ ಲೆಕ್ಕ ಶೀರ್ಷಿಕೆಗಳು ವಿಶ್ವವಿದ್ಯಾನಿಲಯದ ಪ್ರತ್ಯೇಕ ಖಾತೆಗಳಾಗಿದ್ದು ಕ್ರಮ ಸಂಖ್ಯೆ:1 ರಿಂದ 10 ರವರೆಗಿನ ಖಾತೆಗಳ ವ್ಯವಹಾರಿಗಳು 2017–18ನೇ ಸಾಲಿನಲ್ಲಿ ಅಂತ್ಯಗೊಳಿಸಿರುವುದರಿಂದ ಸದರಿ ಖಾತೆಯ ವ್ಯವಹರಣೆಗಳನ್ನು 2018–19ನೇ ಸಾಲಿನ ಆಯವ್ಯಯದಲ್ಲಿ

**10**ರಲ್ಲಿ ನೀಡಲಾಗಿದೆ. ಇದು ಬಜೆಟ್ ಕೈಪಿಡಿ ನಿಯಮಗಳು–1958ರ ನಿಯಮ–231, 232ಗಳ ಉಲ್ಲಂಘನೆಯಾಗಿರುತ್ತದೆ. ಈರೀತಿ ಬಜೆಟ್‌ನಲ್ಲಿ ಅವಕಾಶ ಕಲ್ಪಿಸದೇ ವೆಚ್ಚ ಮಾಡಿರುವುದಕ್ಕೆ ವಿಶ್ವವಿದ್ಯಾನಿಲಯದ ವಿವರಣೆಯನ್ನು ಕೋರಿ ವಿಚಾರಣಾ ಪತ್ರ ಸಂಖ್ಯೆ:161/2020–21, ದಿನಾಂಕ:10.06.2020ನ್ನು ನೀಡಲಾಗಿದ್ದರೂ, ವಿಶ್ವವಿದ್ಯಾನಿಲಯವು ಯಾವುದೇ ವಿವರಣೆಯನ್ನು ನೀಡಿರುವುದಿಲ್ಲ.

ಪರಿಗಣಿಸಿರುವುದಿಲ್ಲ ಇವುಗಳ ಅಂದರೆ 2017–18ನೇ ಸಾಲಿನ ಆಯವ್ಯಯದಲ್ಲಿರುವ ವಿವರಗಳನ್ನು ಗಮನಿಸಬಹುದಾಗಿದೆ ಕ್ರಮಸಂಖ್ಯೆ:11 ಮತ್ತು 12ರ ಖಾತೆಯ ವಿವರಗಳನ್ನು 2018–19ನೇ ಸಾಲಿನ ಪರಿಷ್ಕೃತ ಆಯವ್ಯಯದಲ್ಲಿ ಸೇರ್ಪಡೆಯಾಗಿರುತ್ತದೆ. ಹಾಗೂ ಕ್ರಮಸಂಖ್ಯೆ:13ರ ಅಮಾನತು ಖಾತೆಯಲ್ಲಿ ಆಗುವ ವಹಿವಾಟುಗಳು (TRANSACTION) ವಿಶ್ವವಿದ್ಯಾನಿಲಯದ ಎಲ್ಲಾ ಮಾದರಿಯ ಕಡಿತಗಳನ್ನು (DEDUCTIONS) ವಿವರಗಳು ಈಗಾಗಲೆ ಸಂಬಂಧಪಟ್ಟ ಖಾತೆಗಳ ಆಯವ್ಯಯ/ವಾರ್ಷಿಕ ಲೆಕ್ಕ ಪತ್ರಗಳಲ್ಲಿ ಒಳಗೊಂಡಿರುತ್ತದೆ. ಈ ಸಂಬಂಧ ಅಮಾನತು ಖಾತೆಯನ್ನು 2018–19ನೇ ಸಾಲಿನ ಆಯವ್ಯಯದಲ್ಲಿ ಪರಿಗಣಿಸುವ ಅವಶ್ಯಕತೆ ಬರುವುದಿಲ್ಲವೆಂಬ ಅಂಶವನ್ನು ಲೆಕ್ಕಪರಿಶೋಧನೆಯ ಗಮನಕ್ಕೆ ತರಲಾಗಿದೆ.

**ಸದರಿ 13 ಖಾತೆಗಳ ವಿವರ ಈ ಕೆಳಕಂಡಂತಿರುತ್ತದೆ.**

| ಕ್ರ ಸಂ | ಖಾತೆಯ ಹೆಸರು | ಖಾತೆಯ ಸಂಖ್ಯೆ |
|---|---|---|
| 01 | NSS Camping | 64079956435 |
| 02 | NSS Regular Activities | 64079956683 |
| 03 | Student Welfare Trust | 54007592736 |
| 04 | Sports Development Fund | 54007591448 |
| 05 | Kannada Dictionary | 54007591357 |
| 06 | EMMRC | 64195528043 |
| 07 | Gandhi Bhavan | 64170082120 |
| 08 | NSS ETI | 64168703563 |
| 09 | Tatva Nidhi | 54007591404 |
| 10 | M.Tech courses | 54007591459 |
| 11 | U-Alba | 64128849873 |
| 12 | Online Programme | 50100062717249 |
| 13 | Suspence Account | 6407592511 |

ಈ ನಿಟ್ಟಿನಲ್ಲಿ ಸದರಿ ಕಂಡಿಕೆಯ ಆಕ್ಷೇಪಣೆಯನ್ನು ಕೈ ಬಿಡುವಂತೆ ನಿವೇದಿಸಲಾಗಿದೆ.

**6.7 ಪಿಂಚಣಿ ನಿಧಿ ಖಾತೆಯ2017–18ನೇ ಸಾಲಿನ ಅಖೈರು ಶಿಲ್ಕಿಗೂ 2018–19ನೇ ಸಾಲಿಗೆ ಪ್ರಾರಂಭಿಕ ಶಿಲ್ಕಿಗೂ ವ್ಯತ್ಯಾಸವಿರುವುದು :**

2018–19ನೇ ಸಾಲಿನ ಪಿಂಚಣಿ ನಿಧಿ ಖಾತೆ ಸಂಖ್ಯೆ:54007591371(LICMPGFS-FDR)ರಲ್ಲಿ 2017–18ನೇ ಸಾಲಿನ ವಾರ್ಷಿಕ ಲೆಕ್ಕಪತ್ರ ದಾಖಲೆಗಳಲ್ಲಿ ದಾಖಲಿಸಿರುವಂತೆ ದಿನಾಂಕ:31.03.2018ರ ಅಂತ್ಯಕ್ಕೆ ಅಖೈರು ಶಿಲ್ಕು ರೂ.117,93,73,160/–ಗಳಿದ್ದು, 2018–19ನೇ ಸಾಲಿನ ವಾರ್ಷಿಕ ಲೆಕ್ಕಪತ್ರಗಳಲ್ಲಿ

2018–19ನೇ ಸಾಲಿನ ಪಿಂಚಣಿ ನಿಧಿ ಖಾತೆ ಸಂಖ್ಯೆ:5400759137 (LICMPGFS-FDR) ಖಾತೆಯಲ್ಲಿ 2017–18ನೇ ಸಾಲಿನ ವಾರ್ಷಿಕ ಲೆಕ್ಕಪತ್ರ ದಾಖಲೆಗಳಲ್ಲಿ ದಾಖಲಿಸಿರುವಂತೆ ದಿನಾಂಕ:31.03.2018 ರ ಅಂತ್ಯಕ್ಕೆ ಅಖೈರು ಶಿಲ್ಕು ರೂ.117,93,73,160/–ಗಳಿದ್ದು 2018–19ನೇ ಸಾಲಿನ

ರೂ.121,84,08,833/–ಗಳನ್ನು ಪ್ರಾರಂಭಿಕ ಶಿಲ್ಕಾಗಿ ತೆಗೆದುಕೊಂಡಿದ್ದು ರೂ.3,90,35,673/–ಗಳ ವ್ಯತ್ಯಾಸವಿರುತ್ತದೆ.

ವಾರ್ಷಿಕ ಲೆಕ್ಕಗಳನ್ನು ಶಾಸನಬದ್ಧ ಲೆಕ್ಕಪರಿಶೋಧಕರು ಪ್ರಮಾಣೀಕರಿಸಿ, ಸಕ್ಷಮ ಪ್ರಾಧಿಕಾರವು ಅನುಮೋದಿಸಿ ಅಳವಡಿಸಿಕೊಂಡ ನಂತರ ಆರಂಭಿಕ ಶಿಲ್ಕು, ಅಂತಿಮ ಶಿಲ್ಕುಗಳನ್ನು ಒಳಗೊಂಡಂತೆ ಯಾವುದೇ ನಮೂದುಗಳನ್ನು ತಿದ್ದುವಂತಿಲ್ಲ. ಹೀಗಾಗಿ ಹಿಂದಿನ ಸಾಲಿನ ಆರಂಭಿಕ ಶಿಲ್ಕನ್ನೇ ಕಡ್ಡಾಯವಾಗಿ ಚಾಲ್ತಿ ಸಾಲಿನ ಆರಂಭಿಕ ಶಿಲ್ಕಾಗಿ ತೆಗೆದುಕೊಳ್ಳಬೇಕು. ಯಾವುದೇ ತಿದ್ದುಪಡಿ ಮಾಡಬೇಕಾದಲ್ಲಿ ಸೂಕ್ತ ದೃಢೀಕರಣದೊಡನೆ ಪ್ರತಿ (ತಿದ್ದುಪಡಿ) ನಮೂದುಗಳನ್ನು ಮಾಡಬೇಕು. ಈ ನ್ಯೂನತೆ ಕುರಿತಂತೆ ಸ್ಪಷ್ಟೀಕರಣ ಕೋರಿ ವಿಚಾರಣಾ ಪತ್ರ ಸಂಖ್ಯೆ:40/2019–20, ದಿನಾಂಕ:12.03.2020ನ್ನು ನೀಡಿದ್ದರೂ ಸಹ ವಿಶ್ವವಿದ್ಯಾನಿಲಯವು ಯಾವುದೇ ಅನುಪಾಲನಾ ವರದಿ ಅಥವಾ ವಿವರಣೆಯನ್ನು ನೀಡಿರುವುದಿಲ್ಲ. ಆದ್ದರಿಂದ ಈ ತಪ್ಪನ್ನು ಸರಿಪಡಿಸಿಕೊಳ್ಳಲು ಸೂಚಿಸಿದೆ.

ವಾರ್ಷಿಕ ಲೆಕ್ಕ ಪತ್ರಗಳಲ್ಲಿ ಪ್ರಾರಂಭಿಕ ಶಿಲ್ಕಾಗಿ ರೂ.121,84,08,833/–ಗಳನ್ನು ತೆಗೆದುಕೊಂಡಿದ್ದು ರೂ.3,90,35,673/–ಗಳು ವ್ಯತ್ಯಾಸವಿದ್ದು ವ್ಯತ್ಯಾಸಕ್ಕೆ

**ಈ ಕೆಳಗಿನ ವಿವರಗಳಲ್ಲಿ ವಿವರಿಸಲಾಗಿದೆ.**

**LICMPGFS Interest**

| | |
|---|---|
| 31.03.2017 | 439088 |
| fund management charges Rs-25900 | 29785 |
| Goods & Service tax Rs-3885 | |
| **Total** | **409303** |

**Interest for the year 2017-18**

| | | | |
|---|---|---|---|
| 1 | 30.06.2017 | 8279922 | **41038508** |
| 2 | 30.09.2017 | 9247205 | |
| 3 | 31.12.2017 | 11016476 | |
| 4 | 31.03.2018 | 12494905 | |

**Fund Management Charges & Goods Service Tax**

| Sl no | **Fund Management Charges** | **Goods Service Tax** | total |
|---|---|---|---|
| 1 | 409307 | 67411 | **2412138** |
| 2 | 461187 | 83013 | |
| 3 | 548262 | 98687 | |
| 4 | 630738 | 113533 | |
| | **2049494** | **362644** | |

Interset for 2017-2018 41038508
fund management charges & Goods service tax (-) 2412138
**Total 38626370**

2016–17ನೇ ಸಾಲಿನ ಆರಂಭಿಕ ಶಿಲ್ಕಿನಲ್ಲಿ
ಕೈ ತಪ್ಪಿನಿಂದ ಬಿಟ್ಟು ಹೋದ ಬಡ್ಡಿ ಮೊತ್ತ 409303
**ಒಟ್ಟು ರೂ. 39035673**

2016–17ನೆ ಸಾಲಿನ ಆರಂಭ ಶಿಲ್ಕು ರೂ.409303/–ಹಾಗೂ 2017–18ನೇ ಸಾಲಿನ ಬಡ್ಡಿ ಮೊತ್ತ ರೂ.38626370/– ಒಟ್ಟು ಮೊತ್ತ ರೂ.39035673/–ಗಳೂ ವ್ಯತ್ಯಾಸವಿದ್ದು ಸದರಿ ಮೊತ್ತದ ಬಗ್ಗೆ 2018–19ನೇ ಸಾಲಿನ ಲೆಕ್ಕಪರಿಶೋಧನಾವರದಿಯಲ್ಲಿ ಆಕ್ಷೇಪಿಸಲಾಗಿದ್ದು ರೂ.39035673/–ಗಳನ್ನು

<table>
<tr>
<td></td>
<td>ಮೇಲ್ಕಾಣಿಸಿದ ವಿವರಗಳಲ್ಲಿ ಸರಿಪಡಿಸಲಾಗಿರುತ್ತದೆ. ದಿನಾಂಕ:31.03.2018ರ ಅಂತ್ಯಕ್ಕಿದ್ದ ಆಖೈರು ಶಿಲ್ಕು ರೂ.1179373160/–ಗಳಿಗೂ ಹಾಗೂ 2018–19 ನೇ ಸಾಲಿನ ಪ್ರಾರಂಭಿಕ ಶಿಲ್ಕು ರೂ.1218408833/–ಗಳಿಗೂ ಇದ್ದ ವ್ಯತ್ಯಾಸದ ಮೊತ್ತ ರೂ.39035673/–ಗಳನ್ನು ಮೇಲೆ ವಿವರಿಸಿದಂತೆ 2019–20ನೇ ಸಾಲಿನ ಆಯವ್ಯಯದಲ್ಲಿ ವಿಶ್ವವಿದ್ಯಾನಿಲಯದ ಹಣಕಾಸು ಸಮಿತಿಯ ದಿನಾಂಕ:18.03.2020ರ ಸಭೆ, ಸಿಂಡಿಕೇಟ್ ಸಮಿತಿಯ ದಿನಾಂಕ:23.03.2020ರ ಸಭೆ, ಹಾಗೂ ಶೈಕ್ಷಣಿಕ ಮಂಡಳಿಯ ದಿನಾಂಕ:18.06.2020ರ ಸಭೆಗಳ, ಅನುಮೋದನೆಯೊಂದಿಗೆ ಸರಿಪಡಿಸಲಾಗಿರುತ್ತದೆ. ಸದರಿ ಸಭೆಗಳ ನಡಾವಳಿಗಳ ನಕಲುಗಳನ್ನು ಮಾಹಿತಿಗಾಗಿ ಇದರೊಂದಿಗೆ ಲಗತ್ತಿಸಲಾಗಿದೆ.<br><br>ನಗದು ಪುಸ್ತಕದಲ್ಲಿನ ಆರಂಭಿಕ ಶಿಲ್ಕು ಹಾಗೂ ಅಂತಿಮ ಶಿಲ್ಕಿನ ಬಗ್ಗೆ ಇನ್ನುಮುಂದೆ ಹೆಚ್ಚರವಹಿಸಲಾಗುದೆಂಬ ಅಂಶವನ್ನು ಲೆಕ್ಕಪರಿಶೋಧನಾ ಗಮನಕ್ಕೆ ತರಲಾಗಿದೆ.<br><br>ಈ ನಿಟ್ಟಿನಲ್ಲಿ ಸದರಿ ಆಕ್ಷೇಪಿತ ಕಂಡಿಕೆ 6.7 ರ ಆಕ್ಷೇಪಣೆಯನ್ನು ಕೈ ಬಿಡುವಂತೆ ನಿವೇದಿಸಲಾಗಿದೆ.</td>
</tr>
<tr>
<td>6.8 ಅಮಾನತ್ತು (Suspense Account) ಖಾತೆಯಲ್ಲಿ ಹಣ ಲಭ್ಯವಿಲ್ಲದಿದ್ದರೂ ಧನಾದೇಶಗಳನ್ನು ಬರೆದಿರುವುದು ಹಾಗೂ ಬ್ಯಾಂಕ್ ಲೆಕ್ಕಗಳೊಂದಿಗೆ ಮಾಹೆವಾರು ಲೆಕ್ಕ ಸಮನ್ವಯಗೊಳಿಸದಿರುವುದು:<br>2018–19ನೇ ಸಾಲಿನ ವಾರ್ಷಿಕ ಲೆಕ್ಕಗಳಲ್ಲಿನ ಅಮಾನತ್ತು ಖಾತೆ–07(Suspense account) ಯ ಜಮಾ ಮತ್ತು ಪಾವತಿ ವಿವರಗಳನ್ನು ಪರಿಶೀಲಿಸಿದಾಗ ವಿಶ್ವವಿದ್ಯಾನಿಲಯದ ನೌಕರರ ವೇತನದ ಕಟಾವಣೆಗಳಾದ ಭಾ.ಜೀ.ವಿಮಾ ಪ್ರೀಮಿಯಂ, ವೃತ್ತಿ ತೆರಿಗೆ, ಆದಾಯತೆರಿಗೆ, ಸಾಮಾನ್ಯ ಭವಿಷ್ಯ ನಿಧಿ, ಕಾರ್ಮಿಕರ ರಾಜ್ಯ ವಿಮಾ ವಂತಿಗೆ, ಸರಕು ಮತ್ತು ಸೇವಾ ತೆರಿಗೆ ಮುಂತಾದವುಗಳನ್ನು ಈ ಖಾತೆಗೆ ಜಮೆ ಮಾಡಿಕೊಂಡು ನಂತರ ಸಂಬಂಧಿಸಿದ ಇಲಾಖೆ/ಸಂಸ್ಥೆಗಳಿಗೆ ಧನಾದೇಶಗಳ ಮೂಲಕ ಪಾವತಿಸಲಾಗುತ್ತಿದೆ. ಈ ಬಗೆಯ ವಿವಿಧ ಕಟಾವಣೆಗಳ ಬಾಬ್ತು ನಗದು ಪುಸ್ತಕವನ್ನು ಪರಿಶೀಲಿಸಿದಾಗ 2018–19ನೇ ಸಾಲಿಗೆ ದಿನಾಂಕ:01.04.2018ಕ್ಕೆ ಋಣಾತ್ಮಕ ಪ್ರಾರಂಭಿಕ ಶಿಲ್ಕು ರೂ.1,99,706/–ಗಳಿದ್ದು, ದಿನಾಂಕ:31.03.2019ರ ಅಂತ್ಯಕ್ಕೆ ಅಂತಿಮ ಶಿಲ್ಕು ರೂ.7,55,153/–ಗಳಿರುತ್ತದೆ. ಬ್ಯಾಂಕ್ ಖಾತೆಯಲ್ಲಿ ಹಣವಿಲ್ಲದಿದ್ದರೂ ಧನಾದೇಶಗಳನ್ನು ಬರೆಯುವುದು ಗುರುತರ ಲೋಪವಾಗಿದ್ದು, ಈ ರೀತಿಯ ತಪ್ಪುಗಳು ಮರುಕಳಿಸದಂತೆ ಎಚ್ಚರ ವಹಿಸಲು ಹಾಗೂ ಪ್ರತೀ ಮಾಹೆಯ ಅಂತ್ಯದಲ್ಲಿ ನಗದು ಪುಸ್ತಕದ ಲೆಕ್ಕಗಳನ್ನು ಬ್ಯಾಂಕ್ ಲೆಕ್ಕಗಳೊಂದಿಗೆ ಲೆಕ್ಕಸಮನ್ವಯಗೊಳಿಸಿ ಹಣ ಲಭ್ಯವಿರುವ ಬಗ್ಗೆ ಖಚಿತಪಡಿಸಿಕೊಂಡು ಧನಾದೇಶಗಳನ್ನು ವಿತರಿಸುವಂತೆ ಸೂಚಿಸಿದೆ.<br><br><table><tr><td>ಆರಂಭಿಕ ಶಿಲ್ಕು</td><td>199706</td></tr><tr><td>ಜಮಾ</td><td>342736806.50</td></tr></table></td>
<td>ವಿಶ್ವವಿದ್ಯಾನಿಲಯದ ನೌಕರರ ಮಾಸಿಕ ವೇತನದಲ್ಲಿ ಆದಾಯ ತೆರಿಗೆ, ಸಾಮಾನ್ಯ ಭವಿಷ್ಯ ನಿಧಿ, ಭಾರತೀಯ ಜೀವವಿಮಾ ಪ್ರೀಮಿಯಂ, ವೃತ್ತಿ ತೆರಿಗೆ, ಸರಕು ಮತ್ತು ಸೇವಾ ತೆರಿಗೆ, ಹಾಗೂ ಕಾರ್ಮಿಕರ ರಾಜ್ಯವಿಮಾ ವಂತಿಕೆಗಳನ್ನು ಕಡಿತಗೊಳಿಸಿ ಸಂಬಂಧಪಟ್ಟ ಇಲಾಖೆ/ಸಂಸ್ಥೆಗಳಿಗೆ ಪ್ರತಿ ತಿಂಗಳು ನಿಗಧಿತ ಸಮಯದಲ್ಲಿ ಸಲ್ಲಿಸಲಾಗುತ್ತಿದೆ. ಅದೇ ರೀತಿ 2018–19ನೇ ಸಾಲಿನಲ್ಲಿಯೂ ಸಹ ಸದರಿ ಕಡಿತಗಳನ್ನು ನಿಗಧಿತ ಸಮಯದಲ್ಲಿ ಸಮಯದಲ್ಲಿ ಸಂಬಂಧಪಟ್ಟ ಇಲಾಖೆಗಳಿಗೆ ಸಲ್ಲಿಸಲಾಗಿದೆ.<br><br>ಇನ್ನು ಧನಾದೇಶದ ವಿಷಯದಲ್ಲಿ ಸಂಬಂಧಪಟ್ಟ ಬ್ಯಾಂಕ್ ಖಾತೆಯಲ್ಲಿ ಹಣ ಲಭ್ಯವಿರುವುದನ್ನು ಖಚಿತ ಪಡಿಸಿಕೊಂಡು ಧನಾದೇಶಗಳನ್ನು ಬರೆಯಲಾಗಿದೆ. ಒಂದು ವೇಳೆ ಈ ರೀತಿಯ ತಪ್ಪು ಸಂಭವಿಸದಲ್ಲಿ ಇನ್ನು ಮುಂದೆ ಎಚ್ಚರವಹಿಸಲಾಗುವುದು<br><br>ಮುಂದುವರಿದು ಕಂಡಿಕೆಯಲ್ಲಿ ಪ್ರಸ್ತಾಪಿಸಿರುವಂತೆ ತಪ್ಪಾಗಿ ಡೆಬಿಟ್ ಆಗಿರುವ ಮೊತ್ತ ರೂ.(–)88,339/–ಗಳನ್ನು ನಗದು ಪುಸ್ತಕದಲ್ಲಿ ಸರಿಪಡಿಸಲಾಗಿರುತ್ತದೆ, ಹಾಗೂ ನಗದಾಗದ ಧನಾದೇಶಗಳ ಮೊತ್ತ ರೂ.4,80,585/–ಗಳನ್ನು ಬ್ಯಾಂಕಿನ ಸ್ಟ್ರೋಲ್‌ನೊಂದಿಗೆ ಸರಿಪಡಿಸಲಾಗಿರುತ್ತದೆ. ಎಂಬ ಅಂಶವನ್ನು ಲೆಕ್ಕಪರಿಶೋಧನಾ ಅವಗಾಹನೆಗೆ ತರಲಾಗಿದೆ.</td>
</tr>
</table>

| | |
|---|---|
| ಒಟ್ಟು | 342537100.5 |
| ವೆಚ್ಚ | 341781947.4 |
| ಅಂತಿಮ ಶಿಲ್ಕು | 755153.1 |
| ಬ್ಯಾಂಕ್ ಶಿಲ್ಕು | 1147399.1 |
| ವ್ಯತ್ಯಾಸ | 392246 |

| ವ್ಯತ್ಯಾಸಕ್ಕೆ ವಿವರ | |
|---|---|
| ತಪ್ಪಾಗಿ ಡೆಬಿಟ್ ಆಗಿರುವುದು | (–)88339 |
| ನಗದಾಗದ ಧನಾದೇಶಗಳು | 480585 |
| ವ್ಯತ್ಯಾಸ | 392246 |

ಈ ನಿಟ್ಟಿನಲ್ಲಿ ಕಂಡಿಕೆ 6.8 ರಲ್ಲಿ ಆಕ್ಷೇಪಿಸಿರುವ ಆಕ್ಷೇಪಣೆಯನ್ನು ಕೈ ಬಿಡುವಂತೆ ನಿವೇದಿಸಲಾಗಿದೆ.

**6.9 ವಿಶ್ವವಿದ್ಯಾನಿಲಯದ ಬೇಡಿಕೆ, ಸ್ವೀಕೃತಿ ಹಾಗೂ ಬಾಕಿ ವಿವರಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸದಿರುವುದು :–**

2018–19ನೇ ಸಾಲಿನ ವಿಶ್ವವಿದ್ಯಾನಿಲಯದ ಬೇಡಿಕೆ, ಸ್ವೀಕೃತಿ ಮತ್ತು ಬಾಕಿ ವಿವರಗಳ ತಃಖ್ತೆಯನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ವಿಚಾರಣಾ ಪತ್ರ ಸಂಖ್ಯೆ:36/2019–20, ದಿ:11.03.2020ನ್ನು ನೀಡಿದ್ದರೂ ಸಹ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ. ಹೀಗಾಗಿ ವಿಶ್ವವಿದ್ಯಾನಿಲಯದ ಬೇಡಿಕೆ, ವಾಸ್ತವವಾಗಿ ಸಂಗ್ರಹವಾದ ಮೊತ್ತ ಇವುಗಳನ್ನು ತುಲನೆ ಮಾಡಿ ಪರಿಶೀಲಿಸಲು ಸಾಧ್ಯವಾಗಿರುವುದಿಲ್ಲ. ವಿಶ್ವವಿದ್ಯಾನಿಲಯವು ಸಂಚಯನ ಲೆಕ್ಕಪದ್ಧತಿಯನ್ನು ಅಳವಡಿಸಿಕೊಳ್ಳದಿರುವುದರಿಂದ ವರ್ಷಾಂತರಗಳಲ್ಲಿ ವಿಶ್ವವಿದ್ಯಾನಿಲಯಕ್ಕೆ ಬರಬೇಕಾದ ಹಳೆಯ ಬಾಕಿ ಮೊಬಲಗುಗಳೇ ಬಿಟ್ಟು ಹೋಗಿ ವಿಶ್ವವಿದ್ಯಾನಿಲಯಕ್ಕೆ ಆರ್ಥಿಕವಾಗಿ ನಷ್ಟವಾಗುವ ಸಂಭವವಿರುತ್ತದೆ. ಆದ್ದರಿಂದ ವಿಶ್ವವಿದ್ಯಾನಿಲಯದ ಬೇಡಿಕೆ, ಸಂಗ್ರಹಣೆ ಮತ್ತು ಬಾಕಿ ವಹಿಯನ್ನು ನಿರ್ವಹಿಸಿ, ಆ ಬಗ್ಗೆ ಲೆಕ್ಕಪರಿಶೋಧನೆಗೆ ಮಾಹಿತಿ ನೀಡಲು ಸೂಚಿಸಿದೆ.

2018–19ಣೇ ಸಾಲಿನ ಆಯವ್ಯಯ ಅಂದಾಜುಗಳಲ್ಲಿ ಬೇಡಿಕೆ, ಸ್ವೀಕೃತಿ ಹಾಗೂ 2018–19ನೇ ವಾರ್ಷಿಕ ಲೆಕ್ಕ ಪತ್ರಗಳ ಪುಸ್ತಕದಲ್ಲಿ ವಾಸ್ತವಿಕ ಆರಂಭಿಕ ಶಿಲ್ಕು, ಸ್ವೀಕೃತಿ ವೆಚ್ಚ ಹಾಗೂ ಅಂತಿಮ ಶಿಲ್ಕುಗಳ ವಿವರಗಳನ್ನು ವಿವರಿಸಲಾಗಿರುವುದನ್ನು ಲೆಕ್ಕಪರಿಶೋಧನಾ ಗಮನಕ್ಕೆ ತರಲಾಗಿದೆ ವಿಶ್ವವಿದ್ಯಾನಿಲಯಕ್ಕೆ ಆಯವ್ಯಯ ಅಂದಾಜುಗಳಲ್ಲಿ ನಿರೀಕ್ಷಿತ ಆದಾಯ ಬಾರದೆ ಇರುವ ಪಕ್ಷದಲ್ಲಿ ವಿಶ್ವವಿದ್ಯಾನಿಲಯದ ಆಂತರಿಕ ಸಂಪನ್ಮೂಲಗಳಿಂದ ಹಾಗೂ ವಿಶ್ವವಿದ್ಯಾನಿಲಯದ ಕಾಯ್ದೆ 2000ರ ಅಡಿಯಲ್ಲಿ ಅವಕಾಶವಿರುವಂತೆ ವಿಶ್ವವಿದ್ಯಾನಿಲಯಕ್ಕೆ ಇತರೆ ನಿಧಿಗಳಿಂದ ಸರಿದೂಗಿಸಿಕೊಂಡು ಬರಲಾಗುತ್ತಿದೆ. ಹಾಗೆಯೇ ಏನಾದರೂ ಆದಾಯ ಸ್ವೀಕೃತಿಗಳಲ್ಲಿ ಕುಂಟೀತವಾದಲ್ಲಿ ಮುಂದಿನ ಆರ್ಥಿಕ ವರ್ಷದ ಆದಾಯವನ್ನು ಹೆಚ್ಚಿಸಲು ವಿಶ್ವವಿದ್ಯಾನಿಲಯವು ಸೂಕ್ತ ಕ್ರಮ ಕೈಗೊಳ್ಳಲಾಗಿದೆ.

ಹಾಗೆಯೇ ಬೇಡಿಕೆಗಳ ಬಗ್ಗೆ ಆಯಾ ಸಾಲಿನ ಆಯವ್ಯಯ ಅಂದಾಜುಗಳ ಪುಸ್ತಕದಲ್ಲಿ ವಾಸ್ತವ ಸಂಗ್ರಹಣೆ ಮತ್ತು ಬಾಕಿಗಳ ವಿವರಗಳನ್ನು ಆಯಾ ಸಾಲಿನ ವಾರ್ಷಿಕ ಲೆಕ್ಕ ಪತ್ರಗಳಲ್ಲಿ ಪೂರ್ಣ ಮಾಹಿತಿಯು ಲಭ್ಯವಿರುತ್ತದೆ.

ಈ ನಿಟ್ಟಿನಲ್ಲಿ ಮೇಲಿನ ಅಂಶಗಳನ್ನು ಪರಿಗಣಿಸಿ ಸದರಿ ಆಕ್ಷೇಪಣೆಯನ್ನು ಕೈ ಬಿಡುವಂತೆ ಕೋರಲಾಗಿದೆ.

**6.10 ವಿಶ್ವವಿದ್ಯಾನಿಲಯದನಿಧಿಯಹೂಡಿಕೆಯಲ್ಲಿ ನಿಯಮ ಪಾಲನೆ ಮಾಡದಿರುವುದು :-**

2018-19ನೇ ಸಾಲಿನಲ್ಲಿ ವಿಶ್ವವಿದ್ಯಾನಿಲಯದ ವಿವಿಧ ಯೋಜನೆಗಳ ಬ್ಯಾಂಕ್ ಖಾತೆಗಳಲ್ಲಿ ಲಭ್ಯವಿದ್ದ ಹೆಚ್ಚುವರಿ ಹಣವನ್ನು ನಿಶ್ಚಿತ ಠೇವಣಿಗಳಲ್ಲಿ ಹೂಡಿಕೆಮಾಡಿದ್ದು, ಹೂಡಿಕೆ ವಿವರಗಳಘೋಷ್ವಾರೆ ಈ ಕೆಳಗಿನಂತಿರುತ್ತದೆ.

| ಕ್ರ.ಸಂ | ವಿವರ | ಮೊತ್ತ (ರೂ) |
|---|---|---|
| 1 | ಆರಂಭ ಶಿಲ್ಕು | 290,15,25,816 |
| 2 | ಹೂಡಿಕೆ | 220,00,31,899 |
| 3 | ಒಟ್ಟು | 510,15,57,715 |
| 4 | ಪಕ್ವವಾಗಿ ಹಿಂಪಡೆದದ್ದು | 130,47,21,360 |
| 5 | ಅಂತಿಮ ಶಿಲ್ಕು | 379,68,36,355 |

ದಿನಾಂಕ:31.03.2019ರ ಅಂತ್ಯಕ್ಕೆ ಮೈಸೂರು ವಿಶ್ವವಿದ್ಯಾನಿಲಯವು ಒಟ್ಟು ರೂ.379,68,36,355/- ಗಳಷ್ಟು ಮೊತ್ತವನ್ನು ನಿಶ್ಚಿತ ಠೇವಣಿಗಳಲ್ಲಿ ಹೂಡಿಕೆ ಮಾಡಿದ್ದು, ವಿವರಗಳನ್ನು **ಅನುಬಂಧ-11ರಲ್ಲಿ** ನೀಡಲಾಗಿದೆ. ಇದೇ ಅವಧಿಯಲ್ಲಿ ವಿಶ್ವವಿದ್ಯಾನಿಲಯದ ಸ್ವಾಯತ್ತ ಕಾಲೇಜಾಗಿರುವ ಯುವರಾಜ ಕಾಲೇಜಿನ ಸಾಮಾನ್ಯ ನಿಧಿ, ಪರೀಕ್ಷಾ ನಿಧಿ ಹಾಗೂ ಇತರೆ ಖಾತೆಗಳಿಂದ ಹೂಡಿಕೆ ಮಾಡಿರುವ ಠೇವಣಿ ಮೊತ್ತವು ರೂ.1,09,32,452/- ಗಳಾಗಿರುತ್ತದೆ. ವಿವರಗಳನ್ನು **ಅನುಬಂಧ-12ರಲ್ಲಿ** ನೀಡಲಾಗಿದೆ.

2018-19ನೇ ಸಾಲಿನಲ್ಲಿ ಪ್ರಾಯೋಜಿತ ಯೋಜನಾ ಕಾರ್ಯಕ್ರಮಗಳು (ಎಸ್.ಪಿ.ಎಸ್), ದತ್ತಿ ನಿಧಿ, ಯೋಜನಾ ವಿದ್ಯಾ ಸಂಸ್ಥೆ(School of Planning), ಪ್ರಸಾರಾಂಗ ಮತ್ತು ಪಿಂಚಣಿ ನಿಧಿ ಖಾತೆಗಳಿಂದ ಒಂದೇ ದಿನ ಬಿಡಿಬಿಡಿಯಾಗಿ ಹಣ ಹೂಡಿಕೆ ಮಾಡಲಾಗಿದ್ದು, ವಿವರಗಳನ್ನು **ಅನುಬಂಧ-13ರಲ್ಲಿ** ನೀಡಲಾಗಿದೆ. ಇದು ಹಣ ಹೂಡಿಕೆಗೆ ಸಂಬಂಧಿಸಿದಂತೆ ಹೊರಡಿಸಲಾಗಿರುವ ಸರ್ಕಾರದ ಸುತ್ತೋಲೆ ಸಂಖ್ಯೆ:FD 38 TAR 2018,ದಿನಾಂಕ:27.08.2018ರ ಮಾರ್ಗಸೂಚಿಗಳ ಉಲ್ಲಂಘನೆಯಾಗಿರುತ್ತದೆ. ಈ ಬಗ್ಗೆ ಸ್ಪಷ್ಟೀಕರಣವನ್ನು ಲೆಕ್ಕಪರಿಶೋಧನೆಗೆ ನೀಡುವಂತೆ ವಿಚಾರಣಾ ಪತ್ರ ಸಂಖ್ಯೆ:193/2020-21,ದಿನಾಂಕ:11.06.2020ನ್ನು ನೀಡಲಾಗಿದ್ದು, ವಿಶ್ವವಿದ್ಯಾನಿಲಯವು ಈ ಬಗ್ಗೆ ಯಾವುದೇ ವಿವರಣೆಯನ್ನು ನೀಡಿರುವುದಿಲ್ಲ.

ಮಹಾರಾಜ ಕಾಲೇಜು ಹಾಗೂ ಸಂಜೆ ಕಾಲೇಜಿನಲ್ಲಿ 2018-19ನೇ ಸಾಲಿನಲ್ಲಿ ವಿವಿಧ ಖಾತೆಗಳಲ್ಲಿ/ದತ್ತಿಗಳಲ್ಲಿ ಹಣವನ್ನು ಹೂಡಿಕೆ ಮಾಡಲಾಗಿದ್ದು ವಿವರಗಳನ್ನು **ಅನುಬಂಧ-14 ಹಾಗೂ 14(ಎ)ರಲ್ಲಿ** ನೀಡಲಾಗಿದೆ. ಹೂಡಿಕೆ ಮಾಡಲಾಗಿರುವ ಹೂಡಿಕೆಯ ಬಡ್ಡಿದರಗಳು ವ್ಯತ್ಯಾಸ ಇರುವುದನ್ನು ಗಮನಿಸಲಾಗಿದ್ದು, ಹೂಡಿಕೆ ಮಾಡುವಾಗ ವಿವಿಧ ರಾಷ್ಟ್ರೀಕೃತ ಬ್ಯಾಂಕ್‌ಗಳಿಂದ ಬಡ್ಡಿದರಗಳ ಮಾಹಿತಿಯನ್ನು ಪಡೆದುಯಾವ ಬ್ಯಾಂಕ್ ಅತಿ ಹೆಚ್ಚಿನ ದರದ ಬಡ್ಡಿಯನ್ನು ನೀಡುತ್ತದೆಯೋ ಅಂತಹ ಬ್ಯಾಂಕುಗಳಲ್ಲಿ ಹೂಡಿಕೆ ಮಾಡುವುದರ ಬಗ್ಗೆ ಕ್ರಮ ಕೈಗೊಳ್ಳಲು ಸೂಚಿಸಿದೆ.

ಕಂಡಿಕೆ 6.10 ರಲ್ಲಿ ಪ್ರಸ್ತಾಪಿಸಲಾಗಿರುವ ಮೊತ್ತ ರೂ.379,68,36,355/-ಗಳನ್ನು 2018-19ನೇ ಸಾಲಿನಲ್ಲಿ ವಿಶ್ವವಿದ್ಯಾನಿಲಯದ ಆವರಣದಲ್ಲಿರುವ ಭಾರತೀಯ ಸ್ಟೇಟ್ ಬ್ಯಾಂಕಿನಲ್ಲಿ ನಿಶ್ಚಿತ ಠೇವಣಿ ರೂಪದಲ್ಲಿ ತೊಡಗಿಸಿದ್ದು ಸದರಿ ಮೊತ್ತವು ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿ ಬರುವ ಯುವರಾಜ ಕಾಲೇಜು, ಮಹಾರಾಜ ಕಾಲೇಜು, ದತ್ತಿನಿಧಿ ಯೋಜನಾ ವಿದ್ಯಾಸಂಸ್ಥೆ, ಪ್ರಸಾರಾಂಗ ಹಾಗೂ ಪಿಂಚಣಿ ನಿಧಿ, ಖಾತೆಗಳಲ್ಲಿ 2018-19ನೇ ಸಾಲಿನಲ್ಲಿ ಉಳಿಕೆಯಾದ ಮೊತ್ತವನ್ನು ರಾಷ್ಟ್ರೀಕೃತ ಬ್ಯಾಂಕ್ ಆದ ಭಾರತೀಯ ಸ್ಟೇಟ್ ಬ್ಯಾಂಕ್ ಕೂಡ ಇತರೆ ಬ್ಯಾಂಕುಗಳ ಮಾದರಿಯಲ್ಲಿಯೆ ಬಡ್ಡಿಯನ್ನು ನೀಡುತ್ತಿದ್ದು, ಮೂಲ ಮೊತ್ತಕ್ಕೆ ಯಾವುದೇ ರೀತಿಯ ತೊಂದರೆಯಾಗದಂತೆ ಭದ್ರತೆಯನ್ನು ನೀಡುತ್ತದೆಂಬ ಭರವಸೆಯಲ್ಲಿ ಸದರಿ ಬ್ಯಾಂಕಿನಲ್ಲಿ ಹಣ ಹೂಡಿಕೆ ಮಾಡಲಾಗಿರುತ್ತದೆ.

ಕಂಡಿಕೆಯಲ್ಲಿ ಪ್ರಸ್ತಾಪಿಸಲಾಗಿರುವ ಸರ್ಕಾರದ ಸುತ್ತೋಲೆಯ ಪ್ರಕಾರವೆ ಭಾರತೀಯ ಸ್ಟೇಟ್ ಬ್ಯಾಂಕಿನಲ್ಲಿ ವ್ಯವಹರಿಸಲಾಗುತ್ತಿದೆ. ಆದಾಗ್ಯೂ ಲೆಕ್ಕಪರಿಶೋಧನೆಯಲ್ಲಿನ ನಿರ್ದೇಶನದಂತೆ ಹಾಗೂ ಸರ್ಕಾರದ ಸುತ್ತೋಲೆಯ ಆದೇಶದಂತೆ ಮುಂದಿನ ದಿನಗಳಲ್ಲಿ ಕ್ರಮವಹಿಸಲಾಗುವುದೆಂಬ ಅಂಶವನ್ನು ಲೆಕ್ಕಪರಿಶೋಧನಾ ಗಮನಕ್ಕೆ ತರಲಾಗಿದೆ.

ಈ ನಿಟ್ಟಿನಲ್ಲಿ ಸದರಿ ಆಕ್ಷೇಪಿತ ಕಂಡಿಕೆಯನ್ನು ಕೈ ಬಿಡುವಂತೆ ನಿವೇದಿಸಲಾಗಿದೆ.

**6.11 ವಿಶ್ವವಿದ್ಯಾನಿಲಯದ ಉದ್ಯೋಗಿಗಳ ಸಹಕಾರ ಸಂಘದಲ್ಲಿ ಹೂಡಿಕೆ ಮಾಡಿರುವುದು :**

2018–19ನೇ ಸಾಲಿನಲ್ಲಿ ಯುವರಾಜ ಕಾಲೇಜಿನ ರೂ.3,28,898/–ಗಳಷ್ಟು ಹಣವನ್ನು ಮೈಸೂರು ವಿಶ್ವವಿದ್ಯಾನಿಲಯದ ಉದ್ಯೋಗಿಗಳ ಸಹಕಾರ ಸಂಘದಲ್ಲಿ ನಿಶ್ಚಿತ ಅವದಿ ,ಠೇವಣಿಯಲ್ಲಿ ಹೂಡಿಕೆ ಮಾಡಲಾಗಿದೆ. ವಿವರಗಳು ಈ ಕೆಳಕಂಡಂತಿದೆ.

| ಕ್ರ. ಸಂ | ಖಾತೆ ಸಂಖ್ಯೆ | ನಿಶ್ಚಿತ ಠೇವಣಿ ಖಾತೆ ಸಂಖ್ಯೆ | ದಿನಾಂಕ 31.03.2019ರ ಅಂತ್ಯಕ್ಕೆ ಹೂಡಿಕೆ ಮಾಡಿರುವ ನಿಶ್ಚಿತ ಠೇವಣಿ | ಠೇವಣಿ ಅವಧಿ | ಬಡ್ಡಿ ದರ |
|---|---|---|---|---|---|
| 1 | ಎಸ್‌ಎಎಫ್105 | 5386 | 1,00,000 | 3 ವರ್ಷ | 8.00 |
| 2 | ಎಸ್‌ಎಎಫ್105 | 5145 | 15,000 | 3 ವರ್ಷ | 10.00 |
| 3 | ಎಸ್‌ಎಎಫ್105 | 5306 | 12,000 | 1 ವರ್ಷ | 9.00 |
| 4 | ಎಸ್‌ಎಎಫ್105 | 5142 | 25,000 | 3 ವರ್ಷ | 10.00 |
| 5 | ಎಸ್‌ಎಎಫ್105 | 5517 | 1,76,898 | 1 ವರ್ಷ | 8.00 |
| ಒಟ್ಟು ಮೊತ್ತ | | | **3,28,898** | | |

ಕರ್ನಾಟಕ ಸರಕಾರದ ಹಣಕಾಸು ಇಲಾಖೆ ಹಾಗೂ ಸಾರ್ವಜನಿಕ ಉದ್ಯಮಗಳ ಇಲಾಖೆಯು ಹೂಡಿಕೆಗೆ ಸಂಬಂಧಿಸಿದಂತೆ ಹೊರಡಿಸಿರುವ ಸುತ್ತೋಲೆ ಸಂ: ಎಫ್‌ಡಿ38 ಟಿಎಆರ್ 2018 ದಿನಾಂಕ:27.08.2018, ತಿದ್ದುಪಡಿ ಆದೇಶ ಸಂ:ಎಫ್‌ಡಿ/01/ಟಿಎಆರ್/2019, ದಿನಾಂಕ:23.08.2019, ಸುತ್ತೋಲೆ ಸಂ:ಡಿಪಿಇ/12/ಎಂಎಸ್‌ಐ/2018 ದಿನಾಂಕ:19.01.2018 ಹಾಗೂ ಸುತ್ತೋಲೆ ಸಂ:ಎಫ್‌ಡಿ/8/ಟಿಎಆರ್/2020ರನ್ವಯ, ಠೇವಣಿಗಳನ್ನು ರಾಷ್ಟ್ರೀಕೃತ, ಅನುಸೂಚಿತ ವಾಣಿಜ್ಯ ಬ್ಯಾಂಕು ಹಾಗೂ ಗ್ರಾಮೀಣ ಬ್ಯಾಂಕುಗಳಲ್ಲಿ ಮಾತ್ರ ಹೂಡಿಕೆ ಮಾಡಬೇಕಾಗಿದ್ದು, ಕಾಲೇಜಿನಿಂದ ಮೈಸೂರು ವಿಶ್ವವಿದ್ಯಾನಿಲಯದ ಉದ್ಯೋಗಿಗಳ ಸಹಕಾರ ಸಂಘದಲ್ಲಿ ಹೂಡಿಕೆ ಮಾಡಿರುವುದಕ್ಕೆ ವಿವರಣೆಯನ್ನು ನೀಡುವಂತೆ ಲೆಕ್ಕಪರಿಶೋಧನಾ ವಿಚಾರಣೆ ಪತ್ರ: 36/2020–21, ದಿನಾಂಕ:14.09.2020ನ್ನು ನೀಡಲಾಗಿದ್ದರೂ, ಲೆಕ್ಕ ಪರಿಶೋಧನೆಯ ಕೊನೆಯ ದಿನದವರೆಗೂ ಯಾವುದೇ ವಿವರಣೆ/ಸ್ಪಷ್ಟೀಕರಣವನ್ನು ನೀಡದಿರುವುದರಿಂದ ಹೂಡಿಕೆ ಮಾಡಲಾದ ಒಟ್ಟು **ಮೊತ್ತ ರೂ.3,28,898/– ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.**

| ಕ್ರ. ಸಂ | ಖಾತೆ ಸಂಖ್ಯೆ | ನಿಶ್ಚಿತ ಠೇವಣಿ ಖಾತೆ ಸಂಖ್ಯೆ | ದಿನಾಂಕ 31.03.2019ರ ಅಂತ್ಯಕ್ಕೆ ಹೂಡಿಕೆ ಮಾಡಿರುವ ನಿಶ್ಚಿತ ಠೇವಣಿ | ಠೇವಣಿ ಅವಧಿ | ಬಡ್ಡಿ ದರ |
|---|---|---|---|---|---|
| 1 | ಎಸ್‌ಎಎಫ್105 | 5386 | 1,00,000 | 3 ವರ್ಷ | 8.00 |
| 2 | ಎಸ್‌ಎಎಫ್105 | 5145 | 15,000 | 3 ವರ್ಷ | 10.00 |
| 3 | ಎಸ್‌ಎಎಫ್105 | 5306 | 12,000 | 1 ವರ್ಷ | 9.00 |
| 4 | ಎಸ್‌ಎಎಫ್105 | 5142 | 25,000 | 3 ವರ್ಷ | 10.00 |
| 5 | ಎಸ್‌ಎಎಫ್105 | 5517 | 1,76,898 | 1 ವರ್ಷ | 8.00 |
| ಒಟ್ಟು ಮೊತ್ತ | | | **3,28,898** | | |

ಕಂಡಿಕೆ 6.11 ರಲ್ಲಿ ಗಮನಿಸಿ ಪ್ರಸ್ತಾಪಿಸಿದಂತೆ ಮೇಲಿನ ವಿವರಗಳಲ್ಲಿ ರೂ.328898/–ಗಳನ್ನು ವಿಶ್ವವಿದ್ಯಾನಿಲಯದ ನೌಕರರ ಸಹಕಾರ ಸಂಘದಲ್ಲಿ ಈ ಮೊದಲು ಹೂಡಿಕೆ ಮಾಡಲಾಗಿತ್ತು. ಈ ಬಗ್ಗೆ ಲೆಕ್ಕಪರಿಶೋಧನೆಯಲ್ಲಿ ಆಕ್ಷೇಪಿಸಲಾಗಿದ್ದು, ಸದರಿ ನಿಶ್ಚಿತ ಠೇವಣಿಗಳ ಮೊತ್ತವನ್ನು ವಿಶ್ವವಿದ್ಯಾನಿಲಯದ ಉದ್ಯೋಗಿಗಳ ಸಹಕಾರ ಸಂಘದಿಂದ ದಿನಾಂಕ:06.08.2021ರಲ್ಲಿ ಹಿಂಪಡೆದು ಸದರಿ ಮೊತ್ತವನ್ನು ಈ ಕೆಳಕಂಡ ವಿವರಗಳಲ್ಲಿ ವಿಶ್ವವಿದ್ಯಾನಿಲಯದ ಆವರಣದಲ್ಲಿರುವ ಎಸ್.ಬಿ.ಐ ಶಾಖೆಯಲ್ಲಿ ನಿಶ್ಚಿತ ಠೇವಣಿಯಾಗಿ ತೊಡಗಿಸಲಾಗಿರುತ್ತದೆ.

| ಕ್ರ. ಸಂ | ಖಾತೆ ಸಂಖ್ಯೆ | ದಿನಾಂಕ | ನಿಶ್ಚಿತ ಠೇವಣಿ ಮೊತ್ತ | ನಿಶ್ಚಿತ ಠೇವಣಿ ಅವಧಿ | ಪರಿಪಕ್ವದ ದಿನಾಂಕ | ಬಡ್ಡಿ ದರ |
|---|---|---|---|---|---|---|
| 01 | 40342682418 | 05.08.2021 | 202844 | 1 ವರ್ಷ | 05.08.2022 | 5% |
| 02 | 40342682699 | 05.08.2021 | 111638 | 1 ವರ್ಷ | 05.08.2022 | 5% |
| 03 | 40342682871 | 05.08.2021 | 28500 | 1 ವರ್ಷ | 05.08.2022 | 5% |
| 04 | 40342683319 | 05.08.2021 | 17600 | 1 ವರ್ಷ | 05.08.2022 | 5% |
| 05 | 40342683466 | 05.08.2021 | 14000 | 1 ವರ್ಷ | 05.08.2022 | 5% |
| | | ಒಟ್ಟು | **374582** | | | |

ಮೇಲ್ಕಾಣಿಸಿದ ವಿವರಗಳಲ್ಲಿ ವಿಶ್ವವಿದ್ಯಾನಿಲಯದ ಉದ್ಯೋಗಿಗಳ ಸಹಕಾರ ಸಂಘದಲ್ಲಿ ತೊಡಗಿಸಿದ ವಿವರ ಹಾಗೂ ನಂತರದಲ್ಲಿ ಹಿಂಪಡೆದು ಎಸ್.ಬಿ.ಐ ಬ್ಯಾಂಕ್‌ನಲ್ಲಿ ತೊಡಗಿಸಿರುವ ನಿಶ್ಚಿತ ಠೇವಣಿಗಳ ವಿವರಗಳನ್ನು ಒದಗಿಸಲಾಗಿದೆ ಹಾಗೂ ಇದಕ್ಕೆ ಪೂರಕವಾದ ದಾಖಲಾತಿಗಳನ್ನು ಮಾಹಿತಿಗಾಗಿ ಇದರೊಂದಿಗೆ ಲಗತ್ತಿಸಲಾಗಿದೆ.

ಈ ನಿಟ್ಟಿನಲ್ಲಿ ಸದರಿ ಕಂಡಿಕೆ 6.11 ರ ಆಕ್ಷೇಪಣೆಯನ್ನು ತೀರುವಳಿಗೊಳಿಸುವಂತೆ ಈ ಮೂಲಕ ಕೋರಲಾಗಿದೆ.

**6.12 ಯುವರಾಜ ಕಾಲೇಜಿನಲ್ಲಿ ನಿಶ್ಚಿತ ಅವಧಿ ಠೇವಣಿ(ಎಫ್‌ಡಿಆರ್)ಗಳಲ್ಲಿ ಹಣ ಹೂಡಿಕೆ ಮತ್ತು ನಿರ್ವಹಣೆಯಲ್ಲಿ ನಿಯಮಗಳನ್ನು ಪಾಲನೆ ಮಾಡದಿರುವುದು :**

2018–19 ನೇ ಸಾಲಿನಲ್ಲಿ ಯುವರಾಜ ಕಾಲೇಜಿನ ಪ್ರಮುಖ ಖಾತೆಗಳಾದ ಸಾಮಾನ್ಯ ನಿಧಿ ಖಾತೆ, ಪರೀಕ್ಷಾ ನಿಧಿ ಹಾಗೂ ಇತರೆ ಖಾತೆಗಳಿಂದ ವಿವಿಧ ಬ್ಯಾಂಕ್‌ಗಳಲ್ಲಿ ಇಪ್ಪತ್ತೆರಡು (22) ನಿಶ್ಚಿತ ಅವಧಿ ಠೇವಣಿಗಳಲ್ಲಿ ಹಣವನ್ನು ಹೂಡಿಕೆ ಮಾಡಲಾಗಿದೆ. ಈ ಹೂಡಿಕೆಯಲ್ಲಿ ಕೆಳಕಂಡ ನ್ಯೂನತೆಗಳನ್ನು ಗಮನಿಸಲಾಗಿದೆ.

1. ನಿಶ್ಚಿತ ಠೇವಣಿಗೆ ಸಂಬಂಧಿಸಿದಂತೆ ರಾಷ್ಟ್ರೀಕೃತ, ಅನುಸೂಚಿತ ಬ್ಯಾಂಕುಗಳಿಂದ ಸ್ಪರ್ಧಾತ್ಮಕ ದರಪಟ್ಟಿಗಳನ್ನು ಪಡೆದುಕೊಂಡು ಹೂಡಿಕೆ ಪ್ರಸ್ತಾವನೆಗಳನ್ನು ಹೂಡಿಕೆ ಸಮಿತಿಯ ಮುಂದೆ ಮಂಡಿಸಿ, ನಂತರ ಸಭಾ ನಡವಳಿಗಳೊಡನೆ ಸಕ್ಷಮ ಪ್ರಾಧಿಕಾರದ ಅನುಮೋದನೆ ಪಡೆಯಬೇಕಾಗಿದ್ದು, ಈ ಕ್ರಮವನ್ನು ಅನುಸರಿಸಿರುವುದಿಲ್ಲ.
2. ನಿಶ್ಚಿತ ಠೇವಣಿಗಳ ಸಂಬಂಧ ಕಾವಲು ವಹಿ/ಠೇವಣಿ ವಹಿ (Watch Register/FD Register) ಯನ್ನು ನಿರ್ವಹಿಸಿರುವುದಿಲ್ಲ.
3. ನಿಶ್ಚಿತ ಠೇವಣಿಯ ಅವಧಿ ಒಂದು ವರ್ಷವನ್ನು ಮೀರುವಂತಿಲ್ಲ. ಠೇವಣಿಗಳು ಪಕ್ವವಾದ ನಂತರ ಅದನ್ನೇ ನವೀಕರಿಸದೆಯೇ ಪಕ್ವವಾದ ಮೊತ್ತವನ್ನು (ಠೇವಣಿ ಮೊತ್ತ ಮತ್ತು ಬಡ್ಡಿ) ಪಡೆದುಕೊಂಡು, ಹೊಸದಾಗಿ ನಿಶ್ಚಿತ ಠೇವಣಿಯಲ್ಲಿ ಹೂಡಿಕೆ ಮಾಡಬೇಕು. ಆದರೆ ಇಲ್ಲಿ ಕೆಲವು ಠೇವಣಿಗಳನ್ನು 10 ವರ್ಷ ಹಾಗೂ 3 ವರ್ಷಗಳ ಅವಧಿಗಳಿಗೆ ಹೂಡಿಕೆ ಮಾಡಲಾಗಿದ್ದು, ಇದು ಸರ್ಕಾರದ ಮಾರ್ಗಸೂಚಿಗಳ ಉಲ್ಲಂಘನೆಯಾಗಿರುತ್ತದೆ.
4. ನಿಶ್ಚಿತ ಠೇವಣಿಗಳ ಪಕ್ವತೆಯ ದಿನಾಂಕಗಳನುಸಾರ ಪಕ್ವತೆಯ ಮೊತ್ತವನ್ನು ಹಿಂದಿರುಗಿಸಲು ಬ್ಯಾಂಕಿನೊಡನೆ ಕಾಲಿಕವಾಗಿ ಪತ್ರ ವ್ಯವಹಾರ ನಡೆಸಿರುವುದು ಕಂಡು ಬಂದಿರುವುದಿಲ್ಲ ಹಾಗೂ ಹೂಡಿಕೆ ಮಾಡಿರುವ ಬ್ಯಾಂಕುಗಳಿಂದ ತ್ರೈಮಾಸಿಕ/ಅರ್ಧವಾಷಿಕ/ವಾರ್ಷಿಕವಾಗಿ ಶಿಲ್ಕು ದೃಢೀಕರಣ ಪತ್ರಗಳನ್ನು (Confirmation of Balance) ಪಡೆದಿರುವುದಿಲ್ಲ.

ಮೇಲಿನ ನ್ಯೂನತೆಗಳಿಂದಾಗಿ ಹೂಡಿಕೆಯಲ್ಲಿ ಏನಾದರೂ ವಂಚನೆಗಳು ಸಂಭವಿಸಿದಲ್ಲಿ ಅವುಗಳು ಬೆಳಕಿಗೆ ಬರದೆಯೇ ಮುಚ್ಚಿಹೋಗಿ ಕಾಲೇಜಿಗೆ ಆರ್ಥಿಕ ನಷ್ಟವಾಗುವ ಸಾಧ್ಯತೆ ಇರುತ್ತದೆ. ಈ ಬಗ್ಗೆ ವಿವರಣೆ ನೀಡುವಂತೆ ಕೋರಿ ವಿಚಾರಣೆ ಪತ್ರ ಸಂ:02/18.08.2020,ಸಂ:18/07.09.2020 ಹಾಗೂ ಸಂ:35/14.09.2020ಗಳನ್ನು ನೀಡಲಾಗಿದ್ದರೂ ಕಾಲೇಜಿನಿಂದ ಯಾವುದೇ ವಿವರಣೆ ನೀಡಿರುವುದಿಲ್ಲ. ಹೂಡಿಕೆಗೆ ಸಂಬಂಧಿಸಿದಂತೆ ಕರ್ನಾಟಕ ಸರಕಾರದ ಹಣಕಾಸು ಇಲಾಖೆ ಹಾಗೂ ಸಾರ್ವಜನಿಕ ಉದ್ದಿಮೆಗಳ ಇಲಾಖೆಗಳ ಸುತ್ತೋಲೆಗಳ ಮಾರ್ಗಸೂಚಿಗಳನ್ವಯ ಕಟ್ಟುನಿಟ್ಟಿನ ಕ್ರಮ ವಹಿಸಲು ಸೂಚಿಸಿದೆ.

1. ಈ ಬಗೆಗಿನ ಸೂಚನೆ ಸಲಹೆಗಳನುಸಾರ ಕಾರ್ಯ ನಿರ್ವಹಿಸಲು ಕ್ರಮವಹಿಸಲಾಗುವುದು.
2. ನಿಶ್ಚಿತ ಠೇವಣಿಗಳ ವಿವರಗಳ ಬಗ್ಗೆ, ಮಾಹಿತಿ ಪಡೆಯಲು ಕಾವಲು ವಹಿ/ಠೇವಣಿ ವಹಿ ನಿರ್ವಹಿಸಿ ಪ್ರಸ್ತುತ ಕಾರ್ಯ ನಿರ್ವಹಿಸಲಾಗುತ್ತಿದೆ.
3. ಪ್ರಸ್ತುತ ನಿಶ್ಚಿತ ಠೇವಣಿಯನ್ನು ರಾಷ್ಟ್ರೀಕೃತ ಬ್ಯಾಂಕ್‌ಗಳ ಹೂಡಿಕೆ ಮಾಡಲಾಗಿದ್ದು ಪ್ರಸ್ತುತ ನಿಶ್ಚಿತ ಠೇವಣಿ ಮೊತ್ತದ ಅವಧಿಯು ಪೂರ್ಣಗೊಂಡ ನಂತರ ಕಂಡಿಕೆ 6.12 (3) ರಲ್ಲಿ ಸೂಚಿಸಿರುವ ಮಾರ್ಗದರ್ಶನದಂತೆ ನಿಶ್ಚಿತ ಠೇವಣಿ ತೊಡಗಿಸುವ ನಿಯಮಗಳನ್ನು ಪಾಲಿಸಲಾಗುವುದು.
4. ನಿಶ್ಚಿತ ಠೇವಣಿಗಳ ಹೂಡಿಕೆ ದಿನಾಂಕ ಮತ್ತು ಪರಿಪಕ್ವತೆಯ ಅವಧಿಯನ್ನು ಕಾಲಕಾಲಕ್ಕೆ ಸಂಬಂಧಪಟ್ಟ ಬ್ಯಾಂಕಿನೊಂದಿಗೆ ಪತ್ರ ವ್ಯವಹಾರ ನಡೆಸುತ್ತಿದ್ದು, ಪರಿಪಕ್ವತೆಯ ದಿನಾಂಕಗಳನ್ನು ಗಮನಿಸಿ ಅದರಂತೆ ಕಾರ್ಯ ನಿರ್ವಹಿಸುವ ಕಾರ್ಯವನ್ನು ಅನುಸರಿಸಲಾಗುತ್ತಿದೆ, ಹಾಗೂ ಕಂಡಿಕೆಯಲ್ಲಿ ಸೂಚಿಸಿರುವಂತೆ ತ್ರೈಮಾಸಿಕ/ಅರ್ಧವಾರ್ಷಿಕ/ವಾರ್ಷಿಕಶಿಲ್ಕು ದೃಢೀಕರಣ ಪತ್ರಗಳನ್ನು ಪಡೆಯಲಾಗುತ್ತಿದೆ.

ಸದರಿ ನಿಶ್ಚಿತ ಠೇವಣಿಗಳ ಹೂಡಿಕೆಯಲ್ಲಿ ಯಾವುದೇ ವಂಚನೆಗಳು ಸಂಭವಿಸದಂತೆ ಎಚ್ಚರಿಕೆವಹಿಸಲಾಗುತ್ತಿದ್ದು, ಈ ರೀತಿಯ ಪ್ರಕರಣಗಳು ಯಾವುದೂ ಜರುಗದಂತೆ ಎಚ್ಚರಿಕೆವಹಿಸಲಾಗುವುದು ಎಂಬ ಅಂಶವನ್ನು ಲೆಕ್ಕ ಪರಿಶೋಧನೆಯ ಗಮನಕ್ಕೆ ತರಲಾಗಿದೆ.

ಈ ಸಂಬಂಧ ಸದರಿ ಕಂಡಿಕೆಯ ಆಕ್ಷೇಪಣೆಯನ್ನು ಕೈ ಬಿಡುವಂತೆ ನಿವೇದಿಸಲಾಗಿದೆ.

| | |
|---|---|
| **6.13 ಪಿಂಚಣಿ ಖಾತೆಯಿಂದ ನಿಶ್ಚಿತ ಠೇವಣಿಗಳಲ್ಲಿ ಹೂಡಿಕೆ ಮಾಡಿರುವ ದಾಖಲಾತಿಗಳನ್ನು ಹಾಜರುಪಡಿಸದಿರುವ ಬಗ್ಗೆ :**<br><br>ವಿಶ್ವವಿದ್ಯಾನಿಲಯದ ಪಿಂಚಣಿ ಖಾತೆ (ಬ್ಯಾಂಕ್ ಖಾತೆ ಸಂಖ್ಯೆ:54007591379) ಯಿಂದ 2018–19ನೇ ಸಾಲಿನಲ್ಲಿ ರೂ.44,99,87,109/–ಗಳನ್ನು ಹೂಡಿಕೆ ಮಾಡಲಾಗಿರುತ್ತದೆ ಹಾಗೂ ರೂ.24,88,34,743/–ಗಳನ್ನು ಪಕ್ವತೆಯಾಗಿ ಹಿಂಪಡೆಯಲಾಗಿರುತ್ತದೆ. ಹೂಡಿಕೆ ಮಾಡಿರುವ ಹಾಗೂ ಪಕ್ವತೆಯಾಗಿ ಹಿಂಪಡೆದಿರುವ ನಿಶ್ಚಿತ ಠೇವಣಿಗಳಿಗೆ ಸಂಬಂಧಿಸಿದಂತೆ ಲೆಕ್ಕಪತ್ರ ದಾಖಲೆಗಳನ್ನು ಹಾಜರುಪಡಿಸುವಂತೆ ವಿಚಾರಣಾ ಪತ್ರ ಸಂಖ್ಯೆ:154,ದಿ:09.06.2020ನ್ನು ನೀಡಿದ್ದರೂ ಸಹ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ. ಹೀಗಾಗಿ ನಿಶ್ಚಿತ ಠೇವಣಿಗಳ ಹೂಡಿಕೆ ಹಾಗೂ ಹಿಂಪಡೆತಗಳ ವಹಿವಾಟಿನ ನೈಜತೆಯನ್ನು ಲೆಕ್ಕಪರಿಶೋಧನೆಯಿಂದ ದೃಢಪಡಿಸಿಕೊಳ್ಳಲು ಸಾಧ್ಯವಾಗಿರುವುದಿಲ್ಲ. | 2018–19ನೇ ಸಾಲಿನಲ್ಲಿ ರೂ.44,98,87,109/–ಗಳನ್ನು ಒಂದು ವರ್ಷದ ಅವಧಿಗೆ ನಿಶ್ಚಿತ ಠೇವಣಿ ರೂಪದಲ್ಲಿ ಭಾರತೀಯ ಸ್ಟೇಟ್ ಬ್ಯಾಂಕಿನಲ್ಲಿ ಹೂಡಲಾಗಿದ್ದತು, ಸದರಿ ನಿಶ್ಚಿತ ಠೇವಣಿ ಮೊತ್ತದಲ್ಲಿ ವಿಶ್ವವಿದ್ಯಾನಿಲಯದ ಅಭಿವೃದ್ಧಿ ಕಾರ್ಯಗಳಿಗೆ ಹಿಂಪಡೆದು 2018–19ನೇ ಸಾಲಿನಲ್ಲಿ ಉಪಯೋಗಿಸಲಾಗಿರುತ್ತದೆ. ಈ ಸಂಬಂಧ ಪಟ್ಟ ವ್ಯವಹಾರಗಳ ವಿವರಗಳನ್ನು ಒದಗಿಸಲಾಗಿತ್ತು ಎಂಬ ಅಂಶವನ್ನು ಲೆಕ್ಕಪರಿಶೋಧನಾ ಗಮನಕ್ಕೆ ತರಲಾಗಿದೆ.<br><br>ಈ ನಿಟ್ಟಿನಲ್ಲಿ ಸದರಿ ಕಂಡಿಕೆಯ ಆಕ್ಷೇಪಣೆಯನ್ನು ಕೈ ಬಿಡುವಂತೆ ನಿವೇದಿಸಲಾಗಿದೆ. |
| **6.14 ಬ್ಯಾಂಕಿಗೆ ಇರಸಾಲು ಮಾಡಿದ ಮೊತ್ತ ರೂ.20,13,996/–ಗಳು ಬ್ಯಾಂಕ್ ಲೆಕ್ಕದಲ್ಲಿ ಬಾರದೇ ಇರುವುದು :**<br><br>ಶುಲ್ಕಗಳು ಮತ್ತು ಸಂಭಾವನೆ ಖಾತೆಯ (F&R), ಉಳಿತಾಯ ಖಾತೆ ಸಂಖ್ಯೆ 54007591200ದ 2018–19ನೇ ಸಾಲಿನ ಲೆಕ್ಕಸಮನ್ವಯದಲ್ಲಿ ದಿನಾಂಕ:31.03.2019ರ ಅಂತ್ಯಕ್ಕೆ ರೂ.20,13,996/–ಗಳ ವ್ಯತ್ಯಾಸವಿದ್ದು, ಈ ಖಾತೆಯ ನಗದು ಪುಸ್ತಕ ಹಾಗೂ ಬ್ಯಾಂಕ್ ಲೆಕ್ಕ ತಃಖ್ತೆಯನ್ನು ಪರಿಶೋಧಿಸಲಾಗಿ ರೂ.20,13,996/–ಗಳು ಹಿಂದಿನ ಸಾಲಿನಿಂದಲೂ ಬ್ಯಾಂಕ್ ಲೆಕ್ಕಕ್ಕೆ ತೆಗೆದುಕೊಳ್ಳದಿರುವ ಇರಸಾಲು (Remittance not Accounted by Bank)ಎಂದು ನಮೂದಿಸಿದ್ದು, ಇದು 2018–19ನೇ ಸಾಲಿನ ಅಂತ್ಯಕ್ಕೂ ಮುಂದುವರೆದಿರುತ್ತದೆ.<br><br>ಹೀಗೆ ಬ್ಯಾಂಕಿಗೆ ಇರಸಾಲು ಮಾಡಿಯೂ ಬ್ಯಾಂಕ್ ಲೆಕ್ಕಗಳಲ್ಲಿ ಕೈ ಬಿಟ್ಟು ಹೋಗಿರುವ ಹಣವನ್ನು ಖಾತೆಗೆ ಜಮೆ ಮಾಡಿಸಲು ವಿಶ್ವವಿದ್ಯಾನಿಲಯವು ಕೈಗೊಂಡಿರುವ ಕ್ರಮಗಳ ಬಗ್ಗೆ ದಾಖಲೆಗಳನ್ನು ಒದಗಿಸಲು ಕೋರಿ ವಿಚಾರಣಾ ಪತ್ರ ಸಂಖ್ಯೆ:51/2019–20, ದಿನಾಂಕ:14.03.2020ನ್ನು ನೀಡಿದ್ದರೂ ಸಹ ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ಆದ್ದರಿಂದ ಈ ನಷ್ಟಕ್ಕೆ ಕಾರಣರಾದ ಅಧಿಕಾರಿ/ಸಿಬ್ಬಂದಿಯವರಿಂದ ಸದರಿ ಮೊತ್ತ**ರೂ.20,13,996/–ಗಳನ್ನು ವಸೂಲಿಸಲು ಸೂಚಿಸಿದೆ.** | ರೂ.20,13,996/–ಗಳನ್ನು 2018–19ನೇ ಸಾಲಿನಲ್ಲಿ ಉಳಿತಾಯ ಖಾತೆ ಸಂಖ್ಯೆ:54007591200 ಖಾತೆಯಲ್ಲಿ ಬ್ಯಾಂಕಿಗೆ ಜಮಾ ಮಾಡಲಾಗಿದೆ ಪ್ರಸ್ತುತ ಕಂಡಿಕೆಯಲ್ಲಿ ಕೇಳಲಾದ ಮಾಹಿತಿಯನ್ನು ಮುಂದಿನ ಲೆಕ್ಕತಪಾಸಣಾ ಅವಧಿಯಲ್ಲಿ ಒದಗಿಸಲಾಗುವುದೆಂಬ ಅಂಶವನ್ನು ಆದ್ಯ ಗಮನಕ್ಕೆ ತರಲಾಗಿದೆ. |

| | |
|---|---|
| **6.15 ತಪ್ಪು ಜಮೆ ಮತ್ತು ತಪ್ಪು ವೆಚ್ಚಗಳ ವಿವರಗಳನ್ನು ಒದಗಿಸದಿರುವುದು :**<br><br>2018–19ನೇ ಸಾಲಿನ ವಿವಿಧ ಯೋಜನೆಗಳ ನಗದು ಪುಸ್ತಕಗಳು ಹಾಗೂ ಬ್ಯಾಂಕ್ ತಃಖ್ತೆಗಳನ್ನು ಪರಿಶೀಲಿಸಿದಾಗ 11 ವಿವಿಧ ಬ್ಯಾಂಕ್ ಖಾತೆಗಳ ಲೆಕ್ಕಗಳಲ್ಲಿ ತಪ್ಪು ಜಮೆ ಹಾಗೂ ತಪ್ಪು ವೆಚ್ಚಗಳ ನಮೂದುಗಳು ಇದ್ದು, ಇವುಗಳ ಮೊತ್ತ ಕ್ರಮವಾಗಿ ರೂ.47,56,711/–ಗಳು ಹಾಗೂ ರೂ.17,77,462/– ಆಗಿರುತ್ತದೆ. ವಿವರಗಳನ್ನು **ಅನುಬಂಧ–15**ರಲ್ಲಿ ನೀಡಲಾಗಿದೆ. ಕಾಲಿಕವಾಗಿ ನಗದು ಪುಸ್ತಕಗಳ ಲೆಕ್ಕಗಳನ್ನು ಬ್ಯಾಂಕ್ ಪುಸ್ತಕಗಳ ಲೆಕ್ಕಗಳೊಡನೆ ಲೆಕ್ಕಸಮನ್ವಯಗೊಳಿಸದೇ ಇರುವುದ ರಿಂದ ಈ ಲೋಪಗಳು ಸಂಭವಿಸಿದ್ದು, ಇದರಿಂದ ವಿಶ್ವವಿದ್ಯಾನಿಲಯಕ್ಕೆ ಆರ್ಥಿಕ ಹೊರೆಯಾಗುವ ಸಂಭವವಿರುತ್ತದೆ. ಈ ಬಗ್ಗೆ ಸ್ಪಷ್ಟೀಕರಣ ಕೋರಿ ವಿಚಾರಣಾ ಪತ್ರ ಸಂಖ್ಯೆ:44/2019–20,ದಿ:12.03.2020ನ್ನು ನೀಡಿದ್ದರೂ ವಿಶ್ವವಿದ್ಯಾನಿಲಯದಿಂದ ಯಾವುದೇ ವಿವರಗಳನ್ನು ಹಾಗೂ ಪೂರಕ ಲೆಕ್ಕಪತ್ರ ದಾಖಲೆಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲ. ಆದ್ದರಿಂದ ಈ ಲೋಪಗಳಿಗೆ ಕಾರಣರಾಗಿರುವ ಅಧಿಕಾರಿ/ಸಿಬ್ಬಂದಿಗಳ ವಿರುದ್ಧ ಆಡಳಿತಾತ್ಮಕ ಕ್ರಮಜರುಗಿಸಲು ಸೂಚಿಸಿದೆ. | ಕಂಡಿಕೆ 6.15 ಅನುಬಂಧ–15 ರಲ್ಲಿ ವಿವರಿಸಲಾದ ತಪ್ಪು ಜಮೆ ಮತ್ತು ತಪ್ಪು ವೆಚ್ಚಗಳನ್ನು ಬ್ಯಾಂಕಿನ ವಿವರಗಳೊಂದಿಗೆ ನಗದು ಪುಸ್ತಕದಲ್ಲಿ ಸರಿಪಡಿಸಲಾಗಿರುತ್ತದೆ ಸದರಿ ಜಮೆ ಮತ್ತು ವೆಚ್ಚಗಳು ದೈನಂದಿನ ಕಾರ್ಯಗಳ ಕೈ ತಪ್ಪಿನಿಂದ ಸಂಭವಿಸಿದ್ದು ಪ್ರಸ್ತುತ ವ್ಯವಹಾರಗಳಲ್ಲಿ ಸರಿಪಡಿಸಲಾಗಿರುತ್ತದೆ ಇನ್ನು ಮುಂದೆ ಈ ರೀತಿಯ ನ್ಯೂನತೆಯು ಜರುಗದಂತೆ ಎಚ್ಚರವಹಿಸಲಾಗುವುದೆಂಬ ಅಂಶವನ್ನು ಗಮನಕ್ಕೆ ತರಲಾಗಿದೆ.<br><br>ಈ ನಿಟ್ಟಿನಲ್ಲಿ ಸದರಿ ಆಕ್ಷೇಪಣೆಯ ಕಂಡಿಕೆಯನ್ನು ಕೈ ಬಿಡುವಂತೆ ನಿವೇದಿಸಲಾಗಿದೆ. |
| **6.16 ನಗದು ಪುಸ್ತಕವನ್ನು ನಿರ್ವಹಿಸದಿರುವುದು/ಅಸಮರ್ಪಕ ನಿರ್ವಹಣೆ:**<br><br>ಸರ್ಕಾರದ ಹಣವನ್ನು ನಿರ್ವಹಿಸುವ ಪ್ರತಿಯೊಬ್ಬ ಸರ್ಕಾರಿ ಅಧಿಕಾರಿಯೂ ಕರ್ನಾಟಕ ಆರ್ಥಿಕ ಸಂಹಿತೆಯ ಅನುಚ್ಛೇದ–329(i)ರ ಅನುಸಾರ ನಗದು ಪುಸ್ತಕವನ್ನು ನಿರ್ವಹಿಸಬೇಕಾಗಿರುತ್ತದೆ. ನಗದು ಪುಸ್ತಕದ ನಿರ್ವಹಣೆ ಬಗ್ಗೆ ಅನುಚ್ಛೇದ–329(ii) ರಿಂದ 329(vi)ರಲ್ಲಿ ವಿವರಿಸಲಾಗಿರುತ್ತದೆ. ಆದರೆ ವಿಶ್ವವಿದ್ಯಾನಿಲಯದ ವಿವಿಧ ವಿಭಾಗಗಳು, ಸ್ನಾತಕೋತ್ತರ ಕೇಂದ್ರಗಳು ಹಾಗೂ ಸ್ವಾಯತ್ತ ಕಾಲೇಜುಗಳ ಪೈಕಿ ಕೆಲವು ಕಡೆ ನಗದು ಪುಸ್ತಕಗಳನ್ನು ನಿರ್ವಹಿಸದಿರುವುದು ಹಾಗೂ ನಗದು ಪುಸ್ತಕ ಇಟ್ಟಿದ್ದರೂ ಸಹ ಸಮರ್ಪಕವಾಗಿ ನಿರ್ವಹಿಸದಿರುವುದನ್ನು ಗಮನಿಸಲಾಗಿದೆ. ನಗದು ಪುಸ್ತಕವನ್ನು ನಿರ್ವಹಿಸದಿರುವ ವಿಭಾಗಗಳ ವಿವರಗಳನ್ನು **ಅನುಬಂಧ–16ರಲ್ಲಿ** ಹಾಗೂ ನಗದು ಪುಸ್ತಕ ಇಟ್ಟಿದ್ದರೂ ಸಮರ್ಪಕವಾಗಿ ನಿರ್ವಹಿಸದಿರುವ ವಿಭಾಗಗಳು, ಸ್ನಾತಕೋತ್ತರ ಕೇಂದ್ರಗಳು ಹಾಗೂ ಸ್ವಾಯತ್ತ ಕಾಲೇಜುಗಳ ವಿವರಗಳನ್ನು **ಅನುಬಂಧ– 17ರಲ್ಲಿ** ನೀಡಲಾಗಿದೆ. ವಿಶ್ವವಿದ್ಯಾನಿಲಯದ ಹಣಕಾಸು ವಿಭಾಗದಲ್ಲಿ ನಿರ್ವಹಿಸಲಾಗಿರುವ ನಗದು ಪುಸ್ತಕದಲ್ಲಿನ ನಮೂದುಗಳಲ್ಲಿ ಕೂಡ ಸ್ಪಷ್ಟತೆ ಇರದಿರುವುದನ್ನು ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಗಿದೆ. ಹಣಕಾಸು ನಿರ್ವಹಣೆ ದಾಖಲಾತಿಗಳಲ್ಲಿ ನಗದು ಪುಸ್ತಕವು ಅತ್ಯಂತ ಪ್ರಮುಖ ದಾಖಲಾತಿಯಾಗಿದ್ದು, ಸಮರ್ಪಕವಾಗಿ ನಗದು ಪುಸ್ತಕಗಳನ್ನು ನಿರ್ವಹಿಸಿ ಕೈಗೊಂಡ ಕ್ರಮದ ಬಗ್ಗೆ ಮುಂದಿನ ಲೆಕ್ಕಪರಿಶೋಧನೆಯಲ್ಲಿ ಮಾಹಿತಿ ನೀಡಲು ಸೂಚಿಸಿದೆ. | ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿ ಬರುವ ಹಾಗೂ ಕಂಡಿಕೆ 6.16 ರಲ್ಲಿ ಪ್ರಸ್ತಾಪಿಸಲಾಗಿರುವ ನಗದು ಪುಸ್ತಕದ ನಿರ್ವಹಣೆಯ ಬಗ್ಗೆ ಅನುಬಂಧ–16ರಲ್ಲಿ ಪ್ರಸ್ತಾಪಿಸಲಾಗಿರುವ ಕ್ರಮ ಸಂಖ್ಯೆ:01 ರಿಂದ 13 ರವರೆಗಿನ ಖಾತೆಗಳಿಗೆ ಸಂಬಂಧಿಸಿದಂತೆ ಸಂಬಂಧಪಟ್ಟ ಇಲಾಖೆಗಳಲ್ಲಿ ನಗದು ಪುಸ್ತಕಗಳನ್ನು ನಿರ್ವಹಿಸಿ ದೈನಂದಿನ ಹಾಗೂ ಮಾಸಿಕ ವ್ಯವಹಾರಗಳ ವಿವರಗಳನ್ನು ದಾಖಲಿಸಿ ನಿರ್ವಹಿಸಲಾಗಿರುತ್ತದೆ.<br><br>ಮುಂದುವರಿದು ಕಂಡಿಕೆ 6.16 ಅನುಬಂಧ–17ರಲ್ಲಿ ವಿವರಿಸಿರುವ ಕ್ರಮ ಸಂಖ್ಯೆ:10 ರಿಂದ 47 ರವರೆಗಿನ ಬ್ಯಾಂಕ್ ಖಾತೆಗಳ ಸಂಖ್ಯೆಗೆ ಈಗಾಗಲೇ ನಗದು ಪುಸ್ತಕಗಳನ್ನು ಪ್ರತ್ಯೇಕವಾಗಿ ನಿರ್ವಹಿಸಿ ದೈನಂದಿನ ವ್ಯವಹಾರಗಳ ವಿವರಗಳನ್ನು ಬರೆಯಲಾಗಿದ್ದು ಹಲವು ನಗದು ಪುಸ್ತಗಳಲ್ಲಿ ಹಲವು ನ್ಯೂನತೆಗಳಿದ್ದು ಹಾಗೂ ನಿಯಮಗಳ ಪಾಲನೆಯಾಗದಿರುವುದು ಕಂಡು ಬಂದಿದ್ದು ಸದರಿ ನ್ಯೂನತೆಗಳನ್ನು ಸರಿಪಡಿಸಿಕೊಳ್ಳಲು ಹಾಗೂ ಇತ್ತೀಚಿನ ವ್ಯವಹಾರಕ್ಕನುಗುಣವಾಗಿ ನಗದು ಪುಸ್ತಕ ಬರೆದು ನಿರ್ವಹಿಸುವಂತೆ ಸಂಬಂಧಪಟ್ಟ ಎಲ್ಲಾ ಇಲಾಖ ಮುಖ್ಯಸ್ಥರಿಗೆ ಸಲಹೆ ಸೂಚನೆಗಳನ್ನು ನೀಡಲಾಗಿದ್ದು ಅದರಂತೆ ನಗದು ಪುಸ್ತಕವನ್ನು ನಿರ್ವಹಿಸಲಾಗುತ್ತಿದೆ ಎಂಬ ಅಂಶವನ್ನು ಲೆಕ್ಕಪರಿಶೋಧನೆಯ ಆದ್ಯ ಗಮನಕ್ಕೆ ತರಲಾಗಿದೆ.<br><br>ಈ ನಿಟ್ಟಿನಲ್ಲಿ ಸದರಿ ಆಕ್ಷೇಪಿತ ಕಂಡಿಕೆಯನ್ನು ತೀರುವುಳಿಗೊಳಿಸುವಂತೆ ನಿವೇದಿಸಲಾಗಿದೆ. |

| | |
|---|---|
| **6.17 ವಿಶ್ವವಿದ್ಯಾನಿಲಯದ ಕಾನೂನು ಸಲಹೆಗಾರರು, ನಿವೃತ್ತ ನ್ಯಾಯಾಧೀಶರು ಹಾಗೂ ಸಂದರ್ಶಕ ಪ್ರಾಧ್ಯಾಪಕರಿಗೆ ಪಾವತಿಸಿದ ವೃತ್ತಿ ಶುಲ್ಕ ಮತ್ತು ಗೌರವ ಧನ ದಿಂದ ಆದಾಯ ತೆರಿಗೆ ಟಿ.ಡಿ.ಎಸ್ ಮಾಡದಿರುವುದು :**<br><br>ವಿಶ್ವವಿದ್ಯಾನಿಲಯಕ್ಕೆ ಸೇವೆ ಒದಗಿಸಿದ ಕಾನೂನು ಸಲಹೆಗಾರರು, ನಿವೃತ್ತ ನ್ಯಾಯಾಧೀಶರು ಹಾಗೂ ಸಂದರ್ಶಕ ಪ್ರಾಧ್ಯಾಪಕರುಗಳಿಗೆ ವಿಶ್ವವಿದ್ಯಾನಿಲಯವು 2018–19ನೇ ಸಾಲಿನಲ್ಲಿ ವೃತ್ತಿ ಶುಲ್ಕ ಮತ್ತು ಗೌರವಧನದ ಬಾಬ್ತು ರೂ.2,12,167/–ಗಳನ್ನು ಪಾವತಿಸಿರುತ್ತದೆ. ವಿವರಗಳನ್ನು **ಅನುಬಂಧ–18**ರಲ್ಲಿ ನೀಡಲಾಗಿದೆ. ಹೀಗೆ ಪಾವತಿಸಲಾದ ಬಿಲ್ಲುಗಳಲ್ಲಿ ಆದಾಯತೆರಿಗೆ ಕಾಯ್ದೆ–1961 ರ ಪರಿಚ್ಛೇದ–194(ಜೆ) ಅನ್ವಯ ಬಿಲ್ಲಿನ ಮೊತ್ತದ ಶೇ.10ರಷ್ಟನ್ನು ಆದಾಯ ತೆರಿಗೆಯಾಗಿ ಕಟಾಯಿಸಬೇಕಾಗಿರುತ್ತದೆ. ಆದರೆ ಆದಾಯ ತೆರಿಗೆ ಕಟಾಯಿಸದೇ ಪೂರ್ಣ ಬಿಲ್ಲಿನ ಒಟ್ಟು ಮೊತ್ತವನ್ನು ಪಾವತಿಸಲಾಗಿದೆ.<br><br>ಈ ಬಗ್ಗೆ ವಿವರಣೆ ನೀಡಲು ವಿಚಾರಣಾ ಪತ್ರ ಸಂಖ್ಯೆ:133/2020–21ನ್ನು ದಿನಾಂಕ:08.06.2020 ಹಾಗೂ 128/2020–21, ದಿನಾಂಕ:08.06.2020ಗಳನ್ನು ನೀಡಿದ್ದರೂ ಸಹ ಯಾವುದೇ ಪ್ರತಿಕ್ರಿಯೆ ನೀಡಿರುವುದಿಲ್ಲ. ಹೀಗಾಗಿ ಕಟಾಯಿಸಬೇಕಾದ ಆದಾಯ ತೆರಿಗೆಯ ಒಟ್ಟು ಮೊತ್ತ **ರೂ.21,216/–ಗಳನ್ನು (2,12,167 * 2%) ಸಂಬಂಧಿಸಿದವರಿಂದ ವಸೂಲಿಸಲು** ಸೂಚಿಸಿದೆ. | 2018–19ನೇ ಸಾಲಿನಲ್ಲಿ ವಿಶ್ವವಿದ್ಯಾನಿಲಯದ ಕೆಲವು ವಿಷಯಗಳ ಬಗ್ಗೆ ಕಾನೂನು ಸಲಹೆಗಾರರ ಹಾಗೂ ನಿವೃತ್ತ ನ್ಯಾಯಾದೀಶರ ಮತ್ತು ಸಂದರ್ಶಕರ ಸಲಹೆ, ಸೂಚನೆಗಳನ್ನು ಪಡೆಯಲಾಗಿದ್ದರು ಈ ಸಂಬಂಧ ಸದರಿಯವರಿಗೆ ಗೌರವಧನವನ್ನು ಪಾವತಿಸಲಾಗಿದ್ದು ಇವರುಗಳ ಬಿಲ್ಲುಗಳಲ್ಲಿ ಶುಲ್ಕ ಕಡಿತಗೊಳಿಸಿರುವ ಬಗ್ಗೆ ಕಂಡಿಕೆಯಲ್ಲಿ ಪ್ರಸ್ತಾಪಿಸಲಾಗಿದ್ದು, ಸದರಿ ವಿಷಯದ ಮಾಹಿತಿಯನ್ನು ಮುಂದಿನ ಲೆಕ್ಕಪರಿಶೀಲನಾ ಸಮಯದಲ್ಲಿ ಒದಗಿಸಲಾಗುವುದೆಂಬ ಅಂಶವನ್ನು ಆದ್ಯ ಗಮನಕ್ಕೆ ತರಲಾಗಿದೆ. |
| **6.18. ವಾರ್ಷಿಕ ನಿರ್ವಹಣೆ ಸೇವೆ ಒದಗಿಸಿದ ಸಂಸ್ಥೆಯ ಬಿಲ್ಲಿನಿಂದ ಆದಾಯ ತೆರಿಗೆ ಟಿ.ಡಿ.ಎಸ್ ಮಾಡದಿರುವುದು :**<br><br>2018–19ನೇ ಸಾಲಿನ ವಿಶ್ವವಿದ್ಯಾನಿಲಯವು ತನ್ನಲ್ಲಿ ಹಾಲಿ ಇರುವ ಎಕ್ಸ್–ರೇಡಿ ಪ್ರೊಮೀಟರ್‌ನ ವಾರ್ಷಿಕ ನಿರ್ವಹಣೆಯ ಬಿಲ್ಲು ಬಾಬ್ತು ರೂ.4,62,000/– (ಬಿಲ್ಲು ಮೊತ್ತ ರೂ.4,40,000+ಜಿ.ಎಸ್.ಟಿ ರೂ.22000)ಗಳನ್ನು ಮೆ. ಐ.ಆರ್ ಟೆಕ್ನಾಲಜಿ ಸರ್ವಿಸ್ ಪ್ರೈ ಲಿ., ರೇಸ್ ಕೋರ್ಸ್ ರಸ್ತೆ, ಬೆಂಗಳೂರು ರವರಿಗೆ ಪಾವತಿಸಿರುತ್ತದೆ. ಆದಾಯ ತೆರಿಗೆ ಕಾಯ್ದೆಯ ಪ್ರಕರಣ–194(ಸಿ) ಪ್ರಕಾರ ರೂ.4.62 ಲಕ್ಷಕ್ಕೆ ಈ ಮೊತ್ತಕ್ಕೆ ಶೇ.2ರಂತೆ ಮೂಲದಲ್ಲೇ ಆದಾಯ ತೆರಿಗೆ ಕಟಾಯಿಸಬೇಕಾಗಿದ್ದು, ಆದಾಯ ತೆರಿಗೆ ಕಟಾಯಿಸದೇ ಪೂರ್ತಿ ಮೊತ್ತ ಪಾವತಿಸಲಾಗಿದೆ. ಇದಕ್ಕೆ ವಿವರಣೆ ಕೋರಿ ವಿಚಾರಣೆ ಪತ್ರ ಸಂಖ್ಯೆ:172/11.06.2020 ನೀಡಲಾಗಿದ್ದರೂ ಯಾವುದೇ ವಿವರಣೆ ನೀಡದಿರುವುದ ರಿಂದ **ರೂ.8,800/–ಗಳನ್ನು ಸಂಬಂಧಿಸಿದವರಿಂದ ವಸೂಲಿಸಿ** ಸರ್ಕಾರದ ಲೆಕ್ಕಕ್ಕೆ ಜಮೆ ಮಾಡಲು ಸೂಚಿಸಿದೆ. | ಮೆ. ಐ.ಆರ್ ಟೆಕ್ನಾಲಜಿ ಸರ್ವಿಸ್ ಪ್ರೈ ಲಿ., ರೇಸ್ ಕೋರ್ಸ್ ರಸ್ತೆ, ಬೆಂಗಳೂರು, ಇವರಿಗೆ ಸಂಬಂಧಿಸಿದ ವಾರ್ಷಿಕ ನಿರ್ವಹಣೆ ಸೇವೆ ಒದಗಿಸಿದ ಬಾಬ್ತು ರೂ.4,62,000/–ಗಳ ಮೊತ್ತದ ಬಿಲ್ಲಿನಲ್ಲಿ ಆದಾಯ ತೆರಿಗೆ ಮೊತ್ತ ರೂ.8,800/–ಗಳನ್ನು ಮುಂದಿನ ಇವರ ಬಿಲ್ಲಿನಲ್ಲಿ ವಸೂಲಿಸಿ ಸರ್ಕಾರದ ಲೆಕ್ಕಕ್ಕೆ ಜಮೆ ಮಾಡಿ ಮಾಹಿತಿಯನ್ನು ಮುಂದಿನ ಲೆಕ್ಕ ಪರಿಶೋಧನೆಗೆ ಒದಗಿಸಲಾಗುವುದು ಎಂಬ ಅಂಶವನ್ನು ಲೆಕ್ಕಪರಿಶೋಧನಾ ಗಮನಕ್ಕೆ ತರಲಾಗಿದೆ. |

| | |
|---|---|
| **6.19. ಸಾಮಗ್ರಿ ಸರಬರಾಜು ಮತ್ತು ಸೇವೆ ಒದಗಿಸಿದ ಸಂಸ್ಥೆಗಳಿಗೆ ಪಾವತಿಸಿದ ಬಿಲ್ಲುಗಳಿಂದ ಜಿ.ಎಸ್.ಟಿ ಟಿ.ಡಿ.ಎಸ್ ಕಟಾಯಿಸದಿರುವುದು :**<br><br>2018–19ನೇ ಸಾಲಿನಲ್ಲಿ ವಿಶ್ವವಿದ್ಯಾನಿಲಯದ ವಿವಿಧ ವಹಿವಾಟು ಶೀರ್ಷಿಕೆಗಳಡಿ ಭರಿಸಲಾದ ವೆಚ್ಚಗಳ ಸಂಬಂಧದ ದಾಖಲಾತಿಗಳನ್ನು ಪರಿಶೀಲಿಸಲಾಗಿ ಕೇಂದ್ರ ಸರಕು ಸೇವಾ ತೆರಿಗೆ ಕಾಯ್ದೆ–2017ರ ನಿಯಮ–51ರನ್ವಯ ದಿನಾಂಕ:01.10.2018ರಿಂದ ಸರಕು ಮತ್ತು ಸೇವೆಗಳ ಪೂರೈಕೆಗೆ ಸಂಬಂಧಿಸಿದ ಬಿಲ್ಲುಗಳ ಒಟ್ಟು ಮೊತ್ತ ವಾರ್ಷಿಕವಾಗಿ ರೂ.2.50ಲಕ್ಷ ಅಥವಾ ಅದಕ್ಕಿಂತ ಹೆಚ್ಚಿದ್ದಲ್ಲಿ ಶೇ.2ರ ದರದಲ್ಲಿ ಜಿ.ಎಸ್.ಟಿ ಟಿ.ಡಿ.ಎಸ್ ಮಾಡಬೇಕಾಗಿರುತ್ತದೆ. ಆದರೆ ವಿಶ್ವವಿದ್ಯಾನಿಲಯವು 2018–19ನೇ ಸಾಲಿನಲ್ಲಿ ಒಟ್ಟು ಮೊತ್ತ ರೂ.**10,98,79,031/–**ಗಳನ್ನು ಜಿ.ಎಸ್.ಟಿ ಟಿ.ಡಿಎಸ್‌ನ್ನು ಕಟಾಯಿಸದೆ ಬಿಲ್ಲು ಪಾವತಿಸಿರುವುದನ್ನು ಗಮನಿಸಲಾಗಿದೆ. ಈ ಬಗ್ಗೆ ವಿವರಗಳನ್ನು ಹಾಜರುಪಡಿಸುವಂತೆ ಕೋರಲಾಗಿ, ವಿಶ್ವವಿದ್ಯಾನಿಲಯದಿಂದ ಯಾವುದೇ ವಿವರಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲ. ಹೀಗಾಗಿ ಕಟಾಯಿಸದಿರುವ ಜಿ.ಎಸ್.ಟಿ ಟಿ.ಡಿ.ಎಸ್‌ನ ಒಟ್ಟು ಮೊತ್ತ **ರೂ.21,97,581/–ಗಳನ್ನು** ಸಂಬಂಧಿಸಿದವರಿಂದ ವಸೂಲಿಸಿ ಸರ್ಕಾರದ ಖಾತೆಗೆ ಜಮೆ ಮಾಡಿ ವಿವರಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ಸೂಚಿಸಿದೆ. ವಿವರಗಳನ್ನು **ಅನುಬಂಧ–19ರ**ಲ್ಲಿ ನೀಡಿದೆ. | ಕಂಡಿಕೆ 6.19 ಅನುಬಂಧ–19ರ ವಿಷಯದಲ್ಲಿ ಗಮನಿಸಿ ಸೂಚಿಸಿರುವ ಗುತ್ತಿಗೆದಾರರು/ಸರಬರಾಜುದಾರರಿಂದ ಕಡಿತಗೊಳಿಸಬೇಕಾಗಿರುವ ಜಿ.ಎಸ್.ಟಿ/ಟಿ.ಡಿ.ಎಸ್ ಮೊತ್ತವನ್ನು ಸಂಬಂಧಪಟ್ಟ ಗುತ್ತಿಗೆದಾರರು/ಸರಬರಾಜುದಾರರಿಂದ ವಸೂಲಿಸಿ ಸಂಬಂಧಪಟ್ಟ ಶೀರ್ಷಿಕೆಗಳಿಗೆ ಜಮೆ ಮಾಡಲು ಸಂಬಂಧಿಸಿದ ಇಲಾಖೆಗಳಿಗೆ ಈಗಾಗಲೇ ಪತ್ರ ಬರೆದು ನಿರ್ದೇಶನ ನೀಡಿದ್ದು ಆ ಬಗ್ಗೆ ತುರ್ತು ಕ್ರಮ ಕೈಗೊಳ್ಳುವಂತೆ ವಿಭಾಗ/ಇಲಾಖೆಗಳ ಅಧಿಕಾರಿಗಳ ಕಾರ್ಯ ಪ್ರವೃತ್ತರಾಗಿದ್ದು ಈ ಬಗೆಗಿನ ನಿರೀಕ್ಷಿತ ಫಲಿತಾಂಶವನ್ನು ನಿರೀಕ್ಷಿಸಲಾಗುತ್ತಿದೆ. ಹಾಗೂ ಸದರಿ ವಿವರಗಳನ್ನು ಪಡೆದು ಮುಂದಿನ ಲೆಕ್ಕಪರಿಶೋಧನೆಗೆ ಮಾಹಿತಿಯನ್ನು ಒದಗಿಸಲಾಗುವುದೆಂಬ ಅಂಶವನ್ನು ಲೆಕ್ಕಪರಿಶೋಧನೆಯ ಗಮನಕ್ಕೆ ತರಲಾಗಿದೆ.<br><br>ಈ ನಿಟ್ಟಿನಲ್ಲಿ ಸದರಿ ಕಂಡಿಕೆಯ ಆಕ್ಷೇಪಣೆಯನ್ನು ಕೈ ಬಿಡುವಂತೆ ಈ ಮೂಲಕ ನಿವೇದಿಸಲಾಗಿದೆ. |
| **6.20. ನಿಯಮ ಬಾಹಿರವಾಗಿ ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳಲ್ಲಿ ಹಣ ಡ್ರಾ ಮಾಡಿರುವುದು :**<br><br>ಮೈಸೂರು ವಿಶ್ವವಿದ್ಯಾನಿಲಯದಲ್ಲಿ 2018–19ನೇ ಸಾಲಿನಲ್ಲಿ ಎ.ಸಿ ಬಿಲ್ಲುಗಳ ಮೂಲಕ ಡ್ರಾ ಮಾಡಲಾದ ಮೊತ್ತಕ್ಕೆ ಹೊಂದಾಣಿಕೆಯಾದ ಎನ್.ಡಿ.ಸಿ ಬಿಲ್ಲುಗಳನ್ನು ಪರಿಶೀಲಿಸಲಾಗಿ ಕೆಳಕಂಡ ನ್ಯೂನತೆಗಳು ಕಂಡುಬಂದಿರುತ್ತದೆ :–<br>1. ಸಾದಿಲ್ವಾರು ವೆಚ್ಚದ ಕೈಪಿಡಿ ನಿಯಮ–1958 ರ ನಿಯಮ–36(ii)ರ ರೀತ್ಯಾ ತುರ್ತು ವೆಚ್ಚಗಳಿಗೆ ಅವಶ್ಯಕವಿರುವ ಹಣವನ್ನು ಬಿಟ್ಟು ಇನ್ನಾವುದೇ ಉದ್ದೇಶಕ್ಕೆ ಎ.ಸಿ ಬಿಲ್ಲಿನ ಮೂಲಕ ಹಣ ಡ್ರಾ ಮಾಡುವಂತಿಲ್ಲ.<br>2. ಎ.ಸಿ ಬಿಲ್ಲಿನ ಮೂಲಕ ಹಣ ಡ್ರಾ ಮಾಡಿದ ದಿನಾಂಕಕ್ಕಿಂತಲೂ ಹಿಂದಿನ ದಿನಾಂಕವಿರುವ ಬಿಲ್ಲುಗಳನ್ನು ಹೊಂದಾಣಿಕೆ ಮಾಡಿಕೊಂಡಿರುವುದನ್ನು ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಗಿರುತ್ತದೆ. ಡಿ.ಸಿ ಬಿಲ್ಲುಗಳಲ್ಲಿ ಪಾವತಿ ಮಾಡಬಹುದಾಗಿದ್ದ ಈ ಮೊತ್ತಗಳನ್ನು ಎ.ಸಿ ಬಿಲ್ಲುಗಳಲ್ಲಿ ಡ್ರಾ ಮಾಡಿದ ಹಣಕ್ಕೆ ಹೊಂದಾಣಿಕೆ ಮಾಡಿಕೊಳ್ಳಲಾಗಿದೆ. ಈ ಬಗ್ಗೆ ವಿಚಾರಣಾ ಪತ್ರ ಸಂಖ್ಯೆ:52/2019–20, ದಿನಾಂಕ:17.03.2020 ಹಾಗೂ 137/2020–21, ದಿನಾಂಕ:08.06.2020ಗಳನ್ನು ನೀಡಿದ್ದರೂ ಯಾವುದೇ ಸ್ಪಷ್ಟೀಕರಣವನ್ನು ನೀಡಿರುವುದಿಲ್ಲ. | ಕಂಡಿಕೆ 6.20 ಅನುಬಂಧ–20, ಅನುಬಂಧ–21, ಅನುಬಂಧ–21ಎ ಹಾಗೂ ಅನುಬಂಧ–22 ರಲ್ಲಿ ಪ್ರಸ್ತಾಪಿಸಿರುವ ಮೊತ್ತಗಳನ್ನು 2018–19ನೇ ಸಾಲಿನಲ್ಲಿ ತುರ್ತು ಅಭಿವೃದ್ಧಿ ಕಾರ್ಯಗಳಿಗೆ ಸಂಕ್ಷೀಪ್ತ ಸಾದಿಲ್ವಾರು ಬಿಲ್ಲುಗಳ ಮೂಲಕ ಹಣ ಮಾಡಿದ್ದು ಸದರಿ ಹಣದ ಬಿಲ್ಲಿನ ಮೊತ್ತಗಳನ್ನು ಹೊಂದಾಣಿಕೆ ಮಾಡಲಾಗಿರುತ್ತದೆ. ಹಾಗೂ ಸದರಿ ಬಿಲ್ಲುಗಳ ಮೊತ್ತಗಳಿಗೆ ಎನ್,ಡಿ,ಸಿ ಬಿಲ್ಲುಗಳನ್ನು ತಯಾರಿಸಿದ್ದು ಸದರಿ ಮಾಹಿತಿಯ ವಿವರಗಳನ್ನು ಮುಂದಿನ ಲೆಕ್ಕತಪಾಸಣೆಗೆ ಒದಗಿಸಲಾಗುವುದು ಎಂಬ ಅಂಶವನ್ನು ಆದ್ಯ ಗಮನಕ್ಕೆ ತರಲಾಗಿದೆ. |

| | |
|---|---|
| ಹೀಗಾಗಿ ಹೊಂದಾಣಿಕೆ ಮಾಡಿಕೊಂಡಿರುವ ಬಿಲ್ಲುಗಳ ಮೊತ್ತ **ರೂ.36,728/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.** ಎ.ಸಿ ಬಿಲ್ ಮೂಲಕ ಹಣಡ್ರಾ ಮಾಡಿದ ದಿನಾಂಕ ಹಾಗೂ ಆ ದಿನಾಂಕಕ್ಕೂ ಮುಂಚೆ ಸ್ವೀಕರಿಸಲಾಗಿದ್ದ ಬಿಲ್/ವೋಚರ್‌ಗಳ ವಿವರಗಳನ್ನು **ಅನುಬಂಧ–20**ರಲ್ಲಿ ನೀಡಲಾಗಿದೆ.<br>3. ಎ.ಸಿ ಬಿಲ್ಲುಗಳ ಮೂಲಕ ಹಣ ಡ್ರಾ ಮಾಡಲು ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆದ ನಂತರ, ಹಣ ಡ್ರಾ ಮಾಡಲು ಎ.ಸಿ ಬಿಲ್ ತಯಾರಿಸಿ ನಿಯಂತ್ರಾಣಾಧಿಕಾರಿಯವರಿಂದ ಬಿಲ್ಲಿಗೆ ಮೇಲು ಸಹಿ ಪಡೆಯಬೇಕಾಗಿರುತ್ತದೆ. ಆದರೆ ಇಲ್ಲಿ ಸಕ್ಷಮ ಪ್ರಾಧಿಕಾರದ ಮೇಲು ಸಹಿಯಿಲ್ಲದೆಯೇ ಹಣ ಡ್ರಾ ಮಾಡಿ ವೆಚ್ಚ ಭರಿಸಿರುವುದು ಕಂಡು ಬಂದಿರುತ್ತದೆ.<br>4. ಸರ್ಕಾರದ ಸುತ್ತೋಲೆ ಸಂಖ್ಯೆ:ಎಫ್.ಡಿ/ಟಿ.ಸಿ.ಇ/2010/,ದಿನಾಂಕ:21.12.2010ರ ಮಾರ್ಗಸೂಚಿಗಳಂತೆ ರೂ.2.00 ಲಕ್ಷಕ್ಕಿಂತ ಹೆಚ್ಚಿನ ಮೊತ್ತವನ್ನು ಸಂಕ್ಷಿಪ್ತ ಸಾದಿಲ್ವಾರು ಬಿಲ್ಲಿನ ಮೂಲಕ ಡ್ರಾ ಮಾಡಲು ಅವಕಾಶವಿಲ್ಲವಾದರೂ, ರೂ.2.00 ಲಕ್ಷಕ್ಕಿಂತ ಅಧಿಕ ಮೊತ್ತವನ್ನು ಸಹ ಸಂಕ್ಷಿಪ್ತ ಸಾದಿಲ್ವಾರು ಬಿಲ್ಲಿನ ಮೂಲಕ ಡ್ರಾ ಮಾಡಲಾಗಿದೆ. ವಿವರಗಳನ್ನು **ಅನುಬಂಧ–21**ರಲ್ಲಿ ನೀಡಲಾಗಿದೆ<br>**5.** ಸಾದಿಲ್ವಾರು ವೆಚ್ಚದ ಕೈಪಿಡಿ (ಎಂ.ಸಿ.ಇ) ಯ ನಿಯಮ–36 ಮತ್ತು 37 ರನ್ವಯ ಎ.ಸಿ ಬಿಲ್ಲುಗಳ ಮೂಲಕ ಹಣ ಡ್ರಾ ಮಾಡಲು ಅಧಿಕಾರ ಹೊಂದಿರುವ ಎಲ್ಲಾ ಕಛೇರಿ ಮುಖ್ಯಸ್ಥರು, ಎನ್.ಡಿ.ಸಿ ಬಿಲ್ಲುಗಳನ್ನು ವೋಚರ್‌ಗಳ ಸಹಿತ ಎ.ಸಿ.ಬಿಲ್ಲಿನ ಮೂಲಕ ಹಣಡ್ರಾ ಮಾಡಿದ ಒಂದು ತಿಂಗಳೊಳಗೆ ಮೇಲು ಸಹಿ ಮಾಡುವ ಅಧಿಕಾರಿಗಳಿಗೆ ಸಲ್ಲಿಸಬೇಕಾಗಿರುತ್ತದೆ. ಆದರೆ ನಿಗಧಿತ ಅವಧಿಯೊಳಗೆ ಎನ್.ಡಿ.ಸಿ ಬಿಲ್ಲುಗಳನ್ನು ಸಲ್ಲಿಸದೇ ಅತೀ ವಿಳಂಬವಾಗಿ ಸಲ್ಲಿಸಿರುವ ಮತ್ತು ಇದುವರೆಗೂ ಎನ್.ಡಿ.ಸಿ ಬಿಲ್ಲುಗಳನ್ನು ಸಲ್ಲಿಸದೇ ಇರುವ ಅಧಿಕಾರಿಗಳ/ನೌಕರರ ವಿರುದ್ಧ ಆಡಳಿತಾತ್ಮಕ ಕ್ರಮ ಕೈಗೊಳ್ಳಲು ಹಾಗೂ ವಿಳಂಬವಾಗಿರುವ ದಿನಗಳಿಗೆ ಬಡ್ಡಿ ಲೆಕ್ಕಚಾರ ಮಾಡಿ ಸಂಬಂಧಿಸಿದವರಿಂದ ವಸೂಲಿಸಲು ಸೂಚಿಸಲಾಗಿದೆ. ವಿವರಗಳನ್ನು **ಅನುಬಂಧ–'21ಎ' ನಲ್ಲಿ ನೀಡಲಾಗಿದೆ.**<br>6. ಎ.ಸಿ ಬಿಲ್ಲುಗಳ ಮೂಲಕ ಹಣ ಡ್ರಾ ಮಾಡಿರುವುದಕ್ಕೆ ಸಲ್ಲಿಸಲಾಗಿರುವ ಎನ್.ಡಿ.ಸಿ ಬಿಲ್ಲುಗಳನ್ನು ಹಾಜರುಪಡಿಸುವಂತೆ ವಿಚಾರಣಾ ಪತ್ರ ಸಂಖ್ಯೆ:11/2019–20, ದಿನಾಂಕ:11.02.20, 54/17.03.20,57/18.03.20,63/20.03.20 ಹಾಗೂ 80/19.05.20 ಗಳನ್ನು ನೀಡಿದ್ದರೂ ಭಾಗಶಃ ಎ.ಸಿ ಬಿಲ್ಲುಗಳನ್ನು ಮಾತ್ರ ಹಾಜರುಪಡಿಸಲಾಗಿರುತ್ತದೆ. ಉಳಿದ ರೂ.30,00,970/–ಗಳ ಬಿಲ್ಲುಗಳಿಗೆ ಎನ್.ಡಿ.ಸಿ ಬಿಲ್ಲುಗಳನ್ನು ಹಾಜರುಪಡಿಸಿರುವುದಿಲ್ಲ. ಆದ್ದರಿಂದ **ಅನುಬಂಧ–22**ರಲ್ಲಿ ವಿವರಿಸಿರುವ ಎನ್.ಡಿ.ಸಿ ಬಿಲ್ಲುಗಳನ್ನು ಹಾಜರುಪಡಿಸದಿರುವ ಮೊತ್ತ **ರೂ.30,00,970/–ಗಳನ್ನು** | |

**ಆಕ್ಷೇಪಣೆಯಲ್ಲಿಡಲಾಗಿದೆ.** ಹಾಗೂ ಎನ್.ಡಿ.ಸಿ ಬಿಲ್ಲುಗಳನ್ನು ಸಲ್ಲಿಸದಿರುವವರ ವಿರುದ್ಧ ಆಡಳಿತಾತ್ಮಕ ಕ್ರಮ ಕೈಗೊಳ್ಳಲು ಸೂಚಿಸಿದೆ.

ಮೇಲಿನ ಕಾರಣಗಳಿಂದ ಎ.ಸಿ ಬಿಲ್ಲಿನಲ್ಲಿ ಹಣ ಡ್ರಾ ಮಾಡುವುದಕ್ಕಿಂತ ಮುಂಚೆಯೇ ಇದ್ದ ಬಿಲ್ಲುಗಳನ್ನು ಎ.ಸಿ ಬಿಲ್ಲಿನಲ್ಲಿ ಡ್ರಾ ಮಾಡಿದ ಹಣಕ್ಕೆ ಹೊಂದಾಣಿಕೆ ಮಾಡಿದ ಮೊತ್ತ ರೂ.36,728/–ಗಳು ಹಾಗೂ ಎನ್.ಡಿ.ಸಿ ಸಲ್ಲಿಸದ ಮೊತ್ತ ರೂ.30,00,970/– ಒಟ್ಟು **ರೂ.30,37,698/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.**

**6.21. ಡಿ.ಸಿ ಬಿಲ್ಲಿನಲ್ಲಿ ವೆಚ್ಚ ಭರಿಸಬೇಕಾದ ಬಿಲ್ಲುಗಳಿಗೆ ಎ.ಸಿ ಬಿಲ್ಲಿನ ಮೂಲಕ ಹಣ ಡ್ರಾ ಮಾಡಿರುವುದು**

2018–19ನೇ ಸಾಲಿನಲ್ಲಿ ಎ.ಸಿ ಬಿಲ್ಲುಗಳ ಮೂಲಕ ಡ್ರಾ ಮಾಡಿ ವೆಚ್ಚ ಭರಿಸಿರುವ ಬಿಲ್ಲುಗಳನ್ನು ಪರಿಶೀಲಿಸಿದಾಗ ಪ್ರಾಂಶುಪಾಲರು, ಲಲಿತ ಕಲೆಗಳ ಕಾಲೇಜು, ಮಾನಸ ಗಂಗೋತ್ರಿ ರವರ ಕಾರ್ಯಾಲಯದ ದೂರವಾಣಿ ಬಾಕಿ ಬಿಲ್ಲುಗಳ ಮೊತ್ತ ರೂ.48,526/–ಗಳನ್ನು ಎ.ಸಿ ಬಿಲ್ಲಿನ (ಬಿ.ಆರ್.ಸಂಖ್ಯೆ:3428/ ದಿನಾಂಕ:18.09.2018) ಮೂಲಕ ಧನಾದೇಶ ಸಂಖ್ಯೆ:954554/ ದಿನಾಂಕ:19.09.2018ದಲ್ಲಿ ಡ್ರಾ ಮಾಡಿ ಪಾವತಿಸಿರುತ್ತಾರೆ. ಅಲ್ಲದೆ ಮುದ್ರಣಾಲಯದ ದೈನಂದಿನ ನಿರ್ವಹಣೆಗಾಗಿ ಹಾಗೂ ಲೇಖನ ಸಾಮಾಗ್ರಿಗಳನ್ನು ಖರೀದಿಸಲು ಸಹ ಎ.ಸಿ ಬಿಲ್ಲಿನ ಮೂಲಕ ಈ ಕೆಳ ಕಂಡಂತೆ ಹಣ ಡ್ರಾ ಮಾಡಿ ಪಾವತಿಸಲಾಗಿದೆ.

| ಕ್ರ.ಸಂ | ಎ.ಸಿ ಬಿಲ್ಲುಬಿ.ಆರ್ ಸಂಖ್ಯೆ/ ದಿನಾಂಕ | ಧನಾದೇಶ ಸಂಖ್ಯೆ/ದಿನಾಂಕ | ಮೊತ್ತ | ವಿವರ |
|---|---|---|---|---|
| 1 | 413/ 28.04.2018 | 953346/ 28.04.2018 | 40,000.00 | ದೈನಂದಿನ ವೆಚ್ಚಗಳ ನಿರ್ವಹಣೆ, ಲೇಖನ ಸಾಮಗ್ರಿ |
| 2 | 1279/ 13.06.2018 | 953718/ 19.06.2018 | 25,000.00 | ಯಂತ್ರಗಳ ನಿರ್ವಹಣೆ, ಬಿಡಿ ಭಾಗ ಖರೀದಿ, ಜನರೇಟರ್ ಗೆಡೀಸೆಲ್ |
| 3 | 2885/ 25.08.2018 | 954384/ 30.08.2018 | 25,000.00 | ಯಂತ್ರಗಳ ನಿರ್ವಹಣೆ, ಬಿಡಿ ಭಾಗಗಳ ಖರೀದಿ, ಜನರೇಟರ್‌ಗೆ ಇಂಧನ ಖರೀದಿ. |
| 4 | 2886/ 25.08.2018 | 954476/ 14.09.2018 | 40,000.00 | ಲೇಖನಾ ಸಾಮಾಗ್ರಿ ಖರೀದಿ, ಯಂತ್ರಗಳ ನಿರ್ವಹಣೆ. |
| 5 | 4000/ 05.10.2018 | 954746/ 05.10.2018 | 25,000.00 | ದೈನಂದಿನ ಯಂತ್ರಗಳ ನಿರ್ವಹಣೆ ಬಿಡಿ ಭಾಗಗಳ ಖರೀದಿ. |
| 6 | 4933/ 17.11.2018 | 955183/ 30.11.2018 | 40,000.00 | ದೈನಂದಿನ ಯಂತ್ರಗಳ ನಿರ್ವಹಣೆಲೇಖನಾ ಸಾಮಾಗ್ರಿಖರೀದಿ. |
| 7 | 5371/ 06.12.2018 | 955323/ | 25,000.00 | ದೈನಂದಿನ ಯಂತ್ರಗಳ ನಿರ್ವಹಣೆಗೆ |

**ಎ)** ಕಂಡಿಕೆ 6.21 ರೂ.48526ಗಳಿಗೆ ಸಂಬಂಧಿಸಿದಂತೆ ವಿಶ್ವವಿದ್ಯಾನಿಲಯದ ಲಲಿತಕಲೆಗಳ ಕಾಲೇಜಿನಲ್ಲಿ 2011–13ರವರೆಗೆ ಪ್ರಾಂಶುಪಾಲರಾಗಿ ಸೇವೆ ಸಲ್ಲಿಸುತ್ತಿದ್ದ ಪ್ರೊ.ಜಿ.ವಿ ಗುರುಮೂರ್ತಿ ಪ್ರಸ್ತುತ ನಿವೃತ್ತಿ ಹೊಂದಿದ್ದು ಇವರು ತಮ್ಮ ಸೇವಾ ಅವಧಿಯಲ್ಲಿ ಕಛೇರಿ ಸೇವೆಗೆಂದು ವಿಶ್ವವಿದ್ಯಾನಿಲಯದ ಪೂರ್ವಾನುಮತಿ ಪಡೆಯದೆ ಬಿ.ಎಸ್.ಎನ್.ಎಲ್ ಕಛೇರಿಗೆ ಪತ್ರ ಬರೆದು 0821–2540319 ಮತ್ತು 0821–2540127 ನಂಬರಿನ ಎರಡು ಬಾಹ್ಯ ದೂರವಾಣಿ ಸಂಪರ್ಕಗಳನ್ನು ಕಛೇರಿ ಉಪಯೋಗಕ್ಕೆ ಪಡೆದಿದ್ದು ಇವುಗಳ ಬಿಲ್ಲಿನ ಮೊತ್ತ ರೂ.48526/–ಗಳನ್ನು ಬಿ.ಎಸ್.ಎನ್.ಎಲ್ ಕಛೇರಿಗೆ ಪಾವತಸದ ಹಿನ್ನೆಲೆ BSNL ಕಛೇರಿಯವರು ಖಾಯಂ ಜನತಾ ನ್ಯಾಯಾಲಯದಲ್ಲಿ PLA Petion No.105.2018 ದಿನಾಂಕ:16.02.2018ರಲ್ಲಿ ಮೊಕದ್ದಮೆಯನ್ನು ಹೂಡಿದ್ದು ಸದರಿ ಜನತಾ ನ್ಯಾಯಾಲಯವು ಬಿ.ಎಸ್.ಎನ್.ಎಲ್ ಕಛೇರಿಯವರು ಪ್ರಸ್ತಾಪಿಸಿರುವ ಮೊತ್ತ ರೂ.48526/–ಗಳನ್ನು ಪಾವತಿಸಿ ಪ್ರಕರಣವನ್ನು ಇತ್ಯರ್ಥ ಪಡಿಸಿಕೊಳ್ಳುವಂತೆ ಮೌಖಿಕವಾಗಿ ತಿಳಿಸಿದ್ದರ ಮೇರೆಗೆ ವಿಶ್ವವಿದ್ಯಾನಿಲಯದ ವತಿಯಿಂದ ಎಸಿ ಬಿಲ್ಲಿನ ಮೂಲಕ ರೂ.48526/–ಗಳನ್ನು ಪಾವತಿಸಿದ್ದು ಸದರಿ ಮೊತ್ತವನ್ನು ಪ್ರೊ. ಜಿ.ವಿ ಗುರುಮೂರ್ತಿ ನಿವೃತ್ತ ಪ್ರಾಂಶುಪಾಲರು ಇವರ ನಿವೃತ್ತಿ ವೇತನದಿಂದ ಮಾಸಿಕ ರೂ.16175/–ಗಳಂತೆ ಆಗಸ್ಟ್ 2020, ಸೆಪ್ಟೆಂಬರ್ 2020, ಮತ್ತು ಅಕ್ಟೋಬರ್ 2020 ಒಟ್ಟು 3 ಸಮಾನ ಮಾಸಿಕ ಕಂತುಗಳಲ್ಲಿ ಕಟಾಯಿಸಿ ವಿಶ್ವವಿದ್ಯಾನಿಲಯದ ಜಿ,ಆರ್,ಎ ಖಾತೆ ಸಂಖ್ಯೆ:5400759147 ಜಮಾ ಮಾಡಲಾಗಿದೆ ವಿವರ ಈ ಕೆಳಕಂಡಂತಿರುತ್ತದೆ.

| ಕ್ರ ಸಂ | ಪದನಾಮ | ಹುದ್ದೆ | ನೌಕರರ ಕೋಡ್ | ಹಣ ಕಡಿತಗೊಳಿಸಿದ ತಿಂಗಳು | ಬಿಎಸ್ಎನ್ಎಲ್ ಕಛೇರಿಗೆ ಪಾವತಿಸಿದ ಪ್ರೊ. ಜಿ.ವಿ ಗುರುಮೂರ್ತಿ ಇವರ ನಿವೃತ್ತಿ ವೇತನದಲ್ಲಿ ಕಟಾಯಿಸಿ BSNL ಕಛೇರಿಗೆ ಪಾವತಿಸಿದ ಮೊತ್ತ | ಷರಾ |
|---|---|---|---|---|---|---|
| 01 | ಪ್ರೊ. ಜಿ.ವಿ ಗುರುಮೂರ್ತಿ | ಪ್ರಾಂಶುಪಾಲರು (ನಿವೃತ್ತಿ) | 9526 | 1.ಆಗಸ್ಟ್2020<br>2.ಸೆಪ್ಟೆಂಬರ್2020<br>3.ಅಕ್ಟೋಬರ್2020 | 1) ರೂ.16176<br>2) ರೂ.16176<br>3) ರೂ.16176 | ನ್ಯಾಯಾಲಯದ ಮೌಖಿಕ ನಿರ್ದೇಶನದ ಮೇರೆಗೆ ಹಾಗೂ ವಿವಿ ಆದೇಶ |

| | | | | |
|---|---|---|---|---|
| | | 12.12.2018 | | ಬಿಡಿಭಾಗಗಳ ಖರೀದಿ |
| 8 | 6950/ 21.01.2019 | 955746/ 31.01.2019 | 25,000.00 | ದೈನಂದಿನ ಯಂತ್ರಗಳ ನಿರ್ವಹಣೆ ಬಿಡಿ ಭಾಗಗಳ ಖರೀದಿ. |
| 9 | 7771/ 20.02.2019 | 955967/ 26.02.2019 | 40,000.00 | ದೈನಂದಿನ ನಿರ್ವಹಣೆ ಹಾಗೂ ತುರ್ತು ಲೇಖನಾ ಸಾಮಾಗ್ರಿ ಖರೀದಿ. |
| 10 | 6366/ 03.01.2019 | 955559/ 03.01.2019 | 40,000.00 | ದೈನಂದಿನ ಯಂತ್ರಗಳ ನಿರ್ವಹಣೆ ಅಗತ್ಯ ಲೇಖನಾ ಸಾಮಾಗ್ರಿ ಖರೀದಿ. |
| 11 | 7952/ 27.02.2019 | 956012/ 02.03.2019 | 25,000.00 | ದೈನಂದಿನ ಯಂತ್ರಗಳ ನಿರ್ವಹಣೆ ತುರ್ತು ಕಾರ್ಯ. |
| 12 | 8452/ 21.03.2019 | 956243/ 21.03.2019 | 25,000.00 | ಲೇಖನ ಸಾಮಾಗ್ರಿಗಳ ಖರೀದಿ ಇತ್ಯಾದಿ |
| | | **ಒಟ್ಟು ಮೊತ್ತ** | **3,75,000.00** | |

ಮೇಲ್ಕಂಡ ಬಿಲ್ಲುಗಳನ್ನು ಡಿ.ಸಿ ಬಿಲ್ಲಿನ ಮೂಲಕ ಪಾವತಿಸಲು ಅವಕಾಶವಿದ್ದರೂ ಕೂಡ ಎ.ಸಿ ಬಿಲ್ಲುಗಳಲ್ಲಿ ಹಣ ಡ್ರಾ ಮಾಡಿ ಪಾವತಿಸಿರುವುದು ನಿಯಮಗಳಿಗೆ ವಿರುದ್ಧವಾಗಿರುತ್ತದೆ. ಆದ್ದರಿಂದ ನಿಯಮಬಾಹಿರವಾಗಿ ಎ.ಸಿ ಬಿಲ್ಲುಗಳಲ್ಲಿ ಡ್ರಾ ಮಾಡಲಾಗಿರುವ ಲಲಿತ ಕಲೆಗಳ ಕಾಲೇಜಿನ ದೂರವಾಣಿ ಬಾಕಿ ಬಿಲ್ಲಿನ ಮೊತ್ತ ರೂ.48,526/–ಗಳು ಹಾಗೂ ಮುದ್ರಣಾಲಯದ ದೈನಂದಿಕ ನಿರ್ವಹಣೆ ಹಾಗೂ ಲೇಖನ ಸಾಮಾಗ್ರಿಗಳ ಖರೀದಿ ಮೊತ್ತ ರೂ.3,75,000/–ಗಳು, ಒಟ್ಟು ಮೊತ್ತ **ರೂ.4,23,526/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.**

| | | | | | | |
|---|---|---|---|---|---|---|
| | | | | | | ಸಂ:ಇಲೆ4/09/2017–18 ದಿ:14.09.2018 ರಂತೆ ವಸೂಲಿಸಿ ಜಿಆರ್ಎ ಖಾತೆಗೆ ಜಮೆ ಮಾಡಲಾಗಿದೆ. |
| | | | | **ಒಟ್ಟು ರೂ** | **48528** | |

ಈ ನಿಟ್ಟಿನಲ್ಲಿ ಸದರಿ ಆಕ್ಷೇಪಿತ ಮೊತ್ತ ರೂ.48526/–ಗಳನ್ನು ವಸೂಲಾತಿ ಕಂಡಿಕೆಯಿಂದ ಕೈ ಬಿಡುವಂತೆ ನಿವೇದಿಸಲಾಗಿದೆ.

**ಬಿ)** ಮುಂದುವರಿದು ಕಂಡಿಕೆ 6.21 ರಲ್ಲಿ ಡಿ.ಸಿ ಬಿಲ್ಲಿನ ಮೂಲಕ ರೂ.375000/–ಗಳನ್ನು ಪಾವತಿಸಿರುವ ಸಂಬಂಧ ಆಕ್ಷೇಪಿಸಲಾಗಿದ್ದು ತೀರುವಳಿಗಾಗಿ ಸಲ್ಲಿಸಿರುವ ಮೊತ್ತದ ವಿವರ ಈ ಕೆಳಕಂಡತಿರುತ್ತದೆ.

| ಕ್ರ ಸಂ | ಎಸಿ ಬಿಲ್ಲು ಬಿಆರ್ ಸಂಖ್ಯೆ/ದಿನಾಂಕ | ಎನ್‌ಡಿಸಿ ಬಿಲ್ಲು ಸಂಖ್ಯೆ/ದಿನಾಂಕ | ಮುಂಗಡ ಪಡೆದ ಮೊತ್ತ | ಹೊಂದಾಣಿಕೆ ಮೊತ್ತ | ಉಳಿಕೆ ಮೊತ್ತ | ಉಳಿಕೆ ಮೊತ್ತ ಬ್ಯಾಂಕಿಗೆ ಜಮೆ ಮಡಿದ ಚಲನ್ ಸಂಖ್ಯೆ&ದಿನಾಂಕಗಳ ವಿವರ | ಓಚರ್‌ಗಳು/ಇತರೆ ದಾಖಲಾತಿಯಿಂದ ಹೊಂದಾಣಿಕೆಯಾದ ವಿವರ | ಷರಾ |
|---|---|---|---|---|---|---|---|---|
| 01 | 07<br>12.04.2018 | 46(ಎ)<br>23.08.2018 | 40000 | 39694 | 306 | 07335<br>21.08.2018 | ಓಚರ್‌ಗಳನ್ನು ಲಗತ್ತಿಸಿದೆ. | ಮುಂಗಡ ಪಡೆದ ಹಣದಲ್ಲಿ ಬಾಕಿ ಮೊತ್ತ ಇರುವುದಿಲ್ಲ |
| 02 | 14<br>02.06.2018 | 43(ಎ)<br>21.08.2018 | 25000 | 24957 | 43 | 07332<br>21.08.2018 | ಓಚರ್‌ಗಳನ್ನು ಲಗತ್ತಿಸಿದೆ. | ಮುಂಗಡ ಪಡೆದ ಹಣದಲ್ಲಿ ಬಾಕಿ ಮೊತ್ತ ಇರುವುದಿಲ್ಲ |
| 03 | 45<br>21.08.2018 | 75(ಎ)<br>17.10.2018 | 25000 | 24855 | 145 | 16990<br>15.10.2018 | ಓಚರ್‌ಗಳನ್ನು ಲಗತ್ತಿಸಿದೆ. | ಮುಂಗಡ ಪಡೆದ ಹಣದಲ್ಲಿ ಬಾಕಿ ಮೊತ್ತ ಇರುವುದಿಲ್ಲ |
| 04 | 44<br>21.08.2018 | 84(ಎ)<br>13.11.2018 | 40000 | 39798 | 202 | 17016<br>07.11.2018 | ಓಚರ್‌ಗಳನ್ನು ಲಗತ್ತಿಸಿದೆ. | ಮುಂಗಡ ಪಡೆದ ಹಣದಲ್ಲಿ ಬಾಕಿ ಮೊತ್ತ ಇರುವುದಿಲ್ಲ |
| 05 | 62<br>04.10.2018 | 97(ಎ)<br>04.12.2018 | 25000 | 24737 | 263 | 2347<br>04.12.2018 | ಓಚರ್‌ಗಳನ್ನು ಲಗತ್ತಿಸಿದೆ. | ಮುಂಗಡ ಪಡೆದ ಹಣದಲ್ಲಿ ಬಾಕಿ ಮೊತ್ತ ಇರುವುದಿಲ್ಲ |
| 06 | 89<br>16.11.2018 | 111(ಎ)<br>29.12.2018 | 40000 | 39849 | 151 | 2361<br>27.12.2018 | ಓಚರ್‌ಗಳನ್ನು ಲಗತ್ತಿಸಿದೆ. | ಮುಂಗಡ ಪಡೆದ ಹಣದಲ್ಲಿ ಬಾಕಿ ಮೊತ್ತ ಇರುವುದಿಲ್ಲ |
| 07 | 98<br>05.12.2018 | 126(ಎ)<br>17.01.2018 | 25000 | 24904 | 96 | 2363<br>17.01.2019 | ಓಚರ್‌ಗಳನ್ನು ಲಗತ್ತಿಸಿದೆ. | ಮುಂಗಡ ಪಡೆದ ಹಣದಲ್ಲಿ ಬಾಕಿ ಮೊತ್ತ ಇರುವುದಿಲ್ಲ |
| 08 | 128<br>19.01.2019 | 147(ಎ)<br>02.03.2019 | 25000 | 24755 | 245 | 17046<br>28.02.2019 | ಓಚರ್‌ಗಳನ್ನು ಲಗತ್ತಿಸಿದೆ. | ಮುಂಗಡ ಪಡೆದ ಹಣದಲ್ಲಿ ಬಾಕಿ ಮೊತ್ತ ಇರುವುದಿಲ್ಲ |
| 09 | 140<br>18.02.2019 | 07<br>12.04.2019 | 40000 | 39611 | 389 | 2127<br>12.04.2019 | ಓಚರ್‌ಗಳನ್ನು ಲಗತ್ತಿಸಿದೆ. | ಮುಂಗಡ ಪಡೆದ ಹಣದಲ್ಲಿ ಬಾಕಿ ಮೊತ್ತ ಇರುವುದಿಲ್ಲ |
| 10 | 116<br>01.01.2019 | 141(ಎ)<br>19.02.2019 | 40000 | 39821 | 179 | 17036<br>19.02.2019 | ಓಚರ್‌ಗಳನ್ನು ಲಗತ್ತಿಸಿದೆ. | ಮುಂಗಡ ಪಡೆದ ಹಣದಲ್ಲಿ ಬಾಕಿ |

| | | | | | | | | |
|---|---|---|---|---|---|---|---|---|
| | | | | | | | | ಮೊತ್ತ ಇರುವುದಿಲ್ಲ |
| 11 | 145<br>25.02.2019 | 05(ಎ)<br>11.04.2019 | 25000 | 24823 | 177 | 2132<br>05.04.2019 | ಓಚರ್‌ಗಳನ್ನು ಲಗತ್ತಿಸಿದೆ. | ಮುಂಗಡ ಪಡೆದ ಹಣದಲ್ಲಿ ಬಾಕಿ ಮೊತ್ತ ಇರುವುದಿಲ್ಲ |
| 12 | 153<br>11.03.2019 | 19(ಎ)<br>30.05.2019 | 25000 | 24985 | 15 | 17066<br>29.05.2019 | ಓಚರ್‌ಗಳನ್ನು ಲಗತ್ತಿಸಿದೆ. | ಮುಂಗಡ ಪಡೆದ ಹಣದಲ್ಲಿ ಬಾಕಿ ಮೊತ್ತ ಇರುವುದಿಲ್ಲ |
| | | **ಒಟ್ಟು ಮೊತ್ತ ರೂ** | **375000** | **372789** | **2211** | | | |

ವಿಶ್ವವಿದ್ಯಾನಿಲಯದ ವ್ಯಾಪ್ತಿಯ ಮುದ್ರಣ ವಿಭಾಗದಲ್ಲಿ ಯಂತ್ರೋಪಕರಣಗಳ ಮೂಲಕವೇ ಮುದ್ರಣ ಎಲ್ಲಾ ಕೆಲಸಗಳು ನಡೆಯುವುದರಿಂದ ದೈನಂದಿನ ಯಂತ್ರಗಳ ನಿರ್ವಹಣೆ ಬಿಡಿ ಭಾಗಗಳ ಖರೀದಿ ಜನರೇಟರ್‌ಗೆ ಡೀಸೆಲ್, ಸೀಮೆಎಣ್ಣೆ, ಹಾಗೂ ಇನ್ನಿತರೆ ತುರ್ತು ಕೆಲಸಗಳಿಗೆ ಅವಶ್ಯಕವಾದ ಮೊತ್ತಗಳನ್ನು ಎ,ಸಿ,ಹುಂಡಿಯ ಮೂಲಕ ಪಡೆದು ತುರ್ತು ಕೆಲಸ ಕಾರ್ಯಗಳಿಗೆ ವಿನಿಯೋಗಿಸಲಾಗಿರುತ್ತದೆ. ಯಂತ್ರಗಳು ಯಾವ ಸಮಯದಲ್ಲಾದರು ರೀಪೇರಿಗೆ ಬರುವ ಸಂಭವವಿರುತ್ತದೆ. ಇಂತಹ ಸಮಯದಲ್ಲಿ ಯಂತ್ರಗಳ ನಿರ್ವಹಣೆ ಹಾಗೂ ಬಿಡಿಭಾಗಗಳಾಗಲಿ ಆಯಿಲ್, ಡೀಸೆಲ್ ಸೀಮೆಎಣ್ಣೆ ಹಾಗೂ ಇನ್ನಿತರೆ ಕೆಲವು ಪದಾರ್ಥಗಳು ಸಾಲದ ರೂಪದಲ್ಲಿ ದೊರೆಯದ ಕಾರಣ ಇಂತಹ ಸಂದರ್ಭದಲ್ಲಿ ತುರ್ತು ನಿರ್ವಹಣೆಗಾಗಿ ಮುಂಗಡವಾಗಿ ಹಣವನ್ನು ಪಡೆದು ತುರ್ತು ಕಾರ್ಯಗಳಿಗೆ ವಿನಿಯೋಗಿಸಲಾಗಿದೆ.ಕೆಲವೊಮ್ಮೆ ಮುದ್ರಣ ಲೇಖನ ಸಾಮಗ್ರಿಗಳೂ ಕೆಲವು ಅಂಗಡಿಗಳಿಂದ ಸಾಲದ ರೂಪದಲ್ಲಿ ದೊರೆಯುತ್ತದೆ. (credit bill) ಅಂತಹ ಹುಂಡಿಗಳನ್ನು ಡಿ,ಸಿ ಹುಂಡಿಯ ಮೂಲಕ ಪಾವತಿಸಲಾಗಿದೆ ಹಾಗೂ ಕೆಲವು ಸಂದರ್ಭಗಳಲ್ಲಿ ಎಸಿ ಹುಂಡಿಯ ಮೂಲಕ ಪಡೆದ ಹಣದಿಂದ ಪಾವತಿಸಲಾಗಿರುತ್ತದೆ.

ಕಂಡಿಕೆ 6.21 ರಲ್ಲಿ ರೂ.48526/–ಗಳನ್ನು ಲಲಿತ ಕಲೆ ಕಾಲೇಜಿಗೆ ಸಂಬಂಧಿಸಿದ ದೂರವಾಣಿ ಬಿಲ್ಲುಗಳು ಇತರೆ ಬಿಲ್ಲುಗಳಿಗೆ ಡಸಿ ಹುಂಡಿಯ ಮೂಲಕ ಖರ್ಚುಮಾಡಿ ಮಾಹಿತಿ ಮತ್ತು ದಾಖಲಾತಿಗಳನ್ನು ಒದಗಿಸಲಾಗಿದೆ ಹಾಗೂ ರೂ.375000/–ಗಳ ಮುದ್ರಣ ವಿಭಾಗ ಖರ್ಚಿಗಾಗಿ ಖರ್ಚಿನ ವಿವರಗಳನ್ನು ಮೇಲ್ಕಾಣಿಸಿದ ನಮೂನೆಯಲ್ಲಿ ವಿವರಿಸಲಾಗಿದೆ.

ಈ ನಿಟ್ಟಿನಲ್ಲಿ ಕಂಡಿಕೆ 6.21 ರಲ್ಲಿ ಆಕ್ಷೇಪಿಸಿರುವ ಮೊತ್ತ ರೂ.48526/–ಗಳನ್ನು ಕೈ ಬಿಡುವಂತೆ ನಿವೇದಿಸಲಾಗಿದೆ.

**6.22. 2018–19ನೇ ಸಾಲಿನಲ್ಲಿ ಯು.ಜಿ.ಸಿ/ಇತರೆ ಬಾಹ್ಯ ಏಜೆನ್ಸಿಗಳಿಂದ ವಿವಿಧ ಯೋಜನೆಗಳಿಗೆ ಬಿಡುಗಡೆಯಾದ ಅನುದಾನಕ್ಕೆ ಹಣ ಬಳಕೆ ಪ್ರಮಾಣ ಪತ್ರ ಸಲ್ಲಿಸದಿರುವುದು :**

ಮೈಸೂರು ವಿಶ್ವವಿದ್ಯಾನಿಲಯಕ್ಕೆ ಯು.ಜಿ.ಸಿ/ಇತರೆ ಬಾಹ್ಯ ಏಜೆನ್ಸಿಗಳಿಂದ ಮಂಜೂರಾಗಿರುವ ಯೋಜನೆಗಳಿಗೆ ಸಂಬಂಧಿಸಿದಂತೆ ಕಡತಗಳು, ಯೋಜನೆಗಳ ಮಾರ್ಗಸೂಚಿಗಳು ಹಾಗೂ ಸದರಿ ಸಂಸ್ಥೆಗಳಿಗೆ ಸಲ್ಲಿಸಿರುವ ಹಣ ಬಳಕೆ ಪ್ರಮಾಣ ಪತ್ರಗಳ ವಿವರಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ಕೋರಿ ವಿಚಾರಣಾ ಪತ್ರ ಸಂಖ್ಯೆ–1/18.05.2020ನ್ನು ನೀಡಲಾಗಿತ್ತು. ಅದರಂತೆ ವಿಶ್ವವಿದ್ಯಾನಿಲಯದವರು ಒದಗಿಸಿರುವ ದಾಖಲೆಗಳ ಪ್ರಕಾರ ಹಣ ಬಳಕೆ ಪ್ರಮಾಣ ಪತ್ರಗಳನ್ನು ಅನುದಾನ ನೀಡಿರುವ ಏಜೆನ್ಸಿಗಳಿಗೆ ಸಲ್ಲಿಸಿರುವ ವಿವರಗಳು ಕೆಳಕಂಡಂತಿದೆ.

| ಕ್ರ. ಸಂ | ಯೋಜನೆ | ಮುಂದುವರೆದ ಯೋಜನೆಗಳು | 2018–19ನೇ ಸಾಲಿನಲ್ಲಿ ಹೊಸದಾಗಿ ಪ್ರಾರಂಭಗೊಂಡ ಯೋಜನೆಗಳು | ಒಟ್ಟು ಯೋಜನೆಗಳು | ಹಣ ಬಳಕೆ ಪ್ರಮಾಣಪತ್ರ ಸಲ್ಲಿಸಿರುವ ಯೋಜನೆಗಳ ಸಂಖ್ಯೆ | ಹಣ ಬಳಕೆ ಪ್ರಮಾಣ ಪತ್ರ ಸಲ್ಲಿಸ ಬೇಕಾದ ಯೋಜನೆಗಳ ಬಾಕಿ ಸಂಖ್ಯೆ |
|---|---|---|---|---|---|---|
| 1 | ಯು.ಜಿ.ಸಿ/ಕೇಂದ್ರ ಪ್ರಾಯೋಜಿತ ಕಾರ್ಯಕ್ರಮಗಳು | 60 | 24 | 84 | 14 | 70 |

ಮೇಲಿನ ವಿವರಗಳನ್ನು ಪರಿಶೀಲಿಸಿದಾಗ ಯು.ಜಿ.ಸಿ/ಇತರೆ ಬಾಹ್ಯ ಏಜೆನ್ಸಿಗಳಿಂದ ಮಂಜೂರಾಗಿರುವ ಯೋಜನೆಗಳ ಅನುದಾನವನ್ನು ಅನುದಾನ ಬಿಡುಗಡೆಯಾದ ವರ್ಷದಲ್ಲಿ ವೆಚ್ಚ ಮಾಡಿ, ನಂತರದ ಆರ್ಥಿಕ/ಶೈಕ್ಷಣಿಕ ವರ್ಷದಲ್ಲಿ ಲೆಕ್ಕ ಪರಿಶೋಧನೆ ಮಾಡಿಸಿ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯಿದೆ–2000ದ ನಿಯಮ–46 ಮತ್ತು 47 ರಂತೆ ಹಣ ಬಳಕೆ ಪ್ರಮಾಣ ಪತ್ರಗಳನ್ನು ಹಣ ಬಿಡುಗಡೆ ಮಾಡಿರುವ ಏಜೆನ್ಸಿಗಳಿಗೆ ಸಲ್ಲಿಸಬೇಕಾಗಿರುತ್ತದೆ. ಮೇಲಿನ ಕೋಷ್ಟಕವನ್ನು ಗಮನಿಸಿದಾಗ 2018–19ನೇ ಸಾಲಿನಲ್ಲಿ ಮೈಸೂರು ವಿಶ್ವವಿದ್ಯಾನಿಲಯವು 84 ವಿವಿಧ ಯೋಜನೆಗಳಿಗೆ ಯು.ಜಿ.ಸಿ/ಇತರೆ ಬಾಹ್ಯ ಏಜೆನ್ಸಿಗಳಿಂದ ಅನುದಾನವನ್ನು ಪಡೆದುಕೊಂಡು ಕೇವಲ 14 ಯೋಜನೆಗಳ ವಾರ್ಷಿಕ ಹಣ ಬಳಕೆ ಪ್ರಮಾಣ ಪತ್ರಗಳನ್ನು ಮಾತ್ರ ಸಕ್ಷಮ ಪ್ರಾಧಿಕಾರಗಳಿಗೆ ಸಲ್ಲಿಸಲಾಗಿರುತ್ತದೆ. ನಿಗದಿತ ಅವಧಿಯೊಳಗೆ ಹಣ ಬಳಕೆ ಪತ್ರಗಳನ್ನು ಸಲ್ಲಿಸದಿದ್ದಲ್ಲಿತದ ನಂತರದ ವರ್ಷಗಳಲ್ಲಿ ಬಳಕೆಯಾಗದ ಅನುದಾನದ ಅನುಪಾತಕ್ಕನು ಗುಣವಾಗಿ ವಿಶ್ವವಿದ್ಯಾನಿಲಯಕ್ಕೆ ಬರಬೇಕಾದ ಅನುದಾನದಲ್ಲಿ ಕಡಿತವುಂಟಾಗಿ ಸಂಶೋಧನಾ ಯೋಜನೆಗಳಿಗೆ ಹಣಕಾಸಿನ ಕೊರತೆಯಾಗುವ ಅಥವಾ ಸಂಶೋಧನೆಗಳು ಪೂರ್ಣಗೊಳ್ಳದೆಯೆ ಅನುತ್ಪಾದಕ ವೆಚ್ಚದಲ್ಲಿ ಕೊನೆಗೊಳ್ಳುವ ಸಾಧ್ಯತೆಯಿರುತ್ತದೆ. ಆದ್ದರಿಂದ ಯು.ಜಿ.ಸಿ/ಇತರೆ ಬಾಹ್ಯ ಏಜೆನ್ಸಿಗಳಿಂದ ಮಂಜೂರಾಗಿರುವ ಯೋಜನೆಗಳನ್ನು ನಿಯಮಿತವಾಗಿ ಮೌಲ್ಯಮಾಪನ ಮಾಡಿ ಸಕಾಲದಲ್ಲಿ ಹಣಬಳಕೆ ಪ್ರಮಾಣಪತ್ರಗಳನ್ನು ಅನುದಾನ ನೀಡುವ ಏಜೆನ್ಸಿಗಳಿಗೆ ಒದಗಿಸಿ ಕರಾರಿನಂತೆ ಪೂರ್ಣ ಅನುದಾನ ಪಡೆದುಕೊಳ್ಳಲು ಕ್ರಮ ವಹಿಸಲು ಸೂಚಿಸಿದೆ.

ಲೆಕ್ಕಪರಿಶೋಧನಾವರದಿಯ ಕಂಡಿಕೆ 6.22 ರಲ್ಲಿ 2018–19ನೇ ಸಾಲಿನ ಯು.ಜಿ.ಸಿ/ಇತರೆ ಬಾಹ್ಯ ಏಜೆನ್ಸಿಗಳಿಂದ ವಿವಿಧ ಯೋಜನೆಗಳಿಗೆ ಬಿಡುಗಡೆಯಾದ ಅನುದಾನಕ್ಕೆ ಸಂಬಂಧಪಟ್ಟವರಿಗೆ ಹಣ ಬಳಕೆ ಪ್ರಮಾಣ ಪತ್ರಗಳನ್ನು ಸಲ್ಲಿಸಿರುವುದಿಲ್ಲವೆಂದು ಆಕ್ಷೇಪಿಸಿ ಬಾಕಿ ಉಳಿದಿರುವ 70 ಯೋಜನೆಗಳಿಗೆ ಹಣ ಬಳಕೆ ಪ್ರಮಾಣ ಪತ್ರವನ್ನು ಸಲ್ಲಿಸುವಂತೆ ಸೂಚಿಸಲಾಗಿದೆ ಆದರೆ 2018–19ನೇ ಸಾಲಿನಲ್ಲಿ ಹೊಸದಾಗಿ ಪ್ರಾರಂಭಗೊಂಡ 24 ಯೋಜನೆಗಳನ್ನೊಳಗೊಂಡಂತೆ 84 ಯೋಜನೆ (60+24=84)ಗಳಲ್ಲಿ 2018–19ರಲ್ಲಿ 14, ಯೋಜನೆಗಳಿಗೆ ಸಂಬಂಧಪಟ್ಟ ಯುಜಿಸಿ/ಏಜೆನ್ಸಿಗಳವರಿಗೆ ಬಳಕೆ ಪ್ರಮಾಣ ಪತ್ರಗಳನ್ನು ಸಲ್ಲಿಸಲಾಗಿರುತ್ತದೆ. ಉಳಿದಂತೆ ಉಳಿಕೆ 70 ಯೋಜನೆಗಳಿಗೆ ಸಂಬಂಧಿಸಿದ ಹಣ ಬಳಕೆ ಪ್ರಮಾಣ ಪತ್ರಗಳನ್ನು ಅನುದಾನ ಬಿಡುಗಡೆ ಮಾಡಿದ ಯುಜಿಸಿ/ಏಜೆನ್ಸಿಗಳಿಗೆ ಕಾಲಕಾಲಕ್ಕೆ ಈಗಾಗಲೇ ಸಲ್ಲಿಸಲಾಗಿದ್ದು ಈ 70 ಯೋಜನೆಗಳ ವಿವರ ಈ ಕೆಳಕಂಡಂತಿರುತ್ತದೆ.

| SL NO | NAME OF THE PROJECT/FELLOWSHIP | SUBMITTED UC |
|---|---|---|
| 1 | Biofilm And Qorum Sensing Inhibitory Phytochemicalsfor The Control Of Food-Borne Pathogens In Fruits And Vegitables . DRDO (Dte Of ER &IPR) For An Extramural Research Grant. DOS IN MICROBIOLOGY | 2018-19 |
| 2 | Snake venom induecd NET osis: Characterization of toxin/responsible and merchanism of action. DST SERB GRANT. DOS IN BIOCHEMISTRY | 2018-19 |
| 3 | The role of inflammasome in snake bite envenomation: possible therapeutic target in local tissuedamage. DST SERB GRANT. DOS IN MOLUCULAR BIOLOGY | 2018-19 |
| 4 | Novel site specific delivery of biologic from the multi-component silk-fibroin scaffolds for revival of ischemic scar tissue to functional myocardim. DST INSPIRE FACULTY PROGRAMME. DOS IN SERECULTURE SCIENCE | 2018-19 |
| 5 | ABHILASH M.R DST INSPIRE FELLOWSHIP DOS IN ENVIORNMENTAL SCIENCE | 2018-19 |
| 6 | STAFNY MELONY D SOUZA DST INSPIRE FELLOWSHIP DOS IN Genetics & Genomics | 2018-19 |
| 7 | SWATI AGRAWALA DST INSPIRE FELLOWSHIP DOS IN Genetics & Genomics | 2018-19 |
| 8 | UCHENNA ULAMMA WATURUOCHA DST INSPIRE FELLOWSHIP DOS IN Zoology | 2018-19 |
| 9 | RUMANA FARHEEN S M DST INSPIRE FELLOWSHIP DOS IN Physics | 2018-19 |

| | |
|---|---|
| ವಿಶ್ವವಿದ್ಯಾನಿಲಯದವರು ಹಾಜರುಪಡಿಸಿದ ತಃಖ್ತೆಗಳ ಪ್ರಕಾರ ಕಳೆದ ಮೂರು ವರ್ಷಗಳಲ್ಲಿ ಅನುದಾನವನ್ನು ಸಕಾಲದಲ್ಲಿ ಬಳಸದೇ ಹಾಗೂ ಹಣಬಳಕೆ ಪತ್ರಗಳನ್ನು ಸಲ್ಲಿಸದೇ ಇರುವುದರಿಂದ ವಿವಿಧ ಯೋಜನೆಗಳಡಿ ಅನುದಾನ ಕಡಿತವಾಗಿರುವ ವಿವರಗಳನ್ನು **ಅನುಬಂಧ– 23**ರಲ್ಲಿ ನೀಡಲಾಗಿದೆ. | |

| | | |
|---|---|---|
| 10 | PUJA DEVI NONGTHOMBAM DST INSPIRE FELLOWSHIP DOS IN Zoology | 2018-19 |
| 11 | SUMASHRI K S DST INSPIRE FELLOWSHIP DOS IN Botony | 2018-19 |
| 12 | KUMARA H K DST INSPIRE FELLOWSHIP DOS IN Chemistry | 2018-19 |
| 13 | SARJAN H N DST INSPIRE FELLOWSHIP DOS IN Zoology | 2018-19 |
| 14 | DR. K V AIAHANNA Sr.Fellowship ICSSR DON IN IDS | 2018-19 |
| 15 | UGC SPECIAL ASSISTANCE PROGRAM AT THE LEVEL OF DRS-2 DOS IN MATHAMATICS | 2018-19 |
| 16 | SOWMYA T N RESEARCH FELLOW DOS IN BOTONY | 2018-19 |
| 17 | DR.M S VIJAYKUMAR, RAMANUJAN FELLOWSSHIP DON IN CHEMISTRY | 2018-19 |
| 18 | DUKANYA FELLOWSHIP DOS IN CHEMISTRY | 2018-19 |
| 19 | High-thoughput method to explore novel inhibitors against cancer and infectious diseases | 2018-19 |
| 20 | UGC -SAP-DRS-3 PROJECT DOS IN CHEMISTRY | 2018-19 |
| 21 | Design Synthesis,Characterzation and Biological Studies of Novel small molecule that target Artemin and synergistic effect with P13K/AKT inhibitors in human mammary carcinoma cells project DOS IN IN CHEMISTRY | 2018-19 |
| 22 | Influence of particulate matter oxidative potential on resporatory health DOS IN ENVIORNMENT SCIENCE | 2018-19 |
| 23 | USHA RANI ICSSR FELLOWSHIP DOS IN JOURNALISUM AND MASS COMMUNICATION | 2018-19 |
| 24 | UGC-DRS (SAP)-II , DOS IN FOOD SCIENCE & NUTRITION | 2018-19 |
| 25 | TRAINING RESEARCH METHODOLOGY , DOS IN ANTHROPOLOGY | 2018-19 |
| 26 | ON MODELLING EXTREMES OF RANDOM PHENOMENA , DOS IN STATISTICS | 2018-19 |
| 27 | DST - SERB , INTEGRATED HYDROLOGEOLOGICAL STUDIES OF PERIYAPATNA TALUK MYSORE DUSTIRCT, KARNATAKA, SOUTH INDIA. | 2018-19 |
| 28 | POST PROJECT EVALUATION STUDY OF SANSAD ADARSH GRAMA YOZANA (SAGY), DOS IN BIMS | 2018-19 |
| 29 | UGC-FRP FACULTY Dr. PRAVEENA DOS IN STATISTICS | 2018-19 |
| 30 | DISHA PROGRAMME FOR WOMEN IN SCIENCE-1954, DOS IN WOMEN STUDIES. | 2018-19 |
| 31 | UGC- CAS-I, DOS IN EARTH SCIENCE | 2018-19 |

| | | |
|---|---|---|
| 32 | J.C. BOSE FELLOWSHIP, DOS IN PSYCHOLOGY | 2018-19 |
| 33 | STUDIES ON THE INHIBITION OF ADVANCED GLYCATION END PRODUCT FORMATION AND RETINO- PROTECTIVE EFFECTS OF GLYCOSYL FLAVONOIDS FROM MORUS INDICAL. IN EXPERIMENTAL DIABETES. DOS IN FOOD SCIENCE & NUTRITION | 2018-19 |
| 34 | 36TH INTERNATIONAL GEOLOGICAL CONGRESS, DOS IN EARTH SCIENCE PROF. ASHA MANJARI | 2018-19 |
| 35 | DHR-ICMR " FROM NUTRIGENETICS TO PERSONALIZED NUTRITION, DOS IN FOOD SCIENCE & NUTRITION | 2018-19 |
| 36 | TOURISM MARKETING TO PROMOTE LOCAL ENTERPRENEURSHIP- A CASE STUDY OF CHAMARAJANAGAR DISTRICT, DOS IN BIMS. | 2018-19 |
| 37 | DBT-HRD FINANCIAL SUPPORT FOR STRENGHTHENING THE ON-GOING M.Sc BIOTECHNOLOGY PROGRAMME. | 2018-19 |
| 38 | UGC-SAP DSA PROGRAMME | 2018-19 |
| 39 | UGC - MRP MOLECULAR STUDIE ON FLORAL MALFORMATION IN PEARL MILLET DUE TO DOWNY MILDEW INFECTION | 2018-19 |
| 40 | UGC-BSR MID CAREER AWARD GRANT ON M.Sc BIOTECHNOLOGY | 2018-19 |
| 41 | WOMEN SCIENTISTS SCHEME | 2018-19 |
| 42 | NATIONAL SCIENCE AND TECHNOLOGY MANAGEMENT INFORMATION SYSTEM ( NSTMIS) | 2018-19 |
| 43 | ICMR FELLOW, Dr. SRI RAGHAVA | 2018-19 |
| 44 | DST-SATHYAM SCIENCE AND TECHNOLOGY FOR YOGA AND MEDITATION | 2018-19 |
| 45 | ICSSR SENIOR FELLOWSHIP, DOS IN COMMERCE | 2018-19 |
| 46 | ACCELERATION UNIVERSAL HEALTH CARE COVREAGE IN INDIA (CSSEIP) | 2018-19 |
| 47 | MAKE INDIA AND DIGITAL INDIA EMPOWERMENT AND TRANSFORMATION FOR INCLUSIVE GROWTH (NATIONAL SEMINAR)(CSSEIP) | 2018-19 |
| 48 | ICMR -SRF BIOSSAY GUIDED ISOLATION OF ANTIMIRCOBIAL FROM MYCOENDOPHYTES, MICROBIOLOGY | 2018-19 |
| 49 | STUDY ON MODE OF ACTION OF MYCOENDOPHYTIC SECONDARY METABOLIC IN CONTROLLING MULTIDRUG RESISTANT ORGANISMS, ICMR-SRF, MICROBIOLOGY | 2018-19 |

| | | |
|---|---|---|
| 50 | DST-SERB PROBIOTIC BASED BOARD SPECTRUM ANT-FUNGAL TECHNOLOGY FOR THE TOTAL CONTROL OF MYCOTOXIGENIC FUSARIUM SPECIES TO INCREASE THE SAFETY AND SALF-LIFE OF CEREAL BASED FOODS | 2018-19 |
| 51 | STAFF SALARY CSSEIP NCW | 2018-19 |
| 52 | MADHU G .R ICSSR RESEARCH FELLOWSHIP, DOS IN ECONOMICS AND CO-OPERATION | 2018-19 |
| 53 | UGC -SAP- CAS- PHASE 1 | 2018-19 |
| 54 | ICSSR SHRTHI RAJ FELLOWSHIP DOS IN ECONOMICS AND CO-OPERATION | 2018-19 |
| 55 | DBT PROJECT PG DIPLOMA COURSE | 2018-19 |
| 56 | ICSSR FELLOWSHIP JAVID AHMED TALI DOS IN GEOGRAPHY | 2018-19 |
| 57 | ICMR FELLOWSHIP THEJASWINI PRAKASH DOS IN Genetics & Genomics | 2018-19 |
| 58 | UGC-MRP PROJECT DR.LOKANATH DOS IN PHYSICS | 2018-19 |
| 59 | DST-SERB DR CHANDRASHEKAR DOS IN PHYSICS | 2018-19 |
| 60 | ICSSR ASHREYA CHAKRAVARTHY DOS IN LAW | 2018-19 |
| 61 | ICSSR DR. MANJU PRASAD DOS IN ECONOMICS AND CO-OPERATION | 2018-19 |
| 62 | ICSSR-PDF DR.RAMACHANDRA MURTHY DOS IN ECONOMICS AND CO-OPERATION | 2018-19 |
| 63 | ICSSR GANGADHARA.G DOS IN GEOGRAPHY | 2018-19 |
| 64 | UGC RESEARCH AWARD FELLOWSHIP DR.HARISH NAYAK MANDYA P.G CENTRE | 2018-19 |
| 65 | DST-PURSE DR.CHANDRA NAYAK | 2018-19 |
| 66 | DBT PROJECT DR.RAMACHANDRA DOS IN ZOOLOGY | 2018-19 |
| 67 | IOE | 2018-19 |
| 68 | UGC-HRDC | 2018-19 |
| 69 | ICSSR PROJECT (CSSEIP) | 2018-19 |
| 70 | CSSEIP Agrarian crises and formers sucide in india | 2018-19 |

ಈ ನಿಟ್ಟಿನಲ್ಲಿ ಸದರಿ ಕಂಡಿಕೆಯ ಆಕ್ಷೇಪಣೆಯನ್ನು ಕೈ ಬಿಡುವಂತೆ ನಿವೇದಿಸುತ್ತ ಸದರಿ 70 ಯೋಜನೆಯ ಹಣ ಬಳಕೆ ಪ್ರಮಾಣ ಪತ್ರಗಳ ನಕಲುಗಳನ್ನು ಮಾಹಿತಿಗಾಗಿ ಇದರೊಂದಿಗೆ ಲಗತ್ತಿಸಲಾಗಿದೆ.

**6.23. ಯು.ಪಿ.ಇ ಯೋಜನೆಯಡಿ ವಿಶ್ವವಿದ್ಯಾನಿಲಯದ ವಿವಿಧ ಪ್ರಯೋಗಾಲಯಗಳ ಉಪಕರಣಗಳ ವಾರ್ಷಿಕ ನಿರ್ವಹಣೆಯ ವೆಚ್ಚವನ್ನು ಮುಂಗಡವಾಗಿ ಪಾವತಿಸಿರುವುದು :**

2018–19ನೇ ಸಾಲಿನಲ್ಲಿ ಯು.ಪಿ.ಇ ಯೋಜನೆಯಡಿಯಲ್ಲಿ ವಿಶ್ವವಿದ್ಯಾನಿಲಯದ ವಿವಿಧ ಪ್ರಯೋಗಾಲಯಗಳಲ್ಲಿನ ಉಪಕರಣಗಳ ವಾರ್ಷಿಕ ನಿರ್ವಹಣೆಗಾಗಿ ವಿವಿಧ ಸಂಸ್ಥೆಗಳಿಗೆ 3 ವರ್ಷಗಳ ವಾರ್ಷಿಕ ನಿರ್ವಹಣಾ ವೆಚ್ಚವನ್ನು ನಿರ್ವಹಣಾ ಅವಧಿಯ ಪ್ರಾರಂಭದಲ್ಲಿಯೇ ಮುಂಗಡವಾಗಿ ಪಾವತಿಸಲಾಗಿರುತ್ತದೆ. ಈ ಸಂಬಂಧ ಸೂಕ್ತ ಸ್ಪಷ್ಟೀಕರಣದೊಂದಿಗೆ ಪೂರಕ ದಾಖಲಾತಿಗಳನ್ನು ಹಾಜರುಪಡಿಸುವಂತೆ ವಿಚಾರಣಾಪತ್ರ ಸಂಖ್ಯೆ:176/2020–21, ದಿನಾಂಕ:11.06.2020ನ್ನು ನೀಡಲಾಗಿತ್ತು. ಆದರೆ ವಿಶ್ವವಿದ್ಯಾನಿಲಯದವರು ಯಾವುದೇ ರೀತಿಯ ದಾಖಲಾತಿಗಳನ್ನು ಹಾಜರು ಪಡಿಸಿರುವುದಿಲ್ಲ. ಪ್ರತೀ ವಾರ್ಷಿಕ ನಿರ್ವಹಣಾ ಅವಧಿ ಪೂರ್ಣಗೊಂಡ ನಂತರ ನಿರ್ವಹಣಾ ವೆಚ್ಚವನ್ನು ಪಾವತಿಸುವ ಬದಲು ಮುಂಗಡವಾಗಿಯೇ ಪಾವತಿಸಿರುವುದು ನಿಯಮ ಬಾಹಿರವಾಗಿರುತ್ತದೆ. ಆದ್ದರಿಂದ ಈ ರೀತಿ ಮುಂಗಡವಾಗಿ ಹಣ ಪಾವತಿಸಲು ಕಾರಣರಾದವರ ವಿರುದ್ಧ ಆಡಳಿತಾತ್ಮಕ ಕ್ರಮ ಕೈಗೊಳ್ಳಲು ಸೂಚಿಸಿದೆ. ಮೂರು ವರ್ಷಗಳ ನಿರ್ವಹಣಾ ವೆಚ್ಚವನ್ನು ಮುಂಗಡವಾಗಿ ಪಾವತಿಸಿರುವುದರಿಂದ ಉಪಕರಣಗಳ ನಿರ್ವಹಣೆಯಲ್ಲಿ ವ್ಯತ್ಯಾಸಗಳುಂಟಾದಲ್ಲಿ ಅಥವಾ ನಿರ್ವಹಣೆ ಮಾಡದಿದ್ದಲ್ಲಿ ಸಂಬಂಧಿತ ಸಂಸ್ಥೆಗಳಿಗೆ ಯಾವುದೇ ಜವಾಬ್ದಾರಿಯನ್ನು ನಿಗದಿಪಡಿಸಲು ಸಾಧ್ಯವಾಗುವುದಿಲ್ಲ. ಇದರಿಂದ ವಿಶ್ವವಿದ್ಯಾನಿಲಯಕ್ಕೆ ಆರ್ಥಿಕ ನಷ್ಟ ಉಂಟಾಗುವ ಸಂಭವವಿರುತ್ತದೆ. ಅಲ್ಲದೆ ಈ ಕ್ರಿಯೆಯಿಂದ ನಿರ್ವಹಣಾ ಸಂಸ್ಥೆಗಳಿಗೆ ಪರೋಕ್ಷವಾಗಿ ಅನುಕೂಲ ಮಾಡಿಕೊಟ್ಟಂತಾಗಿದ್ದು, ಈ ಸಂಬಂಧ ಪಾವತಿಸಲಾದ ಒಟ್ಟು ಮೊತ್ತ **ರೂ.27,44,125/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ**. ಹಾಗೂ ನಿರ್ವಹಣಾ ವೆಚ್ಚವನ್ನು ನಿರ್ವಹಣಾ ಅವಧಿ ಪೂರ್ಣಗೊಂಡ ನಂತರ ಪಾವತಿಸಲು ಕ್ರಮ ಕೈಗೊಳ್ಳಬಹುದಾಗಿರುತ್ತದೆ. ವಿವರಗಳನ್ನು **ಅನುಬಂಧ–24ರ**ಲ್ಲಿ ನೀಡಲಾಗಿದೆ.

ಕಂಡಿಕೆ 6.23 ಅನುಬಂಧ–24ರಲ್ಲಿ ಪ್ರಸ್ತಾಪಿಸಿರುವ 7 ಸಂಸ್ಥೆಯವರಿಂದ 2018–19ನೇ ಸಾಲಿನಲ್ಲಿ ಯು,ಪಿ,ಇ ಯೋಜನೆಯಡಿಯಲ್ಲಿ ವಿವಿಧ ಪ್ರಯೋಗಾಲಯಗಳಿಗೆ ವಿವಿಧ ಉಪಕರಣಗಳನ್ನು ಅಳವಡಿಸಿದ್ದು ಸದರಿ ಉಪಕರಣಗಳ ವಾರ್ಷಿಕ ನಿರ್ವಹಣೆಯನ್ನು ಅನುಬಂಧ–24 ರಲ್ಲಿ ವಿವರಿಸಿರುವ ಕಾಮಗಾರಿಗಳ ಉಪಕರಣಗಳನ್ನು ನಿರ್ವಹಿಸಲು ಪ್ರತಿಯೊಂದು ಸಂಸ್ಥೆಯವರಿಂದ ಕರಾರು ಪತ್ರದೊಂದಿಗೆ ಬ್ಯಾಂಕ್ ಗ್ಯಾರಂಟಿಗಳನ್ನು ಪಡೆದು ಮೂರು ವರ್ಷಗಳ ಅವಧಿಗೆ ವಹಿಸಲಾಗಿತ್ತು. ಈ ಸಂಬಂಧ ಸದರಿ ಸಂಸ್ಥೆಯವರು ನಿರ್ವಹಣೆಯ ಕಾರ್ಯವನ್ನು ಸಮರ್ಪಕವಾಗಿ ನಿರ್ವಹಿಸಿರುವುದಾಗಿ ಸಂಬಂಧಪಟ್ಟ ಇಲಾಖೆಯವರು ಧೃಢೀಕರಣವನ್ನು ನೀಡಿರುತ್ತಾರೆ, ಅಲ್ಲದೆ ಈ ಅವಧಿಯಲ್ಲಿ ಅಳವಡಿಸಿರುವಂತಹ ಉಪಕರಣಗಳ ವಾರ್ಷಿಕ ನಿರ್ವಹಣೆಯ ಬಗ್ಗೆ ಯಾವುದೇ ಅಡಚಣೆಯಾಗಿರುವುದಿಲ್ಲವೆಂಬ ಅಂಶವನ್ನು ಸಹ ಸಂಬಂಧಪಟ್ಟ ಇಲಾಖೆ ಮುಖ್ಯಸ್ಥರು ಸ್ಪಷ್ಟೀಕರಣವನ್ನು ನೀಡಿರುತ್ತಾರೆ.

ಮುಂದುವರಿದು ವಾರ್ಷಿಕ ನಿರ್ವಹಣೆಯ ಅವಧಿ ಮುಗಿದಯುವ ಮೊದಲೆ ವಾರ್ಷಿಕ ನಿರ್ವಹಣಾ ವೆಚ್ಚ ಭರಿಸಲಾಗಿದೆ ಎಂಬ ಅಂಶವನ್ನು ಕಂಡಿಕೆಯಲ್ಲಿ ಪ್ರಸ್ತಾಪಿಸಿದ್ದು, ಈ ಬಗ್ಗೆ ಸದರಿ ಸಂಸ್ಥೆಯವರು ಮುಂಗಡವಾಗಿ ಹಣ ಪಾವತಿಯ ಬೇಡಿಕೆ ಮೇರೆಗೆ ಹಾಗೂ ಬ್ಯಾಂಕ್ ಗ್ಯಾರಂಟಿಯು ವಿಶ್ವವಿದ್ಯಾನಿಲಯದ ಅಧೀನದಲ್ಲಿದ್ದುದರಿಂದ ಅನಿವಾರ್ಯ ಕಾರಣದಿಂದ ಸಂಸ್ಥೆಯವರಿಗೆ ಮುಂಗಡ ಹಣ ನೀಡಲಾಗಿದೆ ಆದರೆ ಈ ಅವಧಿಯಲ್ಲಿ ಯವುದೇ ಸಂಸ್ಥೆಯವರಿಂದ ವಾರ್ಷಿಕ ನಿರ್ವಹಣೇಯ ಲೋಪದೋಶಗಳು ಕಂಡು ಬಂದಿರುವುದಿಲ್ಲ. ಎಂಬ ಅಂಶವನ್ನು ಲೆಕ್ಕಪರಿಶೋಧನಾ ಗಮನಕ್ಕೆ ತರಲಾಗಿದೆ.

ಈ ನಿಟ್ಟಿನಲ್ಲಿ ಸದರಿ ಆಕ್ಷೇಪಿತ ಮೊತ್ತ ರೂ.27,44,125/–ಗಳನ್ನು ಆಕ್ಷೇಪಣೆಯಿಂದ ಕೈ ಬಿಡುವಂತೆ ನಿವೇದಿಸಲಾಗಿದೆ.

| | |
|---|---|
| **6.24. ಭದ್ರತಾ ಠೇವಣಿಯ ಬ್ಯಾಂಕ್ ಗ್ಯಾರಂಟಿಯ ನೈಜತೆ ಬಗ್ಗೆ ಬ್ಯಾಂಕಿನಿಂದ ದೃಢೀಕರಣ ಪಡೆಯದೇ ಗುತ್ತಿಗೆ ಕರಾರು ಮಾಡಿಕೊಂಡಿರುವುದು :**<br>2018–19ನೇ ಸಾಲಿನಲ್ಲಿ ವಿಶ್ವವಿದ್ಯಾನಿಲಯದ ವಿದ್ಯಾರ್ಥಿನಿಲಯಗಳಲ್ಲಿ ಭೋಜನ ವ್ಯವಸ್ಥೆಯನ್ನು ಕಲ್ಪಿಸಲು ದೈನಂದಿನ ಅಡುಗೆ ತಯಾರಿಕೆಗೆ ಬೇಕಾದ ಪಾತ್ರೆ ಪರಿಕರಗಳನ್ನು ಖರೀದಿ ಸಂಬಂಧ ರೂ.23,86,620/–ಗಳ ಬಿಲ್ಲನ್ನು (ಧನಾದೇಶ ಸಂಖ್ಯೆ:953922–23/ ದಿನಾಂಕ:07.07.2018) ಮೆ॥ ವಿನಾಯಕ ಎಂಟರ್ ಪ್ರೈಸಸ್, ಚಾಮರಾಜನಗರ ಇವರಿಗೆ ಪಾವತಿಸಲಾಗಿರುತ್ತದೆ. ಈ ಸಂಬಂಧ ಪೂರಕ ದಾಖಲಾತಿಗಳನ್ನು ಹಾಜರುಪಡಿಸುವಂತೆ ವಿಚಾರಣಾ ಪತ್ರ ಸಂಖ್ಯೆ:27/09.03.2020ನ್ನು ನೀಡಲಾಗಿತ್ತು.<br>ಅದರಂತೆ ಹಾಜರುಪಡಿಸಲಾದ ದಾಖಲಾತಿಗಳನ್ನು ಪರಿಶೀಲಿಸಿದಾಗ ಗುತ್ತಿಗೆದಾರರು ಭದ್ರತಾಠೇವಣಿಯಾಗಿ ಟೆಂಡರ್ ಗಿಟ್ಟ ಮೊತ್ತದ ಶೇ.5ರಷ್ಟು ಮೊತ್ತ ರೂ.1,19,331/–ಗಳನ್ನು ಭದ್ರತಾ ಠೇವಣಿಯಾಗಿ ಸಿಂಡಿಕೇಟ್ ಬ್ಯಾಂಕಿನ ಬ್ಯಾಂಕ್ ಗ್ಯಾರಂಟಿ ಮೂಲಕ ನೀಡಿರುತ್ತಾರೆ. ಸದರಿ ಬ್ಯಾಂಕ್ ಗ್ಯಾರಂಟಿಯನ್ನು ಅದರ ನೈಜತೆ ಬಗ್ಗೆ ಬ್ಯಾಂಕಿನಿಂದ ಖಚಿತ ಪಡಿಸಿಕೊಂಡ ನಂತರ ಗುತ್ತಿಗೆಕರಾರು ಮಾಡಿಕೊಳ್ಳಬೇಕಾಗಿರುತ್ತದೆ. ಆದರೆ ಈ ಬಗ್ಗೆ ಬ್ಯಾಂಕಿನಿಂದ ಯಾವುದೇ ದೃಢೀಕರಣವನ್ನು ಪಡೆಯದಿರುವುದರಿಂದ ಬ್ಯಾಂಕ್ ಗ್ಯಾರಂಟಿಯ ನೈಜತೆಯ ಬಗ್ಗೆ ಖಚಿತಪಡಿಸಿಕೊಳ್ಳಲು ಸಾಧ್ಯವಾಗಿರುವುದಿಲ್ಲ. ಅಲ್ಲದೆ ಗುತ್ತಿಗೆದಾರರೊಂದಿಗೆ ಮಾಡಿಕೊಳ್ಳಲಾದ ಕರಾರು ಪತ್ರ ದಿನಾಂಕ:06.02.2018 ಆಗಿದ್ದು, ದಿನಾಂಕ:04.01.2018 ರಿಂದ ಪೂರ್ವಾನ್ವಯವಾಗುವಂತೆ ಕರಾರು ಮಾಡಿಕೊಳ್ಳಲಾಗಿರುತ್ತದೆ. ಈ ರೀತಿ ಪೂರ್ವಾನ್ವಯವಾಗುವಂತೆ ಗುತ್ತಿಗೆ ಕರಾರು ಮಾಡಿಕೊಳ್ಳಲು ನಿಯಮಗಳಡಿ ಅವಕಾಶವಿರುವುದಿಲ್ಲ. ಆದ್ದರಿಂದ ಈ ನ್ಯೂನತೆಗಳಿಗೆ ಕಾರಣರಾದವರ ವಿರುದ್ಧ ಆಡಳಿತಾತ್ಮಕ ಕ್ರಮ ಕೈಗೊಳ್ಳಲು ತಿಳಿಸಿದೆ. | 2018–19ನೇ ಸಾಲಿನಲ್ಲಿ ವಿಶ್ವವಿದ್ಯಾನಿಲಯದ ವಿದ್ಯಾರ್ಥಿನಿಲಯಗಳಲ್ಲಿ ಭೋಜನ ವ್ಯವಸ್ಥೆಯನ್ನು ಕಲ್ಪಿಸಲುಬೇಕಾದ ಅವಶ್ಯಕವಾದ ಅಡುಗೆ ಪಾತ್ರೆ ಪರಿಕರಗಳನ್ನು ಖರೀದಿಸಿದ ಬಾಬ್ತು ರೂ.2383620/–ಗಳನ್ನು ಮೆ॥ ವಿನಾಯಕ ಎಂಟರ್ ಪ್ರೈಸಸ್, ಚಾಮರಾಜನಗರ ಇವರಿಗೆ ಧನಾದೇಶ ಸಂಖ್ಯೆ:953922–23 ದಿನಾಂಕ:07.07.2018 ರಲ್ಲಿ ಪಾವತಿಸಲಾಗಿರುತ್ತದೆ. ಈ ಸಂಬಂಧ, ಸಂಬಂಧಪಟ್ಟ ಪೂರಕ ದಾಖಲಾತಿಗಳ ಕರಾರು ಪತ್ರ ವಿಶ್ವವಿದ್ಯಾನಿಲಯದ ಆದೇಶ ಪತ್ರ, ಬಿಲ್ಲುಗಳ ವಿವರ, ಸಿಂಡಿಕೇಟ್ ಸಭೆಯ ಪತ್ರ ವಿದ್ಯಾರ್ಥಿನಿಲಯಗಳ ಆಡಳಿತ ನಿರ್ವಹಣೆ ಹಾಗೂ ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿ ಸಲಹಾ ಸಮಿತಿಯ ಸಭೆಯ ನಡಾವಳಿ, ಟೆಂಡರು ದಾಖಲಾತಿಗಳು, ಹಾಗೂ ಇನ್ನಿತರ ದಾಖಲಾತಿಗಳನ್ನು ಮಾಹಿತಿಗಾಗಿ ಒದಗಿಸಲಾಗಿದೆ.<br>ಠೇವಣಿಯ ಬಗ್ಗೆ ಆಕ್ಷೇಪಣೆಯ ಕಂಡಿಕೆಯಲ್ಲಿ ಪ್ರಸ್ತಾಪಿಸಿ ಭದ್ರತಾ ಠೇವಣಿ ಪಡೆದ ಬ್ಯಾಂಕಿನ ನೈಜತೆಯ ಬಗ್ಗೆ ಸ್ಪಷ್ಟೀಕರಣ ಕೇಳಲಾಗಿದ್ದು ಸದರಿ ಭದ್ರತಾ ಠೇವಣಿಗೆ ಬ್ಯಾಂಕ್ ಗ್ಯಾರಂಟಿಯನ್ನು ಬ್ಯಾಂಕಿನ ಅಧಿಕಾರಿಗಳು ನೀಡಲಾಗಿದ್ದು ನೀಡಲಾದ ಬ್ಯಾಂಕ್ ಗ್ಯಾರಂಟಿಗೆ ಬ್ಯಾಂಕಿನ ಮುಖ್ಯ ಮೇನೇಜರ್ ರವರು ಹಾಗೂ ಇಬ್ಬರು ಹಿರಿಯ ಅಧಿಕಾರಿಗಳು ಸಹಿ ಮಾಡಿ ದೃಢೀಕರಿಸಿದ್ದು, ಸದರಿ ಬ್ಯಾಂಕ್ ಗ್ಯಾರಂಟಿ ಪತ್ರವನ್ನು ಒದಗಿಸಿದ್ದು ಈ ಮಾಹಿತಿಯನ್ನು ಲೆಕ್ಕಪರಿಶೋಧನೆಗೆ ಸಲ್ಲಿಸಲಾಗಿದೆ.<br>ಈ ನಿಟ್ಟಿನಲ್ಲಿ ಸದರಿ ಆಕ್ಷೇಪಣೆಯನ್ನು, ಆಕ್ಷೇಪಣೆಯ ಕಂಡಿಕೆಯಿಂದ ಕೈ ಬಿಡುವಂತೆ ನಿವೇದಿಸಲಾಗಿದೆ. |
| **6.25. ಇತಿಹಾಸ ಅಧ್ಯಯನ ವಿಭಾಗದಲ್ಲಿ ಸಮಗ್ರತಾ ದೃಷ್ಟಿ ಮತ್ತು ಅಭಿವೃದ್ಧಿಯ ರಾಷ್ಟ್ರೀಯ ಕಾರ್ಯಾಗಾರ ವ್ಯವಸ್ಥೆಯ ಸಂಬಂಧ ಕರೆದಿರುವರೆನ್ನಲಾದ ದರಪಟ್ಟಿಗಳಲ್ಲಿನ ನ್ಯೂನತೆಗಳು :**<br>2018–19ನೇ ಸಾಲಿನಲ್ಲಿ ಯು.ಪಿ.ಇ ಯೋಜನೆಯಡಿಯಲ್ಲಿ ಇತಿಹಾಸ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇಲ್ಲಿ ನಡೆದ ಸಮಗ್ರತಾ ದೃಷ್ಟಿ ಮತ್ತು ಅಭಿವೃದ್ಧಿಯ ರಾಷ್ಟ್ರೀಯ ಕಾರ್ಯಾಗಾರಕ್ಕೆ ಸಂಬಂಧಿಸಿದಂತೆ ಪಾವತಿಸಲಾದ ಮೊತ್ತಗಳ ದಾಖಲಾತಿಗಳನ್ನು ಪರಿಶೀಲಿಸಲಾಗಿ, ವಿವಿಧ ಸಂಸ್ಥೆಗಳಿಂದ ಬೇರೆ ಬೇರೆ ಸೇವೆಗಳಿಗಾಗಿ ದರಪಟ್ಟಿ ಕರೆದಂತೆ ದಾಖಲಾತಿಗಳನ್ನು ನಿರ್ವಹಿಸಲಾಗಿದ್ದು, ನಿರ್ವಹಿಸಿರುವ ದರ ಪಟ್ಟಿಗಳಲ್ಲಿ ದರಪಟ್ಟಿ ಸಲ್ಲಿಸಿರುವವರ ಸಹಿ ಹಾಗೂ ದಿನಾಂಕ ಇರುವುದಿಲ್ಲ. ದರಪಟ್ಟಿ ಆಹ್ವಾನಿಸಿದವರು ದರಪಟ್ಟಿಗಳನ್ನು ತೆರೆದ ಬಗ್ಗೆ ದೃಢೀಕರಣ, ದಿನಾಂಕ ಹಾಗೂ ಸಹಿ ಇರುವುದಿಲ್ಲ. ಆದ್ದರಿಂದ ದರಪಟ್ಟಿಗಳ ಹಾಗೂ ಸಂಸ್ಥೆಗಳ ನೈಜತೆಯ ಬಗ್ಗೆ ಖಚಿತಪಡಿಸಿಕೊಳ್ಳಲು | ಕಂಡಿಕೆ 6.25 ರಲ್ಲಿ ಗಮನಿಸಿ ಆಕ್ಷೇಪಿಸಿ ಪ್ರಸ್ತಾಪಿಸಲಾದ ಮಾಹಿತಿ ಅಂದರೆ ವಿವಿಧ ಸಂಸ್ಥೆಗಳಿಂದ ಬೇರೆ ಬೇರೆ ಸೇವೆಗಳಿಗಾಗಿ ಪಡೆದ ದರಪಟ್ಟಿಯಲ್ಲಿ ಸಂಬಂಧಪಟ್ಟ ಸಂಸ್ಥೆಯವರ ಸಹಿ ಹಾಗೂ ದಿನಾಂಕಗಳನ್ನು ನಮೂದಿಸಲಾಗಿರುತ್ತದೆ ಹಾಗೆ ದರಪಟ್ಟಿ ಆಹ್ವಾನಿಸಿದವರು ದರಪಟ್ಟಿಯನ್ನು ತೆರೆದ ಬಗ್ಗೆ ದೃಢೀಕರಣವಿಲ್ಲವೆಂದು ಪ್ರಸ್ತಾಪಿಸಲಾಗಿರುತ್ತದೆ. ಆದರೆ ಬಿಲ್ಲುಗಳ ಹಿಂಭಾಗದಲ್ಲಿ ಸಂಬಂಧಪಟ್ಟ ವಿಭಾಗದ ಮುಖ್ಯಸ್ಥರು ದೃಢೀಕರಿಸಿ ಸಹಿ ಮಾಡಿರುತ್ತಾರೆ. ಮಾಹಿತಿಗಾಗಿ ಸದರಿ ಬಿಲ್ಲುಗಳ ಜೆರಾಕ್ಸ್ ಪ್ರತಿಯನ್ನು ಲಗತ್ತಿಸಿದೆ.<br>ಈ ನಿಟ್ಟಿನಲ್ಲಿ ಸದರಿ ಆಕ್ಷೇಪಿತ ಮೊತ್ತ ರೂ.181000/–ಗಳನ್ನು ತೀರುವಳಿಗೊಳಿಸುವಂತೆ ಈ ಮೂಲಕ |

| | |
|---|---|
| ಸಾಧ್ಯವಾಗಿರುವುದಿಲ್ಲ. ಇದಕ್ಕೆ ಸಂಬಂಧಿಸಿದಂತೆ ವಿವರಣೆಯನ್ನು ನೀಡುವಂತೆ ವಿಚಾರಣಾ ಪತ್ರ ಸಂಖ್ಯೆ:188/2020-21, ದಿನಾಂಕ:11.06.2020ನ್ನು ನೀಡಲಾಗಿತ್ತು. ಆದರೆ ಯಾವುದೇ ವಿವರಗಳನ್ನು ಹಾಜರುಪಡಿಸದಿರುವುದರಿಂದ ಧನಾದೇಶ ಸಂಖ್ಯೆ:766281, ದಿನಾಂಕ:25.12.2018ರಲ್ಲಿ ಪಾವತಿಸಲಾದ ರೂ.80,000/- ಹಾಗೂ ಧನಾದೇಶ ಸಂಖ್ಯೆ:743670, ದಿನಾಂಕ:07.05.2018ರಲ್ಲಿ ಪಾವತಿಸಲಾದ ರೂ.1,01,000/- ಒಟ್ಟು **ರೂ.1,81,000/-ಗಳನ್ನು ಆಕ್ಷೇಪಣೆಯಲ್ಲಿರಿಸಿದೆ.** | ನಿವೇದಿಸಲಾಗಿದೆ. |
| **6.26. ವಿಶ್ವವಿದ್ಯಾನಿಲಯದ ತಾತ್ಕಾಲಿಕ ಉದ್ಯೋಗಿಗಳ ಭವಿಷ್ಯ ನಿಧಿ ವಂತಿಕೆಯ ದಂಡ ಹಾಗೂ ಬಡ್ಡಿ ಪಾವತಿಸಿರುವುದು :**<br><br>2018-19ನೇ ಸಾಲಿನಲ್ಲಿ ವಿಶ್ವವಿದ್ಯಾನಿಲಯದ ಜಿ.ಆರ್.ಎ ಖಾತೆಯಿಂದ ವಿಶ್ವವಿದ್ಯಾನಿಲಯದ ತಾತ್ಕಾಲಿಕ ಉದ್ಯೋಗಿಗಳ ಭವಿಷ್ಯ ನಿಧಿ ವಂತಿಕೆಯ ವಿಳಂಬ ಪಾವತಿಗಾಗಿ ಇ.ಪಿ.ಎಫ್ ಕಾಯ್ದೆ-1952 ರ ಸೆಕ್ಷನ್-14ರನ್ವಯ ವಿಧಿಸಿರುವ ದಂಡದ ಮೊತ್ತ ರೂ.15,468/-ಗಳು ಹಾಗೂ ಸೆಕ್ಷನ್ 17(ಕ್ಯೂ)ರನ್ವಯ ಪಾವತಿಸಬೇಕಾದ ಬಡ್ಡಿ ಮೊತ್ತ ರೂ.37,130/-ಗಳು,ಒಟ್ಟು ರೂ.52,598/-ಗಳನ್ನು (ಧನಾದೇಶ ಸಂಖ್ಯೆ:954422,ದಿನಾಂಕ:04.09.2018) ಪಾವತಿಸಲಾಗಿರುತ್ತದೆ. ದಂಡ ಮತ್ತು ಬಡ್ಡಿಯನ್ನು ವಿಶ್ವವಿದ್ಯಾನಿಲಯದಿಂದ ಪಾವತಿಸಿರುವುದಕ್ಕೆ ಸೂಕ್ತ ಸಮಜಾಯಿಷಿ ನೀಡಲು ವಿಚಾರಣಾ ಪತ್ರ ಸಂಖ್ಯೆ:37/2019-2020ನ್ನು ನೀಡಲಾಗಿತ್ತು. ವಿಶ್ವವಿದ್ಯಾನಿಲಯದವರು ನೀಡಿರುವ ಅನುಪಾಲನಾ ವರದಿಯಲ್ಲಿ ತಾತ್ಕಾಲಿಕ ನೌಕರರ ವೇತನ ಪಾವತಿಯು ಆಡಳಿತಾತ್ಮಕ ಹಾಗೂ ಇತರೆ ಕಾರಣಗಳಿಂದಾಗಿ ವಿಳಂಬವಾದುದರಿಂದ ದಂಡ ಮತ್ತು ಬಡ್ಡಿಯನ್ನು ಪಾವತಿಸಲಾಗಿದ್ದು, ಕಂಡಿಕೆಯನ್ನು ಕೈ ಬಿಡುವಂತೆ ಕೋರಿರುತ್ತಾರೆ. ಆದರೆ ತಾತ್ಕಾಲಿಕ ನೌಕರರ ವೇತನದ ಪಾವತಿಯು ನಿಯಮಿತವಾದಕಾರ್ಯವಾಗಿದ್ದು, ಸಕಾಲದಲ್ಲಿ ಭವಿಷ್ಯ ನಿಧಿ ವಂತಿಕೆಯನ್ನು ಪಾವತಿಸದಿರುವುದರಿಂದ ದಂಡ ಮತ್ತು ಬಡ್ಡಿಯನ್ನು ವಿಶ್ವವಿದ್ಯಾನಿಲಯದ ನಿಧಿಯಿಂದ ಪಾವತಿಸಿ ವಿಶ್ವವಿದ್ಯಾನಿಲಯಕ್ಕೆ ಅನಗತ್ಯವಾಗಿ ಆರ್ಥಿಕ ನಷ್ಟವನ್ನುಂಟು ಮಾಡಲಾಗಿರುತ್ತದೆ. ಆದ್ದರಿಂದ ವಿಳಂಭ ಪಾವತಿಗೆ ಕಾರಣರಾದವರಿಂದ ದಂಡ ಮತ್ತು ಬಡ್ಡಿಯ ಒಟ್ಟು ಮೊತ್ತ **ರೂ.52,598/-ಗಳನ್ನು ವಸೂಲಿಸಿ** ವಿಶ್ವವಿದ್ಯಾನಿಲಯದ ಖಾತೆಗೆ ಜಮಾ ಮಾಡಿ, ವಿವರಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಲು ಸೂಚಿಸಿದೆ. | ಕಂಡಿಕೆ 6.26ರ ಆಕ್ಷೇಪಣೆಗೆ ಸಂಬಂಧಿಸಿದಂತೆ, ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ತಾತ್ಕಾಲಿಕ ನೌಕರರಿಗೆ ಸಂಬಂಧಿಸಿದಂತೆ ಪ್ರತಿ ಮಾಹೆಯು ಇ.ಪಿ.ಎಫ್ ವಂತಿಕೆಯನ್ನು ವೇತನ ಪಾವತಿಯಾದ ನಂತರ ಇ.ಪಿ.ಎಫ್ ವಂತಿಕೆಯನ್ನು ಲೆಕ್ಕಾಚಾರಮಾಡಿ ಪಟ್ಟಿಯನ್ನು ಸಿದ್ಧಗೊಳಿಸಿ, ಇ.ಪಿ.ಎಫ್ ಸಂಸ್ಥೆಯ ಅಂತರ್ಜಾಲದಲ್ಲಿ ಇ.ಪಿ.ಎಫ್ ವಂತಿಕೆಯ ಚಲನ್‌ಗಳಲ್ಲಿ ಮಾಹಿತಿಯನ್ನು ಸಿದ್ಧಪಡಿಸಲಾಗುವುದು. ನಂತರ ಇ.ಪಿ.ಎಫ್ ವಂತಿಕೆ ಮೊತ್ತಗಳನ್ನು ಪಾವತಿಸಲು ಮಾನ್ಯ ಮುಖ್ಯಾಧಿಕಾರಿಗಳಿಂದ ಆದೇಶ ಪಡೆದು ಅಂತರ್ಜಾಲದ ಮೂಲಕ ಪಾವತಿಸುವುದು ನಿಯಮಿತವಾದ ಕಾರ್ಯವಾಗಿದೆ. **(ಕಾರ್ಯವೈಖರಿಯ ಪ್ರತಿಯನ್ನು ಲಗತ್ತಿಸಿದೆ.)**<br><br>ಆದರೆ, ತಾತ್ಕಾಲಿಕ ನೌಕರರಿಗೆ ಸಂಬಂಧಿಸಿದ ಇ.ಪಿ.ಎಫ್ ವಂತಿಕೆ ಮೊತ್ತದ ಚಲನ್‌ಅನ್ನು ನಿಗದಿತ ಸಮಯದೊಳಗೆ ಅಂತರ್ಜಾಲದ ಮೂಲಕ ಪಾವತಿಸಿದರೂ, ಕೆಲವೊಮ್ಮೆ ಅಂತರ್ಜಾಲದ ತಾಂತ್ರಿಕ ಸಮಸ್ಯೆಯಿಂದ ಪಾವತಿಯು ವಿಳಂಬವಾಗಿರುತ್ತದೆ. ಅಂದರೆ ಅಂತರ್ಜಾಲದ ಸಮಸ್ಯೆಯು ಒಮ್ಮೆ ಉದ್ಭವಿಸಿದರೆ, ಅದು ಸರಿಹೋಗಲು ಸುಮಾರು ಒಂದು ವಾರಗಳ ಕಾಲವಕಾಶ ತೆಗೆದುಕೊಳ್ಳುತ್ತದೆ. ಅಂತಃ ಸಂದರ್ಭಗಳಲ್ಲಿ ಇ.ಪಿ.ಎಫ್‌ನ ವಂತಿಕೆಯ ಮೊತ್ತಗಳ ಧನಾದೇಶಗಳು ಸಿದ್ಧವಿದ್ದರೂ ಸಹ ಅವುಗಳನ್ನು ಸಂಬಂದಪಟ್ಟ ಇಲಾಖೆಗೆ ನೇರವಾಗಿ ನಿಗಧಿತ ಸಮಯದಲ್ಲಿ (Manual) ಕಳುಹಿಸಲು ಸಾಧ್ಯವಾಗಿರುವುದಿಲ್ಲ. ಇ.ಪಿ.ಎಫ್ ಸಂಸ್ಥೆಯ ನಿರ್ದೇಶನದಂತೆ ವಂತಿಕೆಗಳನ್ನು ಅಂತರ್ಜಾಲದ ಮೂಲಕವೇ ಪಾವತಿಸಬೇಕಾಗಿರುತ್ತದೆ. ಆದ್ದರಿಂದ ಇ.ಪಿ.ಎಫ್ ವಂತಿಕೆ ಮೊತ್ತದ ಚಲನ್‌ಅನ್ನು ಅಂತರ್ಜಾಲದಲ್ಲಿ UPLOADಮಾಡಿದರೂ ಸಹ ಅಂತರ್ಜಾಲದ ಸಮಸ್ಯೆಯಿಂದ ಪಾವತಿಯು ವಿಳಂಬವಾಗುತ್ತದೆ. ಅದರಂತೆ ಏಪ್ರಿಲ್-2017, ಜೂನ್-2017 ರಿಂದ ಅಕ್ಟೋಬರ್-2017 ಮತ್ತು ಫೆಬ್ರವರಿ-2018 ರ ಮಾಹೆಗಳಲ್ಲಿ ಇ.ಪಿ.ಎಫ್ ವಂತಿಕೆಯ ಮೊತ್ತವು ನಿಗದಿತ ಸಮಯಕ್ಕಿಂತ 1 ರಿಂದ 4 ದಿನಗಳೊಳಗೆ ಮೇಲೆ ಪ್ರಸ್ತಾಪಿಸಿರುವಂತೆ ಅಂತರ್ಜಾಲಸಮಸ್ಯೆಯ ಕಾರಣದಿಂದ ವಿಳಂಬವಾಗಿರುತ್ತದೆ ಎಂಬ ಆಂಶವನ್ನು ಲೆಕ್ಕ ಪರಿಶೋಧನೆಯ ಗಮನಕ್ಕೆ ತರಲಾಗಿದೆ; |

| | |
|---|---|
| | ಮುಂದುವರಿದು ವರ್ಷಾಂತ್ಯದ ಡಿಸೆಂಬರ್ ಮಾಹೆಯಲ್ಲಿ ತಾತ್ಕಾಲಿಕ ನೌಕರರನ್ನು ಕರ್ತವ್ಯದಲ್ಲಿಬಿಡುಗಡೆಗೊಳಿಸಿ ನಂತರ ಕರ್ತವ್ಯದಲ್ಲಿ ಮುಂದುವರಿಯಲು ವಿಶ್ವವಿದ್ಯಾನಿಲಯದಿಂದ ಹೊಸ ಆದೇಶವನ್ನು ಹೊರಡಿಸಲಾಗುತ್ತದೆ. ಹೀಗೆ ಹೊಸ ಆದೇಶದಲ್ಲಿ ತಾತ್ಕಾಲಿಕವಾಗಿ ನೇಮಕ ಮಾಡಿಕೊಳ್ಳಲಾದ ನೌಕರರನ್ನು ಮತ್ತು ಅವರ ವೇತನವನ್ನು ಪರಿಶೀಲಿಸಿ, ಹೊಸದಾಗಿ ನೇಮಕಗೊಂಡ ನೌಕರರಿಗೆ ಇ.ಪಿ.ಎಫ್ UAN (Universal Account Number) ಸಂಖ್ಯೆಯನ್ನು ಆರಂಭಿಸಿ, ನಂತರ ವೇತನವನ್ನು ಪಾವತಿಸುವ ಪ್ರಕ್ರಿಯೆಯ ಪ್ರಾರಂಭವಾಗುತ್ತದೆ. ಹೀಗೆ ಡಿಸೆಂಬರ್ ಮಾಹೆಯ ವೇತನವನ್ನು ಪಾವತಿಸಿದ ನಂತರ ಇ.ಪಿ.ಎಫ್ ವಂತಿಕೆಯನ್ನು ವೇತನದಲ್ಲಿ ಲೆಕ್ಕಾಚಾರ ಮಾಡಿ ಪಟ್ಟಿಯನ್ನು ತಯಾರಿಸಿ, ಇ.ಪಿ.ಎಫ್ ವಂತಿಕೆ ಮೊತ್ತದ ಚಲನ್‌ಗಳ್ನು ಸಿದ್ದಪಡಿಸಿ ಅಂತರ್ಜಾಲದಲ್ಲಿ ಮಾಹಿತಿ ಒದಗಿಸಲು ಕಾಲವಿಳಂಬವಾಗಿರುತ್ತದೆ. ಆದ್ದರಿಂದ ಡಿಸೆಂಬರ್–2017ರ ಮಾಹೆಯ ಇ.ಪಿ.ಎಫ್ ವಂತಿಕೆಯನ್ನು ನಿಗದಿತ ಸಮಯದಲ್ಲಿ ಪಾವತಿಸಲು ವಿಳಂಬವಾಗಿದೆ. ಮತ್ತು ಆರ್ಥಿಕ ವರ್ಷದ (ಏಪ್ರಿಲ್ ರಿಂದ ಮಾರ್ಚ್) ಲೆಕ್ಕಾಚಾರಗಳನ್ನು ಪ್ರತಿವರ್ಷ ಮಾರ್ಚ್ ಮಾಹೆಯ ಹಣಕಾಸು ಲೆಕ್ಕಾಚಾರವನ್ನು ಏಪ್ರಿಲ್ ಮಾಹೆಯಲ್ಲಿ ಮುಕ್ತಾಯಗೊಳಿಸಿ ನಂತರ ಮುಂದಿನ ಹೊಸ ಆರ್ಥಿಕ ವರ್ಷದ ಲೆಕ್ಕಾಚಾರವನ್ನು ಆರಂಭಿಸಲಾಗುತ್ತದೆ. ಈ ಸಂದರ್ಭದಲ್ಲಿ ಮಾರ್ಚ್ ಮಾಹೆಯ ವೇತನವನ್ನು ಪಾವತಿಸಿ ನಂತರ ಇ.ಪಿ.ಎಫ್ ವಂತಿಕೆಯ ಲೆಕ್ಕಾಚಾರವನ್ನು ಕೈಗೊಂಡು ಇ.ಪಿ.ಎಫ್ ವಂತಿಕೆ ಮೊತ್ತದ ಚಲನ್‌ಗಳನ್ನು ಅಂತರ್ಜಾಲದಲ್ಲಿ ಮಾಹಿತಿ ಒದಗಿಸಲು ನಿಗದಿತ ಸಮಯದ ಕಾಲ ವಿಳಂಬವಾಗುತ್ತದೆ. ಎಂಬ ವಿಷಯಗಳನ್ನು ತಮ್ಮ ಅವಗಾಹನಗೆ ತರಲಾಗಿದೆ.<br><br>ಪ್ರತಿ ಮಾಹೆಯಲ್ಲಿ ಪಾವತಿಸುವ ಇ.ಪಿ.ಎಫ್ ವಂತಿಕೆ ಮೊತ್ತಗಳ ಪಾವತಿಯು ವಿಳಂಬವಾಗಿರುವ ಬಗ್ಗೆ ಆಯಾಯ ಆರ್ಥಿಕ ವರ್ಷದ ಲೆಕ್ಕಾಚಾರಗಳು ಮುಕ್ತಾಯವಾದ ನಂತರ (ವರ್ಷಕ್ಕೆ ಒಮ್ಮೆ) ಸಂಬಂಧಪಟ್ಟ ಇಲಾಖೆಯಿಂದ ಮಾಹಿತಿಯ ವಿವರ ತಿಳಿದು ಬರುತ್ತದೆ. ಆದಕಾರಣ 2017–18ನೇ ಸಾಲಿನಲ್ಲಿ ವಿಳಂಬವಾದ ಇ.ಪಿ.ಎಫ್ ವಂತಿಕೆ ಮೊತ್ತಗಳ ಮಾಹಿತಿಯು ದಿನಾಂಕ:19–07–2018 ರಂದು ಇ.ಪಿ.ಎಫ್ ಸಂಸ್ಥೆಯು ಪತ್ರ ಸಂಖ್ಯೆ:KN/MYS/0049905/000/Enf 501/Damages/727 Date:11-07-2018 ರ ಮೂಲಕ ತಿಳಿಸಿರುತ್ತಾರೆ. ಹಾಗೂ ಸದರಿ ಸಂಸ್ಥೆಯ ನಿರ್ದೇಶನದಂತೆ ಹಾಗೂ ವಿಶ್ವವಿದ್ಯಾನಿಲಯದ ಆದೇಶದಂತೆ ಸಂಬಂಧಪಟ್ಟ ಇಲಾಖೆಗೆ ಇ.ಪಿ.ಎಫ್‌ನ ದಂಡ ಮತ್ತು ಬಡ್ಡಿಯ ಒಟ್ಟು ಮೊತ್ತ ರೂ.52598/–ಗಳನ್ನು ಪಾವತಿಸಲಾಗಿದೆ. ಆದಾಗ್ಯೂ ಇನ್ನು ಮುಂದದೀ ವಿಷಯದಲ್ಲಿ ಈ ರೀತಿಯ ಕಾಲ ವಿಳಂಬವಾಗದಂತೆ ಎಚ್ಚರ ವಹಿಸಲಾಗುವುದು,<br><br>ಈ ನಿಟ್ಟನಲ್ಲಿ ಮೇಲೆ ತಿಳಿಸಿರುವ ಅಂಶಗಳನ್ನು ಗಣನೆಗೆ ತೆಗೆದುಕೊಂಡು. ರೂ.52598/–ಗಳ ವಸೂಲಾತಿ ಕಂಡಿಕೆಯನ್ನು ಕೈ ಬಿಡುವಂತೆ ನಿವೇದಿಸಲಾಗಿದೆ. |

**6.27. ಮಹಾರಾಜ ಕಾಲೇಜಿನಲ್ಲಿ ಸೆಲ್ಫ್‌ಚೆಕ್ ಮೂಲಕ ಬ್ಯಾಂಕ್‌ನಿಂದ ಹಣ ಡ್ರಾ ಮಾಡಿರುವುದು :**

2018–19ನೇ ಸಾಲಿಗೆ ಸಂಬಂಧಿಸಿದಂತೆ ಮಹಾರಾಜ ಕಾಲೇಜಿನ ಸಪೋರ್ಟ್ ಫಂಡ್ ಹಾಗೂ ಸಾಮಾನ್ಯ ಖಾತೆಗಳಲ್ಲಿ ಮಾಡಲಾಗಿರುವ ವೆಚ್ಚಕ್ಕೆ ಸಂಬಂಧಿಸಿದ ದಾಖಲೆಗಳನ್ನು ಪರಿಶೀಲಿಸಲಾಗಿ ಕೆಲವು ಧನಾದೇಶಗಳನ್ನು ಸ್ವಂತಕ್ಕೆ ಎಂದು ಬರೆದುಕೊಂಡು ಹಣ ಡ್ರಾ ಮಾಡಿರುವುದು ಕಂಡು ಬಂದಿರುತ್ತದೆ.

ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ:ಆಇ/05/ಟಿಎಆರ್/2017,ದಿ:30.01.2017ರಲ್ಲಿ ಸೂಚಿಸಿರುವಂತೆ ಸರ್ಕಾರದ ಇಲಾಖೆಗಳು, ಸ್ಥಳೀಯ ಸಂಸ್ಥೆಗಳು, ಪ್ರಾಧಿಕಾರಗಳು, ಬೋರ್ಡ್‌ಗಳು, ಕಾರ್ಪೋರೇಷನ್‌ಗಳು, ಸೊಸೈಟಿಗಳು, ವಿಶ್ವವಿದ್ಯಾನಿಲಯಗಳು, ಸ್ವಾಯತ್ತ ಸಂಸ್ಥೆಗಳು, ಬ್ಯಾಂಕುಗಳಲ್ಲಿ ವ್ಯವಹರಿಸಲಾಗುವ ಹಣಕಾಸುಗಳಿಗೆ ಸಂಬಂಧಪಟ್ಟಂತೆ ನೀಡಿರುವ ಮಾರ್ಗಸೂಚಿಗಳಲ್ಲಿನ ಮಾರ್ಗಸೂಚಿ ಸಂಖ್ಯೆ:03ರಲ್ಲಿ ಸ್ವಂತ ಚೆಕ್‌ಗಳ ಮೂಲಕ ಹಣ ಡ್ರಾ ಮಾಡುವುದು ಹಾಗೂ ಯೋಜನೆಗಳ ನಿಧಿಯನ್ನು ಅಧಿಕಾರಿ/ಪ್ರಾಧಿಕಾರಿಗಳ ವೈಯಕ್ತಿಕ ಖಾತೆಗಳಿಗೆ ವರ್ಗಾವಣೆ ಮಾಡುವುದನ್ನು ಕಡ್ಡಾಯವಾಗಿ ನಿಷೇಧಿಸಲಾಗಿದೆ ಎಂದಿರುತ್ತದೆ. ಆದರೆ ಸರ್ಕಾರದ ಮಾರ್ಗಸೂಚಿಗಳಿಗೆ ವಿರುದ್ಧವಾಗಿ ಕಾಲೇಜಿನ ಪ್ರಾಂಶುಪಾಲರು ಈ ಕೆಳಕಂಡಂತೆ 11 ಸ್ವಂತ ಚೆಕ್‌ಗಳ ಮೂಲಕ ಒಟ್ಟು ರೂ.4,13,845/–ಗಳನ್ನು ಡ್ರಾ ಮಾಡಿರುತ್ತಾರೆ.

| ಕ್ರಸಂ | ಧನಾದೇಶ ಸಂಖ್ಯೆ/ದಿನಾಂಕ | ಮೊತ್ತ | ನಿಧಿ/ಖಾತೆಯ ಹೆಸರು |
|---|---|---|---|
| 1 | 302975/11.04.2018 | 22,000 | ಕಾಲೇಜು ಸಾಮಾನ್ಯಖಾತೆ |
| 2 | 302977/05.05.2018 | 73,640 | ಕಾಲೇಜು ಸಾಮಾನ್ಯಖಾತೆ |
| 3 | 302978/02.06.2018 | 1,11,000 | ಕಾಲೇಜು ಸಾಮಾನ್ಯಖಾತೆ |
| 4 | 302993/20.10.2018 | 22,000 | ಕಾಲೇಜು ಸಾಮಾನ್ಯಖಾತೆ |
| 5 | 302995/15.03.2019 | 74,100 | ಕಾಲೇಜು ಸಾಮಾನ್ಯಖಾತೆ |
| 6 | 302994/04.12.2018 | 66,105 | ಕಾಲೇಜು ಸಾಮಾನ್ಯಖಾತೆ |
| 7 | 089256/12.06.2018 | 5,000 | ಕಾಲೇಜು ಸಪೋರ್ಟ್‌ಖಾತೆ |
| 8 | 089259/24.07.2018 | 10,000 | ಕಾಲೇಜು ಸಪೋರ್ಟ್‌ಖಾತೆ |
| 9 | 089270/14.10.2018 | 10,000 | ಕಾಲೇಜು ಸಪೋರ್ಟ್‌ಖಾತೆ |
| 10 | 089284/30.11.2018 | 10,000 | ಕಾಲೇಜು ಸಪೋರ್ಟ್‌ಖಾತೆ |
| 11 | 089290/11.01.2019 | 10,000 | ಕಾಲೇಜು ಸಪೋರ್ಟ್‌ಖಾತೆ |
| **ಒಟ್ಟು** | | **4,13,845** | |

ಕರ್ನಾಟಕ ಆರ್ಥಿಕ ಸಂಹಿತೆಯ ಅನುಚ್ಛೇದ–72(ಎ) ರನ್ವಯ ರೂ.1,000/– ಮೀರಿದ ಯಾವುದೇ ಪಾವತಿಗಳನ್ನು ಧನಾದೇಶಗಳ ಮೂಲಕವೇ ಪಾವತಿ ಮಾಡಬೇಕಾಗಿರುತ್ತದೆ. ಪ್ರಾಂಶುಪಾಲರು ನಿಯಮಗಳನ್ನು ಉಲ್ಲಂಘಿಸಿ ಕಾಲೇಜು ಸಪೋರ್ಟ್ ಫಂಡ್‌ಖಾತೆ ಹಾಗೂ ಕಾಲೇಜು ಸಾಮಾನ್ಯ ಖಾತೆಗಳಿಂದ ಸೆಲ್ಫ್‌ಚೆಕ್ ಮೂಲಕ ಹಣ ಡ್ರಾ ಮಾಡಿರುವುದಕ್ಕೆ ಸಮಜಾಯಿಷಿ ನೀಡುವಂತೆ ವಿಚಾರಣಾ ಪತ್ರ ಸಂಖ್ಯೆ:28/2020–21, ದಿನಾಂಕ:01.09.2020 ಹಾಗೂ ವಿಚಾರಣೆ ಪತ್ರ ಸಂಖ್ಯೆ:32/2020–21,

2018–19ನೇ ಸಾಲಿನಲ್ಲಿ ವಿವಿಧ ಬಾಬ್ತಿಗಾಗಿ ರೂ.4,13,845/–ಗಳನ್ನು ಸ್ವಂತ ಚೆಕ್ಕುಗಳ ಮೂಲಕ ಡ್ರಾ ಮಾಡಿ ಖರ್ಚು ಮಾಡಿರುವ ಸಂಬಂಧ 2018–19ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಯ ಕಂಡಿಕೆ 6.27ರಲ್ಲಿ ಆಕ್ಷೇಪಿಸಲಾಗಿದ್ದು ಸದರಿ ಮೊತ್ತ ರೂ.4,13,845/–ಗಳನ್ನು ಸ್ವಂತ ಚೆಕ್ಕಿನ ಮೇಲೆ ಒಂದೇ ಬಾರಿಗೆ ಡ್ರಾ ಮಾಡಿರುವುದಿಲ್ಲ. ಮೈಸೂರು ಮಹಾರಾಜ ಕಾಲೇಜು ವ್ಯಾಪ್ತಿಯ ಹಾಗೂ ಇದರ ಅಧೀನದಲ್ಲಿ ಸದರಿ ಸಾಲಿನಲ್ಲಿ ನಡೆಸಲಾದ ಯು.ಪಿಎಸ್.ಸಿ ಹಾಗೂ ಇತರೆ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ನಡೆಸಿದ್ದು ಸದರಿ ಪರೀಕ್ಷೆಗಳ ಕಾರ್ಯದಲ್ಲಿ ಪರೀಕ್ಷಾ ಮೇಲ್ವಿಚಾರಕರು, ಕೊಠಡಿ ಮೇಲ್ವಿಚಾರಕರು, ಅಟೆಂಡರುಗಳು ಮತ್ತಿತರ ಸಿಬ್ಬಂಧಿಗಳು ಪರೀಕ್ಷಕಾರ್ಯ ನಿರ್ವಹಿಸಿದ್ದು ಸಿಬ್ಬಂಧಿಗಳಿಗೆ ದಿನ ನಿತ್ಯದ ಸಂಭಾವನೆ ಹಾಗೂ ಊಟೋಪಚಾರ, ಕಾಫಿ ಟೀ, ನಂತಹ ವ್ಯವಸ್ಥೆಗಳನ್ನು ನಿರ್ವಹಿಸಿ ಆಯಾಯ ದಿನದ ವೆಚ್ಚಕ್ಕೆ ಸ್ವಂತ ಚೆಕ್ ಮೂಲಕ ಹಣ ಡ್ರಾ ಮಾಡಿ ಪಾವತಿಸಲಾಗಿದೆ. ಸದರಿ ಸಿಬ್ಬಂಧಿ ವರ್ಗದವರಿಗೆ ಪಾವತಿಸಿದ ಒಟ್ಟು ಮೊತ್ತಕ್ಕೆ ದಾಖಲಾತಿಗಳಲ್ಲಿಸಹಿ ಪಡೆಯಲಾಗಿದೆ ಆದರೆ ದಿನ ನಿತ್ಯದ ಕಾರ್ಯಕ್ರಮಕ್ಕೆ ರೂ.1000/–ಗಳ ಒಳಗೆ ವೆಚ್ಚವಿರುವುದರಿಂದ ಹಣದ ರೂಪದಲ್ಲಿ ಪಾವತಿಸಲಾಗಿರುತ್ತದೆ. ಹಾಗೂ ಪರೀಕ್ಷೆ ನಡೆಯುವ ದಿನದಂದು ವೆಚ್ಚವನ್ನು ಹಣದ ರೂಪದಲ್ಲಿಯೇ ಪಾವತಿ ಮಾಡಿ ಒಟ್ಟು ಹಣಕ್ಕೆ ಸಂಬಂಧಪಟ್ಟ ಹೋಟೆಲ್‌ನವರಿಂದ ಬಿಲ್ಲುಗಳನ್ನು ಪಡೆಯಲಾಗಿರುತ್ತದೆ ದಿನದ ವೆಚ್ಚದ ಮೊತ್ತವನ್ನು ಸ್ವಂತ ಚೆಕ್‌ನಿಂದ ಡ್ರಾಮಾಡಿದ ಮೊತ್ತದಿಂದ ಪಾವತಿಸಲಾಗಿರುತ್ತದೆ. ಈ ಪಾವತಿಗೆ ಸಂಬಂಧಿಸಿದ ಊಟೋಪಚಾರ, ಕಾಫಿ ಟೀ ಖರ್ಚಿನ ಬಿಲ್ಲುಗಳು ಹಾಗೂ ಪರೀಕ್ಷಾ ಮೇಲ್ವಿಚಾರಕರು, ಕೊಠಡಿ ಮೇಲ್ವಿಚಾರಕರು ಹಾಗೂ ಅಟೆಂಡರ್‌ಗಳಿಗೆ ಪಾವತಿಸಿದ ಸಹಿಯಲೆಡ್ಜರ್ ಮಾಹಿತಿಯನ್ನು ಲೆಕ್ಕಪರಿಶೋಧನೆಗೆ ಈ ಮೂಲಕ ಒದಗಿಸಲಾಗಿದೆ

ಈ ನಿಟ್ಟಿನಲ್ಲಿ ಕಂಡಿಕೆಯ ಆಕ್ಷೇಪಿತ ಮೊತ್ತ ರೂ.4,13,845/–ಗಳನ್ನು ತೀರುವಳಿಗೊಳಿಸುವಂತೆ ನಿವೇದಿಸಲಾಗಿದೆ.

| | |
|---|---|
| ದಿನಾಂಕ:03.09.2020ಗಳನ್ನು ನೀಡಲಾಗಿದ್ದರೂ, ಯಾವುದೇ ವಿವರಣೆ ನೀಡದ ಕಾರಣ ಈ ಬಾಬ್ತು ಪ್ರಾ ಮಾಡಿರುವ ಒಟ್ಟು ಮೊತ್ತ **ರೂ.4,13,845/–ಗಳನ್ನು ಅಕ್ಷೇಪಣೆಯಲ್ಲಿಡಲಾಗಿದೆ.** | |
| **6.28. ಅಣುಜೀವ ವಿಜ್ಞಾನ ಅಧ್ಯಯನ ವಿಭಾಗದಲ್ಲಿ ಡಿ.ಎಸ್.ಟಿ ಅನುದಾನದ ಯೋಜನೆಯಡಿ ಭರಿಸಿರುವ ವಾಸ್ತವಿಕ ವೆಚ್ಚ ಹಾಗೂ ಹಣ ಬಳಕೆ ಪ್ರಮಾಣ ಪತ್ರದಲ್ಲಿ ವ್ಯತ್ಯಾಸಗಳಿರುವುದು :**<br><br>2017–18 ಮತ್ತು 2018–19ನೇ ಸಾಲಿನಲ್ಲಿ ಅಣುಜೀವ ಶಾಸ್ತ್ರ ಅಧ್ಯಯನ ವಿಭಾಗದ ಡಾ.ರಾಜೇಶ್.ಆರ್, ಪ್ರಧಾನ ಯೋಜನಾ ಸಂಶೋಧಕರು ಇವರ ನೇತೃತ್ವದಲ್ಲಿ ಡಿ.ಎಸ್.ಟಿ ಅನುದಾನದಿಂದ ಕೈಗೊಂಡಿರುವ **"The role of inflammasome in sanke bite venomation, possible therapeutic target in local tissue damage'**ಎಂಬ ವಿಷಯದ ಬಗೆಗಿನ ಸಂಶೋಧನಾ ಯೋಜನೆಯಡಿಯಲ್ಲಿ 2018–19ನೇ ಸಾಲಿನಲ್ಲಿ ಯೋಜನಾ ಸಹಾಯಕರ ವೇತನ ಹಾಗೂ ವಿವಿಧ ಸಾಧನ–ಸಲಕರಣೆಗಳ ಖರೀದಿಗಾಗಿ ಒಟ್ಟು ರೂ.25,96,839/–ಗಳನ್ನು ವೆಚ್ಚ ಮಾಡಲಾಗಿದೆ. ಆದರೆ ಸಕ್ಷಮ ಪ್ರಾಧಿಕಾರಕ್ಕೆ ಸಲ್ಲಿಸಲಾಗಿರುವ ಹಣ ಬಳಕೆ ಪ್ರಮಾಣ ಪತ್ರದಲ್ಲಿ ರೂ.27,65,403/–ಗಳ ವೆಚ್ಚವನ್ನು ತೋರಿಸಲಾಗಿದೆ. ಹೀಗಾಗಿ ವಾಸ್ತವಿಕ ಖರೀದಿಯ ಮೊತ್ತ ರೂ.25,96,839/–ಗಳಿಗಿಂತ ರೂ.1,68,564/–ಗಳ ಹೆಚ್ಚುವರಿ ಮೊತ್ತವನ್ನು ನಮೂದಿಸಿ ಹಣ ಬಳಕೆ ಪ್ರಮಾಣ ಪತ್ರವನ್ನು ಸಲ್ಲಿಸಲಾಗಿರುತ್ತದೆ. ಈ ಸಂಬಂಧ ಅಗತ್ಯ ದಾಖಲಾತಿಗಳೊಂದಿಗೆ ಸೂಕ್ತ ಸ್ಪಷ್ಟೀಕರಣ ನೀಡುವಂತೆ ಲೆಕ್ಕಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ:4/ದಿನಾಂಕ:20.08.2020ರ ಮೂಲಕ ಕೋರಲಾಗಿದ್ದರೂ ಯಾವುದೇ ವಿವರಗಳನ್ನು ಹಾಜರುಪಡಿಸಿರುವುದಿಲ್ಲ. ಆದ್ದರಿಂದ ಅಗತ್ಯ ದಾಖಲಾತಿಗಳೊಂದಿಗೆ ಸೂಕ್ತ ಸ್ಪಷ್ಟೀಕರಣ ನೀಡುವವರೆಗೆ ವ್ಯತ್ಯಾಸದ ಮೊತ್ತ **ರೂ.1,68,564/–ಗಳನ್ನು ಅಕ್ಷೇಪಣೆಯಲ್ಲಿಡಲಾಗಿದೆ**. ವಿವರಗಳನ್ನು **ಅನುಬಂಧ–25ರಲ್ಲಿ** ನೀಡಲಾಗಿದೆ. | 2018–19ನೇ ಸಾಲಿನಲ್ಲಿ (ದಿನಾಂಕ:20.03.2018) ವಿಶ್ವವಿದ್ಯಾನಿಲಯದ ಅಣುಜೀವ ಶಾಸ್ತ್ರ ಅಧ್ಯಯನಕ್ಕಾಗಿ ರೂ.3120000ಗಳ ಅನುದಾನ ಬಿಡುಗಡೆಯಾಗಿದ್ದು ಸದರಿ ಅನುದಾನದ ಮೊತ್ತವನ್ನು ಎಸ್.ಪಿ.ಎಸ್ ಖಾತೆಯಲ್ಲಿ (ಕೋಡ್ ನಂ:6176) ತೊಡಗಿಸಿದ್ದು ಈ ಮೊತ್ತಕ್ಕೆ ರೂ.12411/–ಗಳ ಬಡ್ಡಿ ಬಂದಿದ್ದು ಒಟ್ಟು ಮೊತ್ತ ರೂ.3132411/–ಗಳ ಅನುದಾನ ಲಭ್ಯವಾಗಿರುತ್ತದೆ.<br><br>2018–19ನೇ ಸಾಲಿನಲ್ಲಿ **"The role of inflammasome in sanke bite venomation, possible therapeutic target in local tissue damage'**ಎಂಬ ವಿಷಯದ ಬಗೆಗಿನ ಸಂಶೋಧನಾ ಯೋಜನೆಯಡಿಯಲ್ಲಿ 2018–19ನೇ ಸಾಲಿನಲ್ಲಿ ಯೋಜನಾ ಸಹಾಯಕರ ವೇತನ ಹಾಗೂ ವಿವಿಧ ಸಾಧನ–ಸಲಕರಣೆಗಳ ಖರೀದಿಗಾಗಿ ಒಟ್ಟು ರೂ.25,96,839/–ಗಳನ್ನು ಖರ್ಚು ಮಾಡಲಾಗಿರುತ್ತದೆ.<br><br>ಮುಂದುವರಿದು ರೂ.12564/–ಗಳನ್ನು ಸಾದಿಲ್ವಾರು ವೆಚ್ಚಕ್ಕಾಗಿಯೂ ಹಾಗೂ ರೂ.156000/–ಗಳು ಈ ಮೊತ್ತವು ವಿಶ್ವವಿದ್ಯಾನಿಲಯದ ಆದೇಶ ಸಂಖ್ಯೆ:ಡಿವಿ3/22/ಡಿಎಸ್‌ಟಿ/2018–19 ದಿನಾಂಕ:11.06.2018ರ ಆದೇಶದ ಕ್ರಮ ಸಂಖ್ಯೆ 4 ರಲ್ಲಿ Overhead Charger ಗಾಗಿ ರೂ.312000/–ಗಳಲ್ಲಿ ಶೇ50% ರಷ್ಟು ಅಂದರೆ ರೂ.156000/–ಗಳು (ರೂ.1256+156000=ಒಟ್ಟು ರೂ.168564) ಒಟ್ಟು ರೂ.168564/– ಸೇರಿ ಅಂದರೆ ರೂ.2596839+ರೂ.168564=ಒಟ್ಟು ರೂ.2765403/–ಗಳಿಗೆ ಬಳಕೆ ಪ್ರಮಾಣ ಪತ್ರವನ್ನು ಸಲ್ಲಿಸಲಾಗಿರುತ್ತದೆಂಬ ಅಂಶವನ್ನು ಅವಗಾಹನೆಗೆ ತರುತ್ತ ಸದರಿ ರೂ.168564/–ಗಳ ಮೊತ್ತದ ಆಕ್ಷೇಪಣೆಯನ್ನು ಕೈ ಬಿಡುವಂತೆ ನಿವೇದಿಸಲಾಗಿದೆ. |

**6.29. ಲೇಖನ ಸಾಮಗ್ರಿ ಖರೀದಿ ಟೆಂಡರ್‌ನ ಭದ್ರತಾ ಠೇವಣಿಯ ವಿವರಗಳನ್ನು ಹಾಜರುಪಡಿಸದಿರುವುದು:**

2018–19ನೇ ಸಾಲಿನಲ್ಲಿ ವಿಶ್ವವಿದ್ಯಾನಿಲಯದ ವಿವಿಧ ವಿಭಾಗಗಳಿಗೆ ಹಾಗೂ ಅಂಗ ಸಂಸ್ಥೆಗಳಿಗೆ ಲೇಖನ ಸಾಮಗ್ರಿಗಳ ಖರೀದಿ ಸಂಬಂಧ ಟೆಂಡರ್ ಕರೆದು, ಮೆ॥ ಲೋಕೇಶ್ ಬುಕ್ ಹೌಸ್, ಕೆ.ಆರ್.ಪೇಟೆ ಇವರಿಗೆ ಒಟ್ಟು 732 ಐಟಂಗಳ ಲೇಖನ ಸಾಮಗ್ರಿಗಳನ್ನು ಸರಬರಾಜು ಮಾಡಲು ಸರಬರಾಜು ಆದೇಶವನ್ನು ವಿಶ್ವವಿದ್ಯಾನಿಲಯದ ಆದೇಶ ಸಂಖ್ಯೆ:ಜಿಎಲ್6/134/2006–08, ದಿನಾಂಕ:22.12.2017ರಲ್ಲಿ ನೀಡಲಾಗಿದೆ. ನಿಯಮಗಳನುಸಾರ ರೂ.30.00ಲಕ್ಷಗಳ ಅಂದಾಜು ಮೊತ್ತಕ್ಕೆ ಶೇ.5ರಂತೆ ರೂ.1,50,000/–ಗಳ ಭದ್ರತಾ ಠೇವಣಿಯನ್ನು ಪಡೆಯಬೇಕಾಗಿದ್ದು, ರೂ.1,00,000/–ಗಳ ಭದ್ರತಾ ಠೇವಣಿಯನ್ನು ಪಾವತಿಸುವಂತೆ ಟೆಂಡರ್ ಅಂಗೀಕರಿಸಿರುವ ಪತ್ರದಲ್ಲಿ ಕುಲಸಚಿವರು ತಿಳಿಸಿರುತ್ತಾರೆ. ಹೀಗೆ ರೂ.50,000/– ಗಳಷ್ಟು ಭದ್ರತಾ ಠೇವಣಿಯನ್ನು ಕಡಿಮೆ ಪಡೆಯುವುದರ ಮೂಲಕ ಗುತ್ತಿಗೆದಾರರಿಗೆ ಪರೋಕ್ಷವಾಗಿ ಅನುಕೂಲ ಮಾಡಿಕೊಡಲಾಗಿದೆ. ಗುತ್ತಿಗೆದಾರರು ಭದ್ರತಾ ಠೇವಣಿ ಬಾಬ್ತು ರೂ.1,00,000/–ಗಳನ್ನು(ಡಿ.ಡಿ.ಸಂಖ್ಯೆ:923953,ದಿನಾಂಕ:10.01.2018) ನೀಡಿರುವುದಾಗಿ ಜೆರಾಕ್ಸ್ ಪ್ರತಿಯನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಿದ್ದು, ಸದರಿ ಮೊತ್ತವು ವಿಶ್ವವಿದ್ಯಾನಿಲಯದ ಖಾತೆಗೆ ಜಮೆಯಾದ ಬಗ್ಗೆ ದಾಖಲೆಗಳನ್ನು ಹಾಜರುಪಡಿಸುವಂತೆ ವಿಚಾರಣಾ ಪತ್ರ ಸಂಖ್ಯೆ:143/2020–21, ದಿನಾಂಕ:08.06.2020ನ್ನು ನೀಡಲಾಗಿದ್ದರೂ, ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ಈ ನ್ಯೂನತೆಗೆ ಕಾರಣರಾದವರ ವಿರುದ್ಧ ಆಡಳಿತಾತ್ಮಕ ಕ್ರಮ ಕೈಗೊಳ್ಳಲು ಸೂಚಿಸಿದೆ.

2018–19ನೇ ಸಾಲಿನಲ್ಲಿ ಲೇಖನ ಸಾಮಗ್ರಿ ಖರೀದಿ ಬಾಬ್ತಿನ ಟೆಂಡರಿಗೆ, ಭದ್ರತಾ ಠೇವಣಿ ಮೊತ್ತ ರೂ.1,00,000/– ಡಿ,ಡಿ ಸಂಖ್ಯೆ:–923953 ದಿನಾಂಕ:10.01.2018ರ ವಿವರವುಳ್ಳ ದಾಖಲಾತಿಗಳನ್ನು ಲೆಕ್ಕ ತನಿಖೆಗೆ ಹಾಜರುಪಡಿಸಿರುವುದಿಲ್ಲವೆಂದು ಕಂಡಿಕೆ ಸಂಖ್ಯೆ:–6.29ರಲ್ಲಿ ಆಕ್ಷೇಪಿಸಲಾಗಿದ್ದು. ಈ ಸಂಬಂಧ ಸದರಿ ಭದ್ರತಾ ಠೇವಣಿಯ ಡಿ,ಡಿ ಸಂಖ್ಯೆ:–923953 ದಿನಾಂಕ:10.01.2018 ರೂ.1,00,000/– ಮೊತ್ತದ ಬ್ಯಾಂಕಿಗೆ ಇರಸಾಲು ಮಾಡಿದ ಚಲನ್ ಅನ್ನು ಇದರೊಂದಿಗೆ ಲಗತ್ತಿಸಿದೆ,

ಈ ಸಂಬಂಧ ಸದರಿ ಭದ್ರತಾ ಠೇವಣಿ ಮೊತ್ತ ರೂ.1,00,000/–ಗಳ ಆಕ್ಷೇಪಣೆಯನ್ನು ಕೈ ಬಿಡುವಂತೆ ನಿವೇದಿಸಲಾಗಿದೆ.

**6.30. ಪ್ರಯಾಣ ಭತ್ಯೆ ಪಾವತಿಗೆ ಸಂಬಂಧಿಸಿದ ಪೂರಕ ಲೆಕ್ಕಪತ್ರ ದಾಖಲೆಗಳನ್ನು ಹಾಜರುಪಡಿಸದಿರುವುದು :**

2018–19ನೇ ಸಾಲಿನ ಲೆಕ್ಕಪರಿಶೋಧನೆಗೆ ಹಾಜರುಪಡಿಸಲಾದ ಸಹೋದ್ಯಮ ಕೋರ್ಸುಗಳು (Collabaration courses) ಖಾತೆಗೆ ಸಂಬಂಧಿಸಿದ ಪಾವತಿ ವೋಚರ್‌ಗಳನ್ನು ಪರಿಶೀಲಿಸಲಾಗಿ, ಸದರಿ ಸಾಲಿನಲ್ಲಿ ವಿಭಾಗದಿಂದ ನಡೆಸಲಾದ ಔಟ್‌ರೀಚ್ ಹಾಗೂ ವಿಶೇಷ ಕೋರ್ಸ್‌ಗಳ ಪರೀಕ್ಷಾ ಕಾರ್ಯ ನಿಮಿತ್ತ ಪ್ರಯಾಣ ಮಾಡಿರುವ ಬೋಧಕ ವರ್ಗದವರಿಗೆ ಪ್ರಯಾಣ ಭತ್ಯೆಯನ್ನು ಪಾವತಿಸಲಾಗಿದ್ದು, ವಿವರಗಳು ಈ ಕೆಳಕಂಡಂತಿದೆ.

| ಕ್ರ. ಸಂ | ಬಿ.ಆರ್.ಸಂಖ್ಯೆ ಮತ್ತು ದಿನಾಂಕ | ಸೇವೆ ಒದಗಿಸಿದವರು | ಮೊಬಲಗು (ರೂ.) | ಪ್ರಯಾಣ ಬೆಳೆಸಿದ ಉದ್ದೇಶ |
|---|---|---|---|---|
| 1 | 105/2018–19/ 20.08.2018 | ಅ) ಮೆ.ಕಾವೇರಿ ಟೂರ್ಸ್ ಅಂಡ್ ಟ್ರಾವೆಲ್ಸ್, ಮೈಸೂರು | 37,655 | ವಿವಿಧ ಔಟ್‌ರೀಚ್ ಕೇಂದ್ರಗಳಲ್ಲಿ ಎಂ.ಬಿ.ಎ ಸಂದರ್ಶನ ಪರೀಕ್ಷಾ ಕಾರ್ಯ ನಿರ್ವಹಿಸಿರುವುದು |
| | | ಆ) ಮೆ.ಟ್ರಾವೆಲ್ | 2,00,722 | ಹೊರ ರಾಜ್ಯ/ದೇಶಗಳಲ್ಲಿ ಎಂ.ಬಿ.ಎ |

2018–19ನೇ ಸಾಲಿನಲ್ಲಿ ವಿವಿಧ ಔಟ್–ರೀಚ್ ಕೇಂದ್ರಗಳಲ್ಲಿ ಹಾಗೂ ಹೊರ ರಾಜ್ಯ/ದೇಶಗಳಲ್ಲಿ ಎಂ.ಬಿ.ಎ ಸಂದರ್ಶನ ಪರೀಕ್ಷಾ ಕಾರ್ಯ ನಿರ್ವಹಿಸಿರುವ ನಿಮಿತ್ತ ಕಂಡಿಕೆ 6.30 ರಲ್ಲಿ ಪ್ರಯಾಣ ಭತ್ಯೆ ಪಾವತಿ ಸಂಬಂಧ ಪೂರಕ ದಾಖಲಾತಿಗಳನ್ನು ಒದಗಿಸಲು ಕೋರಿ ಇದಕ್ಕೆ ಸಂಬಂಧಪಟ್ಟ ಪಾವತಿ ಮೊತ್ತ ರೂ.238377/–ಗಳನ್ನು ಆಕ್ಷೇಪಿಸಲಾಗಿರುವ ಸಂಬಂಧ ಎಂ.ಬಿ.ಎ ಸ್ನಾತಕೋತ್ತರ ಪದವಿಯ ಕೊನೆಯ ಸೆಮಿಸ್ಟರ್‌ನಲ್ಲಿ Project viva-voce ನಡೆಸುವ ಸಂಬಂಧ External Exminers ಆಗಿ ಬಿ.ಐ.ಎಮ್.ಎಸ್ ನ ಪ್ರಾಧ್ಯಾಪಕರುಗಳಾದ ಡಾ॥ ಅಮೂಲ್ಯ ಎಂ ಡಾ॥ ಆಯೆಷಾ ಷರೀಫ್ ಮತ್ತು ಡಾ॥ ಎಸ್.ಜೆ ಮಂಜುನಾಥ್ ಇವರುಗಳು ಕುವೈತ್ Outreach centre ನಲ್ಲಿ ದಿನಾಂಕ:22.06.2018 ರಂದು Project viva-voce ಪರೀಕ್ಷೆ ನಡೆಸಿದ ಸಂಬಂಧ ಮೆ.ಕಾವೇರಿ ಟೂರ್ಸ್ ಅಂಡ್ ಟ್ರಾವೆಲ್ಸ್, ಮೈಸೂರು ಇವರಿಗೆ ರೂ.200722/–ಗಳು ಒಟ್ಟು ರೂ.238377/–ಗಳನ್ನು ಪಾವತಿಸಿದ್ದು ಇದಕ್ಕೆ ಸಂಬಂಧಪಟ್ಟ ಈ ಕೆಳಕಂಡ ದಾಖಲಾತಿಗಳನ್ನು ಒದಗಿಸಲಾಗಿರುತ್ತದೆ.

| | | | | |
|---|---|---|---|---|
| | | ನೆಕ್ಸ್ಟ್ ಟೂರ್ಸ್ ಅಂಡ್ ಟ್ರಾವೆಲ್ಸ್, ಮೈಸೂರು | | ಸಂದರ್ಶನ ಪರೀಕ್ಷಾ ಕಾರ್ಯ ನಿರ್ವಹಿಸಿರುವುದು |
| **ಒಟ್ಟು ಮೊತ್ತ (ರೂ.)** | | | **2,38,377** | |

ಪ್ರಯಾಣಕ್ಕೆ ಸಂಬಂಧಿಸಿದಂತೆ ಸಕ್ಷಮ ಪ್ರಾಧಿಕಾರ/ಅಧಿಕಾರಿಯವರಿಂದ ಪಡೆದ ಅನುಮತಿ ಪತ್ರ, ನಿಗದಿಪಡಿಸಿರುವ ಪರೀಕ್ಷಾ ವೇಳಾಪಟ್ಟಿಯ ವಿವರ Observers attendance certificate ಹಾಗೂ ವಿಮಾನ ಪ್ರಯಾಣ ನಡೆಸಲು ಸರ್ಕಾರದ ಅಧಿಸೂಚನೆ ಸಂಖ್ಯೆ:ಆಇ/3/ಸನತಿ/2015, ಬೆಂಗಳೂರು, ದಿನಾಂಕ:03.08.2015ರ ಅನುಸಾರ ಸಕ್ಷಮ ಪ್ರಾಧಿಕಾರ/ಸರ್ಕಾರದ ವಿಶೇಷ ಮಂಜೂರಾತಿಯ ಅವಶ್ಯಕತೆ ಇರುತ್ತದೆ. ಭಾರತ ಸರ್ಕಾರದ ಆರ್ಥಿಕ ಮಂತ್ರಾಲಯದ ಸುತ್ತೋಲೆ ಸಂಖ್ಯೆ:F.No.19024/1/2009-E.IV, ದಿನಾಂಕ:13.07.2009ರನ್ವಯ ಸರ್ಕಾರಿ ಪ್ರಾಯೋಜಿತ ಕಾರ್ಯಗಳಿಗೆ ವಿದೇಶ ಪ್ರಯಾಣವನ್ನು ಸರ್ಕಾರದ ಸ್ವಾಮ್ಯದ ವಾಯುಯಾನ ಸಂಸ್ಥೆ ಇಂಡಿಯನ್ಏರ್‌ಲೈನ್ಸ್ ಮುಖಾಂತರ ಮಾಡಬೇಕಾಗಿರುತ್ತದೆ. ಆದರೆ ವಿದೇಶ ಪ್ರಯಾಣಕ್ಕೆ ಮಂಜೂರಾತಿ ಪಡೆದ ವಿವರ ಹಾಗೂ ವಿದೇಶ ಪ್ರಯಾಣವನ್ನು ಖಾಸಗಿ ಏರ್‌ಲೈನ್ಸ್‌ನಲ್ಲಿ ಮಾಡಿದುದಕ್ಕೆ ಸಮಜಾಯಿಷಿಯನ್ನು ನೀಡಿರುವುದಿಲ್ಲ. ಯು.ಜಿ.ಸಿಯ ಸುತ್ತೋಲೆ ಸಂಖ್ಯೆ:1-1/2015(ಸಂಕೀರ್ಣ)/ಜಿ.ಎ, ದಿ:10.02.2015ದಲ್ಲಿ ಸರ್ಕಾರಿ ಕಾರ್ಯಗಳಿಗೆ ಖಾಸಗಿ ಏರ್‌ಲೈನ್ಸ್ ಮೂಲಕ ವಿದೇಶ ಪ್ರಯಾಣ ಮಾಡುವವರಿಗೆ ಪ್ರಯಾಣ ಭತ್ಯೆ ನೀಡುವಂತಿಲ್ಲ ಎಂದಿರುತ್ತದೆ. ಈ ಬಗ್ಗೆ ಸ್ಪಷ್ಟೀಕರಣ ಕೋರಿ ವಿಚಾರಣೆ ಪತ್ರ:115/2020-21, ದಿನಾಂಕ:08.06.2020ಅನ್ನು ನೀಡಲಾಗಿ, ಯಾವುದೇ ದಾಖಲೆ/ಸ್ಪಷ್ಟೀಕರಣವನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲ. ಆದ್ದರಿಂದ ಈ ಬಾಬ್ತು ಪಾವತಿಸಲಾದ ಒಟ್ಟು **ಮೊತ್ತ ರೂ.2,38,377/-ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.**

FWD: Attendance Certificate issued by Syeda Fathima, Centre Head universal Institute, Kuwait.

ಈ ನಿಟ್ಟಿನಲ್ಲಿ ಸದರಿ ಆಕ್ಷೇಪಿತ ಮೊತ್ತ ರೂ.2,38,377ಗಳನ್ನು ಆಕ್ಷೇಪಣೆಯಿಂದ ಕೈ ಬಿಡುವಂತೆ ನಿವೇದಿಸಲಾಗಿದೆ.

2018-19ನೇ ಸಾಲಿನಲ್ಲಿ ವಿವಿಧ ಔಟ್‌ರೀಚ್ ಕೇಂದ್ರಗಳಲ್ಲಿ ಹಾಗೂ ಹೋರರಾಜ್ಯ/ಹೊರದೇಶಗಳಲ್ಲಿ ಎಂ.ಬಿ.ಎ ಸಂದರ್ಶನ ಪರೀಕ್ಷಾ ಕಾರ್ಯ ನಿರ್ವಹಿಸಿರುವ ನಿಮಿತ್ತ ಕಂಡಿಕೆ 6.30 ರಲ್ಲಿ ಪ್ರಯಾಣ ಭತ್ಯೆ ಪಾವತಿ ಸಂಬಂಧ ಪೂರಕ ದಾಖಲಾತಿಗಳನ್ನು ಒದಗಿಸಲು ಕೋರಿ ಇದಕ್ಕೆ ಸಂಬಂಧಪಟ್ಟ ಪಾವತಿ ಮೊತ್ತ ರೂ.2,38,377ಗಳನ್ನು ಆಕ್ಷೇಪಣೆಯಲ್ಲಿಟಿರುವ ಸಂಬಂಧ ಎಂ.ಬಿ.ಎ ಸ್ನಾತಕೋತ್ತರ ಪದವಿಯ ಕೊನೆಯ ಸೆಮಿಸ್ಟರ್ Project Viva-Voce ನಡೆಸುವ ಸಂಬಂಧದಲ್ಲಿ External Examiners ಆಗಿ BIMS ನ ಪ್ರಧ್ಯಾಪಕರುಗಳಿಂದ ಡಾ॥ ಅಮೂಲ್ಯ ಎಂ, ಡಾ॥ ಆಯೇಷಾ ಷರೀಫ್ ಮತ್ತು ಡಾ॥ ಎಸ್.ಜೆ. ಮಂಜುನಾಥ್ ಇವರುಗಳು ಕುವೈತ್ Outreach Centre ನಲ್ಲಿ ದಿನಾಂಕ:22.06.2018 ರಂದು Project Viva-Voce ಪರೀಕ್ಷೆ ನಡೆಸಿದ ಬಗ್ಗೆ ಮೆ॥ ಕಾವೇರಿ ಟೂರ್ಸ್ ಅಂಡ್ ಟ್ರಾವೆಲ್ಸ್, ಮೈಸೂರು ಇವರಿಗೆ ರೂ 37,655/- ಗಳು ಹಾಗೂ ಮೆ॥ ಟ್ರಾವೆಲ್ ನೆಕ್ಸ್ಟ್ ಟೂರ್ಸ್ ಅಂಡ್ ಟ್ರಾವೆಲ್ಸ್, ಮೈಸೂರು ಇವರಿಗೆ ರೂ2,00,722/-ಗಳು ಒಟ್ಟು ರೂ.2,38,377/-ಗಳನ್ನು ಪಾವತಿಸಿದ್ದು ಇದಕ್ಕೆ ಸಂಬಂಧಪಟ್ಟಂತೆ ಈ ಕೆಳಕಂಡ ದಾಖಲಾತಿಗಳನ್ನು ಲೆಕ್ಕ ಪರಿಶೋಧನೆಗೆ ಒದಗಿಸಲಾಗಿರುತ್ತದೆ.

1. (Re-accredited by NAAC with (GPA 3.47 on four point scale with A Grade order No:-Doop-EXAMS/RAB/2018-19 Dated:20.08.2018.
2. Fourth Semester MBA Examinations-MAY 2018
3. FWD: Attendance Certificate issued by Syeda Fathima, Centre Head universal Institute, Kuwait.

ಈ ನಿಟ್ಟಿನಲ್ಲಿ ಸದರಿ ಆಕ್ಷೇಪಿತ ಮೊತ್ತ ರೂ.2,38,377/-ಗಳನ್ನು ಆಕ್ಷೇಪಣೆಯಿಂದ ಕೈ ಬಿಡುವಂತೆ ನಿವೇದಿಸಲಾಗಿದೆ.

**6.31. 98ನೇ ಘಟಿಕೋತ್ಸವಕ್ಕೆ ಚಿನ್ನದ ಪದಕ ಖರೀದಿಯಲ್ಲಿ ರೂ.4520/-ಗಳನ್ನು ಹೆಚ್ಚುವರಿಯಾಗಿ ಪಾವತಿಸಿರುವುದು :**

2018-19ನೇ ಸಾಲಿನಲ್ಲಿ ದತ್ತಿ ನಿಧಿ ವ್ಯವಹರಣೆ ಶೀರ್ಷಿಕೆಯಲ್ಲಿ 98ನೇ ಘಟಿಕೋತ್ಸವ ಸಂದರ್ಭದಲ್ಲಿ ಚಿನ್ನದ ಪದಕಗಳನ್ನು ಪದಕವೊಂದಕ್ಕೆ ರೂ.2,299/-ಗಳಂತೆ ಒಟ್ಟು 348 ಚಿನ್ನದ ಪದಕಗಳನ್ನು ರೂ.8,00,052/-ಗಳ ವೆಚ್ಚದಲ್ಲಿ ಟೆಂಡರ್ ಕರೆದು ಮೆ.ವಯೇಬಲ್ ಡಯಮಂಡ್ಸ್‌ರವರಿಂದ ಖರೀದಿಸಲಾಗಿದೆ.

ಚಿನ್ನದ ಪದಕಗಳ ಖರೀದಿಗಾಗಿ 2017-18ನೇ ಸಾಲಿನಲ್ಲಿ ಮುಂಗಡವಾಗಿ ರೂ.6,03,487/- (ಟಿ.ಡಿ.ಎಸ್ ಸೇರಿ)ಗಳನ್ನು ಈಗಾಗಲೇ ಸಂಸ್ಥೆಗೆ ಪಾವತಿಸಲಾಗಿದ್ದು, 2018-19ನೇ ಸಾಲಿನಲ್ಲಿ ಬಾಕಿ ಮೊತ್ತವಾದ ರೂ.1,96,565/-ಗಳನ್ನು ಪಾವತಿಸುವ ಬದಲಾಗಿ ರೂ.2,01,085/- (ಟಿ.ಡಿ.ಎಸ್ ಸೇರಿ) ಗಳನ್ನು (ಧನಾದೇಶ ಸಂಖ್ಯೆ-908153 ಹಾಗೂ 54/ ದಿನಾಂಕ:29.05.2018) ಪಾವತಿಸಲಾಗಿದೆ. ಈ ಬಗ್ಗೆ ವಿವರಣೆ ಕೋರಿ ವಿಚಾರಣಾ ಪತ್ರ ಸಂಖ್ಯೆ-60/2019-20, ದಿನಾಂಕ:18.03.2020ನ್ನು ನೀಡಿದ್ದರೂ, ವಿಶ್ವವಿದ್ಯಾನಿಲಯದವರು ಯಾವುದೇ ವಿವರಣೆ ನೀಡಿರುವುದಿಲ್ಲ. ಆದ್ದರಿಂದ ಹೆಚ್ಚುವರಿಯಾಗಿ ಪಾವತಿಸಿರುವ **ಮೊತ್ತ ರೂ.4,520/-ಗಳನ್ನು ಈ ಲೋಪಕ್ಕೆ ಕಾರಣರಾದವರಿಂದ ವಸೂಲಿಸಿ** ದತ್ತಿ ನಿಧಿ ಲೆಕ್ಕಶೀರ್ಷಿಕೆಗೆ ಜಮಾ ಮಾಡಲು ಸೂಚಿಸಿದೆ.

ವಿಶ್ವವಿದ್ಯಾನಿಲಯದ 98ನೇ ಘಟಿಕೋತ್ಸವ ಸಮಾರಂಭಕ್ಕೆ ಚಿನ್ನದ ಪದಕ ಖರೀದಿಗಾಗಿ ರೂ.196565/-ಗಳನ್ನು ಪಾವತಿಸುವ ಬದಲು ಧನಾದೇಶ ಸಂಖ್ಯೆ:908153 ಹಾಗೂ 908154 ದಿನಾಂಕ:29.05.2018ರಲ್ಲಿ ರೂ.201058/-ಗಳನ್ನು ಪಾವತಿ ಮಾಡಿದ್ದು ಇದರಿಂದ ರೂ.4520/-ಗಳ ಹೆಚ್ಚುವರಿ ಪಾವತಿಯಾಗಿರುವುದನ್ನು 2017-18ನೇ ಸಾಲಿನ ಲೆಕ್ಕ ಪರಿಶೋಧನೆಯಲ್ಲಿ ಗಮನಿಸಿ 2017-18ನೇ ಸಾಲಿನ ಲೆಕ್ಕಪರಿಶೋಧನಾ ವರದಿಯ ಕಂಡಿಕೆ 118 ರಲ್ಲಿ ವಸೂಲಾತಿಗೆ ಸೂಚಿಸಿದ ಹಿನ್ನೆಲೆಯಲ್ಲಿ ಸದರಿ ಮೆ॥ ವಯೇಬಲ್ ಡಯಮಂಡ್ಸ್ ರವರಿಂದ ಸದರಿ ಮೊತ್ತ ರೂ.4520/-ಗಳನ್ನು ವಸೂಲಿಸಿ ದಿನಾಂಕ:06.04.2021 ರಂದು ಬ್ಯಾಂಕ್‌ಗೆ ಜಮೆ ಮಾಡಲಾಗಿದ್ದು ಈ ವಿವರವನ್ನು 2017-18ನೇ ಸಾಲಿನ ಲೆಕ್ಕಪರಿಶೋಧನಾ ವರದಿಯ ಅನುಪಾಲನಾ ವರದಿ (2017-18 ಕಂಡಿಕೆ 118 ರಲ್ಲಿ) ಯಲ್ಲಿ ಮಾಹಿತಿ ಒದಗಿಸಿ ಸದರಿ ವಸೂಲಾತಿ ಕಂಡಿಕೆಯನ್ನು ಕೈ ಬಿಡುವಂತೆ ನಿವೇದಿಸಲಾಗಿತ್ತು ಆದರೆ ಸದರಿ ವಸೂಲಾತಿ ಮೊತ್ತ ರೂ.4520/-ಗಳ ವಸೂಲಾತಿಯು 2018-19ನೇ ಸಾಲಿನ ಲೆಕ್ಕಪರಿಶೋಧನಾ ವರದಿಯ ಕಂಡಿಕೆ 6.31 ರಲ್ಲಿ ಪುನಾರಾವರ್ತಿನೆಯಾಗಿರುತ್ತದೆ. ಈ ಸಂಬಂಧ ಸದರಿ ರೂ.4520/-ಗಳನ್ನು ವಸೂಲಿಸಿ ಎಸ್,ಬಿ,ಐ ವಿಶ್ವವಿದ್ಯಾನಿಲಯದ ಬ್ಯಾಕಿಗೆ ಜಮೆ ಮಾಡಿರುವ ವಿವರವನ್ನು (ಖಾತೆ ಸಂಖ್ಯೆ:54007591299 ಗೆ ದಿನಾಂಕ:06.0.2021ರಂದು) ಇದರೊಂದಿಗೆ ಲಗತ್ತಿಸಿ ವಸೂಲಾತಿ ಮೊತ್ತ ರೂ.4520/-ಗಳ ಕಂಡಿಕೆಯನ್ನು ಕೈ ಬಿಡುವಂತೆ ನಿವೇದಿಸಲಾಗಿದೆ.

**6.32. ಕಾಮಗಾರಿ ಬಿಲ್ಲನ್ನು ಡಿ.ಸಿ ಬಿಲ್ಲಿನ ಮೂಲಕ ಪಾವತಿಸಿರುವ ಕುರಿತು :**

ಆಹಾರ ವಿಜ್ಞಾನ ಮತ್ತು ಪೋಷಕಾಂಶ ಅಧ್ಯಯನ ವಿಭಾಗದಲ್ಲಿ ಬಿ.ಆರ್ ಸಂಖ್ಯೆ:44/07.03.2019 ರಲ್ಲಿ ಆರ್.ಉದಯ್‌ಕುಮಾರ್, ಸಿವಿಲ್ ಇಂಜಿನಿಯರ್‌ರವರಿಗೆ ರೂ.31,470/-ಗಳನ್ನು ಪಾವತಿಸಲಾಗಿರುತ್ತದೆ. ಸದರಿ ಕಾಮಗಾರಿಯು ಸಿವಿಲ್ ಕಾಮಗಾರಿಯಾಗಿದ್ದು, ಇದನ್ನು ಕಾರ್ಯಪಾಲಕ ಇಂಜಿನಿಯರ್ ರವರ ಮೂಲಕ ನಿರ್ವಹಿಸಿ, ವಿವರಗಳನ್ನು ಅಳತೆ ಪುಸ್ತಕ (ಎಂ.ಬಿ)ದಲ್ಲಿ ದಾಖಲಿಸಿ ಪಾವತಿಸಬೇಕಾಗಿರುತ್ತದೆ. ಆದರೆ ಅಧ್ಯಯನ ವಿಭಾಗದಿಂದ ನೇರವಾಗಿ ದರಪಟ್ಟಿ ಕರೆದು ಗುತ್ತಿಗೆದಾರರಿಂದ ಕಾಮಗಾರಿ ನಿರ್ವಹಿಸಿ ಡಿ.ಸಿ ಬಿಲ್ಲಿನ ಮೂಲಕ ಮೊತ್ತವನ್ನು ಪಾವತಿಸಿರುವುದು ನಿಯಮ ಬಾಹಿರವಾಗಿರುತ್ತದೆ. ಈ ಕುರಿತು ವಿಚಾರಣೆ ಸಂಖ್ಯೆ:3/28.07.2020 ರಲ್ಲಿ ವಿವರಣೆ ನೀಡುವಂತೆ ಕೋರಲಾಗಿ ಯಾವುದೇ ಉತ್ತರ ನೀಡದಿರುವುದರಿಂದ ನಿಯಮ ಬಾಹಿರವಾಗಿ ಪಾವತಿಸಲಾಗಿರುವ ಮೊತ್ತ **ರೂ.31,470/-ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.**

ಆಹಾರ ವಿಜ್ಞಾನ ಮತ್ತು ಪೋಷಕಾಂಶ ಅಧ್ಯಯನ ವಿಭಾಗದಲ್ಲಿ ಈ ಕೆಳಕಾಣಿಸಿದ ದುರಸ್ಥಿ ಕೆಲಸಗಳನ್ನು ನಿರ್ವಹಿಸಿದ್ದು ವಿವರ ಈ ರೀತಿ ಇರುತ್ತದೆ.

| Sl No | Description | Qty | Unit | Rate/ Unit | Amount |
|---|---|---|---|---|---|
| 01 | Providing and fixing flush door shutter made out of soild core black board type well seasoned chemically treated hard wood bqttens and internak frame etc complete. | 2.88 | sqm | 4650 | 13392 |
| 02 | supply and fixing of door shutters made of rigid PVc extruded hollow section (Nandi or equivalent) etc complete | 1.60 | sqm | 3150 | 5040 |
| 03 | 15mm dia bib cock | 10 | each | 300 | 3000 |

| | | | | | |
|---|---|---|---|---|---|
| 04 | 3mm thick glass | 10 | sqm | 975 | 9750 |
| 04 | 30cm long tower bolt | 3 | each | 270 | 810 |
| 06 | 30cm long aldrop | 1 | each | 450 | 450 |
| 07 | Door handle | 4 | each | 175 | 700 |
| 08 | 5" Hinges | 6 | each | 150 | 900 |
| | | | | **Total** | **34042** |

ಮೇಲ್ಕಾಣಿಸಿದ ವಿವರಗಳು ಆಹಾರ ವಿಜ್ಞಾನ ಮತ್ತು ಪೋಷಕಾಂಶ ಅಧ್ಯಯನ ವಿಭಾಗಕ್ಕೆ ತುರ್ತಾಗಿ ಬೇಕಾಗಿದ್ದುದರಿಂದ ಈ ಕೆಲಸಗಳನ್ನು ನಿರ್ವಹಿಸಿಕೊಡುವಂತೆ ಕಾರ್ಯಪಾಲಕ ಅಭಿಯಂತರರ ಕಛೇರಿಯನ್ನು ಸಂಪರ್ಕಸಲಾಗಿ ಈ ಕಛೇರಿಯ ತಾಂತ್ರಿಕ ವಿಭಾಗದ ಇಂಜಿನಿಯರವರು ಬೇರೆ ತುರ್ತು ಕಾಮಗಾರಿಗಳಲ್ಲಿ ತೊಡಗಿಸಿಕೊಂಡಿರುವುದರಿಂದ ಅವರ ಲಭ್ಯತೆಯು ವಿಳಂಬವಾಗುವುದೆಂದು ಮೌಖಿಕವಾಗಿ ತಿಳಿಸಿದ್ದರಿಂದ ಈ ಅಧ್ಯಯನ ವಿಭಾಗದ ಕೆಲಸ ತುರ್ತು ಇದ್ದುದರಿಂದ ಹಾಗೂ ತುಂಬಾ ಅವಶ್ಯಕತೆಯಿದ್ದುದರಿಂದ ಮೇಲೆ ವಿವರಿಸಿರುವ ಕಾಮಗಾರಿಯನ್ನು ದರಪಟ್ಟಿಯ ಮುಖಾಂತರ ಮೆ॥ ಆರ್.ಉದಯ್‌ಕುಮಾರ್, ಸಿವಿಲ್ ಇಂಜಿನಿಯರ್/ಗುತ್ತಿಗೆದಾರರಿಂದ ನಿರ್ವಹಿಸಲಾಗಿರುತ್ತದೆ ಹಾಗೂ ತುರ್ತು ಅವಶ್ಯಕತೆಯನ್ನು ಆಹಾರ ವಿಜ್ಞಾನ ಮತ್ತು ಪೋಷಣೆ ಅಧ್ಯಯನ ವಿಭಾಗಕ್ಕೆ ಪೂರೈಸಲಾಗಿರುತ್ತದೆ.

ಈ ಅಂಶವನ್ನು ಗಣನೆಗೆ ತೆಗೆದುಕೊಂಡು ಕಂಡಿಕೆ 6.32 ರಲ್ಲಿ ಆಕ್ಷೇಪಿಸಲಾದ ಮೊತ್ತ ರೂ.31470/– ಗಳನ್ನು ಆಕ್ಷೇಪಣೆಯಿಂದ ಕೈ ಬಿಡುವಂತೆ ನಿವೇದಿಸಲಾಗಿದೆ.

**6.33. ಭದ್ರತಾ ಠೇವಣಿ ಮೊತ್ತವನ್ನು ವಿಭಾಗದ ನಿರ್ದೇಶಕರ ಖಾತೆಗೆ ಜಮಾ ಮಾಡಿಕೊಳ್ಳದಿರುವುದ ರಿಂದ ರೂ.30,220/– ಬಡ್ಡಿ ನಷ್ಟವಾಗಿರುವುದು :**

2018–19ನೇ ಸಾಲಿನಲ್ಲಿ ಮುದ್ರಣಾಲಯ ಮತ್ತು ಲೇಖನ ಸಾಮಾಗ್ರಿ ವಿಭಾಗದಲ್ಲಿ ವಿವಿಧ ಮುದ್ರಣ ಸಾಮಾಗ್ರಿ ಹಾಗೂ ಲೇಖನ ಸಾಮಾಗ್ರಿಗಳ ಸರಬರಾಜು ಸಂಬಂಧ ಗುತ್ತಿಗೆದಾರರುಗಳಿಂದ ಭದ್ರತಾ ಠೇವಣಿಯನ್ನು ಡಿ.ಡಿ ರೂಪದಲ್ಲಿ ಪಡೆಯಲಾಗಿದ್ದು, ಸದರಿ ಡಿ.ಡಿ ಗಳನ್ನು ನಿರ್ದೇಶಕರ ಖಾತೆಗೆ ಜಮೆ ಮಾಡಿಕೊಂಡು ಗುತ್ತಿಗೆದಾರರ ಸರಬರಾಜು ಅವಧಿ ಮುಕ್ತಾಯಗೊಂಡ ನಂತರ ಹಿಂದಿರುಗಿಸಲು ಕ್ರಮವಹಿಸಬೇಕಾಗಿರುತ್ತದೆ. ಆದರೆ ಲೆಕ್ಕಪರಿಶೋಧನೆಯಲ್ಲಿ ಹಾಜರುಪಡಿಸಿದ ದಾಖಲಾತಿಗಳನ್ನು ಪರಿಶೀಲಿಸಲಾಗಿ ಗುತ್ತಿಗೆದಾರರು ನೀಡಿರುವ ಡಿ.ಡಿ ಗಳನ್ನು ಹಾಗೇ ಹಿಂದಿರುಗಿಸಿರುವುದು ಕಂಡು ಬಂದಿರುತ್ತದೆ. ಕಾರ್ಯ ನಿರ್ವಹಣಾ ಠೇವಣಿಗಳನ್ನು ವಿಶ್ವವಿದ್ಯಾನಿಲಯದ ಖಾತೆಗೆ ಜಮಾ ಮಾಡಿಕೊಂಡು ಕಾರ್ಯ ನಿರ್ವಹಣಾ ಅವಧಿಯು ತೃಪ್ತಿಕರವಾಗಿ ನಿರ್ವಹಣೆಯಾದ ನಂತರ ಬಿಡುಗಡೆ ಮಾಡಬಹುದಾಗಿರುತ್ತದೆ ಆದರೆ ಪ್ರಸ್ತುತ ಪ್ರಕರಣದಲ್ಲಿ ಭದ್ರತಾ ಠೇವಣಿಗಾಗಿ ನೀಡಿದ್ದ ಬೇಡಿಕೆ

2018–19ನೇ ಸಾಲಿನಲ್ಲಿ ಮುದ್ರಣಾಲಯ ಮತ್ತು ಲೇಖನ ಸಾಮಗ್ರಿಗಳ ಖರೀದಿ ಬಾಬ್ತು ಟೆಂಡರು ಕರೆಯಲಾಗಿದ್ದು ಟೆಂಡರಿನಲ್ಲಿ ಭಾಗವಸಿದ ಅರ್ಜಿದಾರರು ಠೇವಣಿ ರೂಪದಲ್ಲಿ ಸಲ್ಲಿಸಿದ ಮೊತ್ತಕ್ಕೆ ಕೆಲವರು ಬ್ಯಾಂಕ್ ಗ್ಯಾರಂಟಿ ನೀಡಿದ್ದು ಇದನ್ನು ವಿಶ್ವವಿದ್ಯಾನಿಲಯದ ಖಾತೆಗೆ ಜಮಾ ಮಾಡಿಕೊಳ್ಳಲಾಗಿರುತ್ತದೆ, ಆದರೆ ಸುಧೀರ್ ಪೇಪರ್ ಮಾರ್ಟ್‌ರವರು ನೀಡಿದ್ದ ಡಿ.ಡಿಯನ್ನು ಬ್ಯಾಂಕ್ ಖಾತೆಗೆ ಜಮಾ ಮಾಡುವ ವಿಷಯದಲ್ಲಿ ಆ ಸಂಧರ್ಭದಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ವಿಷಯ ನಿರ್ವಾಹಕರು ಅದಲು ಬದಲಾದ ಕಾರಣದಿಂದ ಹಾಗೂ ನೂತನ ವಿಷಯ ನಿರ್ವಾಹಕರ ಕೈ ತಪ್ಪಿನಿಂದ ಬ್ಯಾಂಕ್ ಖಾತೆಗೆ ಜಮೆ ಮಾಡವುದು ವಿಳಂಬವಾಗಿದ್ದು ಅವಧಿ ಮುಗಿದ ನಂತರ ಸದರಿ ಗುತ್ತಿಗೆದಾರರಿಗೆ ಡಿ.ಡಿಯನ್ನು ಹಿಂತಿರುಗಿಸಲಾಗಿರುತ್ತದೆ ಈ ವಿಷಯವು 2018–19ನೇ ಸಾಲಿನ ಲೆಕ್ಕಪರಿಶೋಧನಾ ವರದಿಯಲ್ಲಿ ಗಮನಿಸಿ ಆಕ್ಷೇಪಿಸಲಾಗಿದ್ದು. ವರದಿಯನ್ನು ಸಲ್ಲಿಸಲಾಗಿರುತ್ತದೆ.

<table>
<tr><td>ಹುಂಡಿಯನ್ನು ವಿವಿ ಖಾತೆಗೆ ಜಮೆ ಮಾಡದೆ ಇದ್ದುದರಿಂದ ಲಭ್ಯವಾಗಬಹುದಾಗಿದ್ದ ವಾರ್ಷಿಕ ಬಡ್ಡಿ ಮೊಬಲಗು ರೂ.30220/–(472282*6.4/100) ಗಳು ಬಡ್ಡಿ ನಷ್ಟವಾಗಿರುತ್ತದೆ. ಈ ನಷ್ಟಕ್ಕೆ ಕಾರಣರಾದವರಿಂದ ರೂ.30,220/– ಗಳನ್ನು ವಸೂಲಿಸಿ ವಿಶ್ವವಿದ್ಯಾನಿಲಯದ ಖಾತೆಗೆ ಜಮಾ ಮಾಡಲು ಸೂಚಿಸಿದೆ.</td><td>ಈ ನಿಟ್ಟಿನಲ್ಲಿ ಮೇಲೆ ನಿವೇದಿಸಿ ಪ್ರಸ್ತಾಪಿಸಲಾಗಿರುವ ಮಾಹಿತಿಯನ್ನು ಗಣನೆಗೆ ತೆಗೆದುಕೊಂಡು ಸದರಿ ವಸೂಲಾತಿ ಕಂಡಿಕೆಯನ್ನು ಕೈ ಬಿಡುವಂತೆ ಕೋರಲಾಗಿರುತ್ತದೆ.</td></tr>
<tr><td>6.34 ಆಂತರಿಕ ನಿಯಂತ್ರಣಾ ವ್ಯವಸ್ಥೆಯ ಕೊರತೆ :<br><br>ವಿಶ್ವವಿದ್ಯಾನಿಲಯದ ಸ್ವೀಕೃತಿ ಮತ್ತು ವೆಚ್ಚಗಳ ಪರಿಶೀಲನೆಯಲ್ಲಿ ಕಂಡು ಬಂದ ನ್ಯೂನತೆಗಳು ಹಾಗೂ ವಿವಿಧ ವ್ಯವಹರಣೆ ಶೀರ್ಷಿಕೆಗಳಡಿ ಮಾಡಿರುವ ವೆಚ್ಚಗಳಲ್ಲಿ ನಿಯಮಗಳ ಪಾಲನೆ ಆಗದಿರುವುದನ್ನು ಹಾಗೂ ಹಣಕಾಸು ನಿರ್ವಹಣೆಯಲ್ಲಿನ ವಿವಿಧ ಲೋಪಗಳನ್ನು ಮೇಲಿನ ಕಂಡಿಕೆಗಳಲ್ಲಿ ವಿವರಿಸಲಾಗಿದೆ. ಇದು ವಿಶ್ವವಿದ್ಯಾನಿಲಯದಲ್ಲಿ ಪರಿಣಾಮಕಾರಿಯಾದ ಆಂತರಿಕ ನಿಯಂತ್ರಣಾ ವ್ಯವಸ್ಥೆ ಇಲ್ಲದಿರುವುದನ್ನು ಬಿಂಬಿಸುತ್ತದೆ. ಆದ್ದರಿಂದ ಆಂತರಿಕ ಲೆಕ್ಕಪರಿಶೋಧನೆ, ಆಡಳಿತಾತ್ಮಕ ನಿಯಂತ್ರಣ ಮುಂತಾದವುಗಳನ್ನು ಅಳವಡಿಸಿಕೊಳ್ಳುವ ಬಗ್ಗೆ ಪರಿಶೀಲಿಸಬಹುದಾಗಿದೆ.</td><td>ವಿಶ್ವವಿದ್ಯಾನಿಲಯದಲ್ಲಿ ವಿವಿಧ ವಿಭಾಗ/ಕಛೇರಿಗಳು ಕಾರ್ಯನಿರ್ವಹಿಸುತ್ತಿದ್ದು ಪ್ರತಿಯೊಂದು ವಿಭಾಗ/ಕಛೇರಿಗಳಲ್ಲಿಯೂ ಸಹ ಸ್ವೀಕೃತಿ ಮತ್ತು ವೆಚ್ಚಗಳ ನಿರ್ವಹಣೆಯನ್ನು ಪ್ರತ್ಯೇಕವಾಗಿ ನಿರ್ವಸುತ್ತಿದ್ದು ಸ್ವೀಕೃತಿಗೆ ಸಂಬಂಧಿಸಿದಂತೆ ಯಾವುದೇ ಸ್ವೀಕೃತಿಯನ್ನು ನಿಯಮದಂತೆ ಆಯಾಯ ಲೆಕ್ಕಶೀರ್ಷಿಕೆಗೆ/ಖಾತೆಗಳಿಗೆ ಸಮರ್ಪಕವಾಗಿ ಸೇರ್ಪಡೆಯಾಗುವಂತೆ ನಿರ್ವಹಿಸಲಾಗುತ್ತಿದೆ ಇದಲ್ಲದೆ ವೆಚ್ಚಗಳಿಗೆ ಸಂಬಂಧಿಸಿದಂತೆ ಪ್ರಸ್ತಾಪಿಸುವುದಾದಲ್ಲಿ ಪ್ರತಿಯೊಂದು ಪಾವತಿ ಅಥವಾ ವೆಚ್ಚಗಳನ್ನು ಆಯಾಯ ಸಂಬಂಧಪಟ್ಟ ಶೀರ್ಷಿಕೆ/ಯೋಜನೆಗಳಿಗನುಗುಣವಾಗಿ ಕಾರ್ಯ ನಿರ್ವಹಿಸಲಾಗುತ್ತಿದೆ. ಹಲವು ಸಂದರ್ಭಗಳಲ್ಲಿ ಸ್ವೀಕೃತಿ ಮತ್ತು ವೆಚ್ಚಗಳ ವಿಷಯದಲ್ಲಿ ಕಾರಣಾಂತರಗಳಿಂದ ಕೈ ತಪ್ಪಿನಿಂದ ನ್ಯೂನತೆಗಳಾದಲ್ಲಿ ಸದರಿ ನ್ಯೂನತೆಗಳನ್ನು ಸರಿಪಡಿಸಿಕೊಂಡು ಸಂಬಂಧಪಟ್ಟ ಬ್ಯಾಂಕ್ ಸ್ಟ್ರೋಲ್‌ನೊಂದಿಗೆ ಹೊಂದಾಣಿಕೆ ಮಾಡಿಕೊಂಡು ಲೆಕ್ಕ ಪತ್ರಗಳನ್ನು ಸರಿಪಡಿಸಿಕೊಳ್ಳಲಾಗುವುದೆಂಬ ಅಂಶವನ್ನು ಲೆಕ್ಕಪರಿಶೋಧನೆಯ ಗಮನಕ್ಕೆ ತರಲಾಗಿದೆ.<br><br>ಮುಂದುವರಿದು ಲೆಕ್ಕಪರಿಶೋಧನೆಯ ಕಂಡಿಕೆ 6.34 ರಲ್ಲಿ ಸೂಚಿಸಿ ನಿರ್ದೇಶಿಸಿರುವ ಅಂಶಗಳನ್ನು ತಪ್ಪದೆ ಅನುಸರಿಸಲಾಗುವುದೆಂಬ ಅಂಶವನ್ನು ಲೆಕ್ಕಪರಿಶೋಧನೆಯ ಗಮನಕ್ಕೆ ತರುತ್ತ ಸದರಿ ಕಂಡಿಕೆಯ ಆಕ್ಷೇಪಣೆಯನ್ನು ಕೈ ಬಿಡುವಂತೆ ನಿವೇದಿಸಲಾಗಿದೆ</td></tr>
<tr><td>6.35 ವಕೀಲರುಗಳ ಬಿಲ್ಲುಗಳಲ್ಲಿ ಕಟಾಯಿಸಲಾದ ಆದಾಯ ತೆರಿಗೆಯನ್ನು ಆದಾಯ ತೆರಿಗೆ ಇಲಾಖೆಗೆ ಜಮಾ ಮಾಡಿರುವುದಕ್ಕೆ ಲೆಕ್ಕಪತ್ರ ದಾಖಲೆಗಳನ್ನು ಹಾಜರುಪಡಿಸದಿರುವುದು :<br><br>ವಿಶ್ವವಿದ್ಯಾನಿಲಯದ ಕಾನೂನು ಪ್ರಕರಣಗಳನ್ನು ಸರ್ವೋಚ್ಚ ನ್ಯಾಯಾಲಯ, ನವದೆಹಲಿ ಇಲ್ಲಿ ಪ್ರತಿ ನಿಧಿಸಿರುವುದಕ್ಕೆ ಸಂಬಂಧಿಸಿದಂತೆ ವಕೀಲರುಗಳಿಗೆ Reading, conference charges, appearance charges ಮತ್ತು Professional charges ಗಳನ್ನು ಪಾವತಿಸಿದ್ದು, ವಿವರಗಳು ಈ ಕೆಳಕಂಡಂತಿವೆ.<br><br><table><tr><th>ಕ್ರ ಸಂ</th><th>ಹೆಸರು</th><th>ಬಿಲ್ಲಿನ ಮೊತ್ತ</th><th>ನಿವ್ವಳ ಮೊತ್ತ</th><th>ಧನಾದೇಶ ಸಂಖ್ಯೆ (ನಿವ್ವಳ ಮೊತ್ತ)</th><th>ಆದಾಯತೆರಿಗೆ</th><th>ಧನಾದೇಶ ಸಂಖ್ಯೆ (ಆದಾಯತೆರಿಗೆ)</th></tr></table></td><td>ಕಂಡಿಕೆ 6.35 ರಲ್ಲಿ ಪ್ರಸ್ತಾಪಿಸಿರುವ ವಕೀಲರುಗಳ ಬಿಲ್ಲುಗಳಲ್ಲಿ ಕಟಾಯಿಸಲಾದ ಆದಾಯ ತೆರಿಗೆಯ ವಿವರಗಳನ್ನು ಮುಂದಿನ ಲೆಕ್ಕತಪಾಸಣಾ ಅವಧಿಯಲ್ಲಿ ಒದಗಿಸಲಾಗುವುದೆಂಬ ಅಂಶವನ್ನು ಲೆಕ್ಕ ತಪಾಸಣಾ ಗಮನಕ್ಕೆ ತರಲಾಗಿದೆ.</td></tr>
</table>

| | | | | | | |
|---|---|---|---|---|---|---|
| 1 | ಶ್ರೀ ಗುರು ಕೃಷ್ಣಕುಮಾರ್. ಎಸ್, ಹಿರಿಯ ವಕೀಲರು | 880000 | 792000 | 953541/ 24.05.2018 | 88000 | 953543/ 24.05.2018 |
| 2 | ಶ್ರೀ ಚಂದ್ರಶೇಖರ್.ಜಿ.ವಿ, ವಕೀಲರು | 484000 | 435600 | 953431/ 24.05.2018 | 48400 | 953542/ 24.05.2018 |
| 3 | ಶ್ರೀ ಜಿ.ಕೃಷ್ಣಮೂರ್ತಿ, ವಕೀಲರು | 150000 | 135000 | 953823/ 27.06.2018 | 15000 | 953824/ 27.06.2018 |
| 4 | ಶ್ರೀ.ಕೆ.ಎಸ್.ಭೀಮಯ್ಯ , ವಕೀಲರು | 25100 | 22590 | 953823/ 27.06.2018 | 2510 | 953825/ 27.06.2018 |
| **ಒಟ್ಟು ಮೊತ್ತ** | | **1539100** | **1385190** | | **153910** | |

ಮೇಲಿನ ಕೋಷ್ಟಕದಲ್ಲಿ ನಮೂದಿಸಿರುವಂತೆ, ವಕೀಲರುಗಳಿಗೆ ಪಾವತಿಸಿರುವ ಶುಲ್ಕದಲ್ಲಿ ಕಟಾಯಿಸಿರುವ ಆದಾಯ ತೆರಿಗೆಯನ್ನು ಆದಾಯ ತೆರಿಗೆ ಇಲಾಖೆಗೆ ಜಮೆ ಮಾಡಲು ಧನಾದೇಶ ಬರೆಯದೇ ವಕೀಲರುಗಳಾದ ಶ್ರೀ ಗುರುಕೃಷ್ಣಕುಮಾರ್.ಎಸ್, ಶ್ರೀ ಚಂದ್ರಶೇಖರ್.ಜಿ.ವಿ, ಶ್ರೀ ಜಿ.ಕೃಷ್ಣಮೂರ್ತಿ ಮತ್ತು ಶ್ರೀ.ಕೆ.ಎಸ್.ಭೀಮಯ್ಯ ರವರ ಹೆಸರುಗಳಿಗೆ ಧನಾದೇಶ ಬರೆಯಲಾಗಿದೆ.

ನಗದು ಪುಸ್ತಕದಲ್ಲಿ ದಾಖಲಿಸಿರುವಂತೆ ಕಟಾಯಿಸಲ್ಪಟ್ಟ ಆದಾಯ ತೆರಿಗೆಯನ್ನು ಆದಾಯ ತೆರಿಗೆ ಇಲಾಖೆಗೆ ಜಮೆ ಮಾಡದೇ ವಕೀಲರುಗಳಿಗೆ ಪಾವತಿಸಿರುವುದಕ್ಕೆ ಸೂಕ್ತ ಸ್ಪಷ್ಟೀಕರಣವನ್ನು ಹಾಗೂ ಆದಾಯ ತೆರಿಗೆ ಜಮೆ ಮಾಡಿದ್ದಲ್ಲಿ ಮೂಲ ಜಮಾ ಚಲನ್‌ಗಳು Filling of It Returns ಮತ್ತು Form-16 ಗಳನ್ನು ಹಾಜರುಪಡಿಸುವಂತೆ ವಿಚಾರಣಾ ಪತ್ರ ಸಂಖ್ಯೆ:138/08.06.2020 ಮತ್ತು 150/09.06.2020 ರಂದು ಹೀಗೆ ಎರಡು ವಿಚಾರಣಾ ಪತ್ರಗಳನ್ನು ನೀಡಿದ್ದರೂ ಸಹ ಯಾವುದೇ ಪ್ರತಿಕ್ರಿಯೆ ವ್ಯಕ್ತವಾಗದ ಕಾರಣ ಆದಾಯ ತೆರಿಗೆ ಕಟಾವಣೆ ಬಾಬ್ತು **ರೂ.1,53,910/-ಗಳನ್ನು** ಸಂಬಂಧಿಸಿದವರಿಂದ ವಸೂಲಿಸಿ ಆದಾಯ ತೆರಿಗೆ ಇಲಾಖೆಗೆ ಜಮಾ ಮಾಡಲು ಸೂಚಿಸಿದೆ ಹಾಗೂ ಈ ಕುರಿತು ಅನುಪಾಲನಾ ವರದಿ ಸಲ್ಲಿಸಲು ತಿಳಿಸಿದೆ.

## ಅಧ್ಯಾಯ-7
## ಶೈಕ್ಷಣಿಕ ವಿಭಾಗ

**7.1 .ಪ್ರವೇಶಾತಿ ಶುಲ್ಕ ಸರ್ಕಾರದಿಂದ ಮರುಭರಿಕೆಯಾಗದಿರುವುದುಮತ್ತು ವಿದ್ಯಾರ್ಥಿಗಳಿಂದ ಕಡಿಮೆ ಶುಲ್ಕ ವಸೂಲಾತಿ ಮಾಡಿರುವುದು :**

ಮೈಸೂರು ವಿಶ್ವವಿದ್ಯಾನಿಲಯದ ವಿವಿಧಅಧ್ಯಯನವಿಭಾಗಗಳು, ಸ್ನಾತ್ತಕೋತ್ತರ ಕೇಂದ್ರಗಳು ಮತ್ತುಅಧೀನ ಕಾಲೇಜುಗಳಿಗೆ 2018-19 ನೇ ಸಾಲಿನಲ್ಲಿ ಪ್ರವೇಶಾತಿ ಪಡೆದಿರುವ ವಿದ್ಯಾರ್ಥಿಗಳ ಪ್ರವೇಶಾತಿ ಶುಲ್ಕಕ್ಕೆ ಸಂಬಂಧಿಸಿದಂತೆ ಹಾಜರುಪಡಿಸಿದ ಲೆಕ್ಕಪತ್ರ ದಾಖಲೆಗಳನ್ನು ಪರಿಶೀಲಿಸಿದಾಗ 2018-19ನೇ

ಪ್ರಸ್ಥಾಪಿತ ಕಂಡಿಕೆಯಲ್ಲಿನ ವಿಷಯಕ್ಕೆ ಸಂಬಂಧಿಸಿದಂತೆ ಅನುಬಂಧ ಸಂಖ್ಯೆ-26 ರಲ್ಲಿ ಸೂಚಿಸಿರುವ ವಿಭಾಗಗಳಲ್ಲಿ ವಿದ್ಯಾರ್ಥಿಗಳಿಗೆ ನಿಗದಿತವಾದ ಶುಲ್ಕ (ಫೀ) ದಿಂದ ಸರ್ಕಾರಿ ಆದೇಶದನ್ವಯ ನೀಡಿರುವ ರಿಯಾಯಿತಿ (ಕಡಿಮೆ ವಸೂಲಿಸಿರುವ) ಮೊತ್ತವಾಗಿದ್ದು, ಈ ಮೊತ್ತದ

ಸಾಲಿನಲ್ಲಿ ವಿದ್ಯಾರ್ಥಿಗಳಿಂದ ಸಂಗ್ರಹಿಸಬೇಕಾಗಿರುವ ಪ್ರವೇಶಾತಿ ಶುಲ್ಕದ ಬೇಡಿಕೆ ರೂ.21,75,46,287/–ಗಳಾಗಿದ್ದು ವಿದ್ಯಾರ್ಥಿಗಳಿಂದ ಸಂಗ್ರಹಣೆಯಾಗಿರುವ ಪ್ರವೇಶಾತಿ ಶುಲ್ಕ ರೂ.15,27,27,065/–ಗಳಾಗಿರುತ್ತವೆ. ಹೀಗಾಗಿ ಸಂಗ್ರಹಿಸದೇ ಬಾಕಿ ಉಳಿದ ಶುಲ್ಕ ರೂ.6,48,19,222/–ಗಳಾಗಿರುತ್ತವೆ. ವಿವರಗಳನ್ನು **ಅನುಬಂಧ–26**ರಲ್ಲಿನೀಡಲಾಗಿದೆ. ಸಂಗ್ರಹಿಸದೇ ಉಳಿದ ಬಾಕಿ ಶುಲ್ಕವುಪ.ಜಾತಿ/ಪ.ವರ್ಗ ಹಾಗೂ ಇತರೆ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ನೀಡಿರುವ ಪ್ರವೇಶಾತಿ ಶುಲ್ಕದವಿನಾಯಿತಿಗೆ ಸಂಬಂಧಿಸಿದ್ದಾಗಿರುತ್ತದೆ.ಈ ಮೊತ್ತವನ್ನುಸಮಾಜಕಲ್ಯಾಣ ಇಲಾಖೆ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣಇಲಾಖೆಯಿಂದಹಿಂಭರಿಕೆ ಮಾಡಿಕೊಳ್ಳಬೇಕಾಗಿರುತ್ತದೆ.

ಇದಲ್ಲದೆ ವಿವಿಧ ಕಾಲೇಜುಗಳಲ್ಲಿ ಹಾಗೂ ವಿಭಾಗಗಳಲ್ಲಿ ವಿದ್ಯಾರ್ಥಿಗಳಿಂದ ನಿಗದಿಪಡಿಸಿದ ಶುಲ್ಕಕ್ಕಿಂತ ಭಾಗಶಃ ಪ್ರವೇಶಾತಿ ಶುಲ್ಕ ಪಡೆದು ಹಾಗೂ ಶುಲ್ಕವನ್ನು ಪಡೆಯದೇ ಪ್ರವೇಶಾತಿ ನೀಡಲಾಗಿರುತ್ತದೆ.ಈ ಮೊತ್ತರೂ.9,69,460/–ಗಳಷ್ಟಿದ್ದು, ವಿವರಗಳನ್ನು **ಅನುಬಂಧ–27**ರಲ್ಲಿನೀಡಲಾಗಿದೆ. ಸರ್ಕಾರದಿಂದ ಹಿಂಭರಿಕೆ ಮಾಡಿಕೊಳ್ಳದ ಹಾಗೂ ವಿದ್ಯಾರ್ಥಿಗಳಿಂದ ಕಟ್ಟಿಸಿಕೊಳ್ಳದ ಮತ್ತು ಭಾಗಶಃ ಕಟ್ಟಿಸಿಕೊಳ್ಳದ ಮೊಬಲಗುಗಳ ಒಟ್ಟು **ಮೊತ್ತರೂ.6,57,88,682/–ಗಳಾಗಿದ್ದು,** ಸದರಿ ಮೊತ್ತವನ್ನುಸರ್ಕಾರದಿಂದ ಹಿಂಭರಿಕೆ ಮಾಡಿಕೊಂಡು ಹಾಗೂ ಸಂಬಂಧಿಸಿದವರಿಂದ ವಸೂಲಿ ಮಾಡಿವಿಶ್ವವಿದ್ಯಾನಿಲಯದ ಲೆಕ್ಕಶೀರ್ಷಿಕೆಗೆ ಜಮೆಮಾಡಲು ಸೂಚಿಸಿದೆ.

ವಸೂಲಾತಿಗೆ ತುರ್ತು ಅಗತ್ಯ ಕ್ರಮವಹಿಸುವಂತೆ ಸಂಬಂಧಿಸಿದ ವಿಭಾಗಗಳು/ಕಾಲೇಜುಗಳಿಗೆ ಸೂಚಿಸಲಾಗಿದೆ.

ಈ ಸಂಬಂಧದ ವಿವರಗಳನ್ನು/ಲೆಕ್ಕಪತ್ರಗಳನ್ನು 2019–20ನೇ ಸಾಲಿನ ಲೆಕ್ಕತನಿಖೆಗೆ ಹಾಜರುಪಡಿಸಲು ಕ್ರಮವಹಿಸಲಾಗಿದೆ ಎಂಬ ವಿಷಯವನ್ನು ಅವಗಾಹನೆಗೆ ತರಲಾಗಿದೆ.

**7.2. ಸಂಯೋಜಿತ ಕಾಲೇಜುಗಳಿಂದ ಸಂದಾಯವಾಗಬೇಕಾದ ಶುಲ್ಕವನ್ನು ವಸೂಲಿಸದಿರುವುದು :**

ವಿಶ್ವವಿದ್ಯಾನಿಲಯವು ಹಾಜರು ಪಡಿಸಿದ ವಿವರಗಳನ್ವಯ ವಿಶ್ವವಿದ್ಯಾನಿಲಯದ ಸಂಯೋಜಿತ ಕಾಲೇಜುಗಳಲ್ಲಿ (ಮೈಸೂರು, ಮಂಡ್ಯ, ಹಾಸನ ಮತ್ತು ಚಾಮರಾಜನಗರ) 2018–19ನೇ ಸಾಲಿಗೆ ಸ್ನಾತಕ ಪದವಿ ಮತ್ತು ಸ್ನಾತಕೋತ್ತರ ಪದವಿ ಕೋರ್ಸುಗಳಿಗೆ ಪ್ರವೇಶ ಪಡೆದಿರುವ ವಿದ್ಯಾರ್ಥಿಗಳ ಸಂಖ್ಯಾ ವಿವರಗಳು ಕೆಳಕಂಡಂತಿರುತ್ತದೆ.

| ಕ್ರ.ಸಂ | ಸಂಯೋಜಿತ ವಿಶ್ವವಿದ್ಯಾನಿಲಯದ ಕಾಲೇಜುಗಳು | ಪ್ರವೇಶಾತಿ ಪಡೆದಒಟ್ಟು ವಿದ್ಯಾರ್ಥಿಗಳ ಸಂಖ್ಯೆ | 2016–17 & 2017–18ರ ಬಾಕಿ ಶುಲ್ಕ | 2018–19ರ ಶುಲ್ಕ | ಒಟ್ಟು ವಿಶ್ವವಿದ್ಯಾನಿಲಯಕ್ಕೆ ಸಂದಾಯವಾಗಬೇಕಾದ ಶುಲ್ಕ |
|---|---|---|---|---|---|
| 1 | ಮೈಸೂರು, ಚಾಮರಾಜನಗರ | ಸ್ನಾತಕ/ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳ ಸಂಖ್ಯೆ 91445 | 20,92,782 | 3,79,58,678 | 4,00,51,460 |
| 2 | ಮಂಡ್ಯ | | 12,22,139 | 6,52,360 | 18,74,499 |
| 3 | ಹಾಸನ | | 76,02,814 | 9,55,800 | 85,58,614 |
| | | ಒಟ್ಟು | **1,09,17,735** | **3,95,66,838** | **5,04,84,573** |

ಪ್ರಸ್ಥಾವಿತ ಕಂಡಿಕೆಯಲ್ಲಿ 2018–19ನೇ ಸಾಲಿನ ಅಂತ್ಯಕ್ಕೆ ಮೈಸೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿ ಬರುವ (ಅಂದರೆ ಅಫಿಲಿಯೇಶನ್ ಹೊಂದಿರುವ ಕಾಲೇಜುಗಳು ಮತ್ತು ಅವುಗಳಿಂದ ಬರಬೇಕಾದ ಅಫಿಲಯೇಶನ ಶುಲ್ಕದ ಮೊತ್ತದ ಬಾಬ್ತು ರೂ.50,484,573/– ಉಳಿದಿರುತ್ತದೆ. ಎಂಬ ಅಂಶವನ್ನು ಉಲ್ಲೇಖಿಸಿ ವಿಶ್ವವಿದ್ಯಾನಿಲಯಕ್ಕೆ ಹೆಚ್ಚಿನ ಮೊತ್ತವು (ಪ್ರವೇಶಾತಿ ಶುಲ್ಕಗಳು) ಅಂಗ ಸಂಸ್ಥೆಗಳಿಂದ ನಿಗಧಿತವಾದ ಅವಧಿಯಲ್ಲಿ ಸಂದಾಯವಾಗದೇ ಇರುವುದಕ್ಕೆ ಸಂಬಂಧ ವಿಶ್ವವಿದ್ಯಾನಿಲಯವು ಸದರಿ ಮೊತ್ತದ ವಸೂಲಾತಿ ಬಗ್ಗೆ ವಹಿಸಿರುವ ಕ್ರಮದ ಬಗ್ಗೆ ಪ್ರಸ್ತಾಪಿಸಲಾಗಿದೆ ಅದರ ವಿವರ ಈ ರೀತಿಯಿದೆ (ಆಡಿಟ್ ವರದಿಯ ಪ್ರಕಾರ)

| ಕ್ರ ಸಂ | ಕಾಲೇಜುಗಳ ವಿವರ | ಕಾಲೇಜುಗಳ ಸಂಖ್ಯೆ | 31.03.2019ರ ಅಂತ್ಯಕ್ಕೆ ಇವುಗಳಿಂದ ವಿಶ್ವವಿದ್ಯಾನಿಲಯಕ್ಕೆ ಸಂದಾಯವಾಗಲು ಬಾಕಿವಿರುವ ಮೊತ್ತ |
|---|---|---|---|
| 1 | ಮೈಸೂರು ನಗರ ಮತ್ತು ಗ್ರಾಮಾಂತರ ಕಾಲೇಜು | 28 | 40051460 |
| 2 | ಚಾಮರಾಜನಗರ ಜಿಲ್ಲೆ | 12 | |
| 3 | ಮಂಡ್ಯ ಜಿಲ್ಲೆ | 14 | 1874499 |

ಮೇಲಿನ ವಿವರಗಳಂತೆ ವಿಶ್ವವಿದ್ಯಾನಿಲಯದ ಸಂಯೋಜಿತ ಕಾಲೇಜುಗಳಿಂದ ವಿಶ್ವವಿದ್ಯಾನಿಲಯಕ್ಕೆ 2016–17, 2017–18ರ ಬಾಕಿ ಶುಲ್ಕ ಮತ್ತು 2018–19ರಲ್ಲಿ ಸಂಗ್ರಹಿಸಬೇಕಾದ ಶುಲ್ಕದ ಒಟ್ಟು ಮೊತ್ತ ರೂ.5,04,84,573/–ಗಳು ವಿಶ್ವವಿದ್ಯಾನಿಲಯದ ನಿಧಿಗೆ ಜಮಾ ಆಗಿರುವುದಕ್ಕೆ ವಿವರಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲ. ಸದರಿ ಮೊತ್ತವು ವಿಶ್ವವಿದ್ಯಾನಿಲಯಕ್ಕೆ ಜಮೆಯಾಗಿರುವ ಬಗ್ಗೆ ವಿವರಗಳನ್ನುಹಾಜರು ಪಡಿಸುವವರೆಗೆ **ರೂ.5,04,84,573/–ಗಳನ್ನು ವಸೂಲಿಸಲು** ಹಾಗೂ ಈ ಲೋಪಕ್ಕೆ ಕಾರಣರಾದವರ ವಿರುದ್ಧ ಆಡಳಿತಾತ್ಮಕ ಕ್ರಮ ಕೈಗೊಳ್ಳಲು ಸೂಚಿಸಿದೆ.

| | | | |
|---|---|---|---|
| 4 | ಹಾಸನ ಜಿಲ್ಲೆ | 26 | 8558614 |
| | **ಒಟ್ಟು** | **80** | **50484573** |

(2018–19ನೇ ಸಾಲಿನವರೆಗೆ ಮೈಸೂರು ಜಿಲ್ಲೆಯ ಮತ್ತು ಚಾಮರಾಜನಗರ ಜಿಲ್ಲೆಯ ಕಾಲೇಜುಗಳನ್ನು ಒಟ್ಟಿಗೆ ಪರಿಗಣಿಸಲಾಗುತ್ತಿತ್ತು. ಅಡಿಟ್ ವರದಿಯಲ್ಲಿ ಬಾಕಿ ಮೊತ್ತ ಒಟ್ಟಾಗಿ ಸೂಚಿಸಲಾಗಿದೆ)

ಆದರೆ ವಾಸ್ತವಾಗಿ ಸಹಾಯಕ ಕುಲಸಚಿವರು (ಶೈಕ್ಷಣಿಕ) ಮೈಸೂರು ವಿಶ್ವವಿದ್ಯಾನಿಲಯ ಮೈಸೂರು ವಿಭಾಗದಲ್ಲಿ ಈ ಸಂಬಂಧ ನಿರ್ವಹಿಸಿರುವ ಮೂಲದಾಖಲಾತಿಗಳು/ವಹಿಗಳ ಪ್ರಕಾರ 2018–19ನೇ ಸಾಲಿನ ಅಂತ್ಯಕ್ಕೆ (2016–17 ರಿಂದ 2018–19) ಸಂಯೋಜಿತ ಕಾಲೇಜುಗಳಿಂದ ವಿಶ್ವವಿದ್ಯಾನಿಲಯಕ್ಕೆ ಸಂದಾಯವಾಗದೇ ಬಾಕಿ ಉಳಿದಿರುವ ಪ್ರವೇಶಾತಿ ಶುಲ್ಕ ಮೊತ್ತ ರೂ.2,58,14,104/– ಆಗಿದ್ದು ಈ ಮೊತ್ತದ ವಸೂಲಾತಿಯ ಬಗ್ಗೆ ಸಂಬಂಧಪಟ್ಟ ಕಾಲೇಜುಗಳಿಗೆ ನೋಟಿಸ್ ಜಾರಿ ಮಾಡುವ ಮೂಲಕ ಬಾಕಿ ಮೊತ್ತದ ತೀರುವಳಿಗೆ ಕ್ರಮವಹಿಸಲಾಗಿದೆ ಎಂಬ ಅಂಶವನ್ನು ಲೆಕ್ಕಪರಿಶೋಧನೆ ಅವಗಾಹನೆಗೆ ತರಲಾಗಿದೆ.

ವಿಶ್ವವಿದ್ಯಾನಿಲಯಕ್ಕೆ ಸಂದಾಯವಾಗಲು ಬಾಕಿರುವ ಒಟ್ಟು ಮೊತ್ತ ರೂ.2,58,14,404/–ಜಿಲ್ಲಾವಾರು ವಿವರ ಈ ರೀತಿಯಿದೆ (ಈ ಸಂಬಂಧದ ಬ್ಯಾಂಕ್‌ಗಳ ಪ್ರತಿ ಅಡಕಗೊಳಿಸಿದೆ)

| ಕ್ರ ಸಂ | ಜಿಲ್ಲೆ | ಸಂಯೋಜಿತ ವಿಶ್ವವಿದ್ಯಾನಿಲಯದ ಕಾಲೇಜುಗಳಿಂದ ಸಂದಾಯವಾಗಲು ಬಾಕಿಯಿರುವ ಮೊತ್ತ |
|---|---|---|
| 1 | ಮೈಸೂರು | 1,76,91,820 |
| 2 | ಚಾಮರಾಜನಗರ ಜಿಲ್ಲೆ | 3,91,280 |
| 3 | ಮಂಡ್ಯ ಜಿಲ್ಲೆ | 2,91,010 |
| 4 | ಹಾಸನ ಜಿಲ್ಲೆ | 74,39,994 |
| | **ಒಟ್ಟು** | **2,58,14,104** |

**7.3. ವಿದ್ಯಾರ್ಥಿ ವೇತನದ ಶುಲ್ಕ ಹಿಂಭರಿಕೆ ಮಾಡಿಕೊಳ್ಳದೇಮಂಡ್ಯ ಸ್ನಾತಕೋತ್ತರಕೇಂದ್ರದ ಬ್ಯಾಂಕ್‌ಖಾತೆಯಿಂದವಿಶ್ವವಿದ್ಯಾನಿಲಯದ ಖಾತೆಗಳಿಗೆ ಶುಲ್ಕದ ಮೊತ್ತಜಮಾಮಾಡಿರುವುದು :**

2018–19ನೇ ಸಾಲಿನಲ್ಲಿ ಪರಿಶಿಷ್ಟ ವರ್ಗದ ಮೆಟ್ರಿಕ್ ನಂತರದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನದ ಶುಲ್ಕ ಮರುಪಾವತಿಯನ್ನು ಮಂಜೂರು ಮಾಡಿ ಶುಲ್ಕ ಮರುಪಾವತಿ ಮೊತ್ತ ರೂ.64,865/–ಗಳನ್ನು ಸಹಾಯಕ ನಿರ್ದೇಶಕರು, ಗ್ರೇಡ್–1, ಸಮಾಜಕಲ್ಯಾಣ ಇಲಾಖೆ, ಮಂಡ್ಯ ತಾಲ್ಲೂಕು ರವರು ತಮ್ಮ ಕಛೇರಿ ಪತ್ರ ಸಂಖ್ಯೆ:ಸನಿ/ಸಕಇ/ಭಾಸವಿವೇ/ಸಿಆರ್–1/2017–18, ದಿನಾಂಕ:05.04.2018ರಲ್ಲಿ ನಿರ್ದೇಶಕರು, ಸರ್.ಎಂ. ವಿಶ್ವೇಶ್ವರಯ್ಯ ಸ್ನಾತಕೋತ್ತರ ಕೇಂದ್ರ, ತೂಬಿನಕೆರೆ, ಮಂಡ್ಯರವರಿಗೆ ಬರೆದಿರುತ್ತಾರೆ. ಆದರೆ ಸದರಿ ವಿದ್ಯಾರ್ಥಿ ವೇತನದ ಮೊತ್ತ **ರೂ.64,865/–ಗಳು** ಸ್ನಾತಕೋತ್ತರ ಕೇಂದ್ರದ ಉಳಿತಾಯ ಖಾತೆಗೆ ಜಮೆಯಾಗಿರುವುದಿಲ್ಲ.

ಆದರೆ ವಿದ್ಯಾರ್ಥಿ ವೇತನದ ಮೊತ್ತ ಬ್ಯಾಂಕ್ ಖಾತೆಗೆ ಜಮೆಯಾಗಿರುವುದನ್ನು ಖಚಿತಪಡಿಸಿಕೊಳ್ಳದೇ, ಪ್ರವೇಶ ಶುಲ್ಕ ರೂ.31,620/–ಗಳು ಹಾಗೂ ಬೋಧನಾ ಶುಲ್ಕ ರೂ.18,000/–ಗಳು ಒಟ್ಟು ರೂ.49,620/–ಗಳನ್ನು ಧನಾದೇಶ ಸಂಖ್ಯೆ:570591, ದಿನಾಂಕ:23.04.2018ರ ಮೂಲಕ ವಿಶ್ವವಿದ್ಯಾನಿಲಯದ ಜಿ.ಆರ್.ಎ ಖಾತೆಗೆ ಮತ್ತು ಪರೀಕ್ಷಾ ಶುಲ್ಕ ರೂ.14,500/– ಹಾಗೂ ಘಟಿಕೋತ್ಸವ ಶುಲ್ಕ **ರೂ.745**/–ಗಳನ್ನು ಕ್ರಮವಾಗಿ ಧನಾದೇಶ ಸಂಖ್ಯೆ:570592, ದಿನಾಂಕ:23.04.2018 ಹಾಗೂ ಧನಾದೇಶ ಸಂಖ್ಯೆ:570593, ದಿನಾಂಕ:23.04.2018ರ ಮೂಲಕ ವಿಶ್ವವಿದ್ಯಾನಿಲಯದ ಎಫ್‌ಅಂಡ್‌ಆರ್ ಖಾತೆಗೆ, ಒಟ್ಟು **ರೂ.64,865/–ಗಳನ್ನು** ವಿಶ್ವವಿದ್ಯಾನಿಲಯದ ಜಿ.ಆರ್.ಎ ಮತ್ತು ಎಫ್‌ಅಂಡ್‌ಆರ್ ಖಾತೆಗಳಿಗೆ ಜಮೆ ಮಾಡಲಾಗಿರುತ್ತದೆ.

ಮೇಲ್ಕಂಡ ವಿವರಗಳಂತೆ ಮಂಡ್ಯ ಸ್ನಾತಕೋತ್ತರ ಕೇಂದ್ರದ ಉಳಿತಾಯ ಖಾತೆಗೆ ವಿದ್ಯಾರ್ಥಿ ವೇತನ ಜಮೆಯಾಗದಿದ್ದರೂ ಸಹ ಹೀಗೆ ವಿಶ್ವವಿದ್ಯಾನಿಲಯದ ಖಾತೆಗಳಿಗೆ ಶುಲ್ಕಗಳನ್ನು ಸ್ನಾತಕೋತ್ತರ ಕೇಂದ್ರದ ಉಳಿತಾಯ ಖಾತೆಯ ಹಣದಿಂದ ಜಮೆ ಮಾಡುವ ಮೂಲಕ ವಿಶ್ವವಿದ್ಯಾನಿಲಯಕ್ಕೆ ಆರ್ಥಿಕ ನಷ್ಟವುಂಟು ಮಾಡಲಾಗಿದೆ. ಈ ಬಗ್ಗೆ ವಿವರಣೆ ನೀಡಲು ಕೋರಿ ವಿಚಾರಣಾ ಪತ್ರ ಸಂಖ್ಯೆ:18/2020–21, ದಿನಾಂಕ:27.07.2020ನ್ನು ನೀಡಲಾಗಿದ್ದರೂ ವಿಶ್ವವಿದ್ಯಾನಿಲಯದಿಂದ ಯಾವುದೇ ವಿವರಣೆ ನೀಡಿರುವುದಿಲ್ಲ. ಆದ್ದರಿಂದ ಸದರಿ ಮೊತ್ತ **ರೂ.64,865/–ಗಳನ್ನು** ನಿರ್ದೇಶಕರು, ಸರ್.ಎಂ.ವಿಶ್ವೇಶ್ವರಯ್ಯ ಸ್ನಾತಕೋತ್ತರ ಕೇಂದ್ರದವರಿಂದ ವಸೂಲಿಸಲು ಸೂಚಿಸಿದೆ.

ಪ್ರಸ್ಥಾವಿತ ಕಂಡಿಕೆಯಲ್ಲಿನ ವಿಷಯಕ್ಕೆ ಸಂಬಂಧಿಸಿದಂತೆ ಸರ್.ಎಂ. ವಿಶ್ವೇಶ್ವರಯ್ಯ ಸ್ನಾತಕೋತ್ತರ ಕೇಂದ್ರ, ಮಂಡ್ಯ ಇವರು ಪರಿಶಿಷ್ಟ/ಪರಿಶಿಷ್ಟ ವರ್ಗಗಳ ವಿದ್ಯಾರ್ಥಿಗಳ ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನದ ಬಾಬ್ತು ಸ್ನಾತಕೋತ್ತರ ಕೇಂದ್ರದ ಖಾತೆಗೆ ಹೊಂದಾಣಿಕೆಯಾಗಿರುವುದನ್ನು ದೃಢಪಡಿಸಿಕೊಳ್ಳದೇಯೇ

a. ಪ್ರವೇಶ ಶುಲ್ಕ ಬಾಬ್ತು 31,620
   ಭೋಜನಾ ಶುಲ್ಕ ಬಾಬ್ತು 18,000
   ಒಟ್ಟು ರೂ.49,620

ವಿಶ್ವವಿದ್ಯಾನಿಲಯದ ಜಿಆರ್‌ಎ ಖಾತೆಗೆ ಧನಾದೇಶ ಸಂಖ್ಯೆ: 570596 ದಿನಾಂಕ:23.4.2018 ಮತ್ತು

b. ಪರೀಕ್ಷಾ ಬಾಬ್ತು ರೂ.14,500
   ಘಟಿಕೋತ್ಸವ ಶುಲ್ಕ ರೂ.745
   ಒಟ್ಟು ರೂ.15,245

ಧನಾದೇಶ ಸಂಖ್ಯೆ:570593 ದಿನಾಂಕ:23.04.2018 ರಲ್ಲಿ ಎಫ್‌ಅಂಡ್‌ಆರ್ ಖಾತೆಗೆ ಜಮಾ ಮಾಡಿರುತ್ತಾರೆ ಇದರಿಂದಾಗಿ a+b (49,620+15,245=64,865)ನ್ನು ಜಮಾ ಮಾಡಿದಂತಾಗಿದೆ ಈ ರೀತಿ ಸಂಬಂಧಪಟ್ಟ ಇಲಾಖೆಯಿಂದ (ಸಮಾಜ ಕಲ್ಯಾಣ ಇಲಾಖೆ) ಸ್ನಾತಕೋತ್ತರ ಕೇಂದ್ರಕ್ಕೆ ಹೊಂದಾಣಿಕೆ ಆಗಬೇಕಾಗಿರುವ ಮೊತ್ತವನ್ನು ಖಚಿತ ಮಾಡಿಕೊಳ್ಳದೇ ಪೂರ್ವಭಾವಿಯಾಗಿಯೇ ಜಮಾ ಮಾಡಿರುವ ಕ್ರಮವನ್ನು ಉಲ್ಲೇಖಿಸಿ ಲೆಕ್ಕಪರಿಶೋಧನಾ ವರದಿಯಲ್ಲಿ ರೂ.64865/– ಸ್ನಾತಕೋತ್ತರ ಕೇಂದ್ರ ಇದರಿಂದ ವಸೂಲಾತಿಗೆ ಸೂಚಿತವಾಗಿದೆ

ಅದರೆ ಸದರಿ ಮೊತ್ತವು ಸಹಾಯಕ ನಿರ್ದೇಶಕರು ಗ್ರೇಡ್–1 ಸಮಾಜ ಕಲ್ಯಾಣ ಇಲಾಖೆ ಮಂಡ್ಯ ಇವರಿಂದ ಧನಾದೇಶ ಸಂಖ್ಯೆ:857525 ದಿನಾಂಕ:28.03.2018 ರೂ.64865/–ಸ್ನಾತಕೋತ್ತರ ಕೇಂದ್ರದ ಮಂಡ್ಯಶಾಖೆ ಎಸ್.ಬಿ.ಐ ಖಾತೆ ಸಂಖ್ಯೆ:54008771860 ರಲ್ಲಿ ಜಮೆಯಾದ ಮೊತ್ತವಾಗಿದೆ (ಸಮಾಜ ಕಲ್ಯಾಣ ಇಲಾಖೆಗೆ ಮಂಡ್ಯ ಇವರ ಪತ್ರದ ಪ್ರತಿ ಅಡಕಗೊಳಿಸಿದೆ) ಅದರೆ ಈ ಮೊತ್ತವು ನಿಗಧಿತವಾದ ಅವಧಿಯಲ್ಲಿ ಬ್ಯಾಂಕ್ ಖಾತೆಗೆ ಹೊಂದಾಣಿಕೆಯಾಗದೇ ದಿನಾಂಕ:06.07.2021 ರಂದು ಸ್ನಾತಕೋತ್ತರ ಕೇಂದ್ರದ ಖಾತೆಗೆ ಹೊಂದಾಣಿಕೆಯಾಗಿದೆ ಸದರಿ ಮೊತ್ತದ ವರ್ಗಾವಣೆಯ/ಹೊಂದಾಣೀಕೆಯ ಬ್ಯಾಂಕ್‌ನ ಆಂತರಿಕ ಸಮ್ಯಸೆಯಿಂದ ಉಂಟಾಗಿದೆ (ಜಮಾ ವಿವರ ಧೃಢೀಕರಿಸುವ ಬ್ಯಾಂಕ್ ಸ್ಕ್ರೋಲ್ ಪ್ರತಿ ಅಡಕಗೊಳಿಸಿದೆ)

ಆದ ಕಾರಣ ಪ್ರಸ್ಥಾವಿತ ವಸೂಲಾತಿ ಕಂಡಿಕೆ ಮೊತ್ತ ರೂ.64,865/– ಕೈ ಬಿಡಲು ಕೋರಿದೆ.

**7.4. ಮಾನಸಗಂಗೋತ್ರಿ ಶಿಕ್ಷಣ ಸಂಸ್ಥೆಯ ಪ್ರವೇಶಾತಿ ಶುಲ್ಕದಲ್ಲಿ ನೌಕರರಿಗೆ ಮುಂಗಡ ನೀಡಿರುವುದು :**

ಮಾನಸಗಂಗೋತ್ರಿ ಶಿಕ್ಷಣ ಸಂಸ್ಥೆಯ ಲೆಕ್ಕಪರಿಶೋಧನೆಯಲ್ಲಿ ಹಾಜರುಪಡಿಸಿದ ದಾಖಲಾತಿಗಳನ್ನು ಪರಿಶೀಲಿಸಲಾಗಿ ನಿವೃತ್ತ ನೌಕರರಾದ ಶ್ರೀ.ಆರ್.ವಿಶ್ವನಾಥ್‌ರವರಿಗೆ ರೂ.32,000/–ಗಳನ್ನು ಹಾಗೂ ತಾತ್ಕಾಲಿಕ ನೌಕರರಾದ ಕಂಪ್ಯೂಟರ್ ಶಿಕ್ಷಕಿ ಕು.ಚೈತ್ರಾ.ಟಿ.ಸಿ ರವರಿಗೆ ಮುಂಗಡವಾಗಿ ರೂ.20,000/–ಗಳನ್ನು ವಿದ್ಯಾರ್ಥಿಗಳ ಪ್ರವೇಶಾತಿ ಶುಲ್ಕದಿಂದ ನೀಡಲಾಗಿರುತ್ತದೆ. ಶಿಕ್ಷಣ ಸಂಸ್ಥೆಯ ಈ ಕ್ರಮವು ನಿಯಮಬಾಹಿರವಾಗಿರುತ್ತದೆ. ದಿನಾಂಕ:31.03.2019 ರ ಅಂತ್ಯಕ್ಕೆ ಆರ್.ವಿಶ್ವನಾಥ್ ರವರಿಂದ ರೂ.25,000/–ಗಳನ್ನು ವಸೂಲಿಸಲಾಗಿದ್ದು, ರೂ.7,000/– ಬಾಕಿ ಇರುತ್ತದೆ ಹಾಗೂ ಕು.ಚೈತ್ರಾಟಿ.ಸಿ ರವರಿಂದ ಪೂರ್ಣ ಮೊಬಲಗು ಬಾಕಿಯಿರುತ್ತದೆ. ಬಾಕಿಯಿರುವ ಒಟ್ಟಾರೆ ಮೊಬಲಗು ರೂ.27,000/–ಗಳನ್ನು ಸಂಸ್ಥೆಯ ಕಾರ್ಯದರ್ಶಿಯವರಿಂದ ವಸೂಲಿಸಲು ಸೂಚಿಸಿದೆ.

ಪ್ರಸ್ತಾವಿತ ಕಂಡಿಕೆಯಲ್ಲಿನ ವಿಷಯಕ್ಕೆ ಸಂಬಂಧಿಸಿದಂತೆ ಲೆಕ್ಕಪರಿಶೋಧನಾವರದಿಯ ಕಂಡಿಕೆಯಲ್ಲಿನ ಸೂಚನೆಯನ್ವಯ ಸದರಿ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಹಾಲೀ ನಿವೃತ್ತ ನೌಕರರಾದ ಶ್ರೀ.ಆರ್.ವಿಶ್ವನಾಥ್‌ರವರಿಗೆ ನೀಡಲಾಗಿದ್ದ ರೂ.32000/–ರಲ್ಲಿ ಮುಂಗಡ ವಸೂಲಾತಿ ಬಾಕಿಯಿದ್ದ ರೂ.7000/–ರ ಮುಂಗಡ ವಸೂಲಾತಿ ವಿವರ.

ಕು.ಚೈತ್ರಾ.ಟಿ.ಸಿ ಕಂಪ್ಯೂಟರ್ ಶಿಕ್ಷಕಿ ಇವರಿಗೆ ನೀಡಲಾಗಿದ್ದ ಮುಂಗಡದಲ್ಲಿ ವಸೂಲಾತಿಗೆ ಬಾಕಿಯಿದ್ದ ಮೊತ್ತ ರೂ.20000/–ವನ್ನು ಈ ಕೆಳಕಂಡ ಮಾಹೆಗಳ ವೇತನದಲ್ಲಿ ವಸೂಲಿಸಲಾಗಿದೆ.

**ವಿವರ ಈ ರೀತಿಯಿದೆ**

| ಮಾಹೆ | ಕಟಾಯಿಸಿರುವ ಮುಂಗಡದ ಉಳಿಕೆ ಬಾಬ್ತು |
|---|---|
| 07/2019 | 5000 |
| 08/2019 | 5000 |
| 09/2019 | 5000 |
| 01/2020 | 5000 |
| **ಒಟ್ಟು** | **20000** |

ವಸೂಲಾತಿಗೆ ಬಾಕಿ ಉಳಿದಿದ್ದ ಮುಂಗಡದ ಕಟಾವಿನ ವಿವರವನ್ನು ಧೃಢೀಕರಿಸುವ ಆಯಾ ಮಾಹೆಯ ವೇತನದ ಬಿಲ್ ಪ್ರತಿ ಅಡಕಗೊಳಿಸಿದೆ.

ಲೆಕ್ಕಪರಿಶೋಧನಾ ವರದಿಯಲ್ಲಿ ಸೂಚಿತವಾಗಿರುವ ಮುಂಗಡದಲ್ಲಿ ವಸೂಲಾತಿಗೆ ಬಾಕಿಯಿದ್ದ ಪೂರ್ಣ ಮೊತ್ತವು ಸಂಬಂಧಿಸಿದ ನೌಕರರ ವೇತನದಲ್ಲಿ ಪೂರ್ಣ ವಸೂಲಿಸಿರುವುದರಿಂದ ಕಂಡಿಕೆ ಕೈ ಬಿಡಲು ಕೋರಿದೆ.

## ಅಧ್ಯಾಯ–8

## ಆಡಳಿತ ವಿಭಾಗ

**8.1. ಶ್ರೇಣಿ ವಹಿಯನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸದಿರುವುದು :**

ಮೈಸೂರು ವಿಶ್ವವಿದ್ಯಾನಿಲಯದ ವಿವಿಧಅಧ್ಯಯನ ವಿಭಾಗಗಳು, ಪ್ರಾದೇಶಿಕ ಕೇಂದ್ರಗಳು ಮತ್ತು ಕಾಲೇಜುಗಳಿಗೆ ಸರ್ಕಾರದಿಂದ ಮಂಜೂರಾಗಿರುವ ವಿವಿಧ ವೃಂದಗಳ ಹುದ್ದೆಗಳು, ಮಂಜೂರಾದ ಹುದ್ದೆಗಳಿಗೆ ಎದುರಾಗಿಕಾರ್ಯನಿರ್ವಹಿಸುತ್ತಿರುವಖಾಯಂಬೋಧಕ, ಬೋಧಕೇತರ ನೌಕರರ ವಿವರಗಳು ಹಾಗೂ ಖಾಲಿಯಿರುವ ಹುದ್ದೆಗಳ ವಿವರಗಳಿರುವ ಶ್ರೇಣಿವಹಿಯನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆಕೋರಿಲೆಕ್ಕತನಿಖಾ ವಿಚಾರಣೆ ಸಂಖ್ಯೆ:9/26.05.2020ನ್ನು ನೀಡಿದ್ದರೂ

ಪ್ರಸ್ತಾವಿತ ಕಂಡಿಕೆಯಲ್ಲಿನ ವಿಷಯಕ್ಕೆ ಸಂಬಂಧಿಸಿದಂತೆ – ಶ್ರೇಣಿ ವಹಿಯನ್ನು ನಿರ್ವಹಿಸಿ, 2019–20ನೇ ಸಾಲಿನ ಲೆಕ್ಕಪರಿಶೋಧನೆಗೆ ಹಾಜರುಪಡಿಸಲು ಕ್ರಮವಹಿಸಲಾಗಿದೆ. ಎಂಬ ಅಂಶವನ್ನು ನಿವೇದಿಸಿದೆ.

| | |
|---|---|
| ಶ್ರೇಣಿವಹಿಯನ್ನು ಹಾಜರುಪಡಿಸಿರುವುದಿಲ್ಲ.ಆದರೆಅಧ್ಯಾಪಕ ವೃಂದ ಮತ್ತುಅಧ್ಯಾಪಕೇತರ ವೃಂದದ ವಿವರಗಳನ್ನು ಒಳಗೊಂಡ ತಃಖ್ತೆಯನ್ನು ಮಾತ್ರ ಹಾಜರುಪಡಿಸಲಾಗಿದ್ದು, ವಿವರಗಳನ್ನು **ಅನುಬಂಧ–28ರಲ್ಲಿ** ಲಗತ್ತಿಸಿದೆ.<br>ವಿಶ್ವವಿದ್ಯಾನಿಲಯದ ವಿವಿಧಅಧ್ಯಯನ ವಿಭಾಗಗಳಲ್ಲಿ ಹಾಲಿ ಒಟ್ಟುಅಗತ್ಯಇರುವ ಬೋಧನಾವಧಿ, ಪ್ರಸ್ತುತಕಾರ್ಯನಿರ್ವಹಿಸುತ್ತಿರುವ ಪ್ರಾಧ್ಯಾಪಕರು, ಸಹ ಪ್ರಾಧ್ಯಾಪಕರು ಹಾಗೂ ಸಹಾಯಕ ಪ್ರಾಧ್ಯಾಪಕರುಗಳಿಗೆ ಹಂಚಿಕೆ ಮಾಡಿದ ನಂತರ ಉಳಿಕೆಯಾಗುವ ಬೋಧನಾವಧಿಗಳ ಬಗ್ಗೆ ವಿಶ್ವವಿದ್ಯಾನಿಲಯವು ಮಾಹಿತಿಗಳನ್ನು ಲೆಕ್ಕಪರಿಶೋಧನೆಗೆ ನೀಡಿರುವುದಿಲ್ಲ. ಹೀಗಾಗಿ ವಿಶ್ವವಿದ್ಯಾನಿಲಯದಲ್ಲಿ ನೇಮಕ ಮಾಡಿಕೊಂಡಿರುವಅತಿಥಿಉಪನ್ಯಾಸಕರ ಸಂಖ್ಯೆಯೊಡನೆ ವಾಸ್ತವವಾಗಿ ಕೊರತೆಯಿದ್ದ ಬೋಧನಾವಧಿಗಳನ್ನು ಲೆಕ್ಕಪರಿಶೋಧನೆಯಲ್ಲಿತುಲನೆ ಮಾಡಿ ಪರಿಶೀಲಿಸಲು ಸಾಧ್ಯವಾಗಿರುವುದಿಲ್ಲ.<br>ಸರ್ಕಾರದಆದೇಶ ಸಂಖ್ಯೆ:ಎಸ್‌ಡಬ್ಲ್ಯೂಎಲ್/ಸಿಎಸ್‌ಎಲ್/ಹೆಚ್86/ಬೆಂಗಳೂರು ದಿನಾಂಕ:12.03.1987ರನ್ವಯ ಪ್ರತಿಯೊಂದುಕಛೇರಿಯ ಸಿಬ್ಬಂದಿಗಳ ಪೂರ್ಣ ವಿವರಗಳನ್ನೊಳಗೊಂಡ ಶ್ರೇಣಿವಹಿಯನ್ನು ನಿರ್ವಹಿಸಬೇಕಾಗಿರುತ್ತದೆ. ಮಂಜೂರಾದ ಹುದ್ದೆಗಳಿಗಿಂತ ಅಧಿಕ ಸಂಖ್ಯೆಯ ನೌಕರರನ್ನು ನೇಮಿಸಿಕೊಂಡು ವೇತನ ಭತ್ಯೆಗಳನ್ನು ಪಾವತಿಸಿದಲ್ಲಿ ವಿಶ್ವವಿದ್ಯಾನಿಲಯಕ್ಕೆ ಹೆಚ್ಚಿನಆರ್ಥಿಕ ಹೊರೆ ಬೀಳುವಂತಾಗುತ್ತದೆ.ಆದುದರಿಂದ ಈ ಬಗ್ಗೆ ಜರೂರುಕ್ರಮ ವಹಿಸಿ ಮುಂದಿನ ಲೆಕ್ಕಪರಿಶೋಧನೆಗೆ ಮಾಹಿತಿ ನೀಡಲು ಸೂಚಿಸಿದೆ. | |
| **8.2 ವಿಶ್ವವಿದ್ಯಾನಿಲಯದ ವಿವಿಧ ವಿಭಾಗಗಳಲ್ಲಿ ಸ್ವೀಕೃತಿ ಮೊತ್ತವನ್ನುಕಡಿಮೆಜಮೆ ಮಾಡಿರುವುದು ಹಾಗೂ ವಿಳಂಬವಾಗಿ ಜಮೆಮಾಡಿರುವುದು :**<br>ಮೈಸೂರು ವಿಶ್ವವಿದ್ಯಾನಿಲಯದ ವಿವಿಧ ವಿಭಾಗಗಳಲ್ಲಿ 2018–19ನೇ ಸಾಲಿನಲ್ಲಿ ರಶೀದಿಗಳ ಮೂಲಕ ಸ್ವೀಕೃತಗೊಂಡಿರುವ ಹಣವನ್ನು ಪೂರ್ಣವಾಗಿಜಮೆ ಮಾಡದೇ ಭಾಗಶಃ ಮೊತ್ತವನ್ನುಜಮೆ ಮಾಡಿರುವುದು ರಶೀದಿ ಪುಸ್ತಕಗಳು, ದಿನವಹಿ, ಜಮಾ ವಹಿಗಳ ಪರಿಶೀಲನೆಯಿಂದಕಂಡುಬಂದಿರುತ್ತದೆ. ವಿವರಗಳನ್ನು **ಅನುಬಂಧ–29ರಲ್ಲಿ**ನೀಡಲಾಗಿದೆ, ವಿವಿಧ ವಿಭಾಗಗಳಲ್ಲಿ ರಶೀದಿಗಳ ಮೂಲಕ ಸ್ವೀಕೃತಿಯಾಗಿರುವ ಒಟ್ಟು ಮೊತ್ತ ರೂ.2,84,08,659/–ಗಳಾಗಿದ್ದು, ಬ್ಯಾಂಕಿಗೆಇರಸಾಲು ಮಾಡಿರುವ ಮೊತ್ತ ರೂ.2,81,28,679/–ಗಳಾಗಿರುತ್ತದೆ. ರೂ.2,79,980/–ಗಳಷ್ಟು ಮೊತ್ತವನ್ನು ಬ್ಯಾಂಕಿಗೆಕಡಿಮೆಇರಸಾಲು ಮಾಡಲಾಗಿರುತ್ತದೆ. ಬ್ಯಾಂಕಿಗೆಕಡಿಮೆಇರಸಾಲು ಮಾಡಿರುವ ಮೊತ್ತ ರೂ.2,79,980/–ಗಳನ್ನು ಸಂಬಂಧಪಟ್ಟವರಿಂದ ವಸೂಲಿಸಿಸಂಬಂಧಪಟ್ಟ ಲೆಕ್ಕ ಶೀರ್ಷಿಕೆಗೆ ಜಮೆ ಮಾಡಲು ಸೂಚಿಸಿದೆ.<br>ಕರ್ನಾಟಕಆರ್ಥಿಕ ಸಂಹಿತೆ–1958ರ ಅನುಚ್ಛೇದ–4(ಎ) ಅನುಸಾರಕಛೇರಿಯಲ್ಲಿ ಸ್ವೀಕೃತಿವಾದ | ಪ್ರಸ್ಥಾಪಿತ ಕಂಡಿಕೆಯಲ್ಲಿನ ವಿಷಯಕ್ಕೆ ಸಂಬಂಧಿಸಿದಂತೆ ಅನುಬಂಧ ಸಂಖ್ಯೆ–29 ರಲ್ಲಿ ಸೂಚಿತವಾಗಿರುವ ವಿಭಾಗಗಳಿಂದ ಕಡಿಮೆ ಇರಸಾಲು (ರೆಮಿಟೆನ್ಸ್) ಮಾಡಿರುವ ಮೊತ್ತವನ್ನು ವಸೂಲಿಸಲು ಕ್ರಮವಹಿಸಲಾಗಿದೆ. ಮತ್ತು ಈ ವಿವರಗಳನ್ನು 2019–20ನೇ ಸಾಲಿನ ಲೆಕ್ಕತನಿಖೆಗೆ ಹಾಜರುಪಡಿಸಲು ಕ್ರಮವಹಿಸಲಾಗುವುದು ಎಂಬ ವಿಷಯವನ್ನು ಅವಗಾಹನೆಗೆ ತರಲಾಗಿದೆ. |

ಎಲ್ಲಾ ಮೊಬಲಗುಗಳನ್ನು ವಿಳಂಬ ಮಾಡದೇ 2 ದಿನಗಳೊಳಗಾಗಿ ಸಂಬಂಧಿಸಿದ ಖಾತೆಗೆಜಮೆ ಮಾಡಬೇಕಾಗಿರುತ್ತದೆ.ಆದರೆ ವಿಶ್ವವಿದ್ಯಾನಿಲಯದ ವಿವಿಧ ವಿಭಾಗಗಳಲ್ಲಿ ಸ್ವೀಕೃತಿಯಾದ ಮೊಬಲಗುಗಳನ್ನು ವಿಳಂಬವಾಗಿ ಜಮೆ ಮಾಡಲಾಗಿರುತ್ತದೆ.ಈ ಸಂಬಂಧಕಛೇರಿ ಮುಖ್ಯಸ್ಥರು ಸೂಕ್ತ ಆಡಳಿತಾತ್ಮಕ ಕ್ರಮವಹಿಸಲು ಹಾಗೂ ನ್ಯೂನತೆಯನ್ನು ಸರಿಪಡಿಸಿ ಅನುಪಾಲನಾ ವರದಿ ಸಲ್ಲಿಸುವಂತೆ ಸೂಚಿಸಿದೆ.

**8.3. ವಿಶ್ವವಿದ್ಯಾನಿಲಯದ 7 ಅಧ್ಯಯನ ವಿಭಾಗಗಳಿಗೆ ನೇಮಕ ಮಾಡಿದ 20 ಮಂದಿ ಸಹಾಯಕ ಪ್ರಾಧ್ಯಾಪಕರುಗಳ ನೇಮಕಾತಿಯ ಅವಧಿ ವಿಸ್ತರಿಸಿರುವುದು :**

ಮೈಸೂರು ವಿಶ್ವವಿದ್ಯಾನಿಲಯದ 7 ಅಧ್ಯಯನ ವಿಭಾಗಗಳಿಗೆ 2016–17ನೇ ಶೈಕ್ಷಣಿಕ ವರ್ಷದಲ್ಲಿ ವಿಭಾಗಗಳ ಹೆಚ್ಚುವರಿ ಕಾರ್ಯಭಾರಕ್ಕೆ 20 ಮಂದಿ ತಾತ್ಕಾಲಿಕ ಸಹಾಯಕ ಪ್ರಾಧ್ಯಾಪಕರುಗಳನ್ನು ಈ ಕೆಳಕಂಡಂತೆ ಎರಡು ವರ್ಷಗಳ ಅವಧಿಗೆ ಮಾಹೆಯಾನ ರೂ.50,000/–ಗಳ ಕ್ರೋಢೀಕೃತ ವೇತನದ ಮೇಲೆ ನೇಮಕ ಮಾಡಲಾಗಿತ್ತು. ಇವರ ನೇಮಕಾತಿ ಅವಧಿಯನ್ನು ದಿನಾಂಕ:21.12.2016 ರಂದು ನಡೆದ ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸಭೆಯ ತೀರ್ಮಾನದನುಸಾರ ಮತ್ತೆ 3 ವರ್ಷಗಳ ಅವಧಿಯವರೆಗೆ ವಿಸ್ತರಿಸಲಾಗಿತ್ತು. ನಂತರ ದಿನಾಂಕ:18.09.2017ರಂದು ನಡೆದ ಸಿಂಡಿಕೇಟ್ ಸಭೆಯ ತೀರ್ಮಾನದನುಸಾರ ವಿಶ್ವವಿದ್ಯಾನಿಲಯದ ಆದೇಶ ಸಂಖ್ಯೆ:ಇಡಿ11/77/2015–16, ದಿನಾಂಕ:21.11.2017ರ ಆದೇಶದಲ್ಲಿ ನೇಮಕಾತಿ ಅವಧಿ ವಿಸ್ತರಣೆಯನ್ನು ಹಿಂಪಡೆಯಲಾಗಿರುತ್ತದೆ.

11 ಮಂದಿ ತಾತ್ಕಾಲಿಕ ಸಹಾಯಕ ಪ್ರಾಧ್ಯಾಪಕರುಗಳು ವಿಶ್ವವಿದ್ಯಾನಿಲಯದ ಈ ಆದೇಶವನ್ನು ಪ್ರಶ್ನಿಸಿ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಹೂಡಿದದಾವೆಗೆ ಸಂಬಂಧಿಸಿದಂತೆ ಮಾನ್ಯ ನ್ಯಾಯಾಲಯವು ದಿನಾಂಕ:28.03.2018 ಮತ್ತು 12.04.2018ರಂದು ನೀಡಿದ ಮಧ್ಯಂತರ ಆದೇಶದನ್ವಯ ವಿಶ್ವವಿದ್ಯಾನಿಲಯದ ಆದೇಶ ಸಂಖ್ಯೆ:ಇಡಿ11/77/2015–16, ದಿನಾಂಕ:30.04.2018ರಲ್ಲಿ ಈ 11 ಮಂದಿ ತಾತ್ಕಾಲಿಕ ಸಹಾಯಕ ಅಧ್ಯಾಪಕರುಗಳನ್ನು ಮುಂದಿನ ಆದೇಶದವರೆಗೆ ಸೇವೆಯಲ್ಲಿ ಮುಂದುವರೆಸಿ ಆದೇಶಿಸಲಾಗಿರುತ್ತದೆ.

| ಕ್ರ ಸಂ | ಅಧ್ಯಯನ ವಿಭಾಗದ ಹೆಸರು ಮತ್ತು ವಿಷಯ | ತಾತ್ಕಾಲಿಕ ಸಹಾಯಕ ಪ್ರಾಧ್ಯಾಪಕರ ಸಂಖ್ಯೆ | 2018–19ನೇ ಸಾಲಿನಲ್ಲಿ ವೇತನ ಪಾವತಿಮೊತ್ತ |
|---|---|---|---|
| 1 | ಜೆನೆಟಿಕ್ಸ್&ಜೆನೋಮಿಕ್ಸ್ ವಿಭಾಗ, ಮಾನಸಗಂಗೋತ್ರಿ, ಮೈಸೂರು | 2 | 50,000x2x12= 12,00,000 |
| 2 | ಸಾರ್ವಜನಿಕ ಆಡಳಿತ ವಿಭಾಗ, ಮಾನಸಗಂಗೋತ್ರಿ, ಮೈಸೂರು | 2 | 50,000x2x12= 12,00,000 |
| 3 | ಅಣುಜೀವ ಶಾಸ್ತ್ರ ವಿಭಾಗ, ಮಾನಸಗಂಗೋತ್ರಿ, ಮೈಸೂರು | 3 | 50,000x3x12= 18,00,000 |

ಪ್ರಸ್ತಾವಿತ ಕಂಡಿಕೆಯಲ್ಲಿ 8 ಅಧ್ಯಯನ ವಿಭಾಗಗಳ ಹೆಚ್ಚುವರಿ ಕಾರ್ಯಭಾರದ ನಿರ್ವಹಣೆ ಸಲುವಾಗಿ 2016–17ನೇ ಸಾಲಿನಲ್ಲಿ ಶೈಕ್ಷಣಿಕ ವರ್ಷದಲ್ಲಿ ನೇಮಕವಾದ 20 ಮಂದಿ ತಾತ್ಕಾಲಿಕ ಸಹಾಯಕ ಪ್ರಾಧ್ಯಾಪಕರನ್ನು ಮಾಹೆಯಾನ ರೂ.50000/– ಕ್ರೋಢೀಕೃತ ವೇತನದ ಆಧಾರದಲ್ಲಿ 2 ವರ್ಷದ ಅವಧಿಗೆ ನೇಮಕ ಮಾಡಿರುವ ಪ್ರಕರಣದಲ್ಲಿ ಇವರುಗಳ ನೇಮಕಾತಿಯನ್ನು ದಿನಾಂಕ:21.02.2016 ರ ಸಿಂಡಿಕೇಟ್ ನಿರ್ಣಯದ ಅನುಸಾರ 3 ವರ್ಷಗಳ ಅವಧಿಗೆ ವಿಸ್ತರಿಸಲಾಗಿತ್ತು.

ಅಂದರೆ ದಿನಾಂಕ:18.09.2017 ರ ಸಿಂಡಿಕೇಟ್ ನಿರ್ಣಯದಲ್ಲಿ ಅದೇಶ ಸಂಖ್ಯೆ/ಇಡಿ/11/77/2015–16 ದಿನಾಂಕ:21.11.2017 ರ ಅದೇಶದಲ್ಲಿ ಈ ಹಿಂದಿನ 21.02.2016 ರ ನಿರ್ಣಯದ 03 ವರ್ಷದ ನೇಮಕಾತಿಅವಧಿಯ ವಿಸ್ತರಣೆಯನ್ನು ಹಿಂಪಡೆಯಲಾಗಿತ್ತು.

ಈ ಅದೇಶವನ್ನು ಪ್ರಶ್ನಿಸಿ ಮಾನ್ಯ ಕರ್ನಾಟಕ ಉಚ್ಚನ್ಯಾಯಾಲಯದಲ್ಲಿ 11 ಮಂದಿ ಸಹಾಯಕ ಪ್ರಾಧ್ಯಾಪಕರು ದಾವೆಯನ್ನು ಹೂಡಿರುತ್ತಾರೆ ಇವರ ಮೇಲ್ಮನವಿಗೆ ಸಂಬಂಧಿಸಿದಂತೆ ಉಚ್ಚನ್ಯಾಲಯಯವು ನೀಡಿರುವ ದಿನಾಂಕ:28.03.2018 ಮತ್ತು 12.04.2018 ರ ಮಧ್ಯಂತರ ಅದೇಶದನ್ವಯ ಅಂತಿಮ ತೀರ್ಪನ್ನು/ನಿರ್ಣಯವನ್ನು ಕಾಯ್ದಿರಿಸಿ ಮಧ್ಯಂತರ ಅದೇಶದಲ್ಲಿ ಯಥಾಸ್ಥಿತಿಯನ್ನು ಮುಂದುವರೆಸಿಕೊಂಡು ಹೋಗಲು ಸೂಚಿವಾಗಿದೆ.

ಉಳಿದ 09 ಮಂದಿ ನೌಕರರು ಮಾನ್ಯ ಉಚ್ಚನ್ಯಾಯಾಲಯಕ್ಕೆ ಸಲ್ಲಿಸಲಾಗಿರುವ ಪಟ್ಟಿಯಲ್ಲಿ ಸೇರ್ಪಡೆಯಾಗದೇ (ಇಲ್ಲದೇ) ಇರುವುದರಿಂದ ಉಳಿದ 09 ಮಂದಿಯ ಸೇವೆಯನ್ನು ವಿಶ್ವವಿದ್ಯಾಲಯದ 02 ವರ್ಷಗಳ ಸೇವೆಗಳ ಮಿತಿಯೊಳಗೆ ವರ್ಷಾಂತ್ಯದಲ್ಲಿ ಕೆಲಸದಿಂದ ಬಿಡುಗಡೆಗೊಳಿಸಲಾಗಿದೆಯೇ? ಹೊಸದಾಗಿ ಅರ್ಜಿಗಳನ್ನು ಆಹ್ವಾನಿಸಿ ಸಂದರ್ಶನದ ಮೂಲಕ ನೇಮಕಾತಿ ಮಾಡಿಕೊಳ್ಳಲಾಗಿದೆಯೇ? ಎಂಬ ಅಂಶಗಳನ್ನು/ವಿಷಯಗಳನ್ನು ಉಲ್ಲೇಖಿಸಿ ಸೂಚಿತವಾದ 09 ಮಂದಿ ಸಹಾಯಕ ಪ್ರಾಧ್ಯಾಪಕರಿಗೆ ವಿಶ್ವವಿದ್ಯಾನಿಲಯದ ಮೊದಲ ಅದೇಶದಲ್ಲಿನ 3 ವರ್ಷದ ಅವಧಿಯನ್ನು 2 ವರ್ಷಗಳಿಗೆ ಮಿತಿಗೊಳಿಸಿರುವ ಅದೇಶವನ್ನು ಪ್ರಶ್ನಿಸಿ ಮಾನ್ಯ ಕರ್ನಾಟಕ

| | | | |
|---|---|---|---|
| 4 | ಜೈವಿಕರಸಾಯನ ಶಾಸ್ತ್ರ ವಿಭಾಗ, ಮಾನಸಗಂಗೋತ್ರಿ, ಮೈಸೂರು | 5 | 50,000x5x12= 30,00,000 |
| 5 | ಸ್ಕೂಲ್‌ಆಫ್ ಲಾ ವಿಭಾಗ, ಮಾನಸಗಂಗೋತ್ರಿ, ಮೈಸೂರು | 2 | 50,000x2x12= 12,00,000 |
| 6 | ರಸಾಯನ ಶಾಸ್ತ್ರ ವಿಭಾಗ, ಮಾನಸಗಂಗೋತ್ರಿ, ಮೈಸೂರು | 3 | 50,000x3x12= 18,00,000 |
| 7 | ಸಂಖ್ಯಾಶಾಸ್ತ್ರವಿಭಾಗ, ಮಾನಸಗಂಗೋತ್ರಿ, ಮೈಸೂರು | 2 | 50,000x1x12= 6,00,000 |
| 8 | ವಿಶ್ವವಿದ್ಯಾನಿಲಯದ ಸ್ಕೂಲ್‌ಆಫ್ ಲಾ ವಿಭಾಗ,ಮಾನಸಗಂಗೋತ್ರಿ, ಮೈಸೂರು | 1 | 50,000x1x12= 6,00,000 |
| | | **20** | **1,14,00,000** |

ದಿನಾಂಕ:27.10.2017ರ ಸಿಂಡಿಕೇಟ್ ಸಭೆಯ ತೀರ್ಮಾನದಂತೆ ಉಳಿಕೆ9 ತಾತ್ಕಾಲಿಕ ಸಹಾಯಕ ಪ್ರಾಧ್ಯಾಪಕರುಗಳನ್ನು 2 ವರ್ಷಗಳ ನಂತರ ಶೈಕ್ಷಣಿಕ ವರ್ಷಾಂತ್ಯದಲ್ಲಿ ಕೆಲಸದಿಂದ ಬಿಡುಗಡೆಗೊಳಿಸಿ, ಹೊಸದಾಗಿ ಅರ್ಜಿಗಳನ್ನು ಆಹ್ವಾನಿಸಿ ಸಂದರ್ಶನದ ಮೂಲಕ ನೇಮಕಾತಿ ಮಾಡಿಕೊಳ್ಳಲಾಗಿದೆಯೇ? 11 ಮಂದಿ ತಾತ್ಕಾಲಿಕ ಸಹಾಯಕ ಪ್ರಾಧ್ಯಾಪಕರುಗಳ ಬಿಡುಗಡೆ ವಿರುದ್ಧ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯವು ನೀಡಿದ್ದ ತಡೆಯಾಜ್ಞೆಯನ್ನು ತೆರವುಗೊಳಿಸಲು ವಿಶ್ವವಿದ್ಯಾನಿಲಯದಿಂದ ಕ್ರಮ ವಹಿಸಲಾಗಿದೆಯೇ? ನ್ಯಾಯಾಲಯದಲ್ಲಿ ಸದರಿ ಪ್ರಕರಣದ ಪ್ರಸ್ತುತ ಪರಿಸ್ಥಿತಿ ಏನು? ಎಂಬ ಬಗ್ಗೆ ಯಾವುದೇ ದಾಖಲಾತಿಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲ. ಹೀಗಾಗಿ 09 ಮಂದಿ ಸಹಾಯಕ ಪ್ರಾಧ್ಯಾಪಕರುಗಳಿಗೆ 2018–19ನೇ ಸಾಲಿನಲ್ಲಿ ಪಾವತಿಸಲಾಗಿರುವ ವೇತನದ ಮೊತ್ತ ಒಟ್ಟು **ರೂ.54,00,000/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ**. ಕರ್ನಾಟಕ ವಿಶ್ವವಿದ್ಯಾನಿಲಯಗಳ ಅಧಿನಿಯಮ–2000ದ ಪ್ರಕರಣ–55(5)ರನ್ವಯ ಕುಲಪತಿಗಳಿಗೆ ತಾತ್ಕಾಲಿಕ ಸಹಾಯಕ ಪ್ರಾಧ್ಯಾಪಕರನ್ನು ಒಂದು ವರ್ಷದ ಅವಧಿಗೆ ಮಾತ್ರ ನೇಮಿಸಿಕೊಳ್ಳಲು ಅವಕಾಶವಿದ್ದು, ಒಂದು ವರ್ಷ ಮೀರಿದ ಅವಧಿಗೆ ನೇಮಕ ಮಾಡಿಕೊಂಡು ಈ ಸಮಸ್ಯೆಗೆ ಕಾರಣವಾಗಿರುವವರ ವಿರುದ್ಧ ಆಡಳಿತಾತ್ಮಕ ಕ್ರಮ ಜರುಗಿಸಲು ಸೂಚಿಸಿದೆ.

ಉಚ್ಚನ್ಯಾಯಾಲಯದಲ್ಲಿ ರಿಟ್ ಪಿಟಿಶನ್ ಸಲ್ಲಿಸಿರುತ್ತಾರೆ ಪಿಟಿಶನ್ ಸಂಖ್ಯೆ: 44616–44620 5 ಮಂದಿ (S-RES) ಸಲ್ಲಿಸಿರುತ್ತಾರೆ.

ರಿಟ್ ಪಿಟಿಶನ್ ಸಂಖ್ಯೆ:44318–44321 4 ಮಂದಿ (S-RES) ವಿತರಿಸಿರುವ ವೇತನ ಬಾಬ್ತು ಒಟ್ಟು ರೂ.54,00,000/– ಆಕ್ಷೇಪಿಸಲಾಗಿದೆ. ಆದರೆ ಸೂಚಿತವಾಗಿರುವ 9 ಮಂದಿ ಸಹಾಯಕ ಪ್ರಾಧ್ಯಾಪಕರು ಸಹ ಮೇಲಿನ 11 ಜನ ಸಹಾಯಕ ಪ್ರಾಧ್ಯಾಪಕರಂತೆ ಮಾನ್ಯ ಕರ್ನಾಟಕ ಉಚ್ಚನ್ಯಾಯಾಲವು 11 ಜನ ಸಹಾಯಕ ಪ್ರಾಧ್ಯಾಪಕರ ಪ್ರಕರಣದ ತೀರ್ಪಿನಂತಯೇ (ಅಂದರೆ ಯಥಾಸ್ಥಿತಿಯನ್ನು ಮುಂದುವರೆಸ ಆದೇಶ ದೇಶ) 09 ಜನ ಸಹಾಯಕ ಪ್ರಾಧ್ಯಪಕರ ಪ್ರಕರಣದಲ್ಲಿಯೂ ಅಂತಿಮ ತೀರ್ಪಿನ ನಿರ್ಣಯವನ್ನು ಕಾಯ್ದಿರಿಸಿ ಯಥಾಸ್ಥಿಯನ್ನು ಮುಂದುವರೆಸಲು ಮಧ್ಯಂತರ ಅದೇಶ ನೀಡಿರುತ್ತದೆ (ರಿಟ್ ಪಿಟಿಶನ್ ಮತ್ತು ಮದ್ಯಂತರ ಅದೇಶದ ಪ್ರತಿ ಅಡಕಗೊಳಿಸಿದೆ. ಮೇಲಿನ ಎರಡೂ ಪ್ರಕರಣಗಳಲ್ಲಿ ತೆರವಿಗೆ/ಇತ್ಯರ್ಥಕ್ಕೆ ವಿಶ್ವವಿದ್ಯಾನಿಲಯದಿಂದ ಸಲ್ಲಿಸಬೇಕಾದ ಅಗತ್ಯ ದಾಖಲೆಗಳನ್ನು ನಿಗಧಿತವಾಗಿ ಸಲ್ಲಿಸಲು ಕ್ರಮವಹಿಸಲಾಗಿದೆ. ಎಂಬ ಅಂಶವನ್ನು ಲೆಕ್ಕಪರಿಶೋಧನೆ ಅವಗಾಹನೆ ತರಲಾಗಿದೆ.

ಆದ ಕಾರಣ 09 ಮಂದಿ ಸಹ ಪ್ರಾಧ್ಯಾಪಕರಿಗೆ 2018–19ನೇ ಸಾಲಿನಲ್ಲಿ ಪಾವತಿಸಲಾಗಿರುವ ವೇತನದ ಬಾಬ್ತು ರೂ.54,00,000/– ಆಕ್ಷೇಪಿತ ಕಂಡಿಕೆ ಕೈ ಬಿಡಲು ಕೋರಿದೆ

| | |
|---|---|
| **8.4. ಶ್ರೀಮತಿ ನಿರ್ಮಲ.ಎನ್, ಶೀಘ್ರ ಲಿಪಿಗಾರರು, ಆಡಳಿತ ವಿಭಾಗ ಇವರಿಗೆ ಹೆಚ್ಚುವರಿಯಾಗಿ ವೇತನ ಮತ್ತು ಭತ್ಯೆಗಳನ್ನು ಪಾವತಿಸಿರುವುದು :**<br>ಶ್ರೀಮತಿ ನಿರ್ಮಲ ಎನ್, ಶೀಘ್ರ ಲಿಪಿಗಾರರು, ಪ.ಜಾತಿ/ಪ.ಪಂಗಡ ವಿಶೇಷ ಘಟಕ, ಮಹಾರಾಜ ಕಾಲೇಜು ಇವರಿಗೆ ವಿಶ್ವವಿದ್ಯಾನಿಲಯದ ಆದೇಶ ಸಂಖ್ಯೆ:ಇಟಿ6/301/2016-17 ದಿನಾಂಕ:24.04.2018ದಲ್ಲಿ ಬೆರಳಚ್ಚುಗಾರರ ಹುದ್ದೆಯಿಂದ ಶೀಘ್ರ ಲಿಪಿಗಾರರ ಹುದ್ದೆಗೆ ಪದೋನ್ನತಿ ನೀಡಿ ದಿನಾಂಕ:15.10.2014 ರಿಂದ ಕಾಲ್ಪನಿಕವಾಗಿ ವೇತನವನ್ನು ನಿಗದಿಪಡಿಸಿ, ದಿನಾಂಕ:27.01.2017ರಿಂದ ಆರ್ಥಿಕ ಸೌಲಭ್ಯವನ್ನು ನೀಡಲಾಗಿದೆ. ಶ್ರೀಮತಿ ನಿರ್ಮಲ.ಎನ್ ರವರಿಗೆ ದಿನಾಂಕ:27.01.2017 ರಿಂದ ದಿನಾಂಕ:30.04.2018ರವರೆಗೆ **ಅನುಬಂಧ-30**ರಲ್ಲಿನ ವಿವರಗಳಂತೆ ವೇತನ ಮತ್ತು ಭತ್ಯೆಗಳನ್ನು ಹೆಚ್ಚುವರಿಯಾಗಿ ಪಾವತಿಸಿದ್ದು, ಮೇಲಿನ ಆದೇಶದ ಸೂಚನೆಯಂತೆ ಸದರಿ ಮೊತ್ತವನ್ನು ವಸೂಲಿಸಿರುವ ಬಗ್ಗೆ ವಿವರ ಹಾಗೂ ದಾಖಲೆಗಳನ್ನು ಲೆಕ್ಕತನಿಖೆಗೆ ಹಾಜರುಪಡಿಸುವಂತೆ ವಿಚಾರಣೆ ಸಂಖ್ಯೆ:28/ ದಿನಾಂಕ:11.06.2020 ರಲ್ಲಿ ಕೋರಲಾಗಿತ್ತು. ಈ ಬಗ್ಗೆ ವಿವರ/ದಾಖಲೆಗಳನ್ನು ಹಾಜರು ಪಡಿಸದಿರುವುದರಿಂದ, ವೇತನ ವ್ಯತ್ಯಾಸದ ಮೊತ್ತ ಒಟ್ಟು **ರೂ.95,292/-ಗಳನ್ನು ವಸೂಲಾತಿಗೆ** ಸೂಚಿಸಿದೆ. | ಪ್ರಸ್ಥಾವಿತ ಕಂಡಿಕೆಯಲ್ಲಿನ ವಿಷಯಕ್ಕೆ ಸಂಬಂಧಿಸಿದಂತೆ ಸದರಿ ಕಂಡಕೆಯಲ್ಲಿ ಶ್ರೀಮತಿ ನಿರ್ಮಲ ಎನ್, ಶೀಘ್ರ ಲಿಪಿಗಾರರು, ಇವರಿಗೆ ಟೈಪಿಸ್ಟ್ ಹುದ್ದೆಯಿಂದ ಪದೋನ್ನತಿಯನ್ನು ನೀಡಿರುವ ಕಾರಣ ವೇತನದ ಹೆಚ್ಚಳದ ಮೊತ್ತ ಪಾವತಿ ಸಂದರ್ಭದಲ್ಲಿ ವೇತನ ನಿಗಧಿಕರಣದಲ್ಲಿ ಅಗಿರುವ ಲೋಪದಿಂದಾಗಿ ದಿನಾಂಕ:27.01.2017 ಯಿಂದ 04/2018 ರವರೆಗೆ ಹೆಚ್ಚು ವರಿಯಾಗಿ ಪಾವತಿಸಿರುವ ಮೊತ್ತ ರೂ.95292/- ಲೆಕ್ಕಪರಿಶೋಧನಾವರದಿಯಲ್ಲಿ ವಸೂಲಾತಿಗೆ ಸೂಚಿತವಾಗಿದೆ.<br><br>ಅದರೆ ಸದರಿಯವರ ಪ್ರಕರಣದಲ್ಲಿ ಇವರಿಗೆ ಟೈಪಿಸ್ಟ್ ಹುದ್ದೆಯಿಂದ ಶೀಘ್ರಲಿಪಿಗಾರರಾಗಿ ನೀಡಿರುವ ಪದೋನ್ನತಿಯನ್ನೇ, ವಿಶ್ವವಿದ್ಯಾನಿಲಯವು ಅದೇಶ ಸಂಖ್ಯೆ:ಇಟಿ/364/2002-03 ದಿನಾಂಕ:15.10.2014ರಲ್ಲಿ ಹಿಂಪಡೆದಿರುತ್ತದೆ.<br><br>ವಿಶ್ವವಿದ್ಯಾನಿಲಯದ ಈ ಕ್ರಮವನ್ನು ಪ್ರಶ್ನಿಸಿ ಸಂಬಂಧಿಸಿದ ನೌಕರರು ಕರ್ನಾಟಕ ಉಚ್ಚನ್ಯಾಯಾಲಯದಲ್ಲಿ ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ ರೀಟ್ ಪೀಟಿಶನ್ ಸಂಖ್ಯೆ:149541/2018 ಆಗಿರುತ್ತದೆ ಸದರಿಯವರ ರಿಟ್ ಅರ್ಜಿಯನ್ನು ಪರಿಗಣಿಸಿ ಉಚ್ಚನ್ಯಾಯಾಲಯವು ಸಂಬಂಧಿಸಿದ ನೌಕರಿಗೆ ನೀಡಲಾಗಿರುವ ಮೊತ್ತವನ್ನು ಕಡಿತಗೊಳಿಸದೇ ಇರಲು ತನ್ನ ಮಧ್ಯಂತರ ಅದೇಶದಲ್ಲಿ ಸೂಚಿಸಿದೆ. ಮಧ್ಯಂತರ ಅದೇಶವು ನ್ಯಾಯಾಲಯದಲ್ಲಿ ಸದರಿ ಪ್ರಕರಣವು ಮುಂದುವರೆದದಿರುವರಿಂದ ಚಾಲ್ತಿಯಲ್ಲಿದೆ<br><br>ಈ ಸಂಬಂಧ ನ್ಯಾಯಾಲಯದಿಂದ ಅಂತಿಮ ಅದೇಶ ಬಂದ ನಂತರ ಅದರ ಅನ್ವಯ ವಿಶ್ವವಿದ್ಯಾನಿಲಯದಿಂದ ವಹಿಸಲಾದ ಕ್ರಮದ ವಿವರವನ್ನು ಮುಂದಿನ ಲೆಕ್ಕಪರಿಶೋಧನೆಗೆ ಸಲ್ಲಿಸಲಾಗುವುದು ಎಂಬ ವಿಷಯವನ್ನು ಅವಗಾಹನೆಗೆ ತರಲಾಗಿದೆ.<br><br>**ಅಡಕಗಳು:**<br>1. ಅದೇಶ ಸಂಖ್ಯೆ:ಇಟಿ5/364/2002-03 ದಿನಾಂಕ:15.10.2014 ಪ್ರತಿ<br>2. ಅದೇಶ ಸಂಖ್ಯೆ:ಇಟಿ5/91/2001-02 ದಿನಾಂಕ:17.01.2017 ಪ್ರತಿ<br>3. ರಾಜ್ಯ ಉಚ್ಚನ್ಯಾಯಾಲಯದ ಮಧ್ಯಂತರ ಅದೇಶದ ಪ್ರತಿ |

**8.5. ಸರ್ಕಾರದ ಮಾರ್ಗಸೂಚಿಗಳನ್ನು ಉಲ್ಲಂಘಿಸಿ ತಾತ್ಕಾಲಿಕ ಹಾಗೂ ಸಂಚಿತ ವೇತನದ ಬೋಧಕೇತರ ನೌಕರರನ್ನು ನೇಮಕಮಾಡಿಕೊಂಡು ವೇತನ ಪಾವತಿಸಿರುವುದು :**

2018–19ನೇ ಸಾಲಿನ ಲೆಕ್ಕಪರಿಶೋಧನೆಯಲ್ಲಿ ವಿಶ್ವವಿದ್ಯಾನಿಲಯದಲ್ಲಿತಾತ್ಕಾಲಿಕ ಹಾಗೂ ಸಂಚಿತ ವೇತನಆಧಾರದಲ್ಲಿ ನೌಕರರನ್ನು ನೇಮಕ ಮಾಡಿಕೊಂಡುರೂ.14,93,11,778/–ಗಳಷ್ಟು ಮೊತ್ತದ ವೇತನವನ್ನುಪಾವತಿಸಲಾಗಿರುತ್ತದೆ.ವಿವರಗಳನ್ನು **ಅನುಬಂಧ–31ರಲ್ಲಿ** ನೀಡಲಾಗಿದೆ.

ಮೈಸೂರು ವಿಶ್ವವಿದ್ಯಾನಿಲಯದಎಲ್ಲಾ ಅಂಗ ಸಂಸ್ಥೆಗಳು, ಅಧ್ಯಯನ ಕೇಂದ್ರಗಳಿಗೆ ಸರ್ಕಾರದಿಂದ ಮಂಜೂರಾಗಿರುವ ವಿವಿಧ ವೇತನ ಶ್ರೇಣಿಯ ಹುದ್ದೆಗಳು, ಮಂಜೂರಾಗಿರುವ ಹುದ್ದೆಗಳಿಗೆ ಎದುರಾಗಿ ಕೆಲಸ ನಿರ್ವಹಿಸುತ್ತಿರುವಖಾಯಂ ನೌಕರರ ವಿವರಗಳು, ಖಾಲಿ ಇರುವ ಹುದ್ದೆಗಳು ಹಾಗೂ ಖಾಲಿ ಇರುವ ಹುದ್ದೆಗಳಿಗೆ ಎದುರಾಗಿ ನೇಮಕಾತಿ ಮಾಡಿಕೊಂಡಿರುವ ಕಡತಗಳನ್ನು ಹಾಜರುಪಡಿಸುವಂತೆಕೋರಿಲೆಕ್ಕಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ:01/ದಿನಾಂಕ:01.02.2020, ಸಂಖ್ಯೆ:13/ದಿನಾಂಕ:11.02.2020 ಹಾಗೂಸಂಖ್ಯೆ:30/ದಿನಾಂಕ:11.03.2020ಗಳನ್ನು ನೀಡಿದ್ದರೂಯಾವುದೇ ಮಾಹಿತಿಗಳನ್ನಾಗಲೀ ಅಥವಾ ಕಡತಗಳನ್ನಾಗಲೀ ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲ. ಸರ್ಕಾರದಆದೇಶ ಸಂಖ್ಯೆ:ಆಇ3/ಟಿಎಫ್‌ಸಿ/2018/ದಿನಾಂಕ:14.05.2018ರ ಪ್ರಕಾರ ಖಾಲಿ ಇರುವ ಹುದ್ದೆಗಳಿಗೆ ನಿಯಮಾನುಸಾರ ಹೊರಗುತ್ತಿಗೆಆಧಾರದ ಮೇಲೆ ನೇಮಿಸಿಕೊಳ್ಳಲು ಅವಕಾಶವಿದ್ದು,ಸರ್ಕಾರದಆದೇಶ ಸಂಖ್ಯೆ:ಆಇ3/6/ಟಿಎಫ್‌ಸಿ/2018,ದಿ:29.12.2018ರನ್ವಯ ಇದಕ್ಕೆಆರ್ಥಿಕಇಲಾಖೆಯಅನುಮತಿಪಡೆಯಬೇಕಾಗಿರುತ್ತದೆ ಹಾಗೂ ಸದರಿಆದೇಶವು ನಿಗಮ, ಮಂಡಳಿ, ಪ್ರಾಧಿಕಾರ ಹಾಗೂ ವಿಶ್ವವಿದ್ಯಾನಿಲಯಗಳು ಹಾಗೂ ಇನ್ನಿತರೆಅನುದಾನಿತ ಸಂಸ್ಥೆಗಳಿಗೂ ಸಹ ಅನ್ವಯವಾಗುತ್ತದೆ. ಈ ಕ್ರಮಅನುಸರಿಸದೆಯೇತಾತ್ಕಾಲಿಕ/ಸಂಚಿತ ವೇತನಆಧಾರದ ಮೇಲೆ ನೇರವಾಗಿವಿಶ್ವವಿದ್ಯಾನಿಲಯವುನೇಮಕ ಮಾಡಿಕೊಂಡು ಪಾವತಿಸಿರುವ ವೇತನದಮೊತ್ತ**ರೂ.14,93,11,778/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.**

ಪ್ರಸ್ಥಾವಿತ ಕಂಡಿಕೆಯಲ್ಲಿನ ವಿಷಯಕ್ಕೆ ಸಂಬಂಧಿಸಿದಂತೆ ಮೈಸೂರು ವಿಶ್ವವಿದ್ಯಾನಿಲಯದಲ್ಲಿ 2018–19ನೇ ಸಾಲಿನಲ್ಲಿ ಅನುಬಂಧ–31 ರಲ್ಲಿ ಸೂಚಿಸಿರುವಂತೆ ಸಾಮಾನ್ಯ ರೆವಿನ್ಯೂ ಖಾತೆ ಪ್ರಾಯೋಜಿತ ಕಾರ್ಯಕ್ರಮಗಳು/ಯೋಜನೆಗಳು ಐ.ಒ.ಇ ಯು.ಪಿ.ಇ, ಸ್ಕೂಲ್ ಆಫ್ ಪ್ಲಾನಿಂಗ್ ದತ್ತಿ ನಿಧಿ, ಕನ್ನಡ ಪುಸ್ತಕ ಮುದ್ರಣ ಮತ್ತು ಪ್ರಕಟಣೆಗಳು, ಕನ್ನಡ ವಿಶ್ವಕೋಶ, ಯೂರೋಪಿಯನ್ ಯೂನಿಯನ್, ಚೈನೀಸ್ ಪ್ರೊಗ್ರಾಮ್, ಯುವರಾಜ ಕಾಲೇಜು, ಲೆಕ್ಕಶೀರ್ಷಿಕೆಗಳಲ್ಲಿ ತಾತ್ಕಾಲಿಕ ಸಂಚಿತ ಯೋಜನೆಯಡಿಯಲ್ಲಿ ಬೋಧಕೇತರ ನೌಕರರನ್ನು ನೇಮಕ ಮಾಡಿಕೊಂಡು ಪಾವತಿಸಿರುವ ಒಟ್ಟು ವೇತನ ಮೊತ್ತವನ್ನು ರೂ.1,493–11,778/– ಈ ರೀತಿಯ ನೇಮಕಾತಿಯ ಸಂದರ್ಭದಲ್ಲಿ ಅನುಸರಿಸಬೇಕಾದ ಸರ್ಕಾರಿ ಅದೇಶ ಸಂಖ್ಯೆ/ಆಇ3/ಟಿಎಫ್‌ಸಿ/2018 ದಿನಾಂಕ:14.05.2018 ರ ನಿಯಮಾವಳಿಗಳನ್ನು ಪಾಲನೆ ಮಾಡಿರುವುದಿಲ್ಲ ಎಂಬುದಾಗಿಯೂ ಮತ್ತು ಈ ರೀತಿ ನೇಮಕಗೊಂಡ ಸಿಬ್ಬಂದಿಗೆ ವೇತನ ಪಾವತಿ ಸರ್ಕಾರಿ ಆದೇಶ ಸಂಖ್ಯೆ/ಆಇ3/6/ಟಿಎಫ್‌ಸಿ/2018 ದಿನಾಂಕ:29.12.2018ರ ಅನ್ವಯ ಆರ್ಥಿಕ ಇಲಾಖೆಯ ಅನುಮೋದನೆ ಪಡೆದಿರುವ ವಿವರ ಹಾಜರುಪಡಿಸಿಲ್ಲವೆಂಬ ಅಂಶ ಉಲ್ಲೇಖಿಸಿ ಒಟ್ಟು ಪಾವತಿ ರೂ.14,93,11,770/–ಆಕ್ಷೇಪಿಸಲಾಗಿದೆ.

ಈ ಸಂಬಂಧದ ವಿವರಣೆ ಈ ರೀತಿಯಿದೆ ವಿಶ್ವವಿದ್ಯಾನಿಲಯದಲ್ಲಿ ಕಳೆದ 40 ವರ್ಷಗಳಿಂದಲೂ ಯಾವುದೇ ಹುದ್ದೆಗಳು ನೇರ ನೇಮಕಾತಿಯಿಂದ ಭರ್ತಿಯಾಗಿರುವುದಿಲ್ಲ, ಇದರಿಂದಾಗಿ ಈ ವಿಭಾಗಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದ ಸಿಬ್ಬಂದಿಯ ವಯೋನಿವೃತ್ತಿ/ಮರಣದಿಂದ ಖಾಲಿಯಾಗಿರುವ ಹುದ್ದೆಗಳು ಖಾಲಿ ಉಳಿದಿರುತ್ತದೆ.

ಖಾಲಿ ಹುದ್ದೆಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಸಿಬ್ಬಂದಿಗಳ ಸೇವೆಯನ್ನು ಸರಿದೂಗಿಸಿಕೊಳ್ಳುವ ಸಲುವಾಗಿಯೇ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000 ದ ಪ್ರಕರಣ ಸಂಖ್ಯೆ:56 ರಲ್ಲಿ ಮಾನ್ಯ ಕುಲಪತಿಗಳಿಗೆ ಪ್ರದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ ತಾತ್ಕಾಲಿಕ ನೇಮಕಾತಿಗಳಿಗೆ ಒಂದು ವರ್ಷದ ಅವಧಿಗೆ ನೇಮಕಾತಿ ಮಾಡಲಾಗಿದೆ.

ಮುಂದುವರೆದು ವಿಶ್ವವಿದ್ಯಾನಿಲಯವು ವಿವಿಧ ನಿಕಾಯಗಳಲ್ಲಿ ಹಲವಾರು ಹೊಸ ಹೊಸ ಕೋರ್ಸ್‌ಗಳನ್ನು ಪ್ರಾರಂಭಿಸಿ ಈ ರೀತಿಯ ವಿವಿಧ ನಿಕಾಯಗಳಲ್ಲಿನ ಹೊಸ ಹೊಸ ಕೋರ್ಸ್‌ಗಳ ಚಾಲನೆ ಮಾನಸಗಂಗೋತ್ರಿಯೂ ಸೇರಿದಂತೆ ಉಳಿದ ಮೂರು ಸ್ನಾತಕೋತ್ತರ ಕೇಂದ್ರಗಳಾದ ಮಂಡ್ಯ,

| | |
|---|---|
| | ಹಾಸನ, ಚಾಮರಾಜನಗರದಲ್ಲಿ ಮತ್ತು ಅವುಗಳ ಘಟಕ ಕಾಲೇಜುಗಳಲ್ಲಿರುವ ಸಹ ಅನುಷ್ಠಗೊಳಿಸಲಾಗಿದೆ ಎಂಬ ಅಂಶವನ್ನು ಲೆಕ್ಕಪರಿಶೋಧನೆ ಅವಗಾಃನೆಗೆ ತರಲಾಗಿದೆ.<br><br>ಮೇಲಿನ ಅಂಶಗಳೇ ಅಲ್ಲದೆ ಯುಜಿಸಿಯ ವಿವಿಧ ಯೋಜನೆಗಳಡಿಯಲ್ಲಿ ಅನುದಾನ ಪಡೆಯುತ್ತಿರುವ ಕಾಲೇಜುಗಳು ಅನುದಾನದ ಮಾರ್ಗದರ್ಶಿ ಸೂತ್ರಗಳನ್ನು ಅವುಗಳಲ್ಲಿ ಸೂಚಿತವಾಗಿರುವ ಶೈಕ್ಷಣಿಕ ಗುಣಮಟ್ಟವನ್ನು ಕಾಯ್ದುಕೊಂಡಿದೆಯೇ ಎಂಬ ವಿಷಯದ ಪರಿಶೀಲನೆಗೆ ಬರುವ ನ್ಯಾಕ್ ನ ನೀರಿಕ್ಷಿತ ಮಟ್ಟವನ್ನು ಕಾಯ್ದುಕೊಳ್ಳಲು/ತಲುಪಲು ವಿಶ್ವವಿದ್ಯಾನಿಲಯದ ಹಂತದಲ್ಲಿ ಕೇಂದ್ರ ವಿವರವನ್ನು ಸ್ಥಾಪಿಸಲಾಗಿದೆ. (NAAK) ಮತ್ತು ವಿಶ್ವವಿದ್ಯಾನಿಲಯವು ತನ್ನ ಸಮಗ್ರ ಶ್ರೇಣಿಕ ಚಟುವಟಿಕೆಯನ್ನು ಉತ್ತಮ ಮತ್ತು ಉನ್ನತ ಗುಣಮಟ್ಟದೊಂದಿಗೆ ಕಾಯ್ದುಕೊಂಡು ಹೋಗಲು, ತಾತ್ಕಾಲಿಕ ಭೋದಕೇತರ ನೌಕರರನ್ನು ಸಂಚಿತ ವೇತನದಲ್ಲಿ ನೇಮಕ ಮಾಡಿಕೊಳ್ಳಲಾಗಿದೆ. ಎಂಬ ವಿಷಯವನ್ನು ಲೆಕ್ಕಪರಿಶೋಧನೆ ಅವಗಾಹನೆ ತರಲಾಗಿದೆ ಆದ ಕಾರಣ ಪ್ರಸ್ಥಾಪಿತ ಆಕ್ಷೇಪಣೆ ಕಂಡಿಕೆ ಮೊತ್ತ ರೂ.14,93,11,778/- ಕೈ ಬಿಡಲು ಕೋರಿದೆ. |
| **8.6. ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಸ್ನಾತಕೋತ್ತರ ಅಧ್ಯಯನ ಮತ್ತು ಸಂಶೋಧನಾ ವಿಭಾಗದ ಶ್ರೀ ಪ್ರದೀಪ್‌ಕುಮಾರ್.ಬಿ. ತಾಂತ್ರಿಕ ಸಹಾಯಕ ರವರಿಗೆ ಹೆಚ್ಚುವರಿ ವೇತನ ಪಾವತಿಸಿರುವುದು :**<br><br>ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಅಧ್ಯಯನ ವಿಭಾಗದಲ್ಲಿ ಯುಜಿಸಿ SAP DRS II ಕಾರ್ಯಕ್ರಮಕ್ಕೆ ಶ್ರೀ ಪ್ರದೀಪ್‌ಕುಮಾರ್.ಬಿ ರವರನ್ನು ತಾಂತ್ರಿಕ ಸಹಾಯಕರಾಗಿ ಯೋಜನೆಯ ಸಂಯೋಜಕರ ಪತ್ರ ಸಂಖ್ಯೆ:ಯುಜಿಸಿ/SAP/DRS/II, ದಿನಾಂಕ:16.08.2017ರಲ್ಲಿ ಮಾರ್ಚ್–2018 ಮಾಹೆಯವರೆಗೆ ನೇಮಕ ಮಾಡಿಕೊಳ್ಳಲಾಗಿರುತ್ತದೆ. ಆದರೆ ಸದರಿಯವರನ್ನು ಮುಂದಿನ ಮೂರು ತಿಂಗಳ (ಜೂನ್ 2018)ರವರೆಗೆ ಮುಂದುವರೆಸಿ ಮಾಹೆಯಾನ ರೂ.8,000/–ದಂತೆ, ಒಟ್ಟು ರೂ.24,000/– ಗಳನ್ನು ಪಾವತಿಸಲಾಗಿರುತ್ತದೆ. ಯುಜಿಸಿ ನಿರ್ದೇಶನದಂತೆ ಸದರಿ ಯೋಜನೆಯು ದಿನಾಂಕ:31.03.2018 ರವರೆಗೆ ಮಾತ್ರ ಚಾಲ್ತಿಯಲ್ಲಿದ್ದು, ಸದರಿಯವರನ್ನು ಮುಂದುವರೆಸಿರುವ ಬಗ್ಗೆ ಆದೇಶಗಳನ್ನು ಒದಗಿಸುವಂತೆ ವಿಚಾರಣಾ ಪತ್ರ ಸಂಖ್ಯೆ:03/2020–21 ದಿನಾಂಕ:25.08.2020 ರಂದು ಕೋರಲಾಗಿ ಯಾವುದೇ ವಿವರಣೆ ನೀಡಿರುವುದಿಲ್ಲ. ಆದ್ದರಿಂದ ನೇಮಕಾತಿ ಅವಧಿ ಮೀರಿಯೂ ಪಾವತಿಸಿರುವ ಮೊಬಲಗು **ರೂ.24,000/– ಗಳನ್ನು** ಸಂಬಂಧಿಸಿದವರಿಂದ ವಸೂಲಿಸಿ ಯು.ಜಿ.ಸಿ ಖಾತೆಗೆ ಜಮೆ ಮಾಡಲು ಸೂಚಿಸಿದೆ. | ಪ್ರಸ್ಥಾಪಿತ ಕಂಡಿಕೆಯಲ್ಲಿ ವಿಷಯಕ್ಕೆ ಸಂಬಂಧಿಸಿದಂತೆ ಲೆಕ್ಕಪರಿಶೋಧನೆ ವರದಿಯಲ್ಲಿ ಸೂಚಿತವಾಗಿರುವಂತೆ ಸದರಿ ಯೋಜನೆಯು ಯುಜಿಸಿ ನವದೆಹಲಿ ಪತ್ರ ಸಂಖ್ಯೆ/ಎಫ್5/38/2013 ದಿನಾಂಕ:17.12.2013ರ ಪತ್ರದ ಪ್ರಕಾರ (ಎಸ್‌ಎಪಿ–III) ವಿಶೇಷ ಅನುದಾನ ಯೋಜನೆ ಅಡಿಯಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಗ್ರಂಥಾಲಯದ ವ್ಯವಸ್ಥೆಯನ್ನು ಉನ್ನತಿಕರಿಸುವ ಸಲುವಾಗಿ (01.04.2013 ರಿಂದ 31.03.2018) 5 ವರ್ಷದ ಅವಧಿಗೆ ಎಂದು ಉಲ್ಲೇಖಿತ ಪತ್ರದಲ್ಲಿ ಸೂಚಿತವಾಗಿದೆಯಾದರೂ ಈ ಯೋಜನೆಯ ಭೌತಿಕ ಕಾರ್ಯಗಳ ಅನುಷ್ಠಾನಕ್ಕೆ ಅವಶ್ಯಕವಾದ (ಪತ್ರದ ಪ್ರತಿ ಅಡಕಗೊಳಿಸಿದೆ)<br>1. ಅನುದಾನವು ಬಿಡುಗಡೆಯಾಗಿರುವುದು ಪ್ರಥಮ ಕಂತಾಗಿ ರೂ.13,00,000/– ಮತ್ತು ದಿನಾಂಕ:25.06.2015 ರೂ.4,50,000/– ಒಟ್ಟು ಮೊತ್ತ ರೂ.17,50,000/–<br>2. 2ನೇ ಕಂತಿನ ಎಫ್5–38/2013ಎಸ್‌ಎಪಿ ದಿನಾಂಕ:11.11.2016 ರೂ.3,65,540/– ಒಟ್ಟು ಬಿಡುಗಡೆಯಾದ ಅನುದಾ ರೂ.2151540/–<br>3. ಒಟ್ಟು (1+2=21,51,540) |

ಅನುದಾನ ಬಿಡುಗಡೆ ನಂತರವೇ ಯೋಜನೆಯ ಕಾರ್ಯನುಷ್ಠಾನ ಪ್ರಾರಂಭವಾಗಿದೆ. ಎಂದು ಪರಿಗಣಿಸಲು ಕೋರಿ, ಯೋಜನಾ ಸಂಯೋಜಕರು ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಸ್ನಾತಕೋತ್ತರ ಅಧ್ಯಯನ ಮೈಸೂರು ರವರು ಜಂಟಿ ಕಾರ್ಯದರ್ಶಿಗಳು ವಿಶ್ವವಿದ್ಯಾನಿಲಯದ ಧನಸಹಾಯ ಅಯೋಗ ನವದೆಹಲಿ ಇವರಿಗೆ ಪತ್ರ ಸಂಖ್ಯೆ ಎಲ್ಐಎಸ್/354/2018–19 ದಿನಾಂಕ:22.09.2018 ಪತ್ರ ಬರೆದಿರುತ್ತಾರೆ (ಪತ್ರ ಪ್ರತಿ ಅಡಕಗೊಳಿಸಿದೆ)

ಯೋಜನಾ ಸಂಯೋಜಕರ ದಿನಾಂಕ:22.09.2018 ರ ಪತ್ರಕ್ಕೆ ಯುಜಿಸಿ ಯವರಿಂದ ದಿನಾಂಕ:18.03.2019ರಲ್ಲಿ ರಿಜಿಸ್ಟಾರ್ ಮೈಸೂರು ವಿಶ್ವವಿದ್ಯಾನಿಲಯದ ಮೈಸೂರು ರವರಿಗೆ ಬರೆದಿರುವ ಪತ್ರದಲ್ಲಿ ಯೋಜನಾ ಅವಧಿಯನ್ನು ವಿಸ್ತರಣೆ ಸಾಧ್ಯವಿಲ್ಲ ಎಂಬ ಬಗ್ಗೆ ತನ್ನ ಪರಿಮಿತಿಯನ್ನು ಸೂಚಿಸಿ ಯೋಜನೆಗಳನ್ನು ಸಂಬಂಧಿಸಿದ ಎಲ್ಲಾ ದಾಖಲೆ/ಲೆಕ್ಕಪತ್ರಗಳನ್ನು ಸಲ್ಲಿಸಲು ಸೂಚಿಸಿರುತ್ತಾರೆ (ಯುಜಿಸಿ ಪತ್ರದ ಪ್ರತಿ ಅಡಕಗೊಳಿಸಿದೆ)

ಪ್ರಸ್ತುತ ಲೆಕ್ಕಪರಿಶೋಧನೆಯಲ್ಲಿ ಆಕ್ಷೇಪಿತವಾದ ಮೊತ್ತವು ರೂ.24000/–ಪಾವತಿಯ ಯೋಜನೆಯ ತಾಂತ್ರಿಕ ಸಹಾಯಕರಾಗಿ ಕಾರ್ಯನಿರ್ವಹಿಸಿದ ಶ್ರೀ ಪ್ರದೀಪ್ಕುಮಾರ್.ಬಿ ರವರಿಗೆ ಯೋಜನೆಗೆ ಸಂಬಂಧಿಸಿದ ಎಲ್ಲಾ ತಾಂತ್ರಿಕ ಸೇವೆಗಳನ್ನು ಪೂರ್ಣಗೊಳಿಸಿದ ಸೇವೆಗೆ ಸಂಬಂಧಸಿದ್ದಾಗಿರುತ್ತದೆ.

ಅಲ್ಲದೇ ಈ ಮೊತ್ತವು ಯೋಜನೆಯ ಬಾಬ್ತಿನಲ್ಲಿ ಯುಜಿಸಿ ಯಿಂದ ಬಿಡುಗಡೆಯಾಗಿರುವ ಮಾರ್ಗದರ್ಶಿ ಸೂತ್ರದಲ್ಲಿ ನಿಗದಿಯಾಗಿರುವ (Hiring The Services Of Techenical Or Secreatarial Assistance) ರೂ.4 ಲಕ್ಷ ಬಾಬ್ತಿನಲ್ಲಿ ಉಳಿಕೆಯಿದ್ದ ಮೊತ್ತದಲ್ಲಿಯೇ ಪಾವತಿಯಾಗಿರುವ ಮೊತ್ತ ಇದಾಗಿದೆ ಎಂಬ ಅಂಶವನ್ನು ಲೆಕ್ಕಪರಿಶೋಧನೆ ಅವಗಾಹನೆಗೆ ತರಲಾಗಿದೆ

ಅಲ್ಲದೇ ಈ ಮೊತ್ತದ ಪಾವತಿಗೆ ವಿಶ್ವವಿದ್ಯಾನಿಲಯದ ನಿಧಿಯಿಂದ ಯಾವುದೇ ವೆಚ್ಚ ಭರಿಸಿರುವುದಿಲ್ಲ ಬಾಬ್ತಿನ ಮತ್ತು ಸದರಿ ಮೊತ್ತವು ಅನಿವಾರ್ಯ ಪಾವತಿ ಆಗಿರುತ್ತದೆ. ಆದ ಕಾರಣ ಪ್ರಸ್ಥಾವಿತ ಕಂಡಿಕೆ ಕೈ ಬಿಡಲು ಕೋರಿದೆ.

| | |
|---|---|
| **8.7. ಶ್ರೀ ಎಸ್.ಜಗನ್ನಾಥ್, ಸಂಶೋಧನಾ ಸಹಾಯಕರು, ಗ್ರೇಡ್–1, ಪ್ರಾಚ್ಯ ವಿದ್ಯಾ ಸಂಶೋಧನಾಲಯ ವಿಭಾಗರವರಿಗೆ ವಯೋನಿವೃತ್ತಿ ದಿನಾಂಕವನ್ನು ವಿಸ್ತರಿಸಿ ವೇತನಪಾವತಿಸಿರುವುದು :**<br><br>ಪ್ರಾಚ್ಯ ವಿದ್ಯಾ ಸಂಶೋಧನಾಲಯದ 2018–19ನೇ ಸಾಲಿನ ಲೆಕ್ಕಪರಿಶೋಧನೆಯಲ್ಲಿ ವೇತನ ಬಟವಾಡೆ ವಹಿಯನ್ನು ಪರಿಶೀಲಿಸಲಾಗಿ, ಶ್ರೀ ಎಸ್.ಜಗನ್ನಾಥ್, ಸಂಶೋಧನಾ ಸಹಾಯಕರು, ಗ್ರೇಡ್–1 ಇವರಿಗೆ ಪೂರಕ ವೇತನ ಬಿಲ್ಲು ತಯಾರಿಸಿ ಚೆಕ್‌ಗಳ ಮೂಲಕ ರೂ.6,68,416/–(ಚೆಕ್ ಸಂಖ್ಯೆ:953324/26–04–2018) ಮತ್ತು ರೂ.1,67,104/–(ಚೆಕ್ ಸಂಖ್ಯೆ:953325/26–04–2018) ಹಾಗೂ ಬ್ಯಾಂಕ್‌ನಲ್ಲಿ ಹೊಂದಾಣಿಕೆ ಮೂಲಕ ಗುಂಪು ವಿಮೆ, ವೃತ್ತಿತೆರಿಗೆ ಸೇರಿದಂತೆಇತರೆ ಹೊಂದಾಣಿಕೆ ಮೊಬಲಗು ರೂ.8,320/–ಗಳು, ಒಟ್ಟು ರೂ.8,43,840/–ಗಳನ್ನು ಪಾವತಿಸಲಾಗಿದೆ. ಈ ಪಾವತಿಗೆಸಂಬಂಧಿಸಿದಂತೆ ವಿಶ್ವವಿದ್ಯಾನಿಲಯದಿಂದ ಹೊರಡಿಸಿರುವ ಆದೇಶಗಳು ಮತ್ತು ಸಂಬಂಧಿಸಿದ ಕಡತವನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ಲೆಕ್ಕಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ:2/2020–21,ದಿನಾಂಕ:28.07.2020ರ ಮೂಲಕ ಸಂಸ್ಥೆಯ ನಿರ್ದೇಶಕರನ್ನುಕೋರಲಾಗಿ, ಸಂಸ್ಥೆಯಲ್ಲಿ ಲಭ್ಯವಿದ್ದ ಆದೇಶಗಳ ಪ್ರತಿ ಮತ್ತು ವಿಶ್ವವಿದ್ಯಾನಿಲಯದಕಾರ್ಯಸೌಧದಿಂದಬಂದಕೆಲವು ಆದೇಶಗಳ ಪ್ರತಿಯನ್ನು ಹಾಜರುಪಡಿಸಿರುತ್ತಾರೆ.<br><br>ಹಾಜರುಪಡಿಸಿದ ಆದೇಶಗಳು ಮತ್ತು ದಾಖಲೆಗಳನ್ನು ಪರಿಶೀಲಿಸಲಾಗಿ, ಶ್ರೀ ಎಸ್.ಜಗನ್ನಾಥ್, ಸಂಶೋಧನಾ ಸಹಾಯಕರು, ಗ್ರೇಡ್–1 ಇವರುರಾಜ್ಯ ವೇತನ ಶ್ರೇಣಿಯಲ್ಲಿ ವೇತನ ಪಡೆಯುತ್ತಿದ್ದು, ರಾಜ್ಯ ಸರ್ಕಾರಿ ನೌಕರರಿಗೆಅನ್ವಯವಾಗುವ ಸೇವಾ ಷರತ್ತುಗಳು ಇವರಿಗೂಕೂಡಅನ್ವಯವಾಗುತ್ತದೆ. ಅದರಂತೆ ಸದರಿಯವರು ದಿನಾಂಕ:31.10.2016 ರಂದು ವಯೋ ನಿವೃತ್ತಿ ಹೊಂದಬೇಕಾಗಿತ್ತು. ಮೈಸೂರು ವಿಶ್ವವಿದ್ಯಾನಿಲಯದ ಹಲವು ಶೈಕ್ಷಣಿಕ ಹುದ್ದೆಗಳನ್ನು ಉನ್ನತೀಕರಣಗೊಳಿಸುವ ಸಂಬಂಧದಕರಡು ಅಧಿನಿಯಮಗಳಿಗೆ ಕರ್ನಾಟಕರಾಜ್ಯವಿಶ್ವವಿದ್ಯಾನಿಲಯಗಳ ಕಾಯ್ದೆ–2000ದ ಪ್ರಕರಣ–41(6) ರನ್ವಯಮಾನ್ಯ ಕುಲಾಧಿಪತಿಗಳು ದಿನಾಂಕ:30.01.2012 ರಂದುಅಂಕಿತ ನೀಡಿದ್ದು, ಅದರಲ್ಲಿ ಸಂಶೋಧನಾ ಸಹಾಯಕಗ್ರೇಡ್–IIಹುದ್ದೆಯನ್ನು ಮರುಪದನಾಮಕರಣಗೊಳಿಸಿ Academician Grade-Iಎಂತಲೂ ಮತ್ತು ಸದರಿ ಹುದ್ದೆಗೆ ವೇತನವನ್ನು ಯು.ಜಿ.ಸಿ ವೇತನ ಶ್ರೇಣಿಯಲ್ಲಿ ಸಹಾಯಕ ಪ್ರಾಧ್ಯಾಪಕರ ವೇತನ ಶ್ರೇಣಿಯಾದ ರೂ.15,600–39,100(AGP6000) ಎಂದು ನಿಗಧಿಪಡಿಸಲಾಗಿದೆ. ಆದರೆ ಸದರಿ ನೌಕರರಿಗೆ ಉನ್ನತೀಕರಣಗೊಳಿಸಿರುವ ಕರಡುಅಧಿನಿಯಮದನ್ವಯ ವಿಶ್ವವಿದ್ಯಾನಿಲಯದಿಂದ ವೇತನ ನಿಗಧಿಪಡಿಸದಿರುವುದು ಲೆಕ್ಕಪರಿಶೋಧನೆಯಲ್ಲಿಕಂಡು ಬಂದಿರುತ್ತದೆ.ವಿಶ್ವವಿದ್ಯಾನಿಲಯದಆದೇಶ ಸಂಖ್ಯೆ:ಇಟಿ–1:259:ನಿವೃತ್ತಿ:2001–02,ದಿನಾಂಕ:29.10.2015 ರಂತೆ 2016ನೇ ಸಾಲಿನಲ್ಲಿ ವಯೋನಿವೃತ್ತಿ ಹೊಂದಲಿರುವ ನೌಕರರುಗಳ ಪಟ್ಟಿಯನ್ನು ಹೊರಡಿಸಿದ್ದು, ಸದರಿ ಪಟ್ಟಿಯಕ್ರಮ ಸಂಖ್ಯೆ:40ರಲ್ಲಿ ಶ್ರೀ ಎಸ್.ಜಗನ್ನಾಥ್ಇವರನ್ನು ದಿನಾಂಕ:31.10.2016 ರಂದು ವಿಶ್ವವಿದ್ಯಾನಿಲಯದ ಸೇವೆಯಿಂದ ವಯೋ | ಪ್ರಸ್ತಾವಿತ ಕಂಡಿಕೆಯಲ್ಲಿನ ವಿಷಯಕ್ಕೆ ಸಂಬಂಧಿಸಿದಂತೆ ಸದರಿ ನೌಕರರು ವಯೋನಿವೃತ್ತಿ ಪ್ರಕರಣಕ್ಕೆ ಸಂಬಂಧಪಟ್ಟ ನೌಕಕರರು ಮಾನ್ಯ ಉಚ್ಚನ್ಯಾಯಾಲಯದಲ್ಲಿ ರಿಟ್ ಪಿಟಿಶನ್ ಸಂಖ್ಯೆ:49678/20169(SREP) ಇತ್ಯರ್ಥವಾಗದೆ ಮುಂದುವರೆದಿರುವದರಿಂದ (31.03.2019 ರ ಅಂತ್ಯಕ್ಕೆ) ಈ ಸಂಬಂಧ ಉಚ್ಚನ್ಯಾಯಾಲಯವು ವಹಿಸಿದ ಕ್ರಮದ ವಿವರವನ್ನು ಮುಂದಿನ ಲೆಕ್ಕಪರಿಶೋಧನೆಗೆ ಹಾಜರುಪಡಿಸಲಾಗುವುದು ಎಂಬ ಅಂಶವನ್ನು ಲೆಕ್ಕಪರಿಶೋಧನೆ ಅವಗಾಹನೆಗೆ ತರಲಾಗಿದೆ. |

| | |
|---|---|
| ನಿವೃತ್ತಿನಿಮಿತ್ತ ಬಿಡುಗಡೆಗೊಳಿಸಲು ಆದೇಶವಾಗಿರುತ್ತದೆ. ಈ ಆದೇಶದ ವಿರುದ್ಧ ಸದರಿ ನೌಕರರುಗೌರವಾನ್ವಿತ ಉಚ್ಚ ನ್ಯಾಯಾಲಯದಲ್ಲಿಅರ್ಜಿ ಸಂಖ್ಯೆ:49678/2016 (ಎಸ್.ಆರ್.ಇ.ಎಸ್) ರಲ್ಲಿಅರ್ಜಿ ಸಲ್ಲಿಸಿ ಯು.ಜಿ.ಸಿ ನಿಯಮಗಳನ್ವಯ ವಯೋ ನಿವೃತ್ತಿಯನ್ನು 62 ವರ್ಷಗಳಿಗೆ ಮಾಡಬೇಕಾಗಿದ್ದು, ತಮಗೂ ಈ ಸೌಲಭ್ಯ ನೀಡಲು ಘನ ನ್ಯಾಯಾಲಯದಲ್ಲಿ ಮನವಿ ಸಲ್ಲಿಸಿರುತ್ತಾರೆ. ಘನ ನ್ಯಾಯಾಲಯವು ಈ ಅರ್ಜಿಯನ್ನು ಅಂಗೀಕರಿಸಿ ವಿಶ್ವವಿದ್ಯಾನಿಲಯದಿಂದ ವಯೋ ನಿವೃತ್ತಿ ಹೊಂದಲು ಆದೇಶಿಸಿದ್ದ ದಿನಾಂಕ:29.10.2015ರ ಆದೇಶವನ್ನುಜಾರಿ ಮಾಡದಂತೆ ದಿನಾಂಕ:26.10.2016ರಲ್ಲಿ ಮಧ್ಯಂತರಆದೇಶ ಹೊರಡಿಸಿರುತ್ತದೆ. ಈ ಹಿನ್ನೆಲೆಯಲ್ಲಿ ಸದರಿ ನೌಕರರು ದಿನಾಂಕ:01.11.2016 ರಿಂದ ಸೇವೆಯಲ್ಲಿ ಮುಂದುವರಿದು ದಿನಾಂಕ:31.10.2018 ರಂದು ವಯೋ ನಿವೃತ್ತಿ ಹೊಂದಿರುವುದು ಕಡತಗಳ ಪರಿಶೀಲನೆಯಲ್ಲಿಕಂಡು ಬಂದಿರುತ್ತದೆ. ಈ ಮಧ್ಯೆ ಉಪಕುಲಸಚಿವರು, ಮೈಸೂರು ವಿಶ್ವವಿದ್ಯಾನಿಲಯ, ಇವರುಟಿಪ್ಪಣಿ ಸಂ:ಡಬ್ಲ್ಯೂಪಿಸಿ.362:2016–17, ದಿನಾಂಕ:26.04.2018 ರಲ್ಲಿಗೌರವಾನ್ವಿತ ಉಚ್ಚ ನ್ಯಾಯಾಲಯದ ದಿನಾಂಕ:14.02.2018ರ ಆದೇಶದ ವಿರುದ್ಧ ಮೇಲ್ಮನವಿ ಸಲ್ಲಿಸಿರುವುದಾಗಿ ಕಡತದಲ್ಲಿನಟಿಪ್ಪಣಿಯಿಂದ ತಿಳಿದುಬಂದಿರುತ್ತದೆ(ಮಾನ್ಯ ನ್ಯಾಯಾಲಯದಆದೇಶದ ಪ್ರತಿಯನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲ). ಸದರಿ ಪ್ರಕರಣವು ದಿನಾಂಕ:27.04.2018 ರಂದು ವಿಚಾರಣೆಗೆ ಬರಲಿರುವುದರಿಂದ ವಿಶ್ವವಿದ್ಯಾನಿಲಯದ ವಕೀಲರಾದಶ್ರೀ ಭೀಮಯ್ಯ, ಇವರು ಶ್ರೀ ಎಸ್.ಜಗನ್ನಾಥ್‌ರವರವೇತನ ಬಾಕಿಯನ್ನು ಪಾವತಿಸುವ ಸಂಬಂಧಧನಾದೇಶ ನೀಡಿದಲ್ಲಿ ಉಚ್ಚ ನ್ಯಾಯಾಲಯವು ಆದೇಶಿಸಿರುವ ಶೇ.2.00ರ ಬಡ್ಡಿಯನ್ನು ಮನ್ನಾ ಮಾಡಿಸಲು ನ್ಯಾಯಾಲಯದಲ್ಲಿ ಪ್ರಾರ್ಥಿಸುವುದಾಗಿತಿಳಿಸಿರುವುದರಿಂದ ಬಾಕಿ ವೇತನ ಪಾವತಿಸುವಧನಾದೇಶವನ್ನುಕೂಡಲೇ ಕಳುಹಿಸುವ ವ್ಯವಸ್ಥೆ ಮಾಡಬೇಕೆಂದು ಹಣಕಾಸು ಅಧಿಕಾರಿಗಳು, ಮೈಸೂರು ವಿಶ್ವವಿದ್ಯಾನಿಲಯಇವರನ್ನುಕೋರಿರುತ್ತಾರೆ. ಈ ಹಿನ್ನೆಲೆಯಲ್ಲಿ ನವೆಂಬರ್–2016 ರಿಂದ ದಿನಾಂಕ: ಫೆಬ್ರವರಿ–2018ರವರೆಗಿನ ವೇತನ ಬಾಕಿ ಮೊತ್ತರೂ.8,43,840/–ಗಳನ್ನು ವಯೋ ನಿವೃತ್ತಿ ನಂತರದಅವಧಿಗೆ ಪಾವತಿಸಿರುವುದು ಲೆಕ್ಕಪರಿಶೋಧನೆಯಲ್ಲಿಕಂಡು ಬಂದಿರುತ್ತದೆ.<br><br>ಮೇಲ್ಕಂಡ ಅಂಶಗಳನ್ನು ಪರಿಶೀಲಿಸಿದಾಗ ವಿಶ್ವವಿದ್ಯಾನಿಲಯವು ಕೆಲವು ಶೈಕ್ಷಣಿಕ ಹುದ್ದೆಗಳನ್ನು ಉನ್ನತೀಕರಣಗೊಳಿಸುವ ಸಂಬಂಧದಅಧಿನಿಯಮವನ್ನು ಹೊರಡಿಸುವುದಕ್ಕೆ ಮೊದಲುರಾಜ್ಯ ಸರ್ಕಾರದ ಸೇವಾ ನಿಯಮಗಳು ಮತ್ತು ಯು.ಜಿ.ಸಿ ಸೇವಾ ನಿಯಮಗಳನ್ನು ಕೂಲಂಕಷವಾಗಿ ಪರಿಶೀಲಿಸಿ ರಾಜ್ಯ ಸರ್ಕಾರದ ಸೇವೆಯಲ್ಲಿರುವವರಿಗೆ ಹುದ್ದೆಗಳನ್ನು ಉನ್ನತೀಕರಿಸಿ ಯು.ಜಿ.ಸಿ ವೇತನ ಪಾವತಿಸಲು ಯು.ಜಿ.ಸಿ ನಿಯಮಾವಳಿಗಳಲ್ಲಿ ಅವಕಾಶವಿರುವ ಬಗ್ಗೆ ಖಾತರಿಪಡಿಸಿಕೊಂಡು ಅಧಿನಿಯಮ ಹೊರಡಿಸಬೇಕಾಗಿತ್ತು. ಆದರೆ ಆ ರೀತಿ ಮಾಡದೇ ಯು.ಜಿ.ಸಿ ವೇತನಕ್ಕೆ ಸಮನಾಗಿ ವೇತನ ನಿಗಧಿಪಡಿಸಿರುವುದು ಸರಿಯಾದಕ್ರಮವಲ್ಲವೆಂಬುದನ್ನುತಡವಾಗಿ ಮನಗಂಡುವಿಶ್ವವಿದ್ಯಾನಿಲಯದಆದೇಶ | |

| | |
|---|---|
| ಸಂ:ಇಟಿ–2:549:93–94, ದಿನಾಂಕ:05.11.2016ದಲ್ಲಿ ದಿನಾಂಕ:22.02.2012ರ ಪರಿನಿಯಮವನ್ನು ಹಿಂಪಡೆಯಲಾಗಿರುತ್ತದೆ. ವಿಶ್ವವಿದ್ಯಾನಿಲಯದಈ ಬಗೆಯ ನಿರ್ಧಾರದಿಂದಾಗಿ ದಿನಾಂಕ:31.10.2016ಕ್ಕೆ ನಿವೃತ್ತರಾಗಬೇಕಾಗಿದ್ದ ನೌಕರರನ್ನು ನ್ಯಾಯಾಲಯದಆದೇಶದಂತೆ ದಿನಾಂಕ:31.10.2018 ರವರೆಗೆ ಮುಂದುವರೆಸಿ ನವೆಂಬರ್–2016 ರಿಂದ ಫೆಬ್ರವರಿ–2018 ರವರೆಗೆಒಟ್ಟು ರೂ.8,43,840/–ಗಳ ವೇತನವನ್ನು ಪಾವತಿಸಲಾಗಿರುತ್ತದೆ.ಮುಂದುವರೆದುದಿನಾಂಕ:01.03.2018 ರಿಂದ 31.10.2018 ರವರೆಗಿನಅವಧಿಗೆ ವೇತನ ಪಾವತಿಸಿರುವಅಥವಾಪಾವತಿಸದಿರುವ ಬಗ್ಗೆ ಮಾಹಿತಿ ಹಾಗೂ ದಾಖಲಾತಿಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲ. ಪ್ರಕರಣವುಇನ್ನೂ ನ್ಯಾಯಾಲಯದಲ್ಲಿ ಬಾಕಿ ಇರುತ್ತದೆ. | |

**8.8. ಯೋಜನೆ ಮತ್ತು ವಾಸ್ತು ಶಿಲ್ಪ ವಿದ್ಯಾಸಂಸ್ಥೆಗೆ ಬೋಧಕರನ್ನು ನೇಮಕ ಮಾಡಿಕೊಳ್ಳುವಾಗ ನಿಯಮಗಳನ್ನು ಪಾಲನೆ ಮಾಡಿರುವುದಕ್ಕೆ ಸಂಬಂಧಿಸಿದ ದಾಖಲಾತಿಗಳನ್ನು ಹಾಜರುಪಡಿಸದಿರುವುದು :**

ಸರ್ಕಾರದ ಆದೇಶ ಸಂಖ್ಯೆ:ಇಡಿ/04/ಯುಎಂಎಸ್/2015,ದಿನಾಂಕ:04.03.2016ರಲ್ಲಿ ಯೋಜನೆ ಮತ್ತು ವಾಸ್ತುಶಿಲ್ಪ ವಿದ್ಯಾಸಂಸ್ಥೆಗೆ ಸಂಬಂಧಿಸಿದ ಪರಿನಿಯಮಾವಳಿಗೆ ಮಾನ್ಯ ಕುಲಾಧಿಪತಿಗಳು ಅಂಕಿತ ನೀಡಿದ್ದು, ಅದರಂತೆ ಮೈಸೂರು ವಿಶ್ವವಿದ್ಯಾನಿಲಯವು ತನ್ನ ಅಧಿಸೂಚನೆ ಸಂ:ಎಸಿ.2(ಎಸ್)/508/2012–13,ದಿನಾಂಕ:28–3–2016ರ ಮೂಲಕ ಅಳವಡಿಸಿಕೊಂಡ ಪರಿನಿಯಮಗಳಲ್ಲಿ ಸ್ವಯಂ ಹಣಕಾಸು ಯೋಜನೆಯಡಿ ಅನುಮೋದಿತವಾದ ಯೋಜನೆ ಮತ್ತು ವಾಸ್ತುಶಿಲ್ಪ ವಿದ್ಯಾಸಂಸ್ಥೆಗೆ ಇಬ್ಬರು ಪ್ರಾಧ್ಯಾಪಕರು, ಇಬ್ಬರು ಸಹ ಪ್ರಾಧ್ಯಾಪಕರು ಹಾಗೂ ನಾಲ್ವರು ಸಹಾಯಕ ಪ್ರಾಧ್ಯಾಪಕರ ಹುದ್ದೆಗಳನ್ನು ಸೃಜಿಸಲಾಗಿರುತ್ತದೆ.

2018–19ನೇ ಸಾಲಿನ ಲೆಕ್ಕತಪಾಸಣೆಯ ಪ್ರಕಾರ ಸದರಿ ಸಂಸ್ಥೆಯಲ್ಲಿ ಈ ಕೆಳಕಂಡಂತೆ 7 ಜನ ಬೋಧಕ ವರ್ಗದವರು ಕಾರ್ಯನಿರ್ವಹಿಸುತ್ತಿರುವುದು ಕಂಡು ಬಂದಿರುತ್ತದೆ. ಇವರುಗಳಿಗೆ ಸದರಿ ಸಾಲಿನಲ್ಲಿ ಯು.ಜಿ.ಸಿ ವೇತನ ಶ್ರೇಣಿಗಳ ಅನ್ವಯ ವೇತನವನ್ನು ಪಾವತಿಸಲಾಗಿದೆ.

| ಕ್ರ.ಸಂ | ಹೆಸರು | ಪದನಾಮ |
|---|---|---|
| 1 | ಡಾ: ಚಿದಂಬರ ಸ್ವಾಮಿ | ಪ್ರಾಧ್ಯಾಪಕರು |
| 2 | ಪ್ರೊ. ಪ್ರಮೋದ್.ಎಂ. ಗವಾರಿ | ಪ್ರಾಧ್ಯಾಪಕರು |
| 3 | ಮೊನಾಲಿಸ ದಾಸ್ | ಸಹ ಪ್ರಾಧ್ಯಾಪಕರು |
| 4 | ಶೋಭಾ.ಆರ್ | ಸಹ ಪ್ರಾಧ್ಯಾಪಕರು |
| 5 | ಯಶಸ್ವಿನಿ.ಎಸ್ | ಸಹಾಯಕ ಪ್ರಾಧ್ಯಾಪಕರು |
| 6 | ಉಮಾ.ಎಸ್.ಎಂ | ಸಹಾಯಕ ಪ್ರಾಧ್ಯಾಪಕರು |
| 7 | ಶ್ರೀಕಾಂತ್.ಕೆ.ಎಸ್ | ಸಹಾಯಕ ಪ್ರಾಧ್ಯಾಪಕರು |

ಮೇಲ್ಕಂಡ ನೇಮಕಾತಿಗೆ ಸರ್ಕಾರದ ಅನುಮತಿ ದೊರೆತಿರುವ ಬಗ್ಗೆ ದಾಖಲಾತಿಗಳು, ಅಧ್ಯಾಪಕರುಗಳ ನೇಮಕಾತಿಯು ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ–2000ದ ಪ್ರಕರಣ–53ರಲ್ಲಿ ತಿಳಿಸಿರುವಂತೆ ನೇಮಕಾತಿ ಮಂಡಳಿಯ ಮೂಲಕ ಆಗಿರುವ, ಪರಿನಿಯಮಗಳಡಿ ನಿಗದಿಪಡಿಸಿರುವ ರೀತ್ಯಾ ಸಂದರ್ಶನ ನಡೆಸಿರುವ ಹಾಗೂ ನೇಮಕಾತಿಯಲ್ಲಿ ಮೀಸಲಾತಿ ನಿಯಮಗಳನ್ನು ಪಾಲನೆ ಮಾಡಿರುವ ಸಂಬಂಧ ನೇಮಕಾತಿ ಪ್ರಕ್ರಿಯೆಯ ಕಡತಗಳು, ವಾಸ್ತುಶಿಲ್ಪ ಮಂಡಳಿಯು

ವಾಸ್ತುಶಿಲ್ಪ (School of planning and architectutre) ವಿಭಾಗದಲ್ಲಿ ವಿಶ್ವವಿದ್ಯಾನಿಲಯದ ಪರಿನಿಯಮದಡಿಯಲ್ಲಿ ಸೃಜಿಸಲಾಗಿರುವ ಮತ್ತು ಸ್ವಯಂ ಹಣಕಾಸು ಯೋಜನೆಯಡಿ ಅನುಮೋದಿತವಾಗಿರುವ–ಯೋಜನೆ ಮತ್ತು ವಾಸ್ತುಶಿಲ್ಪ ವಿದ್ಯಾಸಂಸ್ಥೆಗೆ ಇಬ್ಬರು ಪ್ರಾಧ್ಯಾಪಕರು, ಇಬ್ಬರು ಸಹ ಪ್ರಾಧ್ಯಾಪಕರು ನಾಲ್ವರು ಸಹಾಯಕ ಪ್ರಾಧ್ಯಾಪಕರ ಹುದ್ದೆಗಳನ್ನು ಸೃಜಿಸಲಾಗಿರುವ ಅಂಶವನ್ನು ಅನುಮೋಧಿಸುತ್ತಾ, ಈ ರೀತಿ ಅನುಮೋದಿತವಾಗಿರುವ ಹುದ್ದೆಗಳಿಗೆ ನೇಮಕಾತಿ ಸಂದರ್ಭದಲ್ಲಿ ಅನುಸರಿಸಲಾಗಿರುವ ಕ್ರಮಗಳನ್ನು ಸಮರ್ಥಿಸುವ ದಾಖಲೆಗಳನ್ನು ಹಾಜರು ಪಡಿಸದರಿರುವ ಅಂಶವನ್ನು ಉಲ್ಲೇಖಿಸಿ ಸಂಬಂಧಿಸಿದ ಬೋಧಕ ಸಿಬ್ಬಂಧಿಗೆ 2018–19ನೇ ಸಾಲಿನಲ್ಲಿ ಒಟ್ಟು ಪಾವತಿಸಿರುವ ಮೊತ್ತ ರೂ.7724124/–ಆಕ್ಷೇಪಿಸಲಾಗಿದೆ.

ಈ ಸಂಬಂಧ ಲೆಕ್ಕಪರಿಶೋಧನಾವರದಿಯಲ್ಲಿ ಸೂಚಿತವಾಗಿರುವ ಅಂಶಗಳಿಗೆ ವಿವರಣೆ ಈ ರೀತಿ ಇದೆ.

1. ಸಂದರ್ಶನ:– ಈ ಸಂಬಂಧ ವಿಶ್ವವಿದ್ಯಾನಿಲಯದಿಂದ ಪ್ರಕಟಣೆ ಸಂಖ್ಯೆ:ಇಟಿ2/227/2010–11 ದಿನಾಂಕ:01.04.2016ರಲ್ಲಿ ಪ್ರಕಟಣೆ ಹೊರಡಿಸಲಾಗಿದೆ. ಈ ಪ್ರಕಟಣೆಯಲ್ಲಿ ಪ್ರಾಧ್ಯಾಪಕರು ಸಹ ಪ್ರಾಧ್ಯಾಪಕರು, ಸಹಾಯಕ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಲು ಆಸಕ್ತಿ ಹೊಂದಿರುವ ಅಭ್ಯರ್ಥಿಗಳಿಗೆ ದಿನಾಂಕ:06.07.2016ರಂದು ಸಿಂಡಿಕೇಟ್ ಸಭಾಂಗಣ ಮೈಸೂರು ವಿಶ್ವವಿದ್ಯಾನಿಲಯ ಮೈಸೂರು, ಇಲ್ಲಿ ಅಧ್ಯಕ್ಷರು, ಸದಸ್ಯರು ಮತ್ತು ಸದಸ್ಯಕಾರ್ಯದರ್ಶಿಯವರನ್ನು ಒಳಗೊಂಡ 7 ಜನರ ಸಮಿತಿಯೂ ಸಂದರ್ಶನವನ್ನು ನಡೆಸಿರುತ್ತದೆ. (ಆಯ್ಕೆ ಸಮಿತಿಯ ಸದಸ್ಯರ ಪಟ್ಟಿಯ ಪ್ರತಿ ಅಡಕಗೊಳಿಸಿದೆ)
2. ಸದರಿ ಸಂದರ್ಶನದಲ್ಲಿ ಮೀಸಲಾತಿ ನಿಯಮ ಪಾಲನೆ (ಸಾಮಾಜಿಕ ನ್ಯಾಯ) ಅನುಸರಿಸಲಾಗಿದೆ. ಪ್ರಾಧ್ಯಾಪಕರು ಸಹ ಪ್ರಾಧ್ಯಾಪಕರು, ಸಹಾಯಕ ಪ್ರಾಧ್ಯಾಪಕರು ಹುದ್ದೆಗೆ 21 ಮಂದಿ ಅರ್ಜಿ ಸಲ್ಲಿಸಿದ್ದು ಇವರಲ್ಲಿ 16 ಮಂದಿ ಅಭ್ಯರ್ಥಿಗಳು ಸಂದರ್ಶನಕ್ಕೆ ಹಾಜರಾಗಿದ್ದು– ಈ 16 ಅಭ್ಯರ್ಥಿಗಳಲ್ಲಿ 8 ಅಭ್ಯರ್ಥಿಗಳ ಆಯ್ಕೆ ಅಂತಿಮಗೊಳಿಸಲಾಗಿದೆ. ಆಯ್ಕೆ ಪಟ್ಟಿಯಲ್ಲಿ ಸಾಮಾಜಿಕ ನ್ಯಾಯ ಪಾಲನೆ ವಿವರ ದಾಖಲಿಸಲಾಗಿದೆ. ( ಈ ಸಂಬಂಧ ಅಡಕ ಪತ್ರ ಲಗತ್ತಿಸಿದೆ)
3. a.ವಾಸ್ತುಶಿಲ್ಪ ಮಂಡಳಿಯು ನಿಗದಿಪಡಿಸಿದ ವಿದ್ಯಾರ್ಹತೆ ಮತ್ತು ಸೇವ ಅನುಭವಗಳನ್ನು, ಅರ್ಹತಾದಾಯಕ ಪರೀಕ್ಷೆಯಲ್ಲಿ ಪಡೆದಿರುವ ಅಂಕಗಳು(Marks for Qualifying exam)

| | |
|---|---|
| ನಿಗದಿಪಡಿಸಿದ ಅರ್ಹತೆಗಳನ್ವಯ ನೇಮಕಾತಿ ಮಂಡಳಿಯು ತಯಾರಿಸಿದ ಅರ್ಹ ಅಭ್ಯರ್ಥಿಗಳ ಪಟ್ಟಿ, ಸಿಂಡಿಕೇಟ್ ಸಭೆಯು ಇದನ್ನು ಅನುಮೋದಿಸಿರುವ ಬಗ್ಗೆ ಸಭೆಯ ನಡವಳಿಗಳು, ನೇಮಕಾತಿಗೊಂಡ ಬೋಧಕರುಗಳ ಸೇವಾವಹಿ ಹಾಗೂ ಶ್ರೇಣಿ ವಹಿಯನ್ನು ಹಾಜರುಪಡಿಸುವಂತೆ ವಿಚಾರಣಾ ಪತ್ರ ಸಂಖ್ಯೆ:109/2020–21,ದಿ:30.05.2020 ಹಾಗೂ ಸಂ:163/2020–21,ದಿ:10.06.2020ರ ಮೂಲಕ ಕೋರಲಾಗಿದ್ದರೂ ಸಹ ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ಈ ವಿಷಯದ ಬಗ್ಗೆ ಹಿಂದಿನ ಸಾಲಿನ ಲೆಕ್ಕಪರಿಶೋಧನಾ ವರದಿಯಲ್ಲಿ ಆಕ್ಷೇಪಿಸಲಾಗಿದ್ದರೂ ಕೂಡ ವಿಶ್ವವಿದ್ಯಾನಿಲಯ ದಿಂದ ಯಾವುದೇ ಅನುಪಾಲನಾ ವರದಿ ನೀಡಿರುವುದಿಲ್ಲ. ಹೀಗಾಗಿ ಸದರಿ ಅಧ್ಯಾಪಕರುಗಳ ನೇಮಕಾತಿ ಪ್ರಕ್ರಿಯೆಯು ನಿಯಮಾನುಸಾರ ಆಗಿರುವುದನ್ನು ಪರಿಶೀಲಿಸಲು ಸಾಧ್ಯವಾಗಿರುವುದಿಲ್ಲ. ಆದ್ದರಿಂದ 2018–19ನೇ ಸಾಲಿನಲ್ಲಿ ಬೋಧಕರ ವೇತನದ ಬಾಬ್ತು ಪಾವತಿಸಲಾಗಿರುವ ಮೊತ್ತ **ರೂ.77,24,124/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.** | b. ಪ್ರವಚನಗಳನ್ನು ನೀಡಿರುವ ಅನುಭವ (Teaching expirence)<br>c. ವಾಸ್ತುಶಿಲ್ಪ ಮತ್ತು ಯೋಜನೆ ಕ್ಷೇತ್ರಕ್ಕೆ ನೀಡಿರುವ ವಿಶೇಷ ಕೊಡುಗೆಗಳು (Special contributions in the field if any)<br>d. ಸಂದರ್ಶನದಲ್ಲಿ ಪಡೆದ ಅಂಕಗಳು<br>ಮೇಲಿನ ಎಲ್ಲಾ ಹಂತಗಳಲ್ಲೂ ಪರಿಗಣಿತವಾಗಿ ಅಂತಿಮವಾಗಿ ಪ್ರಾಧ್ಯಾಪಕರು ಸಹ ಪ್ರಾಧ್ಯಾಪಕರು ಸಹಾಯಕ ಪ್ರಾಧ್ಯಾಪಕರು ಹುದ್ದೆಗಳಿಗೆ ಸಂದರ್ಶನದಲ್ಲಿ ಅಂತಿಮಗೊಳಿಸಲಾಗಿರುವ ಅಭ್ಯರ್ಥಿಗಳ ಪಟ್ಟಿಯ ದಿನಾಂಕ:07.07.2016 ರಲ್ಲಿನ ಸಿಂಡಿಕೇಟ್ ಸಭೆಯಲ್ಲಿ ಅನುಮೋಧಿತವಾಗಿರುತ್ತದೆ. (ಈ ಸಂಬಂಧ ಸಿಂಡಿಕೇಟ್ ಸಭೆಯ ಪ್ರತಿ ಅಡಕಗೊಳಿಸಿದೆ ದಿನಾಂಕ:07.07.2016) ಅದರನ್ವಯ ಪ್ರಸ್ಥಾವಿತ ಬೋಧಕ ಸಿಬ್ಬಂದಿಗಳಿಗೆ ಪಾವತಿಸಿರುವ ವೇತನ ಒಟ್ಟು ಮೊತ್ತ ರೂ.77,24,124/– ಆಕ್ಷೇಪಣೆಯನ್ನು ಕೈ ಬಿಡಲು ಕೋರಿದೆ. |
| **8.9. ಹೆಚ್ಚುವರಿಯಾಗಿ ಮನೆ ಬಾಡಿಗೆ ಭತ್ಯೆಯನ್ನು ಪಾವತಿಸಿರುವುದರಿಂದ ವಿಶ್ವವಿದ್ಯಾನಿಲಯಕ್ಕೆಆರ್ಥಿಕ ನಷ್ಟ ಉಂಟಾಗಿರುವುದು:**<br><br>ಸ್ನಾತಕೋತ್ತರಗ್ರಂಥಾಲಯ ಹಾಗೂ ದೈಹಿಕ ಶಿಕ್ಷಣ ಮತ್ತುಕ್ರೀಡಾಅಧ್ಯಯನ ವಿಭಾಗದಿಂದ 2018–19ನೇ ಸಾಲಿನ ಲೆಕ್ಕಪರಿಶೋಧನೆಗೆ ಹಾಜರುಪಡಿಸಿದ ದಾಖಲೆಗಳನ್ನು ಪರಿಶೀಲಿಸಿದಾಗಉಪಗ್ರಂಥಪಾಲಕರು, ಸಹಾಯಕಗ್ರಂಥಪಾಲಕರು ಹಾಗೂ ದೈಹಿಕ ಶಿಕ್ಷಣ ವಿಭಾಗದ ಸಹಾಯಕ ಪ್ರಾಧ್ಯಾಪಕರುಗಳಿಗೆ ಮೂಲವೇತನದ ಶೇ.20ರ ದರದಲ್ಲಿ ಮನೆ ಬಾಡಿಗೆ ಭತ್ಯೆಯನ್ನು ಪಾವತಿಸಿರುವುದು ಕಂಡುಬಂದಿರುತ್ತದೆ. 6ನೇ ವೇತನಆಯೋಗದ ಶಿಫಾರಸ್ಸುಗಳನ್ನು ಅನುಷ್ಠಾನಗೊಳಿಸುವ ಕರ್ನಾಟಕ ಸರ್ಕಾರದಆದೇಶ ಸಂಖ್ಯೆ:ಎಫ್‌ಡಿ/06/ಎಸ್‌ಆರ್‌ಪಿ/2018/ಬೆಂಗಳೂರು,ದಿನಾಂಕ:01.03.2018ರ ಪ್ರಕಾರ ಮನೆ ಬಾಡಿಗೆ ಭತ್ಯೆಯನ್ನು ಶೇ.16ರ ದರದಲ್ಲಿ ಪಾವತಿಸಬೇಕಾಗಿರುತ್ತದೆ. ಆದರೆ ಮೂಲ ವೇತನದ ಶೇ.20 ರದರದಲ್ಲಿ ಮನೆ ಬಾಡಿಗೆ ಭತ್ಯೆಯನ್ನು ಪಾವತಿ ಮಾಡಿರುವುದರಿಂದಒಟ್ಟಾರೆ ರೂ.2,25,160/–ಗಳನ್ನು ಹೆಚ್ಚುವರಿಯಾಗಿ ಪಾವತಿಸಿದಂತಾಗಿರುತ್ತದೆ. ಈ ಸಂಬಂಧಅಗತ್ಯ ದಾಖಲಾತಿಗಳೊಂದಿಗೆ ಸ್ಪಷ್ಟೀಕರಣ ನೀಡುವಂತೆ ಲೆಕ್ಕಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ:18/20.07.2020ರಲ್ಲಿ ಕೋರಲಾಗಿದ್ದರೂ ಸಹ ಯಾವುದೇ ವಿವರಣೆ/ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ. ಆದ್ದರಿಂದ ಹೆಚ್ಚುವರಿಯಾಗಿ ಪಾವತಿಸಲಾಗಿರುವ ಮನೆ ಬಾಡಿಗೆ ಭತ್ಯೆಯ ಮೊತ್ತ**ಒಟ್ಟು ರೂ.2,25,160/–ಗಳನ್ನು** ಸಂಬಂಧಿಸಿದವರಿಂದ ವಸೂಲಿಸಿವಿಶ್ವವಿದ್ಯಾನಿಲಯದ ಸಂಬಂಧಿಸಿದ ವಹಿವಾಟು ಶೀರ್ಷಿಕೆಗೆ ಜಮೆ | ಪ್ರಸ್ಥಾವಿತ ಕಂಡಿಕೆಯಲ್ಲಿನ ವಿಷಯಕ್ಕೆ ಸಂಬಂಧಿಸಿದಂತೆ ಸದರಿ ಕಂಡಿಕೆಯಲ್ಲಿ ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಗ್ರಂಥಾಲಯದಲ್ಲಿ ಕೆಲಸ ನಿರ್ವಹಿಸುತ್ತಿರುವ ಸಿಬ್ಬಂದಿಗೆ (ಅನುಬಂಧ–32)ರಲ್ಲಿ ಸೂಚಿತವಾದ 2018–19ನೇ ಸಾಲಿನಲ್ಲಿ ವಿಶ್ವವಿದ್ಯಾನಿಲಯದ ಧನ ಸಹಾಯ ಆಯೋಗದ 7ನೇ ವೇತನ ಶ್ರೇಣಿಯಲ್ಲಿ ಮನೆ ಬಾಡಿಗೆ ಭತ್ಯೆಯನ್ನು ಶೇ.16 ದರದಲ್ಲಿ ನೀಡಬೇಕೆಂದು ಸೂಚಿತವಾಗಿದ್ದರೂ ಶೇ.20 ದರದಲ್ಲಿ ಡ್ರಾ ಮಾಡಲಾಗಿದೆ ಎಂಬ ಅಂಶವನ್ನು ಉಲ್ಲೇಖಿಸಿ ವಾಸ್ಥವವಾಗಿ ಡ್ರಾ ಮಾಡಬೇಕಿದ್ದ ಎಚ್‌ಆರ್‌ಎ ದರಕ್ಕಿಂತ ಶೇ 4% ಹೆಚ್ಚಿನ ದರದಲ್ಲಿ ಡ್ರಾ ಮಾಡಿರುವ ವ್ಯತ್ಯಾಸ ಮೊತ್ತವನ್ನು ರೂ.1,81,511/–ನ್ನು ವಸೂಲಾತಿಗೆ ಸೂಚಿಸಲಾಗಿದೆ. ಅದರೆ ಸಂಬಂಧಿಸಿದ ಸಿಬ್ಬಂದಿಗಳು ಯುಜಿಸಿ ಯ 6ನೇ ವೇತನ ಶ್ರೇಣಿಯಲ್ಲಿಯೇ ಮುಂದುವರೆಯುತ್ತಿದ್ದು, ನಿಗದಿತವಾದ ಇಲಾಖಾ ಪರೀಕ್ಷೆಗಳಲ್ಲಿ (NET) National eligibility test) ಪೂರ್ಣಗೊಳಿಸದೆ ಇರುವುದರಿಂದ, 6ನೇ ವೇತನ ಶ್ರೇಣಿಯಲ್ಲಿಯೇ ಮುಂದುವರೆದಿರುತ್ತಾರೆ ಮತ್ತು ತಾವುಗಳು ಸೂಚಿತವಾಗಿರುವ ಹುದ್ದೆಗಳಿಗೆ ಸೇರ್ಪಡೆಯಾದ ಸಂದರ್ಭದಲ್ಲಿ (NET) National eligibility test) ನಂತಹ ಪರೀಕ್ಷೆಗಳಲ್ಲಿ ಉತ್ತೀರ್ಣತೆ ಪಡೆಯಬೇಕೆಂದು ಸೂಚಿತವಾಗಿರಲಿಲ್ಲ ಕಡ್ಡಾಯವಾಗಿರಲಿಲ್ಲ ಎಂಬ ವಿಷಯದ ಆಧಾರದಲ್ಲಿ ರಾಜ್ಯ |

| | |
|---|---|
| ಮಾಡಲು ಸೂಚಿಸಿದೆ. ವಿವರಗಳನ್ನು **ಅನುಬಂಧ–32 ಮತ್ತು33**ರಲ್ಲಿ ನೀಡಲಾಗಿದೆ. | ಉಚ್ಛನ್ಯಾಯಾಲಯಕ್ಕೆ ಅಪೀಲು ಸಲ್ಲಿಸಿರುತ್ತಾರೆ.<br><br>ಸದರಿ ಸಿಬ್ಬಂದಿಗಳ ಅಪೀಲನ್ನು ಪರಿಗಣಿಸಿ ಉಚ್ಛನ್ಯಾಯಾಲಯವು ಸಂಬಂಧಿಸಿದ ನೌಕರರ ವೇತನ ಭತ್ಯೆಗಳಿಗೆ ಸಂಬಂಧಿಸಿದಂತೆ ಯಥಾಸ್ಥಿತಿಯನ್ನು ಮುಂದುವರೆಸುವಂತೆ ಮಧ್ಯಂತರ ಅದೇಶ ಹೊರಡಿಸಿದೆ (ಮಧ್ಯಂತರ ಅದೇಶದ ಪ್ರತಿ ಅಡಕಗೊಳಿಸಿದೆ). ಇದರ ಅನ್ವಯ ಕುಲಸಚಿವರು ವಿಶ್ವವಿದ್ಯಾನಿಲಯ ಸಂಖ್ಯೆ/ಇಟಿ4/530/2009–10 ದಿನಾಂಕ:23.03.2019 ರಲ್ಲಿ ನ್ಯಾಯಾಲಯ ಅಂತಿಮ ತೀರ್ಮಾನಕ್ಕೆ ಒಳಪಟ್ಟು ತಡೆಹಿಡಿಯಲಾಗಿರುವ ವಾರ್ಷಿಕ ವೇತನ ಬಡ್ತಿ ಮತ್ತು ಇನ್ನಿತರೆ ಸೌಲಭ್ಯಗಳನ್ನು ನೀಡಲು ಅನುಮತಿಸಿರುತ್ತಾರೆ (ಅದೇಶದ ಪ್ರತಿ ಅಡಕಗೊಳಿಸಿದೆ) ಈ ಸಂಬಂಧ ನ್ಯಾಯಾಲಯವು ನೀಡುವ ಅಂತಿಮ ಅದೇಶದನ್ವಯ ಕ್ರಮವಹಿಸಿಲಾಗುವುದು ಮತ್ತು ಈ ವಿವರಗಳನ್ನು ಮುಂದಿನ ಲೆಕ್ಕತನಿಖೆಗೆ ಹಾಜರುಪಡಿಸಲಾಗುವುದು ಎಂಬ ಅಂಶವನ್ನು ಅವಗಾಹನೆಗೆ ತರಲಾಗಿದೆ.<br><br>ಮುಂದುವೆರದು ಮೇಲಿನ ರೀತಿಯಲ್ಲಿಯೇ ದೈಹಿಕ ಶಿಕ್ಷಣ ಮತ್ತು ಕ್ರೀಡಾ ಅಧ್ಯಯನ ವಿಭಾಗದಲ್ಲಿ 2018–19ನೇ ಸಾಲಿನಲ್ಲಿ ಅನುಬಂಧ–33 ರಲ್ಲಿ ಉಲ್ಲೇಖಿಸಿರುವ ಇಬ್ಬರು ಸಿಬ್ಬಂದಿಗಳಿಗೂ ಮನೆ ಬಾಡಿಗೆ ಭತ್ಯೆವನ್ನು ಶೇ.16 ದರದಲ್ಲಿ ಪಾವತಿಸಿರುವ ಬದಲಾಗಿ ಶೇ.20 ದರದಲ್ಲಿ ಪಾವತಿಸಲಾಗಿದೆ ಎಂಬ ಅಂಶವನ್ನು ಉಲ್ಲೇಖಿಸಿ ಒಟ್ಟು ರೂ.43649/– ವಸೂಲಾತಿಗೆ ಸೂಚಿಸಲಾಗಿದೆ. ಸೂಚಿತ ವಸೂಲಾತಿ ಮೊತ್ತವು 03/2018 ರಿಂದ 02/2019 ರ ಅವಧಿಯದ್ದಾಗಿರುತ್ತದೆ.<br><br>ಆದರೆ ಯುಜಿಸಿ ವೇತನ ಶ್ರೇಣಿಯಲ್ಲಿ ವೇತನ ಪಡೆಯುತ್ತಿರುವ ಸಿಬ್ಬಂದಿಗಳ ಮನೆ ಬಾಡಿಗೆ ಭತ್ಯೆ ಪಾವತಿಗೆ ಸಂಬಂಧಿಸಿದಂತೆ ಕರ್ನಾಟಕ ಸರ್ಕಾರವು ಹೊರಡಿಸಿರುವ ನಿರ್ಣಯ ಕರ್ನಾಟಕ ಸರ್ಕಾರ ಅದೇಶ ಸಂಖ್ಯೆ/ಇಡಿ483/ಯುಎನ್ಇ2017 ಬೆಂಗಳೂರು ದಿನಾಂಕ:16.03.2019 ರಲ್ಲಿ ಮುಂದುವರೆದಿದೆ ಇತರೆ ಭತ್ಯೆಗಳಿಗೆ ಸಂಬಂಧಿಸಿದ ವಿವರಣೆಯಲ್ಲಿ ಮನೆ ಬಾಡಿಗೆ ಭತ್ಯೆವನ್ನು (ಎಚ್ಆರ್ಎ) ಮೈಸೂರು ನಗರಕ್ಕೆ 16% ದರದಲ್ಲಿ ನಿಗಧಿಪಡಿಸಿದೆ. ಅಲ್ಲದೆ ಸದರಿ ವಿವರಣೆ ಮುಂದುವರೆದು ಮನೆ ಬಾಡಿಗೆ ಭತ್ಯೆದ ದರವನ್ನು (16% ದರದಲ್ಲಿ) ಅದೇಶದ ಜಾರಿಯ ದಿನಾಂಕದಿಂದ ಮುಂದುವರೆದಂತೆ ಎಂದಿದೆ (ಪೂರ್ವಾನ್ವಯವಾಗುವಂತೆ ಎಂದಿರುವುದಿಲ್ಲ)<br>ಆದ ಕಾರಣ ವಸೂಲಾತಿಗೆ ಸೂಚಿಸಿರುವ ವಸೂಲಾತಿ ಮೊತ್ತ ರೂ.43,649/–ಅನ್ವಯವಾಗುವುದಿಲ್ಲ ಎಂಬ ಅಂಶವನ್ನು ಅವಗಾಹನೆಗೆ ತರಲಾಗಿದೆ. |
| **8.10. ಕಾಲೇಜು ಅಭಿವೃದ್ಧಿ ಮಂಡಳಿಯ ಪರಿಶೀಲನಾ ತಂಡದ ಸದಸ್ಯರು/ಸಿಬ್ಬಂದಿಗಳಿಗೆ ಗೌರವ ಸಂಭಾವನೆಯನ್ನು ನಿಯಮ ಬಾಹಿರವಾಗಿ ಪಾವತಿಸಿರುವುದು :**<br><br>ವಿಶ್ವವಿದ್ಯಾನಿಲಯದ ಸಂಯೋಜನೆಗಳೊಪಡುವ ಎಲ್ಲಾ ಕಾಲೇಜುಗಳಿಗೆ ಪರಿಶೀಲನಾ ತಂಡದ ಸದಸ್ಯರುಗಳನ್ನಾಗಿ ಬೋಧಕ ವರ್ಗದವರನ್ನು ನೇಮಿಸಿ, ಪರಿಶೀಲನಾ ಕಾರ್ಯಕೈಗೊಂಡ ಬೋಧಕರಿಗೆ | ಪ್ರಸ್ಥಾವಿತ ಕಂಡಿಕೆಯಲ್ಲಿನ ವಿಷಯಕ್ಕೆ ಸಂಬಂಧಿಸಿದಂತೆ ಸದರಿ ಕಂಡಿಕೆಯಲ್ಲಿ ಪರಿಶೀಲನಾ ತಂಡದ |

| | |
|---|---|
| 2018–19ನೇ ಸಾಲಿನಲ್ಲಿ ಒಟ್ಟು ರೂ.6,81,500/–ಗಳ ಗೌರವ ಸಂಭಾವನೆಯನ್ನು ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳ ಮೂಲಕ ಹಣಡ್ರಾ ಮಾಡಿ ನಗದು ರೂಪದಲ್ಲಿ ಪಾವತಿಸಲಾಗಿರುತ್ತದೆ. ಪಾವತಿಯ ವಿವರಗಳನ್ನು **ಅನುಬಂಧ–34**ರಲ್ಲಿ ವಿವರಿಸಲಾಗಿದೆ. ಈ ತಂಡದ ಸದಸ್ಯರುಗಳಿಗೆ ವಾಹನ ವ್ಯವಸೆ ಮಾಡಿದ್ದರೂ ಸಹ ಕಾಲೇಜೊಂದರ ಭೇಟಿಗೆ ತಲಾ ರೂ.1,000/–ದಂತೆ ಒಂದೇ ದಿನ ಹಲವು ಕಾಲೇಜುಗಳಿಗೆ ಭೇಟಿ ನೀಡಿದಾಗಲೂ ಇದೇ ದರದಲ್ಲಿ ಲೆಕ್ಕ ಹಾಕಿ ಸಂಭಾವನೆಯನ್ನು ಪಾವತಿಸಲಾಗಿರುತ್ತದೆ.<br>ವಿಶ್ವವಿದ್ಯಾನಿಲಯದ ಸಂಯೋಜನೆ ಸಲುವಾಗಿ ವಿವಿಧ ಕಾಲೇಜುಗಳಿಗೆ ಭೇಟಿ ನೀಡಿ, ಪರಿಶೀಲನಾ ವರದಿ ನೀಡುವುದು ವಿಶ್ವವಿದ್ಯಾನಿಲಯದ ಅಧ್ಯಾಪಕರುಗಳು ಹಾಗೂ ಸಿಬ್ಬಂದಿಗಳ ಕರ್ತವ್ಯದ ಭಾಗವಾಗಿರುತ್ತದೆ. ಕರ್ನಾಟಕ ನಾಗರಿಕ ಸೇವಾ ನಿಯಮಗಳು–1958ರ ನಿಯಮ–28(ಸಿ) ಅನ್ವಯ ವಿಶೇಷ ಕರ್ತವ್ಯಗಳಿಗೆ ಸರ್ಕಾರದ ವಿಶೇಷ ಆದೇಶದ ಮೂಲಕ ಅನುಮತಿಸದ ಹೊರತು ಯಾವುದೇ ಸಂಭಾವನೆಯನ್ನು ಪಾವತಿಸುವಂತಿಲ್ಲ ಹಾಗೂ ಅಗತ್ಯಾನುಸಾರ ಸರ್ಕಾರಿ ನೌಕರರು ಅನಿವಾರ್ಯ ಸಂದರ್ಭಗಳಲ್ಲಿ ಹೆಚ್ಚು ಸಮಯ ಕರ್ತವ್ಯ ನಿರ್ವಹಿಸುವುದು ಕೂಡ ಸರ್ಕಾರಿ ನೌಕರನ ಕರ್ತವ್ಯವಾಗಿರುತ್ತದೆ.<br>ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ–2000ದ ಪ್ರಕರಣ–41(5), (6), (7)ರನ್ವಯ ಯಾವುದೇ ಆದೇಶಗಳನ್ನು ಮಾಡುವಾಗ, ವಿಶ್ವವಿದ್ಯಾನಿಲಯವು ಪರಿನಿಯಮಗಳನ್ನು ರೂಪಿಸಿ ಸಿಂಡಿಕೇಟ್ ಸಭೆಯ ಅನುಮೋದನೆಯೊಂದಿಗೆ ಗೌರವಾನ್ವಿತ ಕುಲಾಧಿಪತಿಗಳ ಅನುಮೋದನೆ ಪಡೆಯಬೇಕಾಗಿರುತ್ತದೆ. ಆದರೆ ಈ ಪ್ರಕ್ರಿಯೆ ಆಗಿರವ ಬಗ್ಗೆ ವಿಶ್ವವಿದ್ಯಾನಿಲಯವು ಯಾವುದೇ ದಾಖಲಾತಿಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲ.<br>ಪರಿನಿಯಮ ರೂಪಿಸದೆಯೇ ಈ ರೀತಿ ಸಂಭಾವನೆ ಪಾವತಿಸಿರುವುದಕ್ಕೆ ಸೂಕ್ತ ಸಮಜಾಯಿಷಿ ನೀಡಲು ವಿಚಾರಣೆ ಪತ್ರ ಸಂಖ್ಯೆ:05/25.06.2020ನ್ನು ನೀಡಿದ್ದರೂ ಸಹ ವಿಶ್ವವಿದ್ಯಾನಿಲಯವು ಈ ಬಗ್ಗೆ ಯಾವುದೇ ಸ್ಪಷ್ಟೀಕರಣ ನೀಡಿರುವುದಿಲ್ಲ. ಆದ್ದರಿಂದ ಪೂರಕ ದಾಖಲೆಗಳೊಡನೆ ಈ ಬಗ್ಗೆ ಸೂಕ್ತ ಸ್ಪಷ್ಟೀಕರಣ ನೀಡುವವರೆಗೂ ಈ ಬಾಬ್ತು ಪಾವತಿಸಿರುವ ಒಟ್ಟು ಮೊತ್ತ **ರೂ.6,81,500/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.** | ಸದಸ್ಯರಾಗಿ ನೇಮಕವಾಗಿರುವ ಬೋಧಕವರ್ಗದ ಸಿಬ್ಬಂದಿಯು ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಒಳಪಡುವ ಎಲ್ಲಾ ಕಾಲೇಜುಗಳಿಗೆ ಭೌತಿಕವಾಗಿ–ಈ ಸಂಬಂಧ ರಚಿತವಾಗಿರುವ ತಂಡದ ಸದಸ್ಯರೊಂದಿಗೆ ಭೇಟಿ ನೀಡಿ ಅಯಾ ಕಾಲೇಜುಗಳಲ್ಲಿನ ಮೂಲಭೂತ ಸೌರ್ಕಯಗಳು ಪ್ರಯೊಗ ಶಾಲೆಗಳು ಗ್ರಂಥಾಲಯಗಳು ಇವುಗಳ ನಿರ್ವಹಣೆಗೆ ಸಂಬಂಧಿಸಿದ ವ್ಯವಸ್ಥೆಗಳ ಗುಣಮಟ್ಟದ ಬಗ್ಗೆ ವರದಿ ನೀಡುವ ಜವಾಬ್ದಾರಿಯನ್ನು ಹೊಂದಿರುತ್ತದೆ.<br>ಸದರಿ ಅಕ್ಷೇಪಿತ ಪಾವತಿಗೆ ಸಂಬಂಧಿಸಿದಂತೆ ಸೂಚಿತವಾಗಿರುವ ಎಲ್ಲಾ ಸಿಬಂಧಿವರ್ಗದವರು ಕಛೇರಿ ಅದೇಶದಲ್ಲಿ ಸೂಚಿತವಾಗಿರುವ ಸಿಬ್ಬಂಧಿಗಳಾಗಿದ್ದು ಅವರುಗಳಿಗೆ ಹಾಲೀ ಪಾವತಿಸಿರುವ ದರವು ದಿನಾಂಕ:12.05.2016ರ ಸಿಂಡಿಕೇಟ್ ಸಭೆಯಲ್ಲಿ ಚರ್ಚಿತವಾಗಿ ಒಪ್ಪಿಗೆ ಪಡೆದು,<br>1. ಕಛೇರಿ ಅದೇಶ ಸಂಖ್ಯೆ/ಯುಎ2/119/2003–04 ದಿನಾಂಕ:07.06.2016 ಮತ್ತು<br>2. ಕಛೇರಿ ಅದೇಶ ಸಂಖ್ಯೆ/ಯುಎ2/119/2003–04 ದಿನಾಂಕ:07.07.2016<br>ಮಾನ್ಯ ಕುಲಸಚಿವರಿಂದ ಅನುಮೋಧಿತ ಅದೇಶವಾಗಿರುತ್ತದೆ ಆದೇಶದ ಪ್ರತಿ ಅಡಕಗೊಳಿಸಿದೆ. ಅಲ್ಲದೆ ಸದರಿ ಪಾವತಿಯ ಮೊತ್ತವು ವಿಶ್ವವಿದ್ಯಾನಿಲಯದ ಸಂಯೋಜಿತ ಕಾಲೇಜುಗಳಿಂದ ಸಂಗ್ರಹಿಸಲಾಗಿರುವ ಪ್ರತ್ಯೇಕವಾದ ಸಂಯೋಜನಾ ಶುಲ್ಕ (Application fee) ಮತ್ತು ತಪಾಸಣಾ ವೆಚ್ಚದ ಸೇವಾಶುಲ್ಕ ಬಾಬ್ತಿನಿಂದ ಭರಿಸಲಾದ ವೆಚ್ಚವಾಗಿರುತ್ತದೆ<br>ಮತ್ತು ಈ ರೀತಿಯಾದ ಸಂಯೋಜಿತವಾಗಿರುವ ಕಾಲೇಜುಗಳ ಮೂಲಭೂತ ಸೌಲಭ್ಯಗಳ/ಸೌಕರ್ಯಗಳ ವಾರ್ಷಿಕ ಪರಿಶೀಲನೆಯು ವಿಶ್ವವಿದ್ಯಾನಿಲಯದ ನಿಗಧಿತವಾದ ಮತ್ತು ಕಡ್ಡಾಯ ಕಾರ್ಯವಾಗಿರುತ್ತದೆ ಎಂಬ ಅಂಶವನ್ನು ಲೆಕ್ಕತನಿಖೆಗೆ ಅವಗಾಹನೆಗೆ ತರಲಾಗಿದೆ<br>ಆದ ಕಾರಣ ಈ ಸಂಬಂಧದ ಒಟ್ಟು ಪಾವತಿ ರೂ.6,81,500/– ಆಕ್ಷೇಪಣೆ ಕೈ ಬಿಡಲು ಕೋರಿದೆ. |
| **8.11.ತಾತ್ಕಾಲಿಕ ಗುಮಾಸ್ತಕಮ್ ಬೆರಳಚ್ಚುಗಾರರವರಿಗೆ ಕೆಲಸ ನಿರ್ವಹಿಸದ ಅವಧಿಗೆ ವೇತನ ಪಾವತಿ ಮಾಡಿರುವುದರಿಂದ ವಿಶ್ವವಿದ್ಯಾನಿಲಯಕ್ಕೆ ರೂ.2,20,430ಗಳ ನಷ್ಟವಾಗಿರುವುದು :**<br>ವಿಶ್ವವಿದ್ಯಾನಿಲಯವು ತನ್ನ ಆದೇಶ ಸಂಖ್ಯೆ:ಇಟಿ2/297/2015–16,ದಿನಾಂಕ:16.01.2018ರಲ್ಲಿ ಸರ್.ಎಂ.ವಿಶ್ವೇಶ್ವರಯ್ಯ ಸ್ನಾತಕೋತ್ತರ ಕೇಂದ್ರ, ಮಂಡ್ಯ ಇಲ್ಲಿ ತಾತ್ಕಾಲಿಕ ವ್ಯವಸ್ಥೆಯಡಿ ಬೆರಳಚ್ಚುಗಾರರು ಮತ್ತು ಗುಮಾಸ್ತರಾಗಿ ಕಾರ್ಯ ನಿರ್ವಹಿಸುತ್ತಿದ್ದ ಕು. ಕಾವ್ಯಶ್ರೀ ಹೆಚ್.ಎನ್ಇವರಿಗೆ ಇವರನ್ನು ಸೇವೆಯಿಂದ | ಪ್ರಸ್ಥಾವಿತ ಕಂಡಿಕೆಯಲ್ಲಿನ ವಿಷಯಕ್ಕೆ ಸಂಬಂಧಿಸಿದಂತೆ ಸರ್.ಎಂ.ವಿಶ್ವೇಶ್ವರಯ್ಯ ಸ್ನಾತಕೋತ್ತರ ಕೇಂದ್ರ, ಮಂಡ್ಯ ಇಲ್ಲಿ ತಾತ್ಕಾಲಿಕ ವ್ಯವಸ್ಥೆಯಡಿ ಬೆರಳಚ್ಚುಗಾರರು ಮತ್ತು ಗುಮಾಸ್ತರಾಗಿ ಕಾರ್ಯ ನಿರ್ವಹಿಸುತ್ತಿದ್ದ, ಕು. ಕಾವ್ಯಶ್ರೀ ಹೆಚ್.ಎನ್ ಇವರಿಗೆ ಕೆಲಸ ನಿರ್ವಹಿಸದ ಅವಧಿಗೆ ವೇತನ ಪಾವತಿ |

ತೆಗೆದು ಹಾಕಲಾಗಿದ್ದ ಅವಧಿಯಿಂದ ಕರ್ತವ್ಯಕ್ಕೆ ಮರು ನೇಮಕಗೊಳಿಸಿದ ಅವಧಿಯವರೆಗೆ ಅಂದರೆ ದಿನಾಂಕ:10.10.2014 ರಿಂದ ದಿನಾಂಕ:23.04.2016ರವರೆಗಿನ ವೇತನವನ್ನು ಲೆಕ್ಕಾಚಾರ ಮಾಡಿ, ಡಾ.ಚಂದ್ರಾಜು, ನಿವೃತ್ತ ಪ್ರಾಧ್ಯಾಪಕರು, ಸಕ್ಕರೆ ತಂತ್ರಜ್ಞಾನ ವಿಭಾಗ, ಸ್ನಾತಕೋತ್ತರ ಕೇಂದ್ರ, ಮಂಡ್ಯ, ಇವರ ನಿವೃತ್ತಿ ಸೌಲಭ್ಯದ ಹಣದಲ್ಲಿ ಕಟಾಯಿಸಿ, ಪಾವತಿಸುವಂತೆ ಆದೇಶಿಸಲಾಗಿದೆ. ಅದರಂತೆ ನಿರ್ದೇಶಕರು ಸರ್.ಎಂ.ವಿಶ್ವೇಶ್ವರಯ್ಯ ಸ್ನಾತಕೋತ್ತರ ಕೇಂದ್ರ, ಮಂಡ್ಯರವರು ತಮ್ಮ ಕಛೇರಿ ಪತ್ರ ಸಂಖ್ಯೆ:ಸರ್.ಎಂ.ವಿ.ಸ್ನಾ.ಕೇ.ಮ/125/2018-19,ದಿನಾಂಕ:07.05.2018ರಲ್ಲಿ ಕು.ಕಾವ್ಯಶ್ರೀ ಹೆಚ್.ಎನ್,ತಾತ್ಕಾಲಿಕ ಬೆರಳಚ್ಚುಗಾರರು ಕಮ್ ಗುಮಾಸ್ತರುರವರಿಗೆ ರೂ.2,20,430/-ಗಳ ಪಾವತಿಗಾಗಿ ಬಿಲ್ಲನ್ನು ತಯಾರಿಸಿದಿನಾಂಕ:16.01.2018ರ ವಿಶ್ವವಿದ್ಯಾನಿಲಯದ ಆದೇಶದ ಪ್ರತಿಯೊಡನೆ ವಿಶ್ವವಿದ್ಯಾನಿಲಯದ ಹಣಕಾಸು ಅಧಿಕಾರಿಯವರಿಗೆ ದಿನಾಂಕ:21-05-2018ರಲ್ಲಿ ಕಳುಹಿಸಿರುತ್ತಾರೆ.

ಹಣಕಾಸು ಅಧಿಕಾರಿಯವರು ದಿನಾಂಕ:22-05-2018ರಂದು ಬಿಲ್ಲನ್ನು ಪಾಸು ಮಾಡಿ ರೂ.2,20,430/-ಗಳನ್ನು ಕು.ಕಾವ್ಯಶ್ರೀ ಹೆಚ್.ಎನ್ ಇವರಿಗೆ ಪಾವತಿಸಿ, ತಮ್ಮ ಟಿಪ್ಪಣಿ ಸಂಖ್ಯೆ:ಹಶಾ22/113/2011-12,ದಿನಾಂಕ:22.05.2018ರಲ್ಲಿ ಡಾ.ಚಂದ್ರಾಜು, ನಿವೃತ್ತ ಪ್ರಾಧ್ಯಾಪಕರು, ಸಕ್ಕರೆತಂತ್ರಜ್ಞಾನ ವಿಭಾಗ, ಸ್ನಾತಕೋತ್ತರಕೇಂದ್ರ, ಮಂಡ್ಯ ಇವರಿಗೆ ಪಾವತಿಸಬೇಕಾಗಿರುವ ನಿವೃತ್ತಿ ಸೌಲಭ್ಯದ ಹಣದಲ್ಲಿ ರೂ.2,20,430/-ಗಳನ್ನು ಕಟಾಯಿಸಿ ವಿಶ್ವವಿದ್ಯಾನಿಲಯದ ಜಿ.ಆರ್.ಎ ಖಾತೆಗೆ ಜಮಾ ಮಾಡಲು ಅಧೀಕ್ಷಕರು, ಪಿಂಚಣಿ ವಿಭಾಗ, ಹಣಕಾಸು ಶಾಖೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರುರವರಿಗೆ ತಿಳಿಸಿರುತ್ತಾರೆ. ಪ್ರಸ್ತಾವಿತ ಮೊತ್ತ ಕಟಾವಣೆಯಾಗಿ ವಿಶ್ವವಿದ್ಯಾನಿಲಯದ ಜಿ.ಆರ್.ಎ ಖಾತೆಗೆ ಜಮೆಯಾಗಿರುವುದಕ್ಕೆ ದಾಖಲೆಗಳನ್ನು ನೀಡುವಂತೆ ವಿಚಾರಣಾ ಪತ್ರ ಸಂಖ್ಯೆ:45/2019-20,ದಿನಾಂಕ:13.03.2020 ಮತ್ತು ವಿಚಾರಣಾ ಪತ್ರ ಸಂಖ್ಯೆ:68/2020-21,ದಿನಾಂಕ:19.05.2020 ಗಳನ್ನು ನೀಡಲಾಗಿರುತ್ತದೆ. ಹಣಕಾಸು ಅಧಿಕಾರಿಯವರು ದಿನಾಂಕ:12.06.2020ರಂದು ವಿಚಾರಣಾ ಪತ್ರಗಳಿಗೆ ಪ್ರತಿಕ್ರಿಯಿಸಿ ದಿನಾಂಕ:21.12.2018ರ ತಮ್ಮ ಕಛೇರಿಯ ಟಿಪ್ಪಣಿ(ಸಂಖ್ಯೆ:22/2018-19)ಯ ಪ್ರತಿಯನ್ನು ನೀಡಿದ್ದು, ಅದರನುಸಾರ ರೂ.2,20,430/-ಗಳು ಜಿ.ಆರ್.ಎ ಖಾತೆಗೆ ಜಮೆಯಾಗಿರುವುದಿಲ್ಲ.

ಈ ಬಗೆಗಿನ ಕಡತಗಳನ್ನು ಪರಿಶೀಲಿಸಿದಾಗ ಕರ್ನಾಟಕ ವಿಶ್ವವಿದ್ಯಾನಿಲಯಗಳ ಅಧಿನಿಯಮ-2000ದ ಪ್ರಕರಣ-57ರ ಅನುಸಾರ ನೇಮಕಗೊಂಡ ಬೋಧಕೇತರ ಸಿಬ್ಬಂದಿ ಮಾತ್ರ ವಿಶ್ವವಿದ್ಯಾನಿಲಯದ ಖಾಯಂ ನೌಕರರಾಗಿರುತ್ತಾರೆ. ಆದರೆ ವಿಶ್ವವಿದ್ಯಾನಿಲಯದ ಕುಲಪತಿಗಳು ಪ್ರಕರಣ-56ರ ಅಡಿ ತಮಗೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ನೇಮಕ ಮಾಡಿದ ಸಿಬ್ಬಂದಿಯ ನೇಮಕಾತಿಯ ಅವದಿ ಒಂದು ವರ್ಷ ಮಾತ್ರವೇ ಆಗಿದ್ದು, ಇವರನ್ನು ಮುಂದಿನ ವರ್ಷ ನೇಮಕ ಮಾಡಿದರೂ ಎರಡು-ಮೂರು ದಿನಗಳ ಸೇವಾ ಭಂಗದ ನಂತರ ನೇಮಕ ಮಾಡಿಕೊಳ್ಳಲಾಗುತ್ತದೆ. ಆದ್ದರಿಂದ ಇವರ ನೇಮಕಾತಿ ತಾತ್ಕಾಲಿಕ ಸ್ವರೂಪದ್ದಾಗಿದ್ದು, ಇವರುಗಳ ಸೇವೆಯನ್ನು ನಿರಂತರ ಸೇವೆಯೆಂದು ಪರಿಗಣಿಸಲಾಗುವುದಿಲ್ಲ. ಮಾಡಲಾಗಿದೆ ಎಂಬ ಅಂಶವನ್ನು ಉಲ್ಲೇಖಿಸಿ ರೂ.2,20,430/- ವಸೂಲಾತಿಗೆ ಸೂಚಿಸಲಾಗಿತ್ತು.

ಸದರಿಯವರ ಪ್ರಕರಣದಲ್ಲಿ ಸುದೀರ್ಘ ಆಡಳಿತಾತ್ಮಕ ವಿಚಾರಣೆ ವಿವರಗಳ ನಂತರ ಅಂತಿಮವಾಗಿ ಕು. ಕಾವ್ಯಶ್ರೀ ಹೆಚ್.ಎನ್ ಇವರಿಗೆ ಪಾವತಿಸಿರುವ ಮೊತ್ತವು ನಿಯಮಬಾಹಿರ ಎಂಬ ನಿರ್ಣಯಕ್ಕೆ ಬಂದು, ಈ ಮೊತ್ತ ಪಾವತಿಗೆ ಕಾರಣರಾದ ಡಾ.ಎಸ್.ಚಂದ್ರಾಜು, ನಿವೃತ್ತ ಪ್ರಾಧ್ಯಾಪಕರು, ಸಕ್ಕರೆ ತಂತ್ರಜ್ಞಾನ ವಿಭಾಗ, ಸ್ನಾತಕೋತ್ತರ ಕೇಂದ್ರ ಮಂಡ್ಯ. ಇವರಿಗೆ ಪಾವತಿಯಾಗಬೇಕಾಗಿರುವ ನಿವೃತ್ತಿ ವೇತನ ಸೌಲಭ್ಯದ ಮೊತ್ತದಲ್ಲಿ, ಕಟಾವಣೆಮಾಡಿ (Deduction) ಜಿ,ಆರ್,ಎ ಖಾತೆಗೆ ಜಮಾ ಮಾಡಲು (ವಿವಿ ಅದೇಶ ಸಂಖ್ಯೆ:ಇಟಿ2/297/2015-16 ದಿನಾಂಕ:16.01.2018) ಹಣಕಾಸು ಅಧಿಕಾರಿಗಳಿಂದ ಸಂಖ್ಯೆ:ಹಶಾ/113/2011-12 ದಿನಾಂಕ:22.05.2018 ಅದೇಶವಾಗಿದೆ) (ಅದೇಶದ ಪ್ರತಿ ಅಡಕಗೊಳಿಸಿದೆ)

ಸದರಿ ಅದೇಶದನ್ವಯ ಈ ಬಗ್ಗೆ ಡಾ.ಎಸ್.ಚಂದ್ರಾಜು, ನಿವೃತ್ತ ಪ್ರಾಧ್ಯಾಪಕರು, ಸಕ್ಕರೆತಂತ್ರಜ್ಞಾನ ವಿಭಾಗ, ಸ್ನಾತಕೋತ್ತರ ಕೇಂದ್ರ ಮಂಡ್ಯ. ಉದ್ಯೋಗಿ ಸಂಖ್ಯೆ:9952) ಇವರಿಗೆ ಪಾವತಿಯಾಗಬೇಕಾಗಿರುವ ನಿವೃತ್ತಿ ವೇತನ ಸೌಲಭ್ಯಗಳ ಮೊತ್ತದಲ್ಲಿ ಎಸ್‌ಬಿ ಖಾತೆ ಸಂಖ್ಯೆ:54007591471 ರಿಂದ ರೂ.2,20,430/- ಕಟಾಯಿಸಿ ಜಿ,ಆರ್,ಎ ಖಾತೆಗೆ ಜಮಾ ಮಾಡಲು ವ್ಯವಸ್ಥಾಪಕರು ಎಸ್‌ಬಿಐ ವಿವಿ ಆವರಣ ಶಾಖೆ ಮೈಸೂರು. ಇವರಿಗೆ ಪತ್ರ ಬರೆಯಲಾಗಿದೆ (ಪತ್ರದ ಪ್ರತಿ ಅಡಕಗೊಳಿಸಿದೆ)

ಈ ರೀತಿ ಕಟಾಯಿಸಿರುವ ಮೊತ್ತವು ರೂ.2,20,430/- ಜಿ,ಆರ್,ಎ ಖಾತೆಗೆ ಹೊಂದಾಣಿಕೆಯಾಗಿರುವುದನ್ನು ದೃಢೀಕರಿಸುವ ಜಿ,ಆರ್,ಎ ಖಾತೆಯ ಬ್ಯಾಂಕ್ ಸ್ಕ್ರೋಲ್ ಪ್ರತಿಯನ್ನು ಅಡಕಗೊಳಿಸಿದೆ

ಆದ್ದರಿಂದ ಈ ಸಂಬಂಧ ವಸೂಲಾತಿ ಕಂಡಿಕೆ ರೂ.220430/- ಕೈ ಬಿಡಲು ಕೋರಿದೆ.

| | |
|---|---|
| ಹೀಗಾಗಿ ಇವರುಗಳು ವಿಶ್ವವಿದ್ಯಾನಿಲಯದ ಖಾಯಂ ಸಿಬ್ಬಂದಿಯಾಗಿರುವುದಿಲ್ಲ. ಕು.ಕಾವ್ಯಶ್ರೀ ಹೆಚ್.ಎನ್‌ರವರು ಪ್ರಕರಣ–56ರ ಅಡಿ ಒಂದು ವರ್ಷದಅವಧಿಗೆ ಹೀಗೆ ನೇಮಕಗೊಂಡ ತಾತ್ಕಾಲಿಕ ಬೋಧಕೇತರ ಸಿಬ್ಬಂದಿಯಾಗಿದ್ದು, ನೇಮಕಾತಿ ನಿಬಂಧನೆಗಳ ಅನುಸಾರ ಯಾವುದೇ ಅವಧಿಯಲ್ಲಿ ಇವರನ್ನು ಕರ್ತವ್ಯದಿಂದ ಬಿಡುಗಡೆಗೊಳಿಸಬಹುದಾಗಿರುತ್ತದೆ.<br><br>ವಿಶ್ವವಿದ್ಯಾನಿಲಯದ ಆದೇಶ ಸಂಖ್ಯೆ:ಇಟಿ1/219/2019–20, ದಿನಾಂಕ:10–01–2014ರ ಮೂಲಕ ಕು.ಕಾವ್ಯಶ್ರೀ.ಹೆಚ್.ಎನ್ ರವರನ್ನು ನೇಮಕ ಮಾಡಿಕೊಳ್ಳಲಾಗಿರುವುದು, ಅಸಭ್ಯ ನಡವಳಿಕೆಯ ಆರೋಪದ ಮೇಲೆ ದಿನಾಂಕ:15–09–2014ರ ನಿರ್ದೇಶಕರು, ಸ್ನಾತಕೋತ್ತರಕೇಂದ್ರ, ಮಂಡ್ಯರವರ ಪತ್ರದ ಶಿಫಾರಸ್ಸಿನಂತೆ ವಿಶ್ವವಿದ್ಯಾನಿಲಯದ ಆದೇಶ ಸಂಖ್ಯೆ:ಇಟಿ1/244/2004–05,ದಿನಾಂಕ:09–10–2014ರ ಮೂಲಕ ಇವರನ್ನು ಕೆಲಸದಿಂದ ತೆಗೆದು ಹಾಕಿರುವುದು, ನಂತರ ಸದರಿಯವರು 8 ತಿಂಗಳು ತಡವಾಗಿ ಕರ್ನಾಟಕ ರಾಜ್ಯ ಮಹಿಳಾ ಆಯೋಗಕ್ಕೆ ದೂರು ನೀಡಿರುವುದು(ದಿ.10–6–2015 ಹಾಗೂ 22–6–2015) ಕಡತಗಳ ಪರಿಶೀಲನೆಯಿಂದ ಕಂಡು ಬಂದಿರುತ್ತದೆ. ಕರ್ನಾಟಕ ರಾಜ್ಯ ಮಹಿಳಾ ಆಯೋಗದ ನಿರ್ದೇಶನದನುಸಾರ ವಿಶ್ವವಿದ್ಯಾನಿಲಯದ ದೂರು ಸಮಿತಿಯು ವಿಚಾರಣೆ ನಡೆಸಿ ಕು.ಕಾವ್ಯಶ್ರೀರವರನ್ನು ಮರು ನೇಮಿಸಲು ಹಾಗೂ ಇವರನ್ನು ತೆಗೆದು ಹಾಕಿದ ದಿನದಿಂದ ಮರು ನೇಮಿಸಿದ ದಿನಾಂಕದವರೆಗೆ ಮಾಹೆಯಾನ ರೂ.12000/–ದಂತೆ ಲೆಕ್ಕ ಹಾಕಿ ನಿರ್ದೇಶಕರು, ಸ್ನಾತಕೋತ್ತರಕೇಂದ್ರ, ಮಂಡ್ಯರವರಿಗೆ ದಂಡ ವಿಧಿಸಲು ಹಾಗೂ ನಿರ್ದೇಶಕರ ನಡೆ ತೃಪ್ತಿಕರವಾಗಿಲ್ಲದಿರುವುದರಿಂದ ಅವರಿಗೆ ಎಚ್ಚರಿಕೆ ನೀಡಲು ದಿನಾಂಕ:19–9–2016ರ ತಮ್ಮ ವರದಿಯಲ್ಲಿ ಶಿಫಾರಸ್ಸು ಮಾಡಿರುತ್ತದೆ. ಕು.ಕಾವ್ಯಶ್ರೀ ಹೆಚ್.ಎನ್ ರವರು ದಿನಾಂಕ:26–04–2016ರಿಂದ ಸ್ನಾತಕೋತ್ತರಕೇಂದ್ರ, ಮಂಡ್ಯ ಇಲ್ಲಿ ಮರು ನೇಮಕಗೊಂಡು ಕಾರ್ಯ ನಿರ್ವಹಿಸುತ್ತಿರುವುದು ಕಂಡು ಬಂದಿರುತ್ತದೆ.<br><br>ಈ ಮಧ್ಯೆ ಕು.ಕಾವ್ಯಶ್ರೀ.ಹೆಚ್.ಎನ್‌ರವರು ವಿಶ್ವವಿದ್ಯಾನಿಲಯದ ಕೆಲಸದಿಂದ ತಮ್ಮನ್ನು ತೆಗೆದು ಹಾಕಿದುದರ ವಿರುದ್ಧ2015ರಲ್ಲಿ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್‌ಅರ್ಜಿ ಸಲ್ಲಿಸಿದ್ದು, ಸದರಿ ಅರ್ಜಿಗೆ ಸಂಬಂಧಿಸಿದಂತೆ ವಿಶ್ವವಿದ್ಯಾನಿಲಯವು ಸಲ್ಲಿಸಿರುವ ಆಕ್ಷೇಪಣೆಯಲ್ಲಿ ಅರ್ಜಿದಾರರು ತಾತ್ಕಾಲಿಕ ವ್ಯವಸ್ಥೆಯಲ್ಲಿಒಂದು ವರ್ಷದ ಅವಧಿಗೆ ಮಾತ್ರ ನೇಮಕಗೊಂಡಿರುವುದರಿಂದ, ಮರು ನೇಮಕದ ಸಂದರ್ಭದಲ್ಲಿ 2–3 ದಿನಗಳ ಸೇವಾ ಕಡಿತ ಆಗಿರುವುದರಿಂದ ಇವರ ಸೇವೆಯನ್ನು ಮುಂದುವರೆದ ಸೇವೆ ಎಂದು ಪರಿಗಣಿಸಲು ಬರುವುದಿಲ್ಲವೆಂದೂ, ಸದರಿಯವರನ್ನು ದಿನಾಂಕ:09–10–2014ರಂದು ಸೇವೆಯಿಂದ ತೆಗೆದು, ಮತ್ತೆ ಹೊಸದಾಗಿ ದಿನಾಂಕ:26–04–2016 ರಂದು ತಾತ್ಕಾಲಿಕವಾಗಿ ನೇಮಕ ಮಾಡಿಕೊಂಡಿರುವುದರಿಂದ ದಿನಾಂಕ:09–10–2014 ರಿಂದ ದಿನಾಂಕ:26–04–2016ರವರೆಗಿನ ಅವಧಿಯನ್ನು ಮುಂದುವರೆದ ಸೇವೆಯೆಂದು ಪರಿಗಣಿಸಲು ಬರುವುದಿಲ್ಲವಾದ್ದರಿಂದ ಇವರು ತತ್ಸಂಬಂಧಿತ ಸೌಲಭ್ಯಗಳಿಗೆ ಅರ್ಹರಾಗಿರುವುದಿಲ್ಲವೆಂದೂ ಹಾಗೂ ತಾತ್ಕಾಲಿಕ ನೌಕರರು ಈ ಸಂಬಂಧ | |

| | |
|---|---|
| ಯಾವುದೇ ಹಕ್ಕು ಸ್ಥಾಪನೆ ಮಾಡಲು ಬರುವುದಿಲ್ಲವೆಂದು ತಿಳಿಸಿರುವುದು ಕಡತಗಳ ಪರಿಶೀಲನೆಯಿಂದ ಕಂಡು ಬಂದಿರುತ್ತದೆ. ವಿಶ್ವವಿದ್ಯಾನಿಲಯದ ಈ ಹೇಳಿಕೆಯು ನಿಯಮಾನುಸಾರವಿರುತ್ತದೆ.<br><br>ಆದರೆ ವಿಶ್ವವಿದ್ಯಾನಿಲಯದ ಆದೇಶ ಸಂ:ಇಟಿ2/297/2015-16-20, ದಿನಾಂಕ:16-01-2018ದಲ್ಲಿ ಕು.ಕಾವ್ಯಶ್ರೀಹೆಚ್.ಎನ್ ರವರನ್ನು ಕೆಲಸದಿಂದ ತೆಗೆದು ಹಾಕಲಾಗಿದ್ದ ಅವಧಿಯ ವೇತನವನ್ನು ಮಾಹೆಯಾನ ರೂ.12000/-ಗಳಂತೆ ಲೆಕ್ಕ ಹಾಕಿ ಸ್ನಾತಕೋತ್ತರ ಕೇಂದ್ರ, ಮಂಡ್ಯ ಇಲ್ಲಿನ ಹಿಂದಿನ ನಿರ್ದೇಶಕರಾಗಿದ್ದ ಡಾ.ಎಸ್.ಚಂದ್ರಾಜು, ನಿವೃತ್ತ ಪ್ರಾಧ್ಯಾಪಕರು ಇವರ ನಿವೃತ್ತಿ ಸೌಲಭ್ಯಗಳಿಂದ ಕಟಾಯಿಸಿ ಪಾವತಿಸಲು ಸೂಚಿಸಲಾಗಿರುತ್ತದೆ. ಆದರೆ ಈ ಕ್ರಮವು ಮಾನ್ಯ ಉಚ್ಚ ನ್ಯಾಯಾಲಯಕ್ಕೆ ವಿಶ್ವವಿದ್ಯಾನಿಲಯವು ಸಲ್ಲಿಸಿದ್ದ ಆಕ್ಷೇಪಣೆಯ ಅಂಶಗಳಿಗೆ ಹಾಗೂ ವಿಶ್ವವಿದ್ಯಾನಿಲಯದ **"**ವಿಶ್ವವಿದ್ಯಾನಿಲಯದಲ್ಲಿ ಲೈಂಗಿಕ ದೌರ್ಜನ್ಯ ತಡೆ ಮತ್ತು ಪರಿಹಾರದ ಸಂವೇದನಾಶೀಲ ಆಡಳಿತ**"** ಪರಿನಿಯಮದ ಸಂ-17ರ ಅಡಿ ನಿಗದಿಪಡಿಸಿರುವ ದಂಡನಾ ಕ್ರಮಗಳಿಗೆ ವಿರುದ್ಧವಾಗಿರುತ್ತದೆ. ಈ ಪ್ರಕರಣದಲ್ಲಿ ಕು.ಕಾವ್ಯಶ್ರೀ ಹೆಚ್.ಎನ್ ರವರು ನಿರ್ದೋಷಿಯೆಂದಾಗಿದ್ದಲ್ಲಿ, ವಿಶ್ವವಿದ್ಯಾನಿಲಯವು ತನಿಖಾ ತಂಡವೊಂದನ್ನು ರಚಿಸಿ ವರದಿ ತರಿಸಿಕೊಂಡು, ನಂತರಕ್ರಮ ತೆಗೆದುಕೊಳ್ಳಬಹುದಾಗಿತ್ತು. ಒಂದು ವೇಳೆ ಡಾ.ಚಂದ್ರಾಜುರವರು ದೋಷಿಯೆಂದಾಗಿದ್ದಲ್ಲಿ ಸದರಿಯವರ ವಿರುದ್ಧ ವಿಶ್ವವಿದ್ಯಾನಿಲಯದ ವರ್ಗೀಕರಣ, ನಿಯಂತ್ರಣ ಮತ್ತು ಅಪೀಲು ನಿಯಮಗಳನ್ವಯ ಆರೋಪ ಪಟ್ಟಿ ತಯಾರಿಸಿ, ಇಲಾಖಾ ವಿಚಾರಣೆ ನಡೆಸಿ ಆರೋಪಗಳು ಸಾಬೀತಾಗಿದ್ದಲ್ಲಿನಿಯಮಗಳನ್ವಯ ದಂಡನಾ ಕ್ರಮಗಳನ್ನು ಕೈಗೊಳ್ಳಬಹುದಾಗಿತ್ತು. ಆದರೆ ವಿಶ್ವವಿದ್ಯಾನಿಲಯವು ಇದಾವುದೇ ಕ್ರಮಗಳನ್ನು ಅನುಸರಿಸದೆಯೇ ವಿಶ್ವವಿದ್ಯಾನಿಲಯದ ನಿಧಿಯಿಂದ ನಿಯಮ ಬಾಹಿರವಾಗಿ ತಾತ್ಕಾಲಿಕ ನೌಕರರಿಗೆ ಅವರು ಕೆಲಸ ಮಾಡದ ಅವಧಿಗೆ ರೂ.2,20,430/-ಗಳನ್ನು ಪಾವತಿಸಿರುವುದರಿಂದ ವಿಶ್ವವಿದ್ಯಾನಿಲಯಕ್ಕೆ ಅನಗತ್ಯ ಆರ್ಥಿಕ ನಷ್ಟ ವುಂಟಾಗಿರುತ್ತದೆ. ನಿಯಮಗಳನ್ನು ಪರಿಶೀಲಿಸದೆಯೇ ಅಸಮಂಜಸ ಆದೇಶಗಳನ್ನು ಹೊರಡಿಸಿ ಈ ನಷ್ಟಕ್ಕೆ ಕಾರಣರಾದ ಅಧಿಕಾರಿ, ನೌಕರರಿಂದ ಸದರಿ ಮೊಬಲಗು **ರೂ.2,20,430/-ಗಳನ್ನು ವಸೂಲಿಸಿ** ವಿಶ್ವವಿದ್ಯಾನಿಲಯದ ಖಾತೆಗೆ ಜಮೆ ಮಾಡಲು ಸೂಚಿಸಿದೆ. | |
| **8.12. ಸರ್ಕಾರದ ಆದೇಶಗಳು, ವಿಶ್ವವಿದ್ಯಾನಿಲಯದ ಅಧಿನಿಯಮ, ನಿಯಮ ಮತ್ತು ಪರಿನಿಯಮಗಳನ್ನು ಉಲ್ಲಂಘಿಸಿ, ನಿವೃತ್ತದಾರರಿಗೆ ಹಳೆಯ ಪಿಂಚಣಿ ಯೋಜನೆಯನ್ನು ಜಾರಿಗೊಳಿಸಿರುವುದು :**<br><br>ಶ್ರೀ ಬೀರೇಗೌಡ, ದ್ವಿತೀಯ ದರ್ಜೆ ಗುಮಾಸ್ತರು, ಪರೀಕ್ಷಾ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರು ದಿನಾಂಕ:31.07.2018 ರಂದು ವಯೋ ನಿವೃತ್ತಿ ಹೊಂದಿರುತ್ತಾರೆ. ಇವರಿಗೆ ವಿಶ್ವವಿದ್ಯಾನಿಲಯದ ಆದೇಶ ಸಂಖ್ಯೆ:ಹಶಾ5/ನಿವೃತ್ತಿ/34/7094/2018-19, ದಿನಾಂಕ:05.02.2019ರ ಅನ್ವಯ ರೂ.8500/-ಗಳ ಪಿಂಚಣಿಯನ್ನು ಮಂಜೂರು ಮಾಡಲಾಗಿರುತ್ತದೆ. | ಪ್ರಸ್ಥಾವಿತ ಕಂಡಿಕೆಯಲ್ಲಿನ ವಿಷಯಕ್ಕೆ ಸಂಬಂಧಿಸಿದಂತೆ ವಿಶ್ವವಿದ್ಯಾನಿಲಯದ ಪರೀಕ್ಷಾ ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಶ್ರೀ ಬೀರೇಗೌಡ, ದ್ವಿತೀಯ ದರ್ಜೆ ಗುಮಾಸ್ತರು, ಪರೀಕ್ಷಾ ವಿಭಾಗ, ಇವರಿಗೆ ವಯೋ ನಿವೃತ್ತಿಯ ಸಂದರ್ಭದಲ್ಲಿ ಪಾವತಿಸಲಾಗಿರುವ ನಿವೃತ್ತಿ ಉಪದಾನ ರೂ.193550 ಹಾಗೂ ಪರಿವರ್ತಿತ ಪಿಂಚಣಿ ಮೊತ್ತ ರೂ.333501/- ಒಟ್ಟು 527051/- ಮತ್ತು ಪಿಂಚಣಿ ಮೊತ್ತ ರೂ.8500/- |

ಅಲ್ಲದೆ ಪರಿವರ್ತಿತ ಪಿಂಚಣಿ ಮೊತ್ತ ರೂ.3,33,501/–ಗಳು, ನಿವೃತ್ತಿ ಉಪದಾನ ರೂ.1,93,550/–ಗಳು, ಒಟ್ಟು ರೂ.5,27,051/– ಗಳನ್ನು ಧನಾದೇಶ ಸಂಖ್ಯೆ:ಜಿ.ಆರ್.ಎ/955784,ದಿನಾಂಕ:07.02.2019ರ ಮೂಲಕ ಪಾವತಿಸಲಾಗಿರುತ್ತದೆ. ಈ ವಿಷಯದಲ್ಲಿ ಈ ಕೆಳಕಂಡ ನ್ಯೂನತೆಗಳನ್ನು ಗಮನಿಸಲಾಗಿರುತ್ತದೆ.

- ವಿಶ್ವವಿದ್ಯಾನಿಲಯದ ಆದೇಶ ಸಂಖ್ಯೆ:ET–1/355(01–35)/2003–04 ದಿನಾಂಕ:01.08.2006 ರಲ್ಲಿ ಸದರಿ ನೌಕರರು ದಿನಾಂಕ:23.07.1994 ರಿಂದ ದಿನಾಂಕ:22.07.2004ರವರೆಗೆ 10 ವರ್ಷಗಳ ಕಾಲ ತಾತ್ಕಾಲಿಕ ಸಿಬ್ಬಂದಿಯಾಗಿ ಕಾರ್ಯ ನಿರ್ವಹಿಸಿರುವುದನ್ನು ಪರಿಗಣಿಸಿ, ದಿನಾಂಕ:23.07.2004 ರಿಂದ ಪೂರ್ವಾನ್ವಯವಾಗಿ ಜಾರಿಗೆ ಬರುವಂತೆ ಸೇವಾ ಸೌಲಭ್ಯ ನೀಡಲು ಆದೇಶಿಸಲಾಗಿರುತ್ತದೆ. ಆದರೆ ಈ ಆದೇಶವನ್ನು ದಿನಾಂಕ:01–04–2006ರಿಂದ ನೂತನ ಪಿಂಚಣಿ ಯೋಜನೆ ಜಾರಿಗೆ ಬಂದ ನಂತರ ಹೊರಡಿಸಲಾಗಿರುತ್ತದೆ.

- ಶ್ರೀ ಬೀರೇಗೌಡರವರು ದಿನಾಂಕ:01–08–2006ರಂದು ಖಾಯಂ ಹುದ್ದೆಯಲ್ಲಿ ಕರ್ತವ್ಯಕ್ಕೆ ವರದಿ ಮಾಡಿಕೊಂಡಿದ್ದು, ಆ ದಿನದಿಂದ ಮಾತ್ರ ಸೇವಾ ಪುಸ್ತಕವನ್ನು ನಿರ್ವಹಿಸಬೇಕಾಗಿರುತ್ತದೆ. ಆದರೆ ತಾತ್ಕಾಲಿಕ ನೌಕರರಾಗಿದ್ದ ಅವಧಿಯ ಮಾಹಿತಿಗಳನ್ನೂ ಕೂಡ ನಿಯಮ ಬಾಹಿರವಾಗಿ ಸೇವಾಪುಸ್ತಕದಲ್ಲಿ ದಾಖಲಿಸಲಾಗಿರುತ್ತದೆ.

- ತಾತ್ಕಾಲಿಕ ನೌಕರರನ್ನು ಪ್ರತೀ ಆರು ತಿಂಗಳಿಗೊಮ್ಮೆ ಬಿಡುಗಡೆ ಮಾಡಿ, ಹೊಸದಾಗಿ ನೇಮಕಾತಿ ಮಾಡಿಕೊಳ್ಳು ಪದ್ದತಿಯನ್ನು ವಿಶ್ವವಿದ್ಯಾನಿಲಯವು ಅನುಸರಿಸುತ್ತಿದ್ದು ಬೀರೇಗೌಡರವರನ್ನು ತಾತ್ಕಾಲಿಕವಾಗಿ ನೇಮಕಾತಿ ಮಾಡಿರುವ ಆದೇಶವನ್ನು ಅವರ ಸೇವಾ ಪುಸ್ತಕದಲ್ಲಿ ದಾಖಲಿಸಿದ್ದು, ಆದೇಶದ ದಿನಾಂಕ:15.07.2005 ಇದ್ದು, ಸದರಿಯವರು ಕರ್ತವ್ಯಕ್ಕೆ ವರದಿ ಮಾಡಿಕೊಂಡ ದಿನಾಂಕ:04.07.2005 ಆಗಿರುತ್ತದೆ. ಹೀಗಾಗಿ ನೇಮಕಾತಿ ಆದೇಶ ಹೊರಡಿಸಿದ ದಿನಾಂಕಕ್ಕೆ 12 ದಿನ ಮುಂಚೆಯೇ ಶ್ರೀ ಬೀರೇಗೌಡರು ಕರ್ತವ್ಯಕ್ಕೆ ಹಾಜರಾದುದಾಗಿ ದಾಖಲಿಸಲಾಗಿರುತ್ತದೆ.

- ಸದರಿ ನೌಕರರು ನಿರಂತರವಾಗಿ 10 ವರ್ಷಗಳ ಕಾಲ ಸೇವೆ ಸಲ್ಲಿಸಿರುವುದಕ್ಕೆ ಸಮರ್ಥನೆಯಾಗಿ ಸೇವಾ ಪುಸ್ತಕದಲ್ಲಿ ಯಾವುದೇ ದಾಖಲೆ ಇರುವುದಿಲ್ಲ. ಶ್ರೀಯುತರನ್ನು ಸತತ 10 ವರ್ಷಗಳ ಸೇವೆ ನಂತರ ವಿಶ್ವವಿದ್ಯಾನಿಲಯಕ್ಕೆ ಮಂಜೂರಾದ ಖಾಲಿ ಹುದ್ದೆಗೆ ಎದುರಾಗಿ ಖಾಯಂ ಮಾಡಿರುವುದಾಗಿ ವಿಶ್ವವಿದ್ಯಾನಿಲಯದ ಆದೇಶದಲ್ಲಿ ಹೇಳಿದ್ದು, 10 ವರ್ಷಗಳ ಕಾಲ ಸತತವಾಗಿ ಕಾರ್ಯ ನಿರ್ವಹಿಸಿರುದಕ್ಕೆ ಸೂಕ್ತ ದಾಖಲೆಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲ. ಅನ್ಯ ಇಲಾಖಾ ಉದ್ಯೋಗಿಗಳಿಗೆ ಸರ್ವೋಚ್ಛ ನ್ಯಾಯಾಲಯ ನೀಡಿರುವ ತೀರ್ಪನ್ನೇ ವಿಶ್ವವಿದ್ಯಾನಿಲಯಕ್ಕೆ ಅಳವಡಿಸಿಕೊಳ್ಳಲು ಸಿಂಡಿಕೇಟ್ ಸಭೆಯಲ್ಲಿ ನಿರ್ಣಯಿಸಿ, ಜಾರಿಗೊಳಿಸಲಾಗಿರುತ್ತದೆ. ಆದರೆ ಈ ನಿರ್ಣಯವನ್ನು ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಹಳೆಯ ಪಿಂಚಣಿ ಯೋಜನೆ ಅಡಿಯಲ್ಲಿ ನಿಗದಿಪಡಿಸಿರುವುದನ್ನು ಆಕ್ಷೇಪಿಸಿ ಪಾವತಿಸಿರುವ ಮೊತ್ತ ರೂ.5,27,051/–ಗಳನ್ನು ಸಂಬಂಧಿಸಿದ ನೌಕರರಿಂದ ವಸೂಲಾತಿಗೆ ಸೂಚಿಸಿದೆ

ಅದರೆ ಸದರಿ ನೌಕರರನ್ನು ಹಳೆಯ ಪಿಂಚಣಿ ವ್ಯಾಪ್ತಿಗೆ ಪರಿಗಣಿಸಿ ಪಾವತಿಸಿರುವ ನಿವೃತ್ತಿ ಉಪದಾನ ಮತ್ತು ಪರಿವರ್ತಿತ ಪಿಂಚಣಿಗೆ ವಿವರಣೆ ಈ ರೀತಿಯಿದೆ

1. ವಿಶ್ವವಿದ್ಯಾನಿಲಯದ ಆದೇಶ ಸಂಖ್ಯೆ:ET–1/355(01–35)/2003–04 ದಿನಾಂಕ:01.08.2006 ರಲ್ಲಿ ಹೊರಡಿಸಿದ್ದ ಅಂದರೆ 01.04.2006 ನಂತರ ಅದೇಶವನ್ನು ವಿಶ್ವವಿದ್ಯಾನಿಲಯದಿಂದ ಹೊರಡಿಸಿರುವ ಹಂತದಲ್ಲಿ ಆಡಳಿತಾತ್ಮಕ ವಿಳಂಬವೇ ಆಗಿರುತ್ತದೆ. ಈ ಕಾರಣದಿಂದ ಸದರಿ ನೌಕರರನ್ನು ಹಳೇ ಪಿಂಚಣಿ ಯೋಜನೆ ವ್ಯಾಪ್ತಿಯಿಂದ ಹೊರಗಿಡಲು/ಕೈಬಿಡಲು ಬರುವುದಿಲ್ಲ.
2. ಸೇವಾ ವಹಿಯ ನಿರ್ವಹಣೆಯಲ್ಲಿನ ಲೋಪವಾಗಿರುತ್ತದೆ.

ಸದರಿ ನೌಕರರನ್ನು ಹಳೇ ಪಿಂಚಣಿ ವ್ಯಾಪ್ತಿಗೆ ಸೇರ್ಪಡೆ ಮಾಡಿರುವ ಕಾರಣಗಳ ವಿವರ ಈ ರೀತಿಯಿದೆ

1. ಈ ಪತ್ರದೊಂದಿಗೆ ಅಡಕಗೊಳಿಸಿರುವ 35 ಸಂಖ್ಯೆ ಸಿಬ್ಬಂದಿಯ ಕಛೇರಿ ಅದೇಶದ ಪ್ರತಿ (ಕ್ರಮ ಸಂಖ್ಯೆ 12 ಸೇವೆಗೆ ಸೇರಿದ ದಿನಾಂಕ:23.07.1994 10ವರ್ಷಗಳನ್ನು ಪೂರೈಸಿದ ದಿನಾಂಕ:22.07.2004) ಅದ ಕಾರಣ ಇವರನ್ನು ದಿನಾಂಕ:23.07.2004 ರಿಂದ ಖಾಯಂ ಹುದ್ದೆಗೆ ಅರ್ಹರಂದು ಪರಿಗಣಿಸಿ ಅದೇಶ ಹೊರಡಿಸಲಾಗಿದೆ (ಅದೇಶ ಸಂಖ್ಯೆ:ಇಟಿ01/355/2003–04 ದಿನಾಂಕ:05.06.2014
2. ದಿನಾಂಕ:10.01.2013ರ ಕರ್ನಾಟಕ ಅಪಲೇಟ್ ಟ್ರಿಬ್ಯೂನಲ್ ನ್ಯಾಯಾಲಯದ 10.02.2013ರ ಪ್ರತಿ (ಪ್ರತಿ ಅಡಕಗೊಳಿಸಿದೆ)
3. ದಿನಾಂಕ:03.07..2013ರ ಉಚ್ಛನ್ಯಾಯಾಲಯ ಬೆಂಗಳೂರು ರವರ ಅದೇಶ (ಪ್ರತಿ ಅಡಕಗೊಳಿಸಿದೆ
4. ದಿನಾಂಕ:25.11.2013ರ ಸರ್ವೋಚ್ಛನ್ಯಾಯಾಲಯದ ತೀರ್ಪಿನ ಹಿನ್ನಲೆಯಲ್ಲಿ ವಿಶ್ವವಿದ್ಯಾನಿಲಯದ 35 ನೌಕರರ ದಿನಾಂಕ:11.09.2013ರ ಮನವಿಯನ್ನು ಸಮಗ್ರವಾಗಿ ಪರಿಗಣಿಸಿ ಅದೇಶ ಸಂಖ್ಯೆ:ಇಟಿ01/355/2003–04 ದಿನಾಂಕ:05.06.2014 ರ ಅನ್ವಯ ಸದರಿ ನೌಕರರನ್ನು ಒಳಗೊಂಡಂತೆ 34 ಜನರ ಪಟ್ಟಿಯನ್ನು ಕುಲಸಚಿವರ ಅದೇಶದೊಂದಿಗೆ ಹೊರಡಿಸಲಾಗಿದೆ. (ಅದೇಶದ ಪ್ರತಿ ಅಡಕಗೊಳಿಸಿದೆ)

ಈ ಪ್ರಕರಣದಲ್ಲಿ ನೌಕರರ ಸೇವೆಗೆ ಸೇರಿ ದಿನಾಂಕ:23.07.1994 ಆಗಿದ್ದು ಸದರಿಯವರ 10 ವರ್ಷಗಳ ಸೇವೆಯ 22.07.2004 ಕ್ಕೆ ಪೂರ್ಣವಾಗಿರುತ್ತದೆ.

ಆದ ಕಾರಣ ದಿನಾಂಕ:23.07.2004 ರಿಂದಲೇ ಖಾಯಂ ಆಗಿರುವ ನೌಕರರು ಹಳೆ ಪಿಂಚಣಿ

| | |
|---|---|
| ಅಧಿನಿಯಮ–2000ರ ಪ್ರಕರಣ–41ರ ಅನುಸಾರ ಪರಿನಿಯಮಗೊಳಿಸಿ, ಕುಲಾಧಿಪತಿಯವರಿಂದ ಅನುಮೋದನೆ ಪಡೆದಿರುವುದಿಲ್ಲ. ಹೀಗೆ ಮಾನ್ಯ ಕುಲಾಧಿಪತಿಗಳಿಂದ ಅನುಮೋದನೆ ಪಡೆಯದೆಯೇ ಕೇವಲ ಸಿಂಡಿಕೇಟ್ ನಿರ್ಣಯ ಆಧರಿಸಿ ಸಿಬ್ಬಂದಿಗಳನ್ನು ಖಾಯಂಗೊಳಿಸಿರುವುದು ನಿಯಮಗಳ ಉಲ್ಲಂಘನೆಯಾಗಿರುತ್ತದೆ.<br>• ದಿನಾಂಕ:01.04.2006 ರಿಂದ ಅನ್ವಯವಾಗುವಂತೆ ನೂತನ ಪಿಂಚಣಿ ಯೋಜನೆ ಅನುಷ್ಠಾನಗೊಂಡ ನಂತರ ಅಂದರೆ ದಿನಾಂಕ:01.08.2006 ರ ವಿಶ್ವವಿದ್ಯಾನಿಲಯದ ಆದೇಶದಲ್ಲಿ ತಾತ್ಕಾಲಿಕ ನೌಕರರನ್ನು ಖಾಯಂಗೊಳಿಸಿರುವುದು ಮತ್ತು ದಿನಾಂಕ:05.06.2014 ರಲ್ಲಿ ಹಳೆಯ ಪಿಂಚಣಿ ಯೋಜನೆಯ ಸೌಲಭ್ಯ ನೀಡಿರುವುದು ಮತ್ತು ಸಿಂಡಿಕೇಟ್ ಆದೇಶಗಳನ್ನು ಪರಿನಿಯಮಗಳನ್ನಾಗಿಸಿ, ಮಾನ್ಯ ಕುಲಾಧಿಪತಿಯವರಿಂದ ಅನುಮೋದನೆ ಪಡೆಯದೆಯೇ ಇವರನ್ನು ಹಳೆಯ ಪಿಂಚಣಿ ಯೋಜನೆಗೆ ಪರಿಗಣಿಸಲಾಗಿರುತ್ತದೆ.<br>• ಮೇಲ್ಕಂಡ ಎಲ್ಲಾ ನ್ಯೂನ್ಯತೆಗಳ ಬಗ್ಗೆ ಸೂಕ್ತ ಸ್ಪಷ್ಟೀಕರಣವನ್ನು ಪೂರಕ ದಾಖಲೆಗಳೊಡನೆ ಹಾಜರುಪಡಿಸುವಂತೆ ವಿಚಾರಣಾ ಪತ್ರ ಸಂಖ್ಯೆ:165/2020–21,ದಿನಾಂಕ:10.06.2020ನ್ನು ನೀಡಿದ್ದರೂ ಸಹ ಯಾವುದೇ ವಿವರಣೆ ಹಾಗೂ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ.<br>ಹೀಗಾಗಿ ಪಾವತಿಸಲಾಗಿರುವ ಪರಿವರ್ತಿತ ಪಿಂಚಣಿ ಹಾಗೂ ನಿವೃತ್ತಿ ಉಪದಾನದ ಮೊತ್ತ ರೂ.5,27,051/– ಗಳನ್ನು ಮತ್ತು ಈ ವರೆಗೆ ಸದರಿಯವರಿಗೆ ಪಾವತಿಸಿರುವ ಪಿಂಚಣಿಯ ಮೊತ್ತವನ್ನು ಸಂಬಂಧಿಸಿದ ಅಧಿಕಾರಿಗಳಿಂದ ವಸೂಲಿಸಲು ಸೂಚಿಸಿದೆ. | ಯೋಜನೆ ವ್ಯಾಪ್ತಿಗೆ ಒಳಪಡುವಂತೆ, ಸದರಿ ನೌಕರರನ್ನು ಪರಿಗಣಿಸಿ, ನಿವೃತ್ತಿ ಉಪಾದಾನ ಮತ್ತು ಪರಿವರ್ತಿತ ಪಿಂಚಣಿ ಮೊತ್ತ ಪಾವತಿಗೆ ಕ್ರಮವಹಿಸಲಾಗಿದೆ ಎಂಬ ಅಂಶವನ್ನು ಲೆಕ್ಕಪರಿಶೋಧನೆ ಅವಗಾಹನೆಗೆ ತರಲಾಗಿದೆ ಮತ್ತು ಈ ಸಂಬಂಧದ ವಸೂಲಾತಿ ಪ್ರಸ್ಥಾವನೆ ರೂ.5,27,051/–ಕ್ಕೆ ಬಿಡಲು ಕೋರಲಾಗಿದೆ. |
| **8.13. ನೂತನ ಪಿಂಚಣಿ ಯೋಜನೆಗೆ ಒಳಪಡುವ ನೌಕರರ ಪಿಂಚಣಿ ವಂತಿಕೆಯನ್ನು ಎನ್.ಪಿ.ಎಸ್ ಖಾತೆಗೆ ಜಮೆ ಮಾಡಿರುವ ವಿವರಗಳನ್ನು ಹಾಜರುಪಡಿಸದಿರುವ ಬಗ್ಗೆ :**<br>2018–19ನೇ ಸಾಲಿನಲ್ಲಿನೂತನ ಪಿಂಚಣಿ ಯೋಜನೆಯಡಿಯಲ್ಲಿ ನೇಮಕ ಹೊಂದಿರುವ ಉದ್ಯೋಗಿಗಳಿಂದ ಎನ್.ಪಿ.ಎಸ್ ಮೊತ್ತ ರೂ.1,50,25,009/–ಗಳನ್ನು ಕಟಾಯಿಸಲಾಗಿರುವುದು ಲೆಕ್ಕಪರಿಶೋಧನೆಯಲ್ಲಿ ಕಂಡು ಬಂದಿರುತ್ತದೆ. ಉದ್ಯೋಗದಾತರು ಮತ್ತು ಉದ್ಯೋಗಳಿಂದ ಕಟಾಯಿಸಲಾದ ಮೊತ್ತವನ್ನು ಸರ್ಕಾರಿ ನಿಯಮಗಳ ಪ್ರಕಾರ ಸಂಬಂಧಿಸಿದ ಎನ್.ಪಿ.ಎಸ್ ನಿಧಿಗಳಲ್ಲಿ ಸರ್ಕಾರಿಆದೇಶ ಸಂಖ್ಯೆ:FD(SPL)/04/PET/2005,ಬೆಂಗಳೂರು ದಿನಾಂಕ:31.03.2006 ರನ್ವಯ ಹೂಡಿಕೆ ಮಾಡಬೇಕಾಗಿರುತ್ತದೆ. ಆದರೆ ಸದರಿ ಸರ್ಕಾರದ ಆದೇಶದನ್ವಯ ಹೂಡಿಕೆ ಮಾಡಿರುವ ವಿವರಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ಲೆಕ್ಕಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ:190/11.06.2020ರಲ್ಲಿ ಕೋರಲಾಗಿದ್ದರೂ ಹೂಡಿಕೆ ವಿವರಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲ. ಇದರಿಂದಾಗಿ ಉದ್ಯೋಗಿಗಳ ವೇತನದಲ್ಲಿ ಕಟಾಯಿಸಲಾದ ಮೊತ್ತವು ಉದ್ಯೋಗಿಗಳ ಎನ್.ಪಿ.ಎಸ್ಖಾತೆಗೆ ಜಮೆಯಾಗಿದೆಯೇ? ಇಲ್ಲವೆ? ಎಂಬುದನ್ನು ಪರಿಶೀಲಿಸಲು | ಪ್ರಸ್ಥಾವಿತ ಕಂಡಿಕೆಯಲ್ಲಿನ ವಿಷಯಕ್ಕೆ ಸಂಬಂಧಿಸಿದಂತೆ ರಾಷ್ಟ್ರೀಯ ಪಿಂಚಣಿ ಯೋಜನೆಯ (ಎನ್‌ಪಿಎಸ್) ವ್ಯಾಪ್ತಿಗೆ ಬರುವ ಸಿಬ್ಬಂಧಿಗಳ ಪಿಂಚಣಿ ವಂತಿಗೆಯ ಮೊತ್ತವನ್ನು ಎನ್.ಪಿ.ಎಸ್ ಖಾತೆಗೆ ಹೊಂದಾಣಿಕೆ ಅಗುವಂತೆ ಅಕ್ಸಿಸ್‌ಬ್ಯಾಂಕ್ ಮುಂಬೈ ಶಾಖೆ ಆರ್.ಟಿ.ಜಿ.ಎಸ್ ಮೂಲಕ ಜಮಾ ಮಾಡಿರುವ ವಿವರವನ್ನು (ಪಟ್ಟಿಯನ್ನು) ಅಡಕಗೊಳಿಸಿದೆ<br><br>ಅದರ ಅನ್ವಯ 2018–19ನೇ ಸಾಲಿನಲ್ಲಿ ಜಮಾ ಮಾಡಿರುವ ಪಿಂಚಣಿ ವಂತಿಗೆ ಮೊತ್ತ ರೂ.2,71,33,412/– ಆಗಿರುತ್ತದೆ.<br>ಈ ಮೊತ್ತವು ಲೆಕ್ಕಪರಿಶೋಧನೆಯಲ್ಲಿ ಸೂಚಿತವಾದ ಮೊತ್ತಕ್ಕಿಂತ ಹೆಚ್ಚಾಗಿದ್ದು ಎನ್.ಪಿ.ಎಸ್ ಟ್ರಸ್ಟ್ ಖಾತೆಗೆ ಜಮೆಯಾಗಿರುತ್ತದೆ. |

| | |
|---|---|
| ಸಾಧ್ಯವಾಗಿರುವುದಿಲ್ಲ. ಆದ್ದರಿಂದ ಹೂಡಿಕೆ ವಿವರಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವವರೆಗೆ ಉದ್ಯೋಗಿಗಳಿಂದ ಕಟ್ಟಾಯಿಸಲಾದ ಎನ್.ಪಿ.ಎಸ್ ಮೊತ್ತ **ರೂ.1,50,25,009/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.** | ಆದ ಕಾರಣ ಪ್ರಸ್ತಾವಿತ ಕಂಡಿಕೆಯ ಆಕ್ಷೇಪಿತ ಮೊತ್ತವನ್ನು ಕೈ ಬಿಡಲು ಕೋರಿದೆ. |
| **8.14. ವಿಶ್ವವಿದ್ಯಾನಿಲಯದ ವಿವಿಧ ಭವನಗಳು, ಕಟ್ಟಡಗಳು ಹಾಗೂ ಸಭಾಂಗಣಗಳ ಬಾಡಿಗೆಯಲ್ಲಿ ಮತ್ತು ಈಜು ಕೊಳದ ಟಿಕೆಟ್‌ಗಳಲ್ಲಿ ಜಿ.ಎಸ್.ಟಿ ಸಂಗ್ರಹಿಸಿ ಸರ್ಕಾರದ ಲೆಕ್ಕಕ್ಕೆ ಜಮೆ ಮಾಡದಿರುವುದು :**<br><br>2018–19ನೇ ಸಾಲಿನಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ವಿವಿಧ ಭವನಗಳು, ಕಟ್ಟಡಗಳು ಹಾಗೂ ಸಭಾಂಗಣಗಳಿಂದ ವಿಶ್ವವಿದ್ಯಾನಿಲಯದ ಆದೇಶ ಸಂಖ್ಯೆ:ಜಿ.ಎಲ್1/726/2012–13 ದಿನಾಂಕ:29.08.2015 ರಲ್ಲಿ ನಿಗದಿಪಡಿಸಿರುವ ದರಗಳನ್ವಯ ಒಟ್ಟು ರೂ.63,89,749/–ಗಳ ಬಾಡಿಗೆಯನ್ನು ಪಡೆಯಲಾಗಿದೆ. ವಿವರಗಳನ್ನು **ಅನುಬಂಧ–35**ರಲ್ಲಿ ನೀಡಲಾಗಿದೆ. ಅಲ್ಲದೆ ವಿಶ್ವವಿದ್ಯಾನಿಲಯದ ಈಜುಕೊಳದಿಂದ 2018–19ನೇ ಸಾಲಿನಲ್ಲಿ ಟಿಕೇಟ್ ಹಾಗೂ ಪಾಸ್‌ಗಳ ಮಾರಾಟ ಮತ್ತು ಈಜು ಶಿಬಿರದಿಂದ ರೂ.49,65,560/–ಗಳ ಮೊತ್ತವನ್ನು ಸ್ವೀಕರಿಸಲಾಗಿದೆ. ಮೇಲಿನ ಮೊತ್ತಗಳಿಗೆ ಶೇ.18ರ ದರದಲ್ಲಿ ಕ್ರಮವಾಗಿ ರೂ.11,50,155/– ಹಾಗೂ ರೂ.8,93,800/–ಗಳ ಜಿ.ಎಸ್.ಟಿಯನ್ನು ಸಂಗ್ರಹಿಸಿ ಸರ್ಕಾರದ ಲೆಕ್ಕಕ್ಕೆ ಜಮೆ ಮಾಡಬೇಕಾಗಿತ್ತು. ಆದರೆ ಈ ಕ್ರಮ ವಹಿಸದಿರುವುದನ್ನು ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಗಿದೆ. ಈ ಬಗ್ಗೆ ಸ್ಪಷ್ಟೀಕರಣ ನೀಡಲು ವಿಚಾರಣಾ ಪತ್ರ ಸಂಖ್ಯೆ:29/2020–21, ದಿನಾಂಕ:12.06.2020ರಲ್ಲಿ ಕೋರಲಾಗಿದ್ದರೂ, ವಿಶ್ವವಿದ್ಯಾನಿಲಯದವರು ಯಾವುದೇ ಉತ್ತರ ನೀಡಿರುವುದಿಲ್ಲ. ಆದ್ದರಿಂದ ಜಿ.ಎಸ್.ಟಿ ತೆರಿಗೆ ಮೊತ್ತ ರೂ.11,50,155/– ಹಾಗೂ ರೂ.8,93,800/–, ಒಟ್ಟು **ರೂ.20,43,955/–ಗಳನ್ನು ಸಂಬಂಧಪಟ್ಟವರಿಂದ ವಸೂಲಿಸಿ** ಸರ್ಕಾರದ ಲೆಕ್ಕಕ್ಕೆ ಜಮೆ ಮಾಡಲು ಸೂಚಿಸಿದೆ. | ಪ್ರಸ್ತಾವಿತ ಕಂಡಿಕೆಯಲ್ಲಿ ವಿಶ್ವವಿದ್ಯಾನಿಲಯದ ವಿವಿಧ ಭವನಗಳು, ಕಟ್ಟಡಗಳನ್ನು ವಿಶ್ವವಿದ್ಯಾನಿಲಯವು ನಿಗಧಿ ಪಡಿಸಿರುವ ದರದಲ್ಲಿ ಸಾರ್ವಜನಿಕ ಸಂಘ ಸಂಸ್ಥೆಗಳಿಗೆ ಕಾರ್ಯಕ್ರಮಗಳ ಸಲುವಾಗಿ ನೀಡಿರುವ ಪ್ರಕರಣಗಳಲ್ಲಿ ಈ ಸಂಬಂಧ ವಿಶ್ವವಿದ್ಯಾನಿಲಯದಿಂದ ನಿರ್ಧರಿತವಾಗಿರುವ ಬಾಡಿಗೆಯನ್ನು ವಸೂಲಿಸುವ ಸಂಧರ್ಭಗಳಲ್ಲಿ ಕಟ್ಟಡಗಳ ಬಾಡಿಗೆ ದರದ ಮೇಲೆ ಶೇ.18 ದರದಲ್ಲಿ ಕಾರ್ಯಕ್ರಮ ಪ್ರಾಯೋಜಕರಿಂದ ಜಿ.ಎಸ್,ಟಿ ಮೊತ್ತವನ್ನು ವಸೂಲಿಸಿಲ್ಲ ಎಂಬ ಅಂಶವನ್ನು ಉಲ್ಲೇಖಿಸಿ ಅನುಬಂಧ–35ರಲ್ಲಿ ಸೂಚಿಸಿರುವಂತೆ ಒಟ್ಟು 77 ಪ್ರಕರಣಗಳಿಂದ ಒಟ್ಟು ರೂ.11,50,155/–ವಸೂಲಾತಿಗೆ ಸೂಚಿಸಲಾಗಿದೆ.<br><br>ಈ ಸಂಬಂಧಿದ ಮೊತ್ತವು ಮುಖ್ಯ ಕಮೀಷನರ್, ಸರಕು ಮತ್ತು ಸೇವಾ ತೆರಿಗೆ ಮತ್ತು ಕೇಂದ್ರ ಸುಂಕ ನಿರ್ಧರಣೆ ಕಛೇರಿ, ಸಿದ್ಧಾರ್ಥನಗರ, ಮೈಸೂರು. ರವರ ಕಛೇರಿಯ ವಿಚಕ್ಷಣಾದಳ ಮೈಸೂರು ರವರು ವಿಶ್ವವಿದ್ಯಾನಿಲಯದ ವಹಿವಾಟುಗಳು (ಪಾವತಿ ಬಿಲ್‌ಗಳಲ್ಲಿ) ನಿಗಧಿತವಾಗಿ ಜಿ.ಎಸ್,ಟಿ ಮೊತ್ತವನ್ನು ಕಟಾಯಿಸಲಾಗುತ್ತಿದ್ದೆಯೇ, ಎಂಬುವರ ಸಂಬಂಧ ಪರಿಶೀಲನೆ ನೆಡೆಸಿ, ಪರಿಶೀಲನೆ ಸಂದರ್ಭದಲ್ಲಿ ವಿಶ್ವವಿದ್ಯಾನಿಲಯದಿಂದ 2018–19ನೇ ಸಾಲಿನಲ್ಲಿ ಪಾವತಿ ಬಿಲ್‌ಗಳಲ್ಲಿ ಸರಬರಾಜುದಾರರಿಂದ ಮತ್ತು ಸ್ವೀಕೃತಿ ಬಿಲ್‌ಗಳಲ್ಲಿ ಪಾವತಿದಾರರಿಂದ, ಜಿ,ಎಸ್,ಟಿಯನ್ನು ಕಟಾವಣೆಮಾಡಿ ಜಿ,ಎಸ್,ಟಿ ಲೆಕ್ಕಶೀರ್ಷಿಕೆಗೆ ಜಮಾ ಮಾಡದೇ ಇರುವ ಬಾಬ್ತು ಎಂದು ಸೂಚಿತವಾಗಿರುವ ಮೊತ್ತ ರೂ.13,16,776/– ಗಳನ್ನು ವಿಶ್ವವಿದ್ಯಾನಿಲಯವು ಜಿಎಸ್‌ಟಿ ಕಛೇರಿಯವರು ಸೂಚನೆಯನ್ವಯ<br>1. ಜಿ,ಎಸ್,ಟಿ ಬಾಬ್ತು ರೂ.13,16,776/–<br>2. ಜಿ,ಎಸ್,ಟಿ ಬಾಬ್ತು ಸಂದಾಯ ಮಾಡಿದ ದಿನಾಂಕದ ವರಗೆ ಬಡ್ಡಿ ಮೊತ್ತ ರೂ.2,68,584/–<br>3. ಜಿ,ಎಸ್,ಟಿ ಯನ್ನು ನಿಗಧಿತವಾದ ಅವಧಿಯಲ್ಲಿ ಪಾವತಿ ಮಾಡಿದ ಕಾರಣ ದಂಡಶುಲ್ಕ ಬಾಬ್ತು ರೂ.1,97,516/– |

ಒಟ್ಟು ರೂ.17,82,876/– ಜಿ.ಎಸ್.ಟಿ ಖಾತೆಗೆ ವಿಶ್ವವಿದ್ಯಾನಿಲಯದಿಂದ ಸಂದಾಯವಾಗಿದೆ ಎಂದು ಸೂಪರಿಟೆಂಡಂಟ್ ಕಮಿಷನರ್ ಆಫ್ ಜಿ.ಎಸ್.ಟಿ ಕಛೇರಿ ಮೈಸೂರುರವರು ತಮ್ಮ ಪ್ರತ ಸಂಖ್ಯೆ:– CNoIV/16/10/2019 HPU GST ದಿನಾಂಕ:03.06.2020 ರಲ್ಲಿ (Information of closure of proceedings)ರಲ್ಲಿ ವಿಶ್ವವಿದ್ಯಾನಿಲಯಕ್ಕೆ ಪತ್ರ ಬರೆದಿರುತ್ತಾರೆ. (ಪತ್ರದ ಪ್ರತಿ ಅಡಕಗೊಳಿಸಿದೆ)

ಈ ಮೊತ್ತದಲ್ಲಿ ಸದರಿ ಕಂಡಿಕೆಯಲ್ಲಿ ಕಟ್ಟಡಗಳ ಬಾಡಿಗೆ ಮೇಲೆ ವಸೂಲಿಸಬೇಕಾದ ಜಿ.ಎಸ್.ಟಿ (ಅನುಬಂಧ–35 ರಲ್ಲಿ ಸೂಚಿತವಾದಂತೆ ರೂ.11,50,155/–) ಸೇರ್ಪಡೆಯಾಗಿದೆ. ಎಂಬ ಅಂಶವನ್ನು ಲೆಕ್ಕಪರಿಶೋಧನೆ ಅವಗಾಹನೆಗೆ ತರಲಾಗಿದೆ.

ಮುಂದುವರೆದು ಸದರಿ ಕಂಡಿಕೆಯು ಈಜುಕೊಳಗಳ (ಟಿಕೆಟ್ ಮಾರಾಟ ಸಾಮಾನ್ಯ ಪಾಸ್) ಮತ್ತು ಈಜುಕೋಳದಿಂದ ವಸೂಲಿಸಿರುವ ಒಟ್ಟು ಮೊತ್ತ ರೂ.49,65,560/–ರಲ್ಲಿ ಜಿ.ಎಸ್.ಟಿ ಬಾಬ್ತು ರೂ.8,93,800/– ವಸೂಲಿಸಿರುವುದಿಲ್ಲ ಎಂಬ ವಿಷಯಕ್ಕೆ ಸಂಬಂಸಿದಂತೆ ವಿಶ್ವವಿದ್ಯಾನಿಲಯದ ವಿವರಣೆ ಈ ರೀತಿಯಿದೆ.

ಜಿಎಸ್‌ಟಿ On Eduecational institutions ಸರ್ಕಾರದಿಂದ ಹೊರಡಿಸಿರುವ ವಿವರಣಾ ಪತ್ರದಲ್ಲಿ Exemption entry 66 of Notification No12/CTR Date:28.07.2017ರಲ್ಲಿ ವಿವರಿಸಿರುವಂತೆ ಯಾವುದೇ ಒಂದು ವಿದ್ಯಾಸಂಸ್ಥೆಯು ತನ್ನ ವಿದ್ಯಾರ್ಥಿಗಳಿಗೆ ಒದಗಿಸುವ ಶೈಕ್ಷಣೀಕ ಸೇವೆ ಮತ್ತು ಇತರ ಸೇವೆಗಳ ವಿವರವನ್ನು ನೀಡಿದ್ದು ಅದರ ಅಡಿಯಲ್ಲಿ (ಜಿಎಸ್‌ಟಿ ಗೈಡ್‌ಲೈನ್ಸ್) ವಿಶ್ವವಿದ್ಯಾನಿಲಯದಿಂದ ಈಜುಕೊಳದ ವ್ಯವಸ್ಥೆಯನ್ನು ಹೊಂದಿದ್ದ ಪಕ್ಷದಲ್ಲಿ (ಕ್ರಮ ಸಂಖ್ಯೆ:–5) ರಲ್ಲಿ ವಿವರಿಸಿರುವಂತೆ/ಸೂಚಿಸಿರುವಂತೆ ಶೈಕ್ಷಣಿಕ ಸಂಸ್ಥೆಯ ವಿದ್ಯಾರ್ಥಿಗಳಿಗೆ ಒದಗಿಸುವ ಕರಾಟೆ, ಸಂಗೀತ, ಮತ್ತು ಈಜುಕೊಳದ ಸೇವೆಯ ಸಮಗ್ರ ಶಿಕ್ಷಣದ ಒಂದು ಅವಿಭಾಜ್ಯ ಅಂಶ ಎಂದು ಪರಿಗಣಿಸಿ ಈ ಸೇವೆಯ ಮೇಲೆ ಜಿ.ಎಸ್.ಟಿ ವಿಧಿಸುವುದರಿಂದ ವಿನಾಯಿತಿ ನೀಡಿರುವುದನ್ನು ಸ್ಪಷ್ಟಪಡಿಸಿದೆ.

ಈ ಸಂಬಂಧಿದ ಸುತ್ತೋಲೆ ಅಲ್ಲದೇ ಸದರಿ ವಿಶ್ವವಿದ್ಯಾನಿಲಯದಲ್ಲಿ ವಿದ್ಯಾರ್ಥಿಗಳಿಗೆ ಒದಗಿಸುತ್ತಿರುವ ಈಜು ತರಬೇತಿ ಮತ್ತು ವಿಶೇಷ ಈಜು ತರಬೇತಿ ಶಿಬಿರದಿಂದ ಉತ್ತಮ ಕ್ರಿಡಾಪಟುಗಳು ತಯಾರಾಗುತ್ತಿದ್ದು, ವಿಶ್ವವಿದ್ಯಾನಿಲಯಕ್ಕೆ ಈ ಸಂಬಂಧ ನೆಡೆಯುವ ರಾಜ್ಯಮಟ್ಟದ ಮತ್ತು ರಾಷ್ಟ್ರಮಟ್ಟದ ಈಜು ಸ್ಪರ್ಧೆಗಳಲ್ಲಿ ಪ್ರಶಸ್ತಿಯನ್ನು ತರುವುದರ ಮೂಲಕ ವಿಶ್ವವಿದ್ಯಾನಿಲಯದಿಂದ ಕೀರ್ತಿಯನ್ನು ಹೆಚ್ಚಿಸಿದ್ದಾರೆ ಎಂಬ ಅಂಶವನ್ನು ಲೆಕ್ಕಪರಿಶೋಧನೆ ಅವಗಾಹನೆಗೆ ತರಲಾಗಿದೆ.

ಈ ಎಲ್ಲಾ ಅಂಶಗಳನ್ನು ಸಮಗ್ರವಾಗಿ ಪರಿಗಣಿಸಿ ಈ ಸಂಬಂಧಿ ಸೂಚಿಸಿರುವ ಒಟ್ಟು ವಸೂಲಾತಿ ಮೊತ್ತ ರೂ.8,93,800/– ಮತ್ತು ಪ್ಯಾರಾ (1) ಬಾಬ್ತು ರೂ.11,50,155/– ಒಟ್ಟು ರೂ.20,43,955/– ಕೈ ಬಿಡಲು ಕೋರಿದೆ.

**8.15. ಪರೀಕ್ಷೆಗಳು ಹಾಗೂ ಉತ್ತರ ಪತ್ರಿಕೆಗಳ ಮೌಲ್ಯಮಾಪನ ಕಾರ್ಯಗಳಲ್ಲಿ ಕರ್ತವ್ಯ ನಿರ್ವಹಿಸಿದ ಯು.ಜಿ.ಸಿ/ಯು.ಜಿ.ಸಿ. ಯೇತರ (UGC/Non-UGC) ಬೋಧಕರುಗಳಿಗೆ ಪ್ರಯಾಣ ಭತ್ಯೆ, ದಿನಭತ್ಯೆ ಹಾಗೂ ಸ್ಥಳೀಯ ಭತ್ಯೆಯನ್ನು ಪಾವತಿಸಿರುವುದು:**

ಮೈಸೂರು ವಿಶ್ವವಿದ್ಯಾನಿಲಯದ ಹಣಕಾಸು ವಿಭಾಗದ 2018–19ನೇ ಸಾಲಿನ ಲೆಕ್ಕಪರಿಶೋಧನೆಗೆ ಹಾಜರುಪಡಿಸಲಾದ ಪರೀಕ್ಷಾ ಕಾರ್ಯ ನಿರ್ವಹಣೆ ಸಂಬಂಧ ಪಾವತಿಸಲಾದ ವಿವಿಧ ಭತ್ಯೆಯ ಪಾವತಿ ವೋಚರ್‌ಗಳನ್ನು ಪರಿಶೀಲಿಸಲಾಗಿ, ಸದರಿ ಸಾಲಿನಲ್ಲಿ ಸ್ನಾತಕ ಹಾಗೂ ಸ್ನಾತಕೋತ್ತರ ಪರೀಕ್ಷಾ ಕಾರ್ಯಗಳಾದ ಪ್ರಶ್ನೆ ಪತ್ರಿಕೆಗಳ ಕೇಂದ್ರ ಮೌಲ್ಯಮಾಪನ, ಪ್ರಾಯೋಗಿಕ ಪರೀಕ್ಷೆಗಳ ಮೌಲ್ಯಮಾಪನ ಹಾಗೂ ಇತರೇ ಪರೀಕ್ಷಾ ಕಾರ್ಯಗಳ ಕರ್ತವ್ಯ ನಿರ್ವಹಿಸಿದ ಯು.ಜಿ.ಸಿ/ಯು.ಜಿ.ಸಿಯೇತರ ಬೋಧಕ ವರ್ಗದವರಿಗೆ ಪ್ರಯಾಣಭತ್ಯೆ, ದಿನಭತ್ಯೆ, ಸ್ಥಳೀಯ ಭತ್ಯೆ ಹಾಗೂ ಸಂಭಾವನೆಯನ್ನು ಪಾವತಿಸಲಾಗಿದೆ. ವಿವರವನ್ನು **ಅನುಬಂಧ–36, 36(ಎ), 36(ಬಿ), 36(ಸಿ), 36(ಡಿ), 36(ಇ), 36(ಎಫ್)ರಲ್ಲಿ** ನೀಡಲಾಗಿದೆ.

ಕರ್ನಾಟಕ ಸರ್ಕಾರದ ಶಿಕ್ಷಣ ಮಸೂದೆ, ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ–2000 ಹಾಗೂ ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ:ಇಡಿ/99/ಯುಎನ್ಇ/99, ದಿನಾಂಕ:15.11.1999, ಆದೇಶ ಸಂಖ್ಯೆ:ಇಡಿ/100/ಯುಎನ್ಇ/99,ದಿನಾಂಕ:15.11.1999 ಹಾಗೂ ಆದೇಶ ಸಂಖ್ಯೆ:ಇಡಿ/188/ಆಅಇ/99ದಿನಾಂಕ:15.11.1999ರ ಪ್ರಕಾರ ಯು.ಜಿ.ಸಿ/ಎ.ಐ.ಸಿ.ಟಿ.ಇ ವೇತನ ಪಡೆಯುವ ಸಿಬ್ಬಂದಿಯವರಿಗೆ ಪರೀಕ್ಷಾ ಸಂಭಾವನೆ ಮತ್ತು ಇತರೇ ಗೌರವ ಧನಗಳನ್ನು ಪಾವತಿಸಲು ಅವಕಾಶವಿರುವುದಿಲ್ಲ. ಹಾಗೂ ಕರ್ನಾಟಕ ನಾಗರೀಕ ಸೇವಾ ನಿಯಮಗಳು–1958ರ ನಿಯಮ–28ರ ಉಪನಿಯಮಗಳಲ್ಲಿ ಸೂಚಿಸಿರುವಂತೆ ಹಾಗೂ 6ನೇ ಪರಿಷ್ಕೃತ ಯು.ಜಿ.ಸಿ ನಿಯಮಾವಳಿಗಳ ಅನ್ವಯ ಉತ್ತರ ಪತ್ರಿಕೆಗಳ ಮೌಲ್ಯಮಾಪನ ಕಾರ್ಯ ಹಾಗೂ ಪ್ರಾಯೋಗಿಕ ಪರೀಕ್ಷಾ ಕಾರ್ಯಗಳು, ಬೋಧಕ ವರ್ಗದವರ ಕರ್ತವ್ಯದ ಒಂದು ಭಾಗವಾಗಿರುವುದರಿಂದ ಯಾವುದೇ ಸಂಭಾವನೆಯನ್ನು ಪಡೆಯಲು ಅರ್ಹರಿರುವುದಿಲ್ಲ.

ಯು.ಜಿ.ಸಿ ಹಾಗೂ ಯು.ಜಿ.ಸಿಯೇತರ ಬೋಧಕ ವರ್ಗದವರಿಗೆ ಪಾವತಿಸಲಾದ ಹಲವು ಪಾವತಿ ವೋಚರ್‌ಗಳನ್ನು ಪರಿಶೀಲಿಸಲಾಗಿ, ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ:ಆಇ/3/ಸೇನಿಸೇ/2012, ದಿನಾಂಕ:14.06.2012 (5ನೇ ಪರಿಷ್ಕೃತ ವೇತನಕ್ಕೆ ಅನುಗುಣವಾಗಿ) ಹಾಗೂ ಆದೇಶ ಸಂಖ್ಯೆ:ಆಇ/1/ಸನಿತಿ/2019,ದಿನಾಂಕ:11.01.2019 (6ನೇ ಪರಿಷ್ಕೃತ ವೇತನಕ್ಕೆ ಅನುಗುಣವಾಗಿ) ರ ಮಾರ್ಗ ಸೂಚಿಗಳನ್ನು ಮೀರಿ ಹೆಚ್ಚುವರಿಯಾಗಿ ಪ್ರಯಾಣ ಭತ್ಯೆ ಹಾಗೂ ದಿನ ಭತ್ಯೆಯನ್ನು ಪಾವತಿಸಲಾಗಿರುತ್ತದೆ. ಹೀಗೆ ಬೋಧಕ ವರ್ಗದವರಿಗೆ ಹೆಚ್ಚುವರಿಯಾಗಿ ಭತ್ಯೆಗಳನ್ನು ಪಾವತಿಸಲು ಕುಲಪತಿಯವರು ಹಾಗೂ ಕುಲಸಚಿವರು ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ–2000ದ ನಿಯಮ–41(7)ರಂತೆ ಪರಿನಿಯಮಗೊಳಿಸಿ, ಅದಕ್ಕೆ ಗೌರವಾನ್ವಿತ ಕುಲಾಧಿಪತಿಯವರಿಂದ ಅಂಕಿತವನ್ನು ಪಡೆಯುವುದು ಕಡ್ಡಾಯವಾಗಿರುತ್ತದೆ. ಆದರೆ ಈ ವಿಷಯದಲ್ಲಿ

ಪ್ರಸ್ತಾವಿತ ಕಂಡಿಕೆಯಲ್ಲಿನ ವಿಷಯಕ್ಕೆ ಸಂಬಂಧಿಸಿದಂತೆ ಪರೀಕ್ಷಾ ಕಾರ್ಯವು ವಿಶ್ವವಿದ್ಯಾನಿಲಯದ ಆದ್ಯತೆ ಮತ್ತು ಗೌಪ್ಯತೆಯೊಂದಿಗೆ ನಿರ್ವಹಿಸಬೇಕಾದ ಕಾರ್ಯವಾಗಿರುತ್ತದೆ ಅಲ್ಲದೇ ಸದರಿ ಕರ್ತವ್ಯದ ನಿರ್ವಹಣೆಯು ದಿನನಿತ್ಯದ ಕಛೇರಿಯ ಅವಧಿಯನ್ನು ಮೀರಿ ಸೇವೆ ನಿರ್ವಹಣೆಯ ಜವಾಬ್ದಾರಿ ಹೊಂದಿರುತ್ತದೆ.

ವಿಶ್ವವಿದ್ಯಾನಿಲಯದ ಕಾರ್ಯವ್ಯಾಪ್ತಿಯು, ಮೈಸೂರು ನಗರ, ಮತ್ತು ಗ್ರಾಮಾಂತರ, ಮಂಡ್ಯ, ಚಾಮರಾಜನಗರ, ಹಾಸನ ಜಿಲ್ಲೆಗಳಲ್ಲಿ ಕಾರ್ಯವ್ಯಾಪ್ತಿಯನ್ನು ಹೊಂದಿದೆ. ಈ ವ್ಯಾಪ್ತಿಯಲ್ಲಿ ಬರುವ ಕಾಲೇಜುಗಳಿಗೆ ಪ್ರಶ್ನೆಪತ್ರಿಕೆ, ಅಂಕಪಟ್ಟಿ, ಅರ್ಜಿವಿತರಣೆ, ಉತ್ತರ ಪ್ರತಿಕೆಗಳ ಸ್ವೀಕೃತಿ ಕಾರ್ಯಗಳ ನಿರ್ವಹಣೆಯ ಸೇವೆ ಮತ್ತು ಜವಾಬ್ದಾರಿಯನ್ನು ಒಳಗೊಂಡಿದೆ. ಮತ್ತು ಮೇಲಿನ ಕರ್ತವ್ಯದ ಅವಧಿಯು ಬೆಳಿಗ್ಗೆ 7 ಗಂಟೆಗೆ ಮೈಸೂರು ಕೇಂದ್ರ ಸ್ಥಾನವನ್ನು ಬಿಟ್ಟು, ಮರಳಿ ಕೇಂದ್ರಸ್ಥಾನಕ್ಕೆ ವಾಪಸ್ ಅಗಲು ರಾತ್ರಿ 8 ಗಂಟೆ ಅಥವಾ 9 ಗಂಟೆ ಅಗುವ ಸಂಭವಗಳು ಹೆಚ್ಚಾಗಿದೆ.

ಈ ಸಂದರ್ಭದಲ್ಲಿ ನಿಯೋಜಿತ ಪರೀಕ್ಷಾ ಕಾರ್ಯಗಳ ಸಿಬ್ಬಂಧಿಯ ಉಪಹಾರ, ಊಟ, ಮತ್ತು ಕಾಫಿ, ಟೀ ವೆಚ್ಚಗಳನ್ನು ಪರಿಗಣಿಸಿ, ಈ ಅವಧಿಯ ಸೇವೆಯನ್ನು ವಿಶೇಷ ಕರ್ತವ್ಯಗಳು ಮತ್ತು ಗೌಪ್ಯ ಕರ್ತವ್ಯಗಳು ಎಂದು ಪರಿಗಣಿಸಿ, ವಿಶ್ವವಿದ್ಯಾನಿಲಯವು ಪರೀಕ್ಷಾ ಕಾರ್ಯಗಳ ವ್ಯವಸ್ಥಿತ ಮತ್ತು ಸುಗಮ ನಿರ್ವಹಣೆಯನ್ನು ಗಮನದಲ್ಲಿಟ್ಟುಕೊಂಡು ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ ಹಾಗೂ ಸಿಂಡಿಕೇಟ್ ಸಭೆಯ ನಿರ್ಣಯಗಳ ಮೇರೆಗೆ ಈ ಕೆಳಗೆ ಸೂಚಿಸಲಾಗಿರುವ ದಿನಾಂಕಗಳು ಅಂತರಿಕ ಅದೇಶಗಳನ್ನು ಹೊರಡಿಸಲಾಗಿದೆ

**ಅವುಗಳ ವಿವರ ಈ ರೀತಿಯಿದೆ**

| ಕ್ರ ಸಂ | ಅದೇಶದ ವಿವರ | ಅದೇಶ ಸಂಖ್ಯೆ/ದಿನಾಂಕ |
|---|---|---|
| 1 | ಪ್ರವಾಶ ಭತ್ಯೆ, ದಿನಭತ್ಯೆ, (ಪರೀಕ್ಷಾ ಸಂಭಾವನೆ) ಸ್ಕ್ರಿಪ್ಟ್ ಅಲೋಯೆನ್ಸ್, ಪರಿಷ್ಕರಣ ಅದೇಶ | ಜಿಲ್/05/142/2012–13 ದಿನಾಂಕ:21.06.2016 |
| 2 | ಸ್ನಾತಕ ಮತ್ತು ಸ್ನಾತಕೋತ್ತರ ಪದವಿ ಪರೀಕ್ಷೆ ಹಾಗೂ ಪ್ರಯೋಗಿಕ ಪರೀಕ್ಷೆಗಳಲ್ಲಿ ಪರೀಕ್ಷಾ ಕಾರ್ಯನಿರ್ವಹಿಸುವ ಅಧ್ಯಾಪಕರುಗಳಿಗೆ ಸಂಭಾವನೆ ನೀಡುವ ಬಗ್ಗೆ | ಅದೇಶ ಸಂಖ್ಯೆ:ಜಿಲ್/05/142/2012–13 ದಿನಾಂಕ:09.11.2016 |
| 3 | ಯುಜಿ ಮತ್ತು ಪಿಜಿ ಪರೀಕ್ಷಾ ಉತ್ತರ ಪತ್ರಿಕೆಗಳನ್ನು ಮೌಲ್ಯಮಾಪನ ಮಾಡುವ ಯುಜಿಸಿ ಅಧ್ಯಾಪಕರುಗಳಿಗೆ ಸಂಭಾವನೆಯನ್ನು ನೀಡುವ ಬಗ್ಗೆ | ಅದೇಶ ಸಂಖ್ಯೆ:ಜಿಲ್/05/142/2012–13 ದಿನಾಂಕ:07.02.2018 |

<table>
<tr>
<td>

ಗೌರವಾನ್ವಿತ ಕುಲಾಧಿಪತಿಯವರಿಂದ ಅನುಮೋದನೆ ಪಡೆದಿರುವ ಬಗ್ಗೆ ಯಾವುದೇ ಆದೇಶವನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲ. ಈ ಬಗ್ಗೆ ಸ್ಪಷ್ಟೀಕರಣ ಕೋರಿ, ವಿಚಾರಣೆ ಸಂಖ್ಯೆ:118/2020–21/08.06.2020 ಅನ್ನು ನೀಡಲಾಗಿದ್ದರೂ, ಯಾವುದೇ ಸ್ಪಷ್ಟೀಕರಣವನ್ನು ಲೆಕ್ಕಪರಿಶೋಧನೆಗೆ ಒದಗಿಸಿರುವುದಿಲ್ಲ.

ಆದ್ದರಿಂದ ಹೆಚ್ಚುವರಿಯಾಗಿ ಪಾವತಿಸಲಾದ ಪ್ರಯಾಣ ಭತ್ಯೆ, ದಿನಭತ್ಯೆ, ಸ್ಥಳೀಯ ಭತ್ಯೆ ಹಾಗೂ ಸಂಭಾವನೆಯ ಒಟ್ಟು **ಮೊತ್ತ ರೂ.33,16,974/–ಗಳನ್ನು ಸಂಬಂಧಿಸಿದವರಿಂದ ವಸೂಲಿಸಲು ಸೂಚಿಸಿದೆ.**

</td>
<td>

| | | |
|---|---|---|
| 4 | ಪರೀಕ್ಷಾ ಕಾರ್ಯಕ್ಕೆ ನಿಯೋಜಿಸಲ್ಪಡುವ ಭೋದಕ ಮತ್ತು ಭೋದಕೇತರ ಸಿಬ್ಬಂದಿಗಳಿಗೆ ನೀಡುತ್ತಿರುವ ವಿವಿಧ ರೀತಿಯ ಸಂಭಾವನೆ ಮತ್ತು ಭತ್ಯೆಗಳ ಪರೀಷ್ಕರಣೆ ಬಗ್ಗೆ | ಅದೇಶ ಸಂಖ್ಯೆಜಿಲ್/05/142/2012–13 ದಿನಾಂಕ:06.08.2019 |

ಈ ಅದೇಶಗಳ ಅನ್ವಯ ಸದರಿ ಕಂಡಿಕೆಯಲ್ಲಿನ ಅನುಬಂಧಗಳಲ್ಲಿ (36(ಜಿ) ಯಿಂದ 36(ಎಫ್)

| ಕ್ರ ಸಂ | ಅನುಬಂಧ ಸಂಖ್ಯೆ | ಮೊತ್ತ |
|---|---|---|
| 1 | 36 (ಕ್ರಮ ಸಂಖ್ಯೆ 01 ರಿಂದ 387) | ರೂ. 19,84,412 |
| 2 | 36 (a) (ಕ್ರಮ ಸಂಖ್ಯೆ 01 ರಿಂದ 22) | ರೂ. 54,243 |
| 3 | 36 (b) (ಕ್ರಮ ಸಂಖ್ಯೆ 01 ರಿಂದ 131) | ರೂ. 1,87,042 |
| 4 | 36 (c) (ಕ್ರಮ ಸಂಖ್ಯೆ 01 ರಿಂದ 17) | ರೂ. 51,464 |
| 5 | 36 (d) (ಕ್ರಮ ಸಂಖ್ಯೆ 01 ರಿಂದ 07) | ರೂ. 22,157 |
| 6 | 36 (e) (ಕ್ರಮ ಸಂಖ್ಯೆ 01 ರಿಂದ 20) | ರೂ. 47,606 |
| 7 | 36 (f) (ಕ್ರಮ ಸಂಖ್ಯೆ 01 ರಿಂದ 615) | ರೂ. 9,70,050 |
| | **ಒಟ್ಟು ಮೊತ್ತ** | **ರೂ. 33,16,974** |

ಆದ ಕಾರಣ ಈ ಎಲ್ಲಾ ಅದೇಶಗಳಲ್ಲಿನ ಪರೀಕ್ಷಾ ಸಂಭಾವನೆ ದಿನಭತ್ಯೆ ಪ್ರಯಾಣ ಭತ್ಯೆ ಸಲುವಾಗಿ ಪಾವತಿಸಿರುವ ಒಟ್ಟು ಮೊತ್ತ ರೂ.33,16,974/– ಅಕ್ಷೇಪಣೆಯನ್ನು ಕೈ ಬಿಡಲು ಕೋರಿದೆ.

</td>
</tr>
<tr>
<td>

**8.16. ವಿಶ್ವವಿದ್ಯಾನಿಲಯದ ಖಾಯಂ ಸಿಬ್ಬಂದಿ ವರ್ಗದವರಿಗೆ ಗೌರವಧನ/ಪರೀಕ್ಷಾ ಸಂಭಾವನೆ/ವಾರ್ಷಿಕ ಸಂಭಾವನೆಯನ್ನು ನಿಯಮ ಬಾಹಿರವಾಗಿ ಪಾವತಿಸಿರುವುದು :**

ವಿಶ್ವವಿದ್ಯಾನಿಲಯದ 2018–19ನೇ ಸಾಲಿನ ಲೆಕ್ಕಪರಿಶೋಧನೆಯಲ್ಲಿ ವಿವಿಧ ವಿಭಾಗಗಳ ಸಿಬ್ಬಂದಿ ಹಾಗೂ ಅಧಿಕಾರಿಗಳಿಗೆ ಪ್ರವೇಶಾತಿ ಪ್ರಕ್ರಿಯೆ, ಆಯವ್ಯಯ ತಯಾರಿಕೆ, ಪರೀಕ್ಷಾ ಕರ್ತವ್ಯ ನಿರ್ವಹಿಸಿರುವ ಸಂಬಂಧ ಸಂಭಾವನೆ ಹಾಗೂ ವಾರ್ಷಿಕ ಸಂಭಾವನೆಯನ್ನು ಪಾವತಿಸಿರುವುದು ಕಂಡು ಬಂದಿರುತ್ತದೆ. ವಿವರಗಳನ್ನು **ಅನುಬಂಧ–37 ಮತ್ತು 38**ರಲ್ಲಿ ನೀಡಲಾಗಿದೆ.

ಶೈಕ್ಷಣಿಕ ವಿಭಾಗದ ನೌಕರರಿಗೆ ಪ್ರವೇಶಾತಿ ಕಾರ್ಯವು, ಹಣಕಾಸು ಶಾಖೆಯ ನೌಕರರಿಗೆ ಆಯವ್ಯಯ ತಯಾರಿಸುವುದು ಹಾಗೂ ಪರೀಕ್ಷಾ ವಿಭಾಗದ ನೌಕರರಿಗೆ ಪರೀಕ್ಷಾ ಕಾರ್ಯ ನಿರ್ವಹಿಸುವುದು ಅವರ ಕರ್ತವ್ಯಗಳ ಒಂದು ಭಾಗವಾಗಿರುತ್ತದೆ. ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿ ನಿಯಮ–2000 ದ ಪ್ರಕರಣ–41 ರನ್ವಯ ವಿಶ್ವವಿದ್ಯಾನಿಲಯಗಳ ಆದೇಶಗಳು ಮಾನ್ಯ ಕುಲಾಧಿಪತಿಗಳಿಂದ ಅಂಕಿತವಾದ

</td>
<td>

ಪ್ರಸ್ಥಾವಿತ ಕಂಡಿಕೆಯಲ್ಲಿ 2018–19ನೇ ಸಾಲಿನಲ್ಲಿ ವಿಶ್ವವಿದ್ಯಾನಿಲಯದ ವಿವಿಧ ಹಂತಗಳ ಪರೀಕ್ಷಾ ಕಾರ್ಯಗಳಿಗೆ ನಿಯೋಜಿತವಾಗಿದ್ದ ಸಿಬ್ಬಂಧಿಗೆ ಅವರುಗಳು ನಿರ್ವಹಿಸಿರುವ ಪರೀಕ್ಷಾ ಕಾರ್ಯಕ್ಕೆ ಪರೀಕ್ಷಾ ಪೂರ್ವ ಸಿದ್ಧತಾ ಸಂಭಾವನೆ, ಪರೀಕ್ಷಾ ಸಂಭಾವನೆ, ಪ್ರವೇಶಾತಿ ಕಾರ್ಯ ಪರೀಕ್ಷಾ ಸಂಬಂಧಿಸಿದ ಪ್ರಯಾಣ ಭತ್ಯೆ ಮತ್ತು ಆಯವ್ಯಯ ತಯಾರಿಕೆ ಸಂಬಂಧಿ ಹಣಕಾಸು ಸಿಬ್ಬಂಧಿಗೆ

ಪಾವತಿಸಿಲಾದ 92700+199800=292500 (ಅನುಬಂಧ ಸಂಖ್ಯೆ:–37)

132323+89600=221923 (ಅನುಬಂಧ ಸಂಖ್ಯೆ:–38 (a))

ಒಟ್ಟು ರೂ.514423

ಮೇಲೆ ಸೂಚಿತವಾದ ಕರ್ತವ್ಯಗಳು ಆಯಾ ವಿಭಾಗದ ಸಿಬ್ಬಂಧಿಗಳೂ ನಿರ್ವಹಿಸಬೇಕಾದ

</td>
</tr>
</table>

| | |
|---|---|
| ಪರಿನಿಯಮಗಳಿಂದ ಬೆಂಬಲಿತವಾಗಿರಬೇಕು. ಈ ಸಂಬಂಧ ಅಧಿಕೃತ ಪರಿನಿಯಮಗಳ ಪ್ರತಿಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ಲೆಕ್ಕ ತನಿಖಾ ವಿಚಾರಣಾ ಸಂಖ್ಯೆ: 130/2020–21/08.06.2020ರ ಮೂಲಕ ಕೋರಲಾಗಿದ್ದರೂ, ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ಆದ್ದರಿಂದ ನಿಯಮವನ್ನು ಉಲ್ಲಂಘಿಸಿ ಪಾವತಿಸಲಾಗಿರುವ ಗೌರವಧನ/ಪರೀಕ್ಷಾ ಸಂಭಾವನೆ ಹಾಗೂ ವಾರ್ಷಿಕ ಸಂಭಾವನೆಯೆ ಒಟ್ಟು ಮೊತ್ತ **ರೂ.5,14,423/–ಗಳನ್ನು ಸಂಬಂಧಪಟ್ಟವರಿಂದ ವಸೂಲಿಸಲು ಸೂಚಿಸಿದೆ.** | ಕರ್ತವ್ಯದ ಭಾಗವೇ ಆಗಿದೆ ಎಂದು ಉಲ್ಲೇಖಿಸಿ ಈ ಸಂಬಂಧದ ಪಾವತಿಗಳನ್ನು ಆಕ್ಷೇಪಿಸಲಾಗಿದೆ.<br><br>**ಆದರೆ ಸೂಚಿತವಾದ ಪಾವತಿಗಳ ಹಿನ್ನಲೆ/ವಿವರಣೆ ಈ ರೀತಿಯಿದೆ**<br><br>ಆಯವ್ಯಯ ತಯಾರಿಕೆ: ವಿಶ್ವವಿದ್ಯಾನಿಲಯದ 2018–19ನೇ ಸಾಲಿನ ಆಯವ್ಯಯ ತಯಾರಿಕೆಯ ಕಾರ್ಯದಲ್ಲಿ ತಮ್ಮ ದಿನನಿತ್ಯದ ಕಾರ್ಯ ನಿರ್ವಹಣೆಯ ಜೊತೆ ಜೊತೆಯಲ್ಲಿಯೇ ಮತ್ತು ಹೆಚ್ಚುವರಿಯಾಗಿ ಸರ್ಕಾರಿ ರಜಾ ದಿನಗಳಲ್ಲಿಯೂ ತೊಡಗಿಸಿಕೊಂಡಿರುವ ಸಲುವಾಗಿ ಕಛೇರಿ ಸಿಬ್ಬಂಧಿಗೆ ಪ್ರೊತ್ಸಾಹ ಧನದ ರೂಪದಲ್ಲಿ ನೀಡಿರುವ ಮೊತ್ತವಾಗಿದೆ ರೂ.99,800/– ಅಲ್ಲದೇ ವಿಶ್ವವಿದ್ಯಾನಿಲಯದ ಆಯವ್ಯಯ ತಯಾರಿಕೆಯು ಸುಧೀರ್ಘ ಪ್ರಕ್ರಿಯೆಯಾಗಿದ್ದು ವಿವಿಧ ಶೀರ್ಷಿಕೆಗಳಲ್ಲಿನ ವಿವಿಧ ವಿಭಾಗಗಳ ನಿರೀಕ್ಷೀತ ಆದಾಯ ಮತ್ತು ನಿರೀಕ್ಷಿತ ವೆಚ್ಚಗಳ ವಿವರಗಳನ್ನು ಒಳಗೊಂಡಿ ವಾರ್ಷಿಕ ಹಣಕಾಸು ವರದಿಯಾಗಿರುತ್ತದೆ.<br><br>ಆಯವ್ಯಯ ತಯಾರಿಕೆಯು, ಮೇಲೆ ಉಲ್ಲೇಖಿಸಿರುವಂತೆ ಪ್ರತಿಯೊಂದು ವಿಭಾಗಗಳ ಸ್ವಿಕೃತಿಗಳ ವಿವರ ಸಂಗ್ರಹಿಸಿ ಧೃಢೀಕರಿಸಿ ಮತ್ತು ಇದೇ ರೀತಿಯಲ್ಲಿ ಸಂಭವನೀಯ ವೆಚ್ಚಗಳ ವಿವರ ಸಂಗ್ರಹಣೆ ನಿರ್ಧರಣೆಯನ್ನು ಒಳಗೊಂಡಿರುತ್ತದೆ ಮತ್ತು ಈ ರೀತಿಯಾಗಿ ತಯಾರಿಸಿದ ಕ್ರೋಢೀಕೃತ ವಿವರವನ್ನು ನಿಗಧಿತ ಅವಧಿಯಲ್ಲಿ ಸರ್ಕಾರಕ್ಕೆ ಸಲ್ಲಿಸುವುದು ಅವಶ್ಯವಾಗಿರುತ್ತದೆ<br><br>ಅಲ್ಲದೇ ಅಯವ್ಯಯ ತಯಾರಿಕೆಯ ವಾರ್ಷಿಕವಾಗಿ ಬರುವ ವಿಶೇಷ ಪ್ರಕರಣದಲ್ಲಿ ಒಂದಾಗಿದೆ. ಈ ರೀತಿಯ ಸಂಭಾವನೆಯ ಪಾವತಿಗೆ ಕೆ.ಸಿ.ಎಸ್.ಆರ್ ನಿಯಾಮಾವಳಿಗಳಡಿಯಲ್ಲಿ ಬರುವ ಉಪನಿಯಮ 28 (ಬಿ) ಶುಲ್ಕ ಮತ್ತು ಸಂಭಾವನೆಯಲ್ಲಿನ ಟಿಪ್ಪಣಿ ಸಂಖ್ಯೆ:–01 ರಲ್ಲಿ ಪ್ರಸ್ಥಾಪಿತವಾಗಿರುವಂತೆ ಸರ್ಕಾರಿ ನೌಕರರು ಕಛೇರಿಯ ಕೆಲಸದ ಅವಧಿಯನ್ನು ಮೀರಿ ಕೆಲಸ ನಿರ್ವಹಿಸುವಂತಹ ಸಂಧರ್ಭಗಳಲ್ಲಿ ಮತ್ತು ಸರ್ಕಾರಿ ನೌಕರರು ರಜಾ ದಿನಗಳಲ್ಲಿಯೂ ಕೆಲಸ ನಿರ್ವಹಿಸಿದ ವಿಶೇಷ ಪ್ರಕರಣಗಳಲ್ಲಿ ನೌಕರರಿಗೆ ಪ್ರೋತ್ಸಾಹಿಸುವ ಸಲುವಾಗಿ ಸಂಭಾವನೆ/ಪ್ರೋತ್ಸಾಹ ಧನದ ಪಾವತಿಗೆ ಅವಕಾಶ ಕಲ್ಪಿಸಲಾಗಿದೆ<br><br>ಈ ಸಂದರ್ಭದಲ್ಲಿ ಅವಶ್ಯಕ ನಿರ್ವಹಣೆಯನ್ನು ಗಮನದಲ್ಲಿರಿಸಿಕೊಂಡು ನೌಕರರ ಸೇವೆಯನ್ನು ಬಳಸಿಕೊಳ್ಳಲಾಗಿರುತ್ತದೆ<br>ಆದುದರಿಂದ ಈ ನಿಟ್ಟಿನಲ್ಲಿ ಈ ಕರ್ತವ್ಯವನ್ನು ವಿಶೇಷ ಸಂದರ್ಭದಲ್ಲಿ ನಿರ್ವಹಿಸಿರುವ ಕರ್ತವ್ಯವೆಂದು ಪರಿಗಣಿಸಿ ಈ ಸಂಬಂಧದ ಪಾವತಿ ಮೊತ್ತದ ವಸೂಲಾತಿಯನ್ನು ರು.99,800/– ಕೈ ಬಿಡಲು ಕೋರಿದೆ. |

| | |
|---|---|
| | ಮುಂದುವರೆದು ಪ್ರವೇಶಾತಿ ಕಾರ್ಯ, ಪರೀಕ್ಷಾ ಪೂರ್ವಸಿದ್ಧತೆ ಪರೀಕ್ಷಾ ಕಾರ್ಯ ಮತ್ತು ಪರೀಕ್ಷಾ ಸಂಬಂಧದ ಸಿಬ್ಬಂಧಿಗಳ ಪ್ರಯಾಣ ಭತ್ಯೆ ಇವುಗಳನ್ನು ಕೆ.ಸಿ.ಎಸ್.ಆರ್ ನಿಯಾಮಾವಳಿಗಳಡಿಯಲ್ಲಿ ಬರುವ ಉಪನಿಯಮ (ಶುಲ್ಕ ಮತ್ತು ಸಂಭಾವನೆ) ಟಿಪ್ಪಣಿ–01 ರಲ್ಲಿ ಪ್ರಸ್ಥಾಪಿತವಾಗಿರುವಂತೆ ವಿಶೇಷ ಪ್ರಕರಣದಲ್ಲಿ ನೌಕರರಿಗೆ ಕಛೇರಿಯ ಕೆಲಸದ ಅವಧಿಯನ್ನು ಮೀರಿ ಕೆಲಸ ನಿರ್ವಹಿಸಿರುವ ವಿಶೇಷ ಪ್ರಕರಣದಲ್ಲಿ ನೌಕರರ ಹೆಚ್ಚುವರಿ ಕೆಲಸವನ್ನು ಪ್ರೋತ್ಸಾಹಿಸುವ ಸಲುವಾಗಿ ಪಾವತಿಸಿರುವ ಸಂಭಾವನೆ ಎಂದು ಪರಿಗಣಿಸಿ ಈ ಸಂಬಂಧದ ಒಟ್ಟು ಪಾವತಿ ರೂ.5,14,423/– ಆಕ್ಷೇಪಣೆಯನ್ನು ಕೈ ಬಿಡಲು ಕೋರಿದೆ. (ಪರೀಕ್ಷಾ ಕಾರ್ಯಗಳಿಗೆ ಸಂಬಂಧಿಸಿದ ಇದರಿಂದಾಗಿ ಒಟ್ಟು (ಎ) ಮತ್ತು (ಬಿ) ಒಟ್ಟು ಮೊತ್ತ ರೂ.5,14,423/– ಕೈ ಬಿಡಲು ಕೋರಿದೆ.<br><br>ಪಾವತಿಗೆ ಅನುಮೋದಿತವಾಗಿರುವ ವಿಶ್ವವಿದ್ಯಾನಿಲಯದ ದಿನಾಂಕ:30.05.2014 ರ ಸಿಂಡಿಕೇಟ್ ನಿರ್ಣಯದ ಪ್ರತಿ ಮತ್ತು ಕುಲಸಚಿವರು (ಪರೀಕ್ಷಾಂಗ)ರವರ ಅದೇಶ ಸಂಖ್ಯೆ:/ಪವಿ1.4/2011–12 ದಿನಾಂಕ:12.04.2018 ರ ಅದೇಶದ ಪ್ರತಿ ಅಡಕಗೊಳಿಸಿದೆ. |
| **8.17. ಮಹಾರಾಜ ಕಾಲೇಜಿನ ವಾರ್ಷಿಕ ಸಂಚಿಕೆ "ಅನಂತಯಾತ್ರೆ"ಯನ್ನು ಟೆಂಡರ್ ಕರೆಯದೆ ಖಾಸಗಿ ಮುದ್ರಣಾಲಯದಿಂದ ಮುದ್ರಿಸಿಕೊಂಡಿರುವುದು :**<br><br>2018–19ನೇ ಸಾಲಿನ ಮಹಾರಾಜ ಕಾಲೇಜಿನ ಮ್ಯಾಗಜಿನ್ ಖಾತೆಯನ್ನು ಪರಿಶೀಲಿಸಿದಾಗ ಅನಂತಯಾತ್ರೆ ವಾರ್ಷಿಕ ಸಂಚಿಕೆಯ 2000 ಪುಸ್ತಕಗಳಿಗೆ ದರಪಟ್ಟಿ ಕರೆದು ಶ್ರೀ ಮಹಾನಂದಿಕೇಶ್ವರ ಕಮರ್ಷಿಯಲ್ ಪ್ರಿಂಟ್ಸ್‌ರವರಿಗೆ ಕಾರ್ಯಾದೇಶ ನೀಡಿ, ಸದರಿಯವರಿಗೆ ರೂ.94,700/–(ಚೆಕ್ ಸಂ.025617/04.02.2019) ಹಾಗೂ ರೂ.94,700/–(ಚೆಕ್ ಸಂ.025620/28.02.2019), ಒಟ್ಟು ರೂ.1,89,400/–ಗಳ ಬಿಲ್ಲನ್ನು ಪಾವತಿಸಲಾಗಿರುತ್ತದೆ.<br><br>ಮೈಸೂರು ವಿಶ್ವವಿದ್ಯಾನಿಲಯದಲ್ಲಿ ತನ್ನದೇ ಆದ ಮುದ್ರಣಾಲಯವಿದ್ದು, ಅಲ್ಲಿ ಮುದ್ರಣ ಮಾಡಿಸದೆ ಖಾಸಗಿಯವರಿಂದ ಮುದ್ರಣ ಮಾಡಿಸಿರುವುದರಿಂದ ವಿಶ್ವವಿದ್ಯಾನಿಲಯದ ಸೌಲಭ್ಯಗಳನ್ನು (ಮುದ್ರಣಾಲಯ) ಸದ್ಬಳಕೆ ಮಾಡಿಕೊಳ್ಳದೇ ಖಾಸಗಿಯವರಿಗೆ ಅನುಕೂಲ ಮಾಡಿಕೊಟ್ಟಂತಾಗಿರುತ್ತದೆ. ಅಲ್ಲದೆ ಮುದ್ರಣದ ವೆಚ್ಚ ರೂ.1.00ಲಕ್ಷ ಮೀರಿರುವುದರಿಂದ ದರಪಟ್ಟಿ ಕರೆದು ಕಾರ್ಯಾದೇಶವನ್ನು ನೀಡಿರುವುದು ಕೆ.ಟಿ.ಪಿ.ಪಿ ಕಾಯ್ದೆಯ ಅಧಿನಿಯಮಗಳ ಉಲ್ಲಂಘನೆಯಾಗಿರುತ್ತದೆ. ಇದಲ್ಲದೆ ಮುದ್ರಿಸಿದ 2000 ವಾರ್ಷಿಕ ಸಂಚಿಕೆಯ ಪ್ರತಿಗಳನ್ನು ದಾಸ್ತಾನಿಗೆ ತೆಗೆದುಕೊಂಡು ವಿತರಿಸಿರುವುದಕ್ಕೆ ಸಂಬಂಧಿಸಿದಂತೆ ಯಾವುದೇ ಮಾಹಿತಿ/ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ. ಈ ಬಗ್ಗೆ ವಿವರಣೆ ಕೋರಿ ನೀಡಿದ ವಿಚಾರಣೆ ಪತ್ರ ಸಂಖ್ಯೆ:21/2020–21/26.08.2020 ಹಾಗೂ ಸಂಖ್ಯೆ:24/2020–21/27.08.2020ಗಳಿಗೆ | ಪ್ರಸ್ಥಾವಿತ ಕಂಡಿಕೆಯಲ್ಲಿ ಮಹಾರಾಜ ಕಾಲೇಜಿನ 2017–18ನೇ ಸಾಲಿನಲ್ಲಿನ ವಾರ್ಷಿಕ ಸ್ಮರಣ ಸಂಚಿಕೆ ಅನಂತಯಾತ್ರೆಯ ಮುದ್ರಣವನ್ನು ವಿಶ್ವವಿದ್ಯಾನಿಲಯವು ತನ್ನದೇ ಆದ ಮುದ್ರಣಾಲಯವನ್ನು ಹೊಂದಿದ್ದರು. ಖಾಸಗಿ ಏಜೆನ್ಸಿಯಿಂದ ಮುದ್ರಣ ಮಾಡಿಸಿರುವುದು ಮತ್ತು ಮುದ್ರಣ ವೆಚ್ಚ ರೂ.1. ಲಕ್ಷವನ್ನು ಮೀರಿದ್ದಾಗ್ಯೂ (ಭರಿಸಿರುವ ಮುದ್ರಣ ವೆಚ್ಚ ರೂ.189400/–) ಕೆ,ಟಿ,ಪಿ,ಪಿ ನಿಯಮಗಳ ಅನ್ವಯ ಮುದ್ರಣ ಏಜೆನ್ಸಿಯನ್ನು ಟೆಂಡರ್ ಮೂಲಕ ನಿರ್ಧರಣೆ ಮಾಡದೇ ದರಪಟ್ಟಿ ಅಧಾರದಲ್ಲಿ ಕಡಿಮೆ ದರ ಸೂಚಿಸಿರುವ ಏಜೆನ್ಸಿಯಿಂದ ಮುದ್ರಣ ಮಾಡಿಸಿರುವುದನ್ನು ಆಕ್ಷೇಪಿಸಲಾಗಿದೆ.<br><br>ಆದರೆ ಈ ಸಂಬಂಧ ಮಹಾರಾಜ ಕಾಲೇಜಿನ ವಿವರಣೆ ಈ ರೀತಿಯಿದೆ ಸಂಚಿಕೆಯು ವಿಶೇಷ ನಾವಿನ್ಯತೆ ಹೊಂದಿದ್ದು ಈ ರೀತಿಯ ನಾವೀನ್ಯತೆ ಹೊಂದಿರುವ ಮುದ್ರಣಗಳನ್ನು ವಿಶ್ವವಿದ್ಯಾನಿಲಯದ ಮುದ್ರಣಾಲಯದಲ್ಲಿ ಮುದ್ರಣಾ ಪಡೆಯುವುದು ಸಾಧ್ಯವಿಲ್ಲದ್ದ ಹಿನ್ನೆಲೆಯಲ್ಲಿ ಮತ್ತು ಸ್ಮರಣ ಸಂಚಿಕೆಗಳನ್ನು ವಾರ್ಷಿಕ ಕಾರ್ಯಕ್ರಮ (ಕಾಲೇಜ್ ಡೆ) ದಿನಾಂಕದ ಅವಧಿಯೊಳಗೆ ಬಿಡುಗಡೆಗೊಳಿಸಬೇಕಾಗಿದ್ದ ಹಿನ್ನಲೆಯಲ್ಲಿ ಈ ಸಂಬಂಧಿಸಿದ ಪ್ರಸ್ಥಾವನೆಯನ್ನು ಸಕ್ಷಮ ಅಧಿಕಾರಿಗಳೊಂದಿಗೆ ಚರ್ಚಿಸಿ ಅವರ ಅನುಮೋದನೆಯನ್ನು ಪಡೆದ ನಂತರವೇ ಖಾಸಗಿ ಏಜೆನ್ಸಿಯಿಂದ ಮುದ್ರಿಸಲು ಕ್ರಮವಹಿಸಲಾಗಿದೆ, ಎಂಬ ಅಂಶವನ್ನು ಲೆಕ್ಕಪರಿಶೋಧನೆ ಅವಗಾಹನೆಗೆ ತರಲಾಗಿದೆ |

| | |
|---|---|
| ಕಾಲೇಜಿನವರು ಸಮರ್ಪಕ ಉತ್ತರವನ್ನು ನೀಡಿರುವುದಿಲ್ಲ. ಹೀಗಾಗಿ ವಾರ್ಷಿಕ ಸಂಚಿಕೆಯ ಮುದ್ರಣಕ್ಕಾಗಿ ಮಾಡಿರುವ ವೆಚ್ಚ **ರೂ.1,89,400/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.** | (ಈ ಸಂಬಂಧದ ಸಹಾಯಕ ಕುಲಸಚಿವರ ಅನುಮತಿ ಅದೇಶದ ಪ್ರತಿ ಅಡಕಗೊಳಿಸಿದೆ ಅದೇಶ ಸಂಖ್ಯೆ:ಜಿಎಲ್/06/177/1998–99 ದಿನಾಂಕ:27.08.2018)<br><br>ಸಕ್ಷಮ ಅಧಿಕಾರಿಗಳ ಅನುಮೋದನೆ ಪಡೆದ ನಂತರ ಈ ಸಲುವಾಗಿ ದರಪಟ್ಟಿ ಪ್ರಕಟಣೆ ಹೊರಡಿಸಿ ದರಪಟ್ಟಿ ಪ್ರಕ್ರಿಯೆಯಲ್ಲಿ ಭಾಗವಹಿಸಿದ 3 ಏಜೆನ್ಸಿಗಳಲ್ಲಿ L-I ದರವನ್ನು ಸೂಚಿಸಿರುವ ಮೆ.ಮಹಾನಂದಿಕೇಶ್ವರ ಕಮರ್ಷಿಯಲ್ ಪ್ರಿಂಟ್ಸ್ ಮೈಸೂರು ರವರಿಗೆ ಅನಂತಯಾತ್ರಿ ಸ್ಮರಣ ಸಂಚಿಕೆಯ 2000 ಪ್ರತಿಗಳ ಮುದ್ರಣ ಸರಬರಾಜು ಅದೇಶ ನೀಡಲಾಗಿದೆ.<br><br>ಮೆ.ಮಹಾನಂದಿಕೇಶ್ವರ ಕಮರ್ಷಿಯಲ್ ಪ್ರಿಂಟ್ಸ್ ಮೈಸೂರು ಏಜೆನ್ಸಿಯು ಸರಬರಾಜು ಮಾಡಿರುವ ಅನಂತಯಾತ್ರೆ ವಾರ್ಷಿಕ ಸಂಚಿಕೆಗಳು ಸುಸ್ಥಿತಿಯಲ್ಲಿದ್ದು ಅವುಗಳ ಉತ್ತಮ ಗುಣಮಟ್ಟ ಉಳ್ಳವಾಗಿದ್ದು ಅವುಗಳ ದಾಸ್ತಾನು ಮತ್ತು ವಿತರಣೆ ವಿವರದ ಪ್ರತಿ ಹಾಜರುಪಡಿಸಿದೆ<br><br>ಲೆಕ್ಕಪರಿಶೋಧನೆಯಲ್ಲಿ ಸೂಚಿತವಾಗಿರುವಂತೆ ಕೆ.ಟಿ.ಪಿ.ಪಿ ನಿಯಮದ ಪಾಲನೆ ಅಂಶವನ್ನು ಗಮನಿಸಲಾಗಿದೆ, ಸ್ಮರಣ ಸಂಚಿಕೆ ಮುದ್ರಣಕ್ಕೆ ಕಾಲಾವಕಾಶದ ಕೊರತೆಯಿದ್ದ ಹಿನ್ನಲೆಯಲ್ಲಿ ಟೆಂಡರ್ ಪ್ರಕ್ರಿಯೆ ಮಾಡಲಾಗಿಲ್ಲ ಎಂಬ ನಿವೇದನೆಯನ್ನು ಲೆಕ್ಕತನಿಖೆ ಅವಗಾಹನೆಗೆತರುತ್ತಾ ಮುಂದಿನ ದಿನಗಳಲ್ಲಿ ಕೆ.ಟಿ.ಪಿ.ಪಿ ನಿಯಮಗಳನ್ನು ಯಥಾವತ್ತಾಗಿ ಪಾಲನೆ ಮಾಡಲಾಗುವುದು ಎಂದು ನಿವೇದಿಸಲಾಗಿದೆ ಮತ್ತು ಆಕ್ಷೇಪಿತ ಮೊತ್ತ ರೂ.1,89,400/– ಕೈ ಬಿಡಲು ಕೋರಲಾಗಿದೆ. |
| **8.18. ಮಾನಸ ಗಂಗೋತ್ರಿಯ ಸ್ನಾತಕೋತ್ತರ ಗ್ರಂಥಾಲಯದಲ್ಲಿ ವಿವಿಧ ತಂತ್ರಾಂಶಗಳು ಹಾಗೂ ಇತರೆ ಸಾಮಗ್ರಿಗಳ ಖರೀದಿಯಲ್ಲಿನ ನ್ಯೂನತೆಗಳು :**<br>2018–19ನೇ ಸಾಲಿನ ಸ್ನಾತಕೋತ್ತ ರಗ್ರಂಥಾಲಯಕ್ಕೆ 2018–19ನೇ ಸಾಲಿನಲ್ಲಿ ರೂ.4,86,656/– ಗಳ ಮೊತ್ತದ ವಿವಿಧ ಸಾಮಾಗ್ರಿಗಳನ್ನು/ಸಾಫ್ಟ್‌ವೇರ್‌ಗಳನ್ನು ಖರೀದಿಸಲಾಗಿರುತ್ತದೆ. ದಾಸ್ತಾನು ವಹಿ, ಇ–ಸಂಪನ್ಮೂಲ ಪ್ರವೇಶಾಂಕ ವಹಿ (e-Resources Access Register) ಮತ್ತು ವಾರ್ಷಿಕ ದಾಸ್ತಾನು ಪರಿಶೀಲನಾ ವರದಿಯನ್ನು ಹಾಜರುಪಡಿಸಿರುವುದಿಲ್ಲ. ಅಗತ್ಯ ದಾಖಲಾತಿಗಳೊಂದಿಗೆ ಈ ಬಗ್ಗೆ ಸೂಕ್ತ ಸ್ಪಷ್ಟೀಕರಣ ನೀಡುವಂತೆ ಲೆಕ್ಕಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ:16/20.07.2020ನ್ನು ನೀಡಲಾಗಿದ್ದರೂ ವಿಶ್ವವಿದ್ಯಾಲಯದವರು ದಾಖಲಾತಿಗಳು/ವಿವರಗಳನ್ನು ಹಾಜರುಪಡಿಸಿರುವುದಿಲ್ಲ. ಆದ್ದರಿಂದ ಈ ಬಗ್ಗೆ ಪೂರ್ಣ ದಾಖಲಾತಿ/ವಿವರಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವವರೆಗೆ ಖರೀದಿಗೆ ಮಾಡಲಾಗಿರುವ ವೆಚ್ಚದ **ಮೊತ್ತ ರೂ.4,86,656/–ಗಳನ್ನು ಆಕ್ಷೇಪಣೆಗೆ ಸೂಚಿಸಲಾಗಿದೆ.** (ವಿವರಗಳನ್ನು **ಅನುಬಂಧ–39**ರಲ್ಲಿ ವರದಿಗೆ ಲಗತ್ತಿಸಿದೆ.) | ಪ್ರಸ್ತಾಪಿತ ಕಂಡಿಕೆಯಲ್ಲಿನ ವಿಷಯಕ್ಕೆ ಸಂಬಂಧಿಸಿದಂತೆ ಮಾನಸ ಗಂಗೋತ್ರಿಯ ಸ್ನಾತಕೋತ್ತರ ಗ್ರಂಥಾಲಯದಲ್ಲಿ 2018–19ನೇ ಸಾಲಿನಲ್ಲಿ ಅನುಬಂಧ–39 ರಲ್ಲಿ ಸದರಿ ವಿಭಾಗಕ್ಕೆ ಸರಬರಾಜು ಪಡೆದಿರುವ ಸಾಫ್ಟ್‌ವೇರ್‌ಗಳು ಮತ್ತು ವಿವಿಧ ಸಾಮಾಗ್ರಿಗಳನ್ನು ಇ–ಸಂಪನ್ಮೂಲ ಪ್ರವೇಶಾಂಕ ವಹಿ (e-Resources Access Register) ನಲ್ಲಿ ದಾಖಲಿಸಿರುವ ವಿವರ ಹಾಜರುಪಡಿಸಿಲ್ಲವೆಂದು ಉಲ್ಲೇಖಿಸಿ ಈ ಸಂಬಂಧದ 06 ಸಂಖ್ಯೆ ಪ್ರಕರಣಗಳನ್ನು ಪರಿಗಣಿಸಿ ಒಟ್ಟು ರೂ.4,86,656/– ಆಕ್ಷೇಪಿಸಲಾಗಿದೆ.<br><br>ಆದರೆ ವರದಿಯಲ್ಲಿ ಸೂಚಿಸಿರುವಂತೆ ಸೂಚಿತ 06 ಪ್ರಕರಣಗಳಲ್ಲಿ ಸರಬರಾಜು ಪಡೆಯುವ ವಸ್ತುಗಳು, ಕಛೇರಿಯ ಸಾಮಾನ್ಯ ನಿರ್ವಹಣೆಯ ಪಾವತಿಗಳಿಗೆ ಸಂಬಂಧಿಸಿದ್ದು ಇವುಗಳನ್ನು ಗ್ರಂಥಾಲಯದ ದಾಸ್ತಾನು ಮತ್ತು ವಿತರಣೆಯ ವಹಿಯಲ್ಲಿ ದಾಖಲಿಸಲಾಗಿದೆ ಮತ್ತು ಗ್ರಂಥಾಲಯದ ನಿರ್ವಹಣೆಯ ಸಲುವಾಗಿ ಬಳಕೆ ಮಾಡಲಾಗಿದೆ ಎಂದು ದೃಢೀಕರಿಸಿದೆ. |

| | |
|---|---|
| | ಅಲ್ಲದೇ ಸೂಚಿತವಾದ ಪಾವತಿಗಳನ್ನು ಕೇವಲ ಸರಬರಾಜು ಬಿಲ್‌ಗಳ ಪಾವತಿಯೇ ಅಗಿರದೇ ಗ್ರಂಥಾಲಯದ ಉಪಕರಣಗಳು, ಲೈಸನ್ಸಿಂಗ್ ಫೀ, ವಾರ್ಷಿಕ ನಿರ್ವಹಣೆ (AMC) ಶುಲ್ಕ ಅಗಿರುತ್ತದೆ. ಎಂಬ ವಿಷಯವನ್ನು ಲೆಕ್ಕಪರಿಶೋಧನೆ ಅವಗಾಹನೆಗೆ ತರಲಾಗಿದೆ. ಮತ್ತು ಸರಬರಾಜು ಪಡೆದಿರುವ ಸಾಮಗ್ರಿಗಳ ದಿನಾಂಕಗಳನ್ನು ಮತ್ತು ವಿವರಗಳನ್ನು ಗಮನಿಸಲಾಗಿ, ಅವುಗಳು ವಾರ್ಷಿಕವಾಗಿ ಸರಬರಾಜಿಗೆ ನಿರ್ಧರಿಸುವಂತಹ ವಸ್ತುಗಳಾಗಿರುವುದಿಲ್ಲ ಆಯಾ ಸಂದರ್ಭಕ್ಕೆ ಅನುಗುಣವಾಗಿ, ಮತ್ತು ಅಗತ್ಯಕ್ಕೆ ತಕ್ಕಂತೆ ಸರಬರಾಜು ಪಡೆದಿರುವ ಉಪಕರಣಗಳಾಗಿರುತ್ತದೆ.<br><br>ಅಲ್ಲದೇ ವರದಿಯಲ್ಲಿ ಸೂಚಿತವಾಗಿರುವಂತೆ ಬಿಲ್‌ಗಳಲ್ಲಿ ಸರಬರಾಜು ಪಡೆದಿರುವ ವಸ್ತುಗಳ ಉಪಕರಣಗಳ ದಾಸ್ತಾನು ಮತ್ತು ಬಳಕೆಯ ಧೃಢೀಕರಣವನ್ನು ಗ್ರಂಥಪಾಲಕರು ಸ್ನಾತಕೋತ್ತರ ಗ್ರಂಥಾಲಯ ಇವರು ಧೃಢೀಕರಿಸುವ ವಿವರಗಳನ್ನು ಅಡಕಗೊಳಿಸಿದೆ.<br><br>ಅದ ಕಾರಣ ಪ್ರಸ್ಥಾವಿತ ಕಂಡಿಕೆಯಲ್ಲಿನ ಆಕ್ಷೇಪಿತ ಮೊತ್ತ ರೂ.4,86,656/– ಗಳನ್ನು ಕೈ ಬಿಡಲು ಕೋರಿದೆ. (ಅಡಕ: ವರದಿಯಲ್ಲಿ ಸೂಚಿತವಾಗಿರುವ ಬಿಲ್‌ಗಳಲ್ಲಿ ಸರಬರಾಜು ಪಡೆದ ಸಾಮಾಗ್ರಿಗಳ ದಾಸ್ತಾನು ಮತ್ತು ಬಳಕೆ ಧೃಢೀಕರಣ ಪತ್ರ) |
| **8.19. ಪ್ರಯೋಗಾಲಯ ಉಪಕರಣ ಖರೀದಿ ಸಂಬಂಧ ಗುತ್ತಿಗೆ ಕರಾರು ಮಾಡಿಕೊಳ್ಳದೇ ಬಿಲ್ಲು ಪಾವತಿಸಿರುವುದು :**<br><br>2018–19ನೇ ಸಾಲಿನಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಆಹಾರ ವಿಜ್ಞಾನ ಮತ್ತು ಪೋಷಣೆ ಅಧ್ಯಯನ ವಿಭಾಗದ ಪ್ರಯೋಗಾಲಯಕ್ಕೆ ಉಪಕರಣಗಳನ್ನು ಖರೀದಿಸುವ ಸಲುವಾಗಿ ರೂ.2,49,924/– ಗಳನ್ನು (ಧನಾದೇಶ ಸಂಖ್ಯೆ:953878,ದಿನಾಂಕ:03.07.2018) ಮೆ.ಸಿಗ್ನೋರ್ ಟ್ರೇಡಿಂಗ್ ಕಂಪನಿ, ಬೆಂಗಳೂರು ಇವರಿಗೆ ಪಾವತಿಸಲಾಗಿದ್ದು, ಈ ಸಂಬಂಧ ಪೂರಕ ದಾಖಲಾತಿಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ವಿಚಾರಣಾ ಪತ್ರ ಸಂಖ್ಯೆ:15/2019–20/14.02.2020ನ್ನು ನೀಡಲಾಗಿತ್ತು.<br><br>ಹಾಜರು ಪಡಿಸಲಾದ ದಾಖಲಾತಿಗಳನ್ನು ಪರಿಶೀಲಿಸಲಾಗಿ ಸದರಿ ಉಪಕರಣದ ಸರಬರಾಜುದಾರರೊಂದಿಗೆ ಗುತ್ತಿಗೆ ಕರಾರು ಮಾಡಿಕೊಳ್ಳದೆಯೇ ಬಿಲ್ಲು ಪಾವತಿಸಿರುವುದು ಕಂಡು ಬಂದಿರುತ್ತದೆ. ಕರ್ನಾಟಕ ಲೋಕೋಪಯೋಗಿ ಇಲಾಖಾ ಸಂಹಿತೆ–2014ರ ಅನುಚ್ಛೇಧ–177ರನ್ವಯ ಟೆಂಡರ್ ಅಂಗೀಕಾರವಾದ ನಂತರ ಗುತ್ತಿಗೆ ಕರಾರು ಮಾಡಿಕೊಳ್ಳಬೇಕಾಗಿರುತ್ತದೆ ಹಾಗೂ ಅನುಚ್ಛೇಧ–199 ರಂತೆ ಟೆಂಡರ್ ಆದ ಮೊತ್ತದ ಶೇ.5 ರಂತೆ ಕಾರ್ಯನಿರ್ವಹಣಾ ಖಾತರಿ ಠೇವಣಿ ಪಡೆಯಬೇಕಾಗಿರುತ್ತದೆ. ಹೀಗಾಗಿ ಉಪಕರಣಗಳ ಖರೀದಿ ಮೊತ್ತ ರೂ.2,49,924/–ಕ್ಕೆ | ಪ್ರಸ್ಥಾವಿತ ಕಂಡಿಕೆಯಲ್ಲಿನ ವಿಷಯಕ್ಕೆ ಸಂಬಂಧಿಸಿದಂತೆ ಸದರಿ ಕಂಡಿಕೆಯಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಆಹಾರ ವಿಜ್ಞಾನ ಮತ್ತು ಪೋಷಣೆ ಅಧ್ಯಯನ ವಿಭಾಗದಲ್ಲಿ 2018–19ನೇ ಸಾಲಿನಲ್ಲಿ ಪ್ರಯೋಗಾಲಯಕ್ಕೆ ಉಪಕರಣವನ್ನು ಖರೀದಿಸುವ ಸಂಧರ್ಭದಲ್ಲಿ ಖರೀದಿ ನಿಯಮಗಳ ಪ್ರಕಾರ ಪಾಲಿಸಬೇಕಾದ ಸಂಬಂಧಿಸಿದ ಏಜೆನ್ಸಿಯೊಂದಿಗೆ (ಮೆ.ಸಿಗ್ನೋರ್ ಟ್ರೇಡಿಂಗ್ ಕಂಪನಿ, ಬೆಂಗಳೂರು) ಮಾಡಿಕೊಂಡಿರುವ ಕರಾರುಪತ್ರ ಮತ್ತು ಸದರಿ ಏಜೆನ್ಸಿಯಿಂದ ಪಡೆಯಬೇಕಾಗಿದ್ದ ಭದ್ರತಾ ಠೇವಣಿಯ ವಿವರವನ್ನು ಹಾಜರುಪಡಿಸದೇ ಇರುವ ಬಗ್ಗೆ ಉಲ್ಲೇಖಿಸಲಾಗಿದೆ<br><br>ಸದರಿ ಪ್ರಕರಣದಲ್ಲಿ ಆಹಾರ ವಿಭಾಗದ ಮುಖ್ಯಸ್ಥರು ಏಜೆನ್ಸಿಯೊಂದಿಗೆ ಮಾಡಿಕೋಡಿರುವ<br>1. ಕರಾರು ಪತ್ರ (ದಿನಾಂಕ:30.03.2018) ಪ್ರತಿ<br>2. ಏಜೆನ್ಸಿಯಿಂದ ಪಡೆದಿರುವ ಕಾರ್ಯನಿರ್ವಹಣಾ ಖಾತರಿ ಠೆವಣಿ (ಇ.ಎಂ.ಡಿ) ವಿವರ ಡಿ.ಡಿ ರೂಪದಲ್ಲಿ ಡಿ.ಡಿ ಸಂಖ್ಯೆ:520886/02.11.2019 ರೂ.12,497/– ಅಡಕಗೊಳಿಸಿದೆ<br>ಆದ ಕಾರಣ ಈ ಕಂಡಿಕೆ ಕೈ ಬಿಡಲು ಕೋರಿದೆ. |

| | |
|---|---|
| ಕಾರ್ಯನಿರ್ವಹಣಾ ಖಾತರಿ ಠೇವಣಿಯಾಗಿ ಶೇ.5ರಷ್ಟು, ಅಂದರೆ ರೂ.12,497/–ಗಳನ್ನು ಕಾರ್ಯನಿರ್ವಹಣಾ ಭದ್ರತಾ ಠೇವಣಿ ಪಡೆಯಬೇಕಾಗಿದ್ದು, ಈ ಲೋಪಕ್ಕೆ ಕಾರಣರಾಗಿರುವವರ ವಿರುದ್ಧ ಆಡಳಿತಾತ್ಮಕ ಕ್ರಮ ವಹಿಸಲು ಕೋರಿದೆ. | |
| **8.20. "ಡಾಟಾ ಅನಾಲಿಸಿಸ್ ಅಂಡ್ ಲರ್ನಿಂಗ್ 2018" ಅಂತರ ರಾಷ್ಟ್ರೀಯ ಸಮ್ಮೇಳನಕ್ಕೆ ಸಾಮಗ್ರಿ ಖರೀದಿ/ಸೇವೆ ಪಡೆಯುವಾಗ ಪಾರದರ್ಶಕತೆ ನಿಯಮಗಳನ್ನು ಪಾಲನೆ ಮಾಡದಿರುವುದು :**<br><br>ವಿಶ್ವವಿದ್ಯಾನಿಲಯದ ಗಣಕ ವಿಜ್ಞಾನ ಅಧ್ಯಯನ ವಿಭಾಗದವರು ದಿನಾಂಕ:30.03.2018 ಮತ್ತು 31.03.2018 ರಂದು ನಡೆಸಿದ "ಡಾಟಾ ಅನಾಲಿಸಿಸ್ ಅಂಡ್ ಲರ್ನಿಂಗ್ 2018" (ಡಿಎಎಲ್–18) ಅಂತರ ರಾಷ್ಟ್ರೀಯ ಸಮ್ಮೇಳನಕ್ಕೆ ರೂ.2,43,353/–ಗಳ ವೆಚ್ಚದಲ್ಲಿ ಅಗತ್ಯವಿರುವ ವಿವಿಧ ಸಾಮಗ್ರಿಗಳನ್ನು ಖರೀದಿಸಲಾಗಿರುತ್ತದೆ. ಈ ಸಮ್ಮೇಳನಕ್ಕೆ ಮಾಡಲಾಗಿರುವ ವೆಚ್ಚಗಳಲ್ಲಿ ಮೆ.ನವನೀತ್ ಕೇಟರರ್ಸ್ ರವರಿಂದ ಊಟೋಪಚಾರ ಸೇವೆಯನ್ನು ಪಡೆದಿದ್ದು, ಈ ಬಾಬ್ತು ರೂ.1,24,040/–ಗಳ ಬಿಲ್ಲನ್ನು ಪಾವತಿಸಲಾಗಿರುತ್ತದೆ. ಕೇಟರಿಂಗ್ ಬಿಲ್ಲಿನ ಮೊತ್ತ ರೂ.1.00ಲಕ್ಷ ಮೀರಿರುವುದರಿಂದ, ಈ ಸೇವೆಯನ್ನು ಪಡೆಯುವುದಕ್ಕೆ ಟೆಂಡರ್ ಕರೆದಿರುವ ಬಗ್ಗೆ ಮಾಹಿತಿ ಒದಗಿಸಲು ಕೋರಿ ವಿಚಾರಣೆ ಸಂ:5/29–7–2020ನ್ನು ನೀಡಿದ್ದರೂ ವಿಶ್ವವಿದ್ಯಾನಿಲಯದಿಂದ ಯಾವುದೇ ಮಾಹಿತಿ/ದಾಖಲಾತಿಗಳನ್ನು ಒದಗಿಸಿರುವುದಿಲ್ಲ. ಆದ್ದರಿಂದ ಈ ಲೋಪಕ್ಕೆ ಸಮಂಜಸವಾದ ವಿವರಣೆ ಒದಗಿಸುವವರೆಗೆ ಈ ಬಾಬ್ತು ಪಾವತಿ ಮಾಡಿರುವ ಮೊತ್ತ **ರೂ.1,24,040/–ಗಳನ್ನು ಆಕ್ಷೇಪಣೆಯಲ್ಲಿರಿಸಿದೆ.** | ಪ್ರಸ್ಥಾವಿತ ಕಂಡಿಕೆಯಲ್ಲಿನ ವಿಷಯಕ್ಕೆ ಸಂಬಂಧಿಸಿದಂತೆ 2018–19ನೇ ಸಾಲಿನಲ್ಲಿ ವಿಶ್ವವಿದ್ಯಾನಿಲಯದ ಗಣಕ ವಿಜ್ಞಾನ ಅಧ್ಯಯನ ವಿಭಾಗದಲ್ಲಿ ಘಟಿಸಿರುವ "ಡಾಟಾ ಅನಾಲಿಸಿಸ್ ಅಂಡ್ ಲರ್ನಿಂಗ್ 2018" (ಡಿಎಎಲ್–18) ಅಂತರ ರಾಷ್ಟ್ರೀಯ ಸಮ್ಮೇಳನದಲ್ಲಿ ಭಾಗಿಯಾಗಿರುವ ಅತಿಥಿಗಳಿಗೆ ಊಟೋಪಚಾರದ ಸೇವೆಯನ್ನು ಒದಗಿಸಿರುವ ಏಜೆನ್ಸಿ ಮೆ.ನವನೀತ್ ಕೇಟರರ್ಸ್ ಮೈಸೂರು ಪಾವತಿಸಿರುವ ಮೊತ್ತ ರೂ.1,24,040/– ಆಗಿರುವ ಹಿನ್ನೆಲೆಯಲ್ಲಿ ಕೆಟಿಟಿಪಿ–1998–2000 ನಿಯಮಗಳ ಪ್ರಕಾರ ಪಾವತಿಗೆ ನಿಗಧಿತವಾಗಿರುವ ಏಜೆನ್ಸಿಯು ಟೆಂಡರ್ ಆಧಾರದಲ್ಲಿ ನಿರ್ಧರಿತವಾಗಬೇಕಾಗಿರುತ್ತದೆ ಸದರಿ ಪ್ರಕರಣದಲ್ಲಿ ಸಮ್ಮೇಳನಕ್ಕೆ ಉಟೋಪಚಾರ ಆಹಾರ ಸರಬರಾಜು ಸೇವೆಯನ್ನು ಸರಬರಾಜು ಮಾಡಿರುವ ಏಜೆನ್ಸಿಯು ವಿಶ್ವವಿದ್ಯಾನಿಲಯದ ಟೆಂಡರ್‌ನಲ್ಲಿ ನಿರ್ಧರಿತವಾಗಿರುವ ಏಜೆನ್ಸಿಯಾಗಿದೆ [ಈ ಸಂಬಂಧದ ಅದೇಶದ ಪ್ರತಿ (ಮೆ.ನವನೀತ್ ಕೇಟರರ್ಸ್ ಮೈಸೂರು ಟೆಂಡರ್‌ನಲ್ಲಿ ನಿರ್ಧರಿತವಾಗಿರುವ ಆದೇಶ ಪ್ರತಿ ಅಡಕಗೊಳಿಸಿದೆ]<br>ಅಲ್ಲದೆ ಸರಬರಾಜು ಬಿಲ್‌ನಲ್ಲಿನ ದರಗಳು ಟೆಂಡರ್‌ನಲ್ಲಿ ಊಟೋಪಚಾರ ನಿರ್ಧರಿತವಾಗಿರುವ ದರಗಳ ಅನುಗುಣವಾಗಿದೆ ಮೆ.ನವನೀತ್ ಕೇಟರರ್ಸ್ ಮೈಸೂರು (ದಿನಾಂಕ:30.03.2018ರ ಬಿಲ್ ಪ್ರತಿ ಅಡಕಗೊಳಿಸಿದೆ)<br>ಆದ ಕಾರಣ ಪ್ರಸ್ತಾಪಿತ ಆಕ್ಷೇಪಣೆ ಮೊತ್ತ ರೂ.1,24,040/–ಗಳನ್ನು ಕೈ ಬಿಡಲು ಕೋರಿದೆ. |
| **8.21. ವಿಶ್ವವಿದ್ಯಾನಿಲಯದ ನೌಕರರಿಗೆ ಪಾವತಿಸಿರುವ ಮತ್ತು ವಸೂಲಾತಿಯಾಗಿರುವ ಗೃಹ ನಿರ್ಮಾಣ ಮುಂಗಡದ ವಿವರಗಳನ್ನು ಹಾಜರುಪಡಿಸದಿರುವುದು :**<br>2017–18ನೇ ಸಾಲಿನಲ್ಲಿ ಗೃಹ ನಿರ್ಮಾಣಮುಂಗಡ ತೀರುವಳಿಯಾಗದೆ ಬಾಕಿಯುಳಿದಿರುವ ವಿವರ (ಅಂತಿಮ ಶಿಲ್ಕು), 2018–19 ನೇ ಸಾಲಿನಲ್ಲಿಗೃಹ ನಿರ್ಮಾಣ ಮುಂಗಡಪಡೆದುಕೊಂಡ ನೌಕರರುಗಳ ವಿವರಗಳು ಹಾಗೂ ಸಾಲ ತೀರುವಳಿಯಾಗಿರುವ ಬಗ್ಗೆ ದಾಖಲಾತಿಗಳನ್ನು ಹಾಜರುಪಡಿಸುವಂತೆ ಲೆಕ್ಕತನಿಖಾ ವಿಚಾರಣಾ ಪತ್ರಸಂಖ್ಯೆ:112/30.05.2020 ರಲ್ಲಿಕೋರಲಾಗಿದ್ದರೂ, ವಿಶ್ವವಿದ್ಯಾನಿಲಯದಿಂದಯಾವುದೇ ಮಾಹಿತಿ ನೀಡಿರುವುದಿಲ್ಲ. ಕೋರಲಾದದಾಖಲಾತಿಗಳನ್ನು | ಪ್ರಸ್ಥಾವಿತ ಕಂಡಿಕೆಯಲ್ಲಿ ಸೂಚಿತವಾಗಿರುವ ವಿವರಗಳನ್ನು 2019–20ನೇ ಸಾಲಿನ ಲೆಕ್ಕತನಿಖೆಗೆ ಹಾಜರುಪಡಿಸಲು ಕ್ರಮವಹಿಸಲಾಗಿದೆ ಎಂಬ ವಿಷಯವನ್ನು ಅವಗಾಹನೆಗೆ ತರಲಾಗಿದೆ. |

| | |
|---|---|
| ಹಾಜರುಪಡಿಸದಿರುವುದರಿಂದ ಹಣಕಾಸು ವರ್ಷದಆರಂಭದಲ್ಲಿ ಬಾಕಿ ಇದ್ದ ಮೊತ್ತ, ಪ್ರಸಕ್ತ ಸಾಲಿನಲ್ಲಿ ಮಂಜೂರಾದ ಮುಂಗಡ ಮೊತ್ತ, ವಸೂಲಿಯಾದಮೊಬಲಗಿನ ವಿವರಗಳನ್ನು ಪರಿಶೀಲಿಸಲು ಸಾಧ್ಯವಾಗಿರುವುದಿಲ್ಲ.ಆದ್ದರಿಂದಗೃಹ ನಿರ್ಮಾಣ ಮುಂಗಡಮಂಜೂರಾತಿಯಲ್ಲಿ ಹಾಗೂ ವಸೂಲಾತಿ/ತೀರುವಳಿಯಲ್ಲಿ ಲೋಪದೋಷಗಳೇನಾದರೂಸಂಭವಿಸಿದ್ದಲ್ಲಿ ಸಂಬಂಧಪಟ್ಟಅಧಿಕಾರಿ/ನೌಕರರೇ ಹೊಣೆಗಾರರಾಗಿದ್ದು ದಾಖಲಾತಿಗಳನ್ನು ಹಾಜರುಪಡಿಸದಿರುವ ಬಗ್ಗೆ ಸಂಬಂಧಪಟ್ಟವರ ಮೇಲೆ ಆಡಳಿತಾತ್ಮಕ ಕ್ರಮಜರುಗಿಸಲು ಸೂಚಿಸಿದೆ. | |
| **8.22. ವಿಶ್ವವಿದ್ಯಾನಿಲಯದ ವಿವಿಧ ವಿಭಾಗಗಳಲ್ಲಿ ಪಾವತಿಗೆ ಸಂಬಂಧಿಸಿದಂತೆ ದಾಖಲೆಗಳನ್ನು ಹಾಜರುಪಡಸದಿರುವುದು :**<br>2018–19ನೇ ಸಾಲಿನಲ್ಲಿ ವಿಶ್ವವಿದ್ಯಾನಿಲಯದ ವಿವಿಧ ವಿಭಾಗಗಳು,ಅಂಗ ಸಂಸ್ಥೆಗಳು,ಕಾಲೇಜುಗಳ ಲೆಕ್ಕತಪಾಸಣೆ ಸಂದರ್ಭದಲ್ಲಿ ಬಿ.ಆರ್ ವಹಿ,ಬ್ಯಾಂಕ್ ಸ್ಟ್ರೋಲ್,ನಗದು ಪುಸ್ತಕ,ವಾರ್ಷಿಕ ಲೆಕ್ಕಪತ್ರದನ್ವಯ ಸದರಿ ಸಾಲಿನಲ್ಲಿ ವೆಚ್ಚ ಭರಿಸಿರುವ ಓಚರ್‌ಗಳನ್ನು ಮತ್ತು ಪೂರಕ ಲೆಕ್ಕಪತ್ರ ದಾಖಲೆಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲ. ಸದರಿ ಸಾಲಿನಲ್ಲಿವೋಚರ್‌ಗಳು ಮತ್ತು ದಾಖಲಾತಿಗಳನ್ನುನೀಡದಿರುವ ವೆಚ್ಚದ ವಿವರಗಳನ್ನು **ಅನುಬಂಧ–40ರಲ್ಲಿ** ನೀಡಲಾಗಿದೆ. ಈ ವೆಚ್ಚಗಳಿಗೆ ಸಂಬಂಧಿಸಿದಂತೆ ಓಚರ್ಸ್‌ಗಳನ್ನು, ದರಪಟ್ಟಿ, ಸರಬರಾಜುಆದೇಶ, ಟೆಂಡರ್/ಇ–ಪ್ರಕ್ಯೂರ್‌ಮೆಂಟ್‌ಕಡತ, ದಾಸ್ತಾನು ಸ್ವೀಕೃತಿ ಮತ್ತು ವಿತರಣಾ ವಹಿ, ವಾರ್ಷಿಕದಾಸ್ತಾನು ಪರಿಶೀಲನಾ ವರದಿ ಹಾಗೂ ಇನ್ನಿತರೇ ಪೂರಕ ಲೆಕ್ಕಪತ್ರ ದಾಖಲೆಗಳನ್ನು ಹಾಜರುಪಡಿಸುವಂತೆವಿಚಾರಣಾ ಪತ್ರ ಸಂಖ್ಯೆ:10/10.02.2020, 16/15.02.2020, 95/26.05.2020, 126/08.06.2020, 144/08.06.2020, 185/11.06.2020, 182/11.06.2020 ,96/26.05.2020 158/10.06.2020, 192/11.06.2020 173/11.06.2020,47/13.03.2020, 68/19.05.2020, 75/19.05.2020 ಹಾಗೂ 169/10.06.2020 ಗಳನ್ನುನೀಡಲಾಗಿದ್ದರೂಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ಆದ್ದರಿಂದ ವೋಚರ್‌ಗಳು ಮತ್ತು ದಾಖಲಾತಿಗಳನ್ನುನೀಡದಿರುವ ವೆಚ್ಚದಒಟ್ಟು**ಮೊತ್ತ ರೂ.4,43,93,164/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.** | ಪ್ರಸ್ತಾಪಿತ ಕಂಡಿಕೆಯಲ್ಲಿನ ವಿಷಯಕ್ಕೆ ಸಂಬಂಧಿಸಿದಂತೆ ಅನುಬಂಧ ಸಂಖ್ಯೆ–40 ರಲ್ಲಿ ಸೂಚಿತವಾಗಿರುವ ವಿಭಾಗಗಳಿಂದ 2018–19ನೇ ಸಾಲಿನಲ್ಲಿ ಲೆಕ್ಕಪರಿಶೋಧನೆಗೆ ಹಾಜರುಪಡಿಸಲಾಗದೆ ಇರುವ ದಾಖಲಾತಿಗಳನ್ನು (ಆಡಿಟ್ ವರದಿಯಲ್ಲಿ ಸೂಚಿತವಾಗಿರುವಂತೆ) 2019–20ನೇ ಸಾಲಿನ ಲೆಕ್ಕತನಿಖೆಗೆ ಹಾಜರುಪಡಿಸಲು ಕ್ರಮವಹಿಸಲಾಗಿದೆ ಎಂಬ ವಿಷಯವನ್ನು ಅವಗಾಹನೆಗೆ ತರಲಾಗಿದೆ. |
| **8.23. ಟೆಂಡರ್ ಪ್ರಕ್ರಿಯೆ ಕೈಗೊಳ್ಳದೆ ಸರಕು/ಸೇವೆಗಳನ್ನು ಬಿಡಿ ಬಿಡಿಯಾಗಿ ದರಪಟ್ಟಿ ಕರೆದು ಖರೀದಿಸಿರುವುದು :**<br>ಮೈಸೂರು ವಿಶ್ವವಿದ್ಯಾನಿಲಯದ ಕಛೇರಿಗಳು, ವಿವಿಧ ವಿಭಾಗಗಳು ಹಾಗೂ ಅಂಗ ಸಂಸ್ಥೆಗಳಲ್ಲಿ 2018–19ನೇ ಸಾಲಿನಲ್ಲಿ ಸರಕು/ಸೇವೆಗಳಿಗಾಗಿ ದರಪಟ್ಟಿ ಆಹ್ವಾನಿಸಿ, ಪಾರದರ್ಶಕತೆಯ ನಿಯಮಗಳನ್ನು ಪಾಲಿಸಬೇಕಾಗುತ್ತದೆಂಬ ಕಾರಣದಿಂದ ವಿಭಜನೆ ಮಾಡಿ ಸರಬರಾಜು/ಕಾರ್ಯಾದೇಶ ನೀಡಿರುವುದನ್ನು | ಪ್ರಸ್ತಾಪಿತ ಕಂಡಿಕೆಯಲ್ಲಿ ವಿಶ್ವವಿದ್ಯಾನಿಲಯದ ಅನುಬಂಧ–41 ರಲ್ಲಿ ಸೂಚಿತವಾಗಿರುವ ವಿಭಾಗಗಳಲ್ಲಿ, ಅಯಾ ವಿಭಾಗಗಳಿಗೆ ಸರಬರಾಜು ಪಡೆದಿರುವ ಸಾಮಗ್ರಿಗಳ ಬಾಬ್ತು ಅಥವಾ ಪಡೆದಿರುವ ಅವಶ್ಯಕ ಸೇವೆಯ ಸಂಬಂಧ ಪಾವತಿಸಿರುವ ಮೊತ್ತ ರೂ.1.00 ಲಕ್ಷ ಮೀರಿದ್ದಾಗ್ಯೂ |

| | |
|---|---|
| ಗಮನಿಸಲಾಗಿದೆ. ಹೀಗೆ ಸಂಗ್ರಹಣೆಯನ್ನು ಉದ್ದೇಶ ಪೂರ್ವಕವಾಗಿ ವಿಭಜಿಸಿ ದರಪಟ್ಟಿ ಪಡೆದುಕೊಂಡು ಸರಕು/ಸೇವೆಗಳನ್ನು ಖರೀದಿಸಿರುವ/ಪಡೆದಿರುವ ವಿವರಗಳನ್ನು **ಅನುಬಂಧ–41ರಲ್ಲಿ**ನೀಡಲಾಗಿದೆ. ಹೀಗೆ ಸರಕು/ಸೇವೆಗಳ ಒಟ್ಟು ಮೌಲ್ಯ 1 ಲಕ್ಷ ಮೀರಿದ್ದರೂ ಟೆಂಡರ್ ಕರೆಯದೆ ದರಪಟ್ಟಿ ಮೂಲಕ ಖರೀದಿಸಿರುವುದು ಪಾರದರ್ಶಕತೆಯ ನಿಯಮಗಳ ಉಲ್ಲಂಘನೆಯಾಗಿರುತ್ತದೆ. ಹೀಗಾಗಿ ಈ ಬಾಬ್ತು ಮೊತ್ತ **ರೂ.12,34,029/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.** | ಸಾಮಗ್ರಿಗಳನ್ನು ಸರಬರಾಜು ಮಾಡಿರುವ ಮತ್ತು ಸೂಚಿತವಾಗಿರುವ ಏಜೆನ್ಸಿಗಳಿಂದ ಸೇವೆಯನ್ನು ಪಡೆಯುವ ಸಲುವಾಗಿ ಕೆ.ಟಿ.ಪಿ.ಪಿ ನಿಯಮಗಳನ್ವಯ ಸಾಮಗ್ರಿಗಳ ಸರಬರಾಜು/ಸೇವೆ ಒದಗಿಸುವ ಏಜೆನ್ಸಿಯ ನಿರ್ಧರಣೆಯನ್ನು ಟೆಂಡರ್ ಪ್ರಕ್ರಿಯೆ ಮೂಲಕ ನಿರ್ಧರಿಸದೇ ದರಪಟ್ಟಿ ಅಹ್ವಾನಿಸಿ ಅವುಗಳ ಸೂಚಿಸಿರುವ ದರದಲ್ಲಿ L-I ಅಗಿರುವ ಏಜೆನ್ಸಿಯಿಂದ ಸರಬರಾಜು/ಸೇವೆಯನ್ನು ಪಡೆದಿರುವುದನ್ನು ಆಕ್ಷೇಪಿಸಲಾಗಿದೆ.<br><br>ಈ ಸಂಬಂಧದ ವಿವರಣೆ ಈ ರೀತಿಯಿದೆ ಆಯಾ ವಿಭಾಗಗಳು ಸರಬರಾಜು ಪಡೆಯಬೇಕಾದ ಸಾಮಗ್ರಿಗಳೇ ಆಗಲಿ ಪಡೆಯಬೇಕಾದ ಸೇವೆಯೇ ಆಗಲಿ ಪೂರ್ವನಿರ್ಧರಿತವಾದ ಅಂಶಗಳಾಗಿರಲಿಲ್ಲ ಎಂಬ ಅಂಶವನ್ನು ಲೆಕ್ಕಪರಿಶೋಧನೆ ಅವಗಾಹನೆಗೆ ತರಲಾಗಿದೆ.<br><br>ಸರಬರಾಜು ಪಡೆಯಬೇಕಾಗಿರುವ ಸಾಮಗ್ರಿಗಳ ಮತ್ತು ಸೇವೆಯ ಬೇಡಿಕೆಯು ಅನಿರಿಕ್ಷಿತವಾಗಿ ಉದ್ಭವಿಸಿರುವ ಹಿನ್ನೆಲೆಯಲ್ಲಿ ಸರಬರಾಜು ಪಡೆದಿರುವ ಸಾಮಾಗ್ರಿಗಳ/ಸೇವೆಯ ಅನಿವಾರ್ಯತೆಯ ತುರ್ತು ಹಿನ್ನಲೆಯಲ್ಲಿ ಟೆಂಡರ್ ಪ್ರಕ್ರಿಯೆಗೆ ಬೇಕಾಗುತ್ತಿದ್ದ ದೀರ್ಘಕಾಲಾವಕಾಶ ಪರಿಗಣಿಸಿ ದರಪಟ್ಟಿ ಆಧಾರದಲ್ಲಿ ಸರಬರಾಜು ಪಡೆಯಲಾಗಿದೆ.<br>ಈ ರೀತಿಯ ಪ್ರಕರಣಗಳು ಮುಂದಿನ ದಿನಗಳಲ್ಲಿ ಪುನರಾವರ್ತನೆ ಆಗದಂತೆ ಕ್ರಮವಹಿಸಲಾಗುವುದು ಮತ್ತು ಸರಬರಾಜು ಪಡೆಯಬೇಕಾದ ಸಾಮಗ್ರಿಯ/ಸೇವೆಯ ಮೊತ್ತ ರೂ.1.00 ಲಕ್ಷ ಮೀರುವ ಪ್ರಕರಣಗಳಲ್ಲಿ ಟೆಂಡರ್ ಕರೆಯುವ ನಿಯಮ ಮತ್ತು ಕೆ.ಟಿ.ಪಿ.ಪಿ ನಿಯಮ/ಮಾರ್ಗಸೂಚಿಗಳನ್ನು ಯಥಾವತ್ತಾಗಿ ಪಾಲಿಸಲಾಗುವುದು ಎಂಬ ಅಂಶವನ್ನು ಲೆಕ್ಕಪರಿಶೋಧನೆ ಅವಗಾಹನೆಗೆ ತರಲಾಗಿದೆ.<br><br>ಈ ಸಂಬಂಧಿದ ಆಕ್ಷೇಪಿತ ಮೊತ್ತ ರೂ.12,34,029/– ಕಂಡಿಕೆ ಕೈ ಬಿಡಲು ಕೋರಿದೆ. |
| **8.24. ವಿಶ್ವವಿದ್ಯಾನಿಲಯದ ಆಸ್ತಿ ವಹಿ ಪರಿಶೀಲನೆ :**<br>2018–19ನೇ ಸಾಲಿನ ಲೆಕ್ಕಪರಿಶೋಧನೆ ಸಂದರ್ಭದಲ್ಲಿ ಆಸ್ತಿ ವಹಿ (Property register) ಯನ್ನು ಪರಿಶೀಲಿಸಿದಾಗ ಮೈಸೂರು ವಿಶ್ವವಿದ್ಯಾನಿಲಯದ ಅಧೀನಕ್ಕೊಳ ಪಡುವ ಭೂಮಿಯ ಸ್ವತ್ತಿನ ವಿವರಗಳನ್ನು ಅಂದರೆ ಮೈಸೂರಿನ ಮಾನಸ ಗಂಗೋತ್ರಿ, ಚಾಮರಾಜನಗರ, ಮಂಡ್ಯ, ಹಾಸನ ಮತ್ತು ಬೆಂಗಳೂರು (ಡಾಲರ್ಸ್ ಕಾಲೋನಿ, ತರಗುಪೇಟೆ) ಗಳಲ್ಲಿರುವ ವಿಶ್ವವಿದ್ಯಾನಿಲಯದ ಆಸ್ತಿಗಳ ವಿವರಗಳನ್ನು ವಹಿಯಲ್ಲಿ ನಮೂದಿಸಿರುವುದನ್ನು ಪರಿಶೀಲಿಸಿದೆ. ವಿವರವನ್ನು **ಅನುಬಂಧ–42**ರಲ್ಲಿ ನೀಡಿದೆ. | ಪ್ರಸ್ತಾವಿತ ಕಂಡಿಕೆಯಲ್ಲಿನ ವಿಷಯಕ್ಕೆ ಸಂಬಂಧಿಸಿದಂತೆ ವಿಶ್ವವಿದ್ಯಾನಿಲಯದಲ್ಲಿನ ದಾಖಲೆಗಳ ಪ್ರಕಾರ ಮೈಸೂರು ವಿಶ್ವವಿದ್ಯಾನಿಲಯದ ಅಧೀನಕ್ಕೆ ಒಳಪಡುವ ಮೈಸೂರಿನ ಮಾನಸ ಗಂಗೋತ್ರಿ ಚಾಮರಾಜನಗರ, ಮಂಡ್ಯ, ಹಾಸನ, ಬೆಂಗಳೂರಿನ ತರಗುಪೇಟೆ ಡಾಲರ್ಸ್‌ಕಾಲೋನಿಗಳಲ್ಲಿರುವ ಸ್ಥಿರ ಆಸ್ತಿಯೂ ಸೇರಿದಂತೆ ಎಲ್ಲಾ ವಿವರಗಳನ್ನು ಸಕ್ಷಮ ಅಧಿಕಾರಿಗಳಾದ ಎಸ್ಟೇಟ್ ಅಫೀಸರ್ ರವರಿಂದ ಧೃಢೀಕೃತವಾಗಿರುವ ಪಟ್ಟಿಯನ್ನು/ವಿವರವನ್ನು ಲೆಕ್ಕತನಿಖೆಗೆ ಹಾಜರುಪಡಿಸಲಾಗಿದೆ. |

| | |
|---|---|
| **8.25. 2018–19ನೇ ಸಾಲಿನ ಸಿಂಡಿಕೇಟ್ ಸಭೆಯ ತೀರ್ಮಾನಗಳಿಗೆ ಸರ್ಕಾರದಿಂದ ಅನುಮೋದನೆ ಪಡೆದಿರುವ ಆದೇಶದ ಪ್ರತಿಗಳನ್ನು ಹಾಜರುಪಡಿಸದಿರುವುದು :**<br>ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ–2000ದ ಪ್ರಕರಣ–41ರ ಅನುಸಾರ ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸಭೆಯು 2018–19ನೇ ಸಾಲಿನಲ್ಲಿ ತೆಗೆದುಕೊಂಡಿರುವ ನಿರ್ಣಯಗಳಿಗೆ ಸರ್ಕಾರದಿಂದ ಅನುಮೋದನೆ ಪಡೆದಿರುವ ಬಗ್ಗೆ ವಿವರಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ವಿಚಾರಣೆ ಪತ್ರ ಸಂಖ್ಯೆ:22/08.06.2020ರಲ್ಲಿ ಕೋರಲಾಗಿದ್ದರೂ ಯಾವುದೇ ಮಾಹಿತಿಯನ್ನು ಹಾಜರುಪಡಿಸಿರುವುದಿಲ್ಲ. ಸರ್ಕಾರದ ಅನುಮೋದನೆಯಿಲ್ಲದೆ ವಿಶ್ವವಿದ್ಯಾನಿಲಯವು ಕೈಗೊಳ್ಳುವ ತೀರ್ಮಾನಗಳು ಅಸಿಂಧುವಾಗುವುದರಿಂದ ಈ ಬಗ್ಗೆ ದಾಖಲಾತಿಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಲು ಸೂಚಿಸಿದೆ. | ಪ್ರಸ್ಥಾಪಿತ ಕಂಡಿಕೆಯಲ್ಲಿನ ವಿಷಯಕ್ಕೆ ಸಂಬಂಧಿಸಿದಂತೆ 2018–19ನೇ ಸಾಲಿನಲ್ಲಿ ವಿಶ್ವವಿದ್ಯಾನಿಲಯದಲ್ಲಿ ನೆಡೆದಿರುವ ಎಲ್ಲಾ ಸಿಂಡಿಕೇಟ್ ಸಭೆಯ ನಡಾವಳಿಗಳು ತೆಗೆದುಕೊಂಡ ಕ್ರಮಗಳ ವರದಿಗಳನ್ನು ಮತ್ತು ಸರ್ಕಾರಕ್ಕೆ ಸಲ್ಲಿಸಿರುವ ವಿವರ ಅಡಕಗೊಳಿಸಿದೆ (ದಿನಾಂಕ:21.06.2018 ರಿಂದ 25.03.2019ರ ವರಗೆ ನಡೆದಿರುವ ಸಿಂಡಿಕೇಟ್ ಸಭೆಯ ನಿರ್ಣಯಗಳೊಂದಿಗೆ ಅಡಕಗೊಳಿಸಿದೆ<br><br>ಆದ ಕಾರಣ ಪ್ರಸ್ಥಾಪಿತ ಕಂಡಿಕೆ ಕೈ ಬಿಡಲು ಕೋರಿದೆ |
| **8.26. ಸ್ವಚ್ಛತಾ ಕಾರ್ಯಕ್ಕೆ ಸಂಬಂಧಿಸಿದಂತೆ ಪಾವತಿಸಿರುವ ಮೊತ್ತದ ಸಂಪೂರ್ಣ ಲೆಕ್ಕಪತ್ರ ದಾಖಲೆಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸದಿರುವಕುರಿತು :**<br>ಮೈಸೂರು ವಿಶ್ವವಿದ್ಯಾನಿಲಯದಲ್ಲಿ ವಿವಿಧ ವಿಭಾಗಗಳು, ಕಛೇರಿಗಳು, ಸಂಸ್ಥೆಗಳಲ್ಲಿ ಒಟ್ಟು 223 ಮಂದಿ ಸ್ವಚ್ಛತಾ ಸಿಬ್ಬಂದಿಗಳು ಕಾರ್ಯ ನಿರ್ವಹಿಸುತ್ತಿರುತ್ತಾರೆ. ಸದರಿ ಸ್ವಚ್ಛತಾ ಸಿಬ್ಬಂದಿಗಳಿಗೆ 2018–19ನೇ ಸಾಲಿನಲ್ಲಿ ರೂ.5,64,18,650/–ಗಳನ್ನು ಪಾವತಿಸಲಾಗಿದೆ. ಸ್ವಚ್ಛತಾ ಸಿಬ್ಬಂದಿಗಳನ್ನು ನೇಮಕ ಮಾಡಿಕೊಳ್ಳಲು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಪ್ರಕ್ರಿಯೆ ಕೈಗೊಂಡು ನೇಮಕಾತಿಗೆ ಕ್ರಮ ಕೈಗೊಳ್ಳಬೇಕಾಗಿರುತ್ತದೆ. ಅಲ್ಲದೆ ಹೊರಗುತ್ತಿಗೆ ಆಧಾರದಲ್ಲಿ ನೇಮಕ ಮಾಡಿಕೊಳ್ಳಲು ಸರ್ಕಾರದ ಆದೇಶ ಸಂಖ್ಯೆ:ಆಇ3/6/ಟಿಎಫ್‌ಸಿ/2018,ದಿ:29.12.2018ರನ್ವಯ ಆರ್ಥಿಕ ಇಲಾಖೆಯ ಅನುಮತಿ ಪಡೆಯಬೇಕಾಗಿರುತ್ತದೆ. | ಪ್ರಸ್ಥಾಪಿತ ಕಂಡಿಕೆಯಲ್ಲಿನ ವಿಷಯಕ್ಕೆ ಸಂಬಂಧಿಸಿದಂತೆ ಕಂಡಿಕೆಯಲ್ಲಿ ಸೂಚಿತವಾಗಿರುವ ವಿಭಾಗಗಳಲ್ಲಿ – ಆಯಾಯ ವಿಭಾಗಗಳಲ್ಲಿನ ಸ್ವಚ್ಛತೆಯ ಅವಶ್ಯಕತೆಯನ್ನು ಪೂರೈಸಲು ಆಯಾಯ ವಿಭಾಗದ ಮುಖ್ಯಸ್ಥರಿಂದ ಬಂದಿರುವ ಅವಶ್ಯಕ ಸಿಬ್ಬಂದಿಯ ಸಂಖ್ಯೆ ಬೇಡಿಕೆಯ ಆಧಾರದಲ್ಲಿಯೇ ನಿರ್ಧರಣೆ ಮಾಡಲಾಗಿದೆ.<br>ಸ್ವಚ್ಛತೆಯ ನಿರ್ವಹಣೆಯು ಪ್ರಥಮ ಆಧ್ಯತೆಯಾಗಿದೆ, ಈ ಹಿನ್ನೆಲೆಯಲ್ಲಿ 2018–19ನೇ ಸಾಲಿಗೆ ಸಮಗ್ರವಾಗಿ ಸ್ವಚ್ಛತಾ ಸೇವೆಯನ್ನು ಒದಗಿಸುವ ಏಜೆನ್ಸಿಗಳಿಂದ ಬಿಡ್ ಆಹ್ವಾನಿಸಲಾಗಿತ್ತು. ಈ ಸಂಬಂಧ ಎಲ್ಲಾ ವಿವರಗಳನ್ನು 2019–20ನೇ ಸಾಲಿನ ಲೆಕ್ಕತನಿಖೆಗೆ ಹಾಜರುಪಡಿಸಲು ಕ್ರಮವಹಿಸಲಾಗಿದೆ ಎಂಬ ವಿಷಯವನ್ನು ಅವಗಾಹನೆಗೆ ತರಲಾಗಿದೆ. |

**ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸ್ವಚ್ಛತಾ ಸಿಬ್ಬಂದಿಗಳ ವಿವರ ಕೆಳಗಿನಂತಿದೆ.**

| **ವಿಭಾಗಗಳು** | **ಕಾರ್ಯ ನಿರ್ವಹಿಸುತ್ತಿರುವ ಸ್ವಚ್ಛತಾ ಸಿಬ್ಬಂದಿಗಳು** |
|---|---|
| ಮೈಸೂರು ವಿಶ್ವವಿದ್ಯಾನಿಲಯದಎಲ್ಲಾ ಕಛೇರಿಗಳು/ವಿಭಾಗಗಳು/<br>ಕಾಲೇಜುಗಳು ಅತಿಥಿ ಗೃಹಗಳು/ಆರೋಗ್ಯ ಕೇಂದ್ರಗಳು | 139<br>11 |
| ವಿದ್ಯಾರ್ಥಿಕ್ಷೇಮಪಾಲನಾ ವಿಭಾಗದಿಂದ ವಿದ್ಯಾರ್ಥಿನಿಲಯಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸ್ವಚ್ಛತಾ ಸಿಬ್ಬಂದಿಗಳು | 56 |
| ಸ್ನಾತಕೋತ್ತರಕೇಂದ್ರ, ಹಾಸನ | 7 |
| ಸ್ನಾತಕೋತ್ತರಕೇಂದ್ರ, ಮಂಡ್ಯ | 5 |
| ಸ್ನಾತಕೋತ್ತರಕೇಂದ್ರ, ಚಾಮರಾಜನಗರ | 5 |
| **ಒಟ್ಟು** | **223** |

| | |
|---|---|
| ಈ ಆದೇಶವು ನಿಗಮ, ಮಂಡಳಿ, ಪ್ರಾಧಿಕಾರ, ವಿಶ್ವವಿದ್ಯಾನಿಲಯಗಳು ಹಾಗೂ ಇನ್ನಿತರೆ ಅನುದಾನಿತ ಸಂಸ್ಥೆಗಳಿಗೂ ಸಹ ಅನ್ವಯವಾಗುತ್ತದೆ.ಈ ಬಗ್ಗೆ ಟೆಂಡರ್ ಕಡತವನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ಲೆಕ್ಕತನಿಖಾ ವಿಚಾರಣಾ ಪತ್ರ ಸಂಖ್ಯೆ: 189/11.06.2020ರಲ್ಲಿ ಕೋರಲಾಗಿತ್ತು. ಹಾಜರುಪಡಿಸಿರುವ ಕಡತವನ್ನು ಪರಿಶೀಲಿಸಲಾಗಿ ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕ್ರಿಯೆ ಕೈಗೊಳ್ಳದೇ, ವಿಶ್ವವಿದ್ಯಾನಿಲಯದ ವತಿಯಿಂದ ನೇರವಾಗಿ ನೇಮಿಸಿಕೊಂಡು ವೇತನವನ್ನು ಪಾವತಿಸುತ್ತಿರುವ ಕ್ರಮವು ಪಾರದರ್ಶಕತೆ ನಿಯಮಗಳಿಗೆ ವಿರುದ್ಧವಾಗಿರುವುದರಿಂದ ಹಾಗೂ ಸ್ವಚ್ಛತಾ ಸಿಬ್ಬಂದಿಗಳ ಹುದ್ದೆಗಳಿಗೆ ವಿವರಗಳು ಮತ್ತು ಹುದ್ದೆಗಳ ಮಂಜೂರಾತಿಗೆ ವಿಶ್ವವಿದ್ಯಾನಿಲಯಗಳ ಕಾಯಿದೆ 2000ದ ಪ್ರಕರಣ 56, 57ರ ಪ್ರಕಾರ ನೇಮಕಗೊಂಡಿಲ್ಲದಿರುವುದರಿಂದ ಸ್ವಚ್ಛತಾ ಸಿಬ್ಬಂದಿಗಳಿಗೆ ಪಾವತಿಸಲಾದ ಒಟ್ಟು ಮೊತ್ತ **ರೂ.5,64,18,650/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ**. ಹಾಗೂ ಕೆ.ಟಿ.ಪಿ.ಪಿ 2000 ನಿಯಮಗಳನ್ನು ಅನುಸರಿಸದೇ ಈ ರೀತಿ ನೇಮಕ ಮಾಡಿರುವ ಅಧಿಕಾರಿಗಳ ವಿರುದ್ಧ ಆಡಳಿತಾತ್ಮಕ ಕ್ರಮಕೈಗೊಳ್ಳಲು ಸೂಚಿಸಿದೆ. | |
| **8.27. ಸರ್.ಎಂ. ವಿಶ್ವೇಶ್ವರಯ್ಯ ಸ್ನಾತಕೋತ್ತರ ಕೇಂದ್ರದಲ್ಲಿ ಸ್ವಂತ ಚೆಕ್ ಮೂಲಕ ಹಣ ಡ್ರಾ ಮಾಡಿ, ವೋಚರ್‌ಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸದಿರುವುದು :**<br>ಸರ್.ಎಂ. ವಿಶ್ವೇಶ್ವರಯ್ಯ ಸ್ನಾತಕೋತ್ತರ ಕೇಂದ್ರದಲ್ಲಿ ನಿರ್ವಹಿಸುತ್ತಿರುವ ಉಳಿತಾಯ ಬ್ಯಾಂಕ್‌ಖಾತೆ ಸಂಖ್ಯೆ:54008771860ರಲ್ಲಿ 2018–19 ನೇ ಸಾಲಿನಲ್ಲಿ ಈ ಕೆಳಗಿನ ವಿವರಗಳಂತೆ ಒಟ್ಟು ರೂ.2,32,738/–ಗಳನ್ನು ಸ್ವಂತ ಚೆಕ್ ಮೂಲಕ ಡ್ರಾ ಮಾಡಲಾಗಿದೆ.<br>**ಕ್ರ.ಸಂ / ಧನಾದೇಶ ಸಂಖ್ಯೆ / ಧನಾದೇಶ ದಿನಾಂಕ / ಮೊಬಲಗು**<br>**1** / 570584 / 10.04.2018 / 23,648<br>**2** / 570595 / 25.04.2018 / 23,048<br>**3** / 570596 / 25.04.2018 / 30,700<br>**4** / 570603 / 10.05.2018 / 2,310<br>**5** / 570606 / 29.05.2018 / 3,230<br>**6** / 570607 / 29.05.2018 / 10,015<br>**7** / 570611 / 09.07.2018 / 13,211<br>**8** / 570614 / 01.08.2018 / 6,000<br>**9** / 570616 / 20.08.2018 / 27,792<br>**10** / 570628 / 16.11.2018 / 16,017<br>**11** / 570011 / 15.03.2019 / 21,862<br>**12** / 570013 / 20.03.2019 / 40,000 | ಪ್ರಸ್ಥಾವಿತ ಕಂಡಿಕೆಯಲ್ಲಿನ ವಿಷಯಕ್ಕೆ ಸಂಬಂಧಿಸಿದಂತೆ ಸದರಿ ಸ್ನಾತಕೋತ್ತರ ಕೇಂದ್ರದಲ್ಲಿ ಲೆಕ್ಕಪರಿಶೋಧನಾ ವರದಿಯಲ್ಲಿ ಸೂಚಿತವಾಗಿರುವಂತೆ ಕ್ರಮ ಸಂಖ್ಯೆ:01 ರಿಂದ ಕ್ರಮ ಸಂಖ್ಯೆ:14 ರಲ್ಲಿ ಸೂಚಿತವಾಗಿರುವಂತೆ ಧನಾದೇಶಗಳಲ್ಲಿ ಡ್ರಾ ಮಾಡಿರುವ ಒಟ್ಟು ಮೊತ್ತ ಕ್ಕೆ ರೂ.2,32,738/– ಸಂಬಂಧಿಸಿದ ವಿವರಣೆ ಈ ರೀತಿಯಿದೆ.<br><br>ಪ್ರಸ್ಥಾವಿತ ಬಿಲ್‌ಗಳಲ್ಲಿನ ಪಾವತಿಗಳು ಪೂರ್ವನಿರೀಕ್ಷಿತವಾದ, ಪಾವತಿಗಳಾಗಿರದೇ, ಅನಿರೀಕ್ಷಿತವಾಗಿ ಉದ್ಭವಿಸಿದ ಪಾವತಿಗಳಾದ್ದರಿಂದ ಆಯಾ ಸಮಯದ ಅವಶ್ಯಕಗನುಗುಣವಾಗಿ ಪ್ರತ್ಯೇಕವಾಗಿ ಬೇರೆ ಬೇರೆ ಧನಾದೇಶಗಳನ್ನು ಡ್ರಾ ಮಾಡಲಾಗಿದೆ. ಎಂಬ ಅಂಶವನ್ನು ಲೆಕ್ಕಪರಿಶೋಧನೆ ಅವಹಾನೆಗೆ ತರಲಾಗಿದೆ.<br><br>ಅಲ್ಲದೇ ಲೆಕ್ಕಪರಿಶೋಧನಾ ಕಂಡಿಕೆಯಲ್ಲಿ ಸೂಚಿತವಾಗಿರುವಂತೆ ಮುಂದಿನ ದಿನಗಳಲ್ಲಿ ಸರಬರಾಜು ಬಿಲ್‌ಗಳ ಮೂಲಕ ಸರಬರಾಜು ಪಡೆದ ವಸ್ತುಗಳ ಮತ್ತು ಏಜೆನ್ಸಿಗಳು ಒದಗಿಸಿರುವ ಸೇವೆಗೆ ಸಂಬಂಧಿಸಿದ ಪಾವತಿಗಳನ್ನು ಏಜೆನ್ಸಿಗಳಿಗೆ ಧನಾದೇಶ/ಆರ್‌ಟಿಜಿಎಸ್/ಎನ್‌ಇಎಫ್‌ಟಿ ಮೂಲಕವೇ ಪಾವತಿಸಲು ಕಡ್ಡಾಯವಾಗಿ ಕ್ರಮವಹಿಸಲಾಗುವುದು ಎಂಬ ಅಂಶವನ್ನು ಲೆಕ್ಕಪರಿಶೋಧನೆ ಅವಗಾಹನೆಗೆ ತರಲಾಗಿದೆ ಸೂಚಿತವಾಗಿರುವ ಎಲ್ಲಾ ಪಾವತಿ ಬಿಲ್‌ಗಳನ್ನು ಬಿಲ್‌ಗಳಲ್ಲಿ ಸರಬರಾಜು |

| | | | |
|---|---|---|---|
| **13** | 570015 | 28.03.2019 | 2,280 |
| **14** | 570017 | 28.03.2019 | 12,625 |
| **ಒಟ್ಟು** | | | **2,32,738** |

ಹೀಗೆ ಸ್ವಂತ ಚೆಕ್ ಮೂಲಕ ಡ್ರಾ ಮಾಡಲಾದ ಒಟ್ಟು **ರೂ.2,32,738/–ಗಳಿಗೆ** ವೋಚರ್‌ಗಳನ್ನು ಮತ್ತು ಪೂರಕ ಲೆಕ್ಕಪತ್ರ ದಾಖಲೆಗಳನ್ನು ಲೆಕ್ಕಪರಿಶೋಧನೆಗೆ ಹಾಜರು ಪಡಿಸುವಂತೆ ವಿಚಾರಣಾ ಪತ್ರ ಸಂಖ್ಯೆ:16/2020–21ನ್ನು ದಿನಾಂಕ:24.07.2020ರಂದು ನೀಡಿದ್ದರೂ ಸಹ ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ. ಈ ವ್ಯವಹರಣೆಯಲ್ಲಿ ಕೆಳಕಂಡ ನ್ಯೂನತೆಗಳನ್ನು ಗಮನಿಸಲಾಗಿದೆ.

- ಕರ್ನಾಟಕ ಆರ್ಥಿಕ ಸಂಹಿತೆ, ಅನುಚ್ಛೇದ–70 ರ ರೀತ್ಯಾ ಎಲ್ಲಾ ಪಾವತಿಗಳನ್ನು ಧನಾದೇಶದ ಮೂಲಕವೇ ಸಂದಾಯ ಮಾಡಬೇಕಾಗಿದ್ದು, ಇಷ್ಟು ದೊಡ್ಡ ಮೊತ್ತದ ಹಣವನ್ನು ಸ್ವಂತ ಚೆಕ್ ಮೂಲಕ ಡ್ರಾ ಮಾಡಿರುವುದು ನಿಯಮಗಳ ಉಲ್ಲಂಘನೆಯಾಗಿರುತ್ತದೆ.
- ಕಛೇರಿಯ ವೆಚ್ಚಗಳ ಪಾವತಿಗಳನ್ನು ಆದಷ್ಟು ನಗದು ರಹಿತವಾಗಿ ಪಾವತಿಸಬೇಕಾಗಿರುತ್ತದೆ. ಸರಬರಾಜುದಾರರು ಮತ್ತು ಸೇವಾದಾರರುಗಳಿಗೆ ನಿಯಮಾನುಸಾರ ನೇರವಾಗಿ ಧನಾದೇಶ/ಆರ್.ಟಿ.ಜಿ.ಎಸ್/ಎನ್.ಇ.ಎಫ್.ಟಿ ಮುಖಾಂತರ ಪಾವತಿಸಲು ಕ್ರಮ ವಹಿಸದಿರುವುದು ಹಣ ಸೆಳೆಯುವ ಮತ್ತು ಬಟವಾಡೆ ಮಾಡುವ ಅಧಿಕಾರಿಯವರ ಕರ್ತವ್ಯ ಲೋಪವಾಗಿರುತ್ತದೆ.

ಮೇಲ್ಕಂಡ ನ್ಯೂನತೆಗಳಿಗೆ ಸಮಜಾಯಿಷಿ ನೀಡಲು ಕೋರಿ ವಿಚಾರಣಾ ಪತ್ರ ನೀಡಿದರೂ ಸಹ ಲೆಕ್ಕಪತ್ರ ದಾಖಲೆಗಳನ್ನು ಹಾಜರು ಪಡಿಸದಿರುವುದರಿಂದ ಹಾಗೂ ಸ್ವಂತ ಚೆಕ್‌ಗಳ ಮೂಲಕ ಹಣ ಡ್ರಾ ಮಾಡಿದ ಒಟ್ಟು **ರೂ.2,32,738/–**ಗಳನ್ನು ಅಧ್ಯಯನ ಕೇಂದ್ರದ ನಿರ್ದೇಶಕ ರಿಂದ **ವಸೂಲಿಸಲು** ಹಾಗೂ ನಿಯಮಗಳನ್ನು ಉಲ್ಲಂಘಿಸಿರುವ ಸಂಬಂಧಿಸಿದ ಅಧಿಕಾರಿ/ನೌಕರರ ವಿರುದ್ಧ ಆಡಳಿತಾತ್ಮಕ ಕ್ರಮ ಜರುಗಿಸಲು ಸೂಚಿಸಿದೆ.

ಪಡೆದ ವಸ್ತುಗಳ/ಸೇವೆಯ ಬಗ್ಗೆ ಸಕ್ಷಮ ಅಧಿಕಾರಿಗಳ ಧೃಢೀಕರಣದೊಂದಿಗೆ ಹಾಜರುಪಡಿಸಲಾಗಿದೆ.

ಆದ ಕಾರಣ ಪ್ರಸ್ಥಾವಿತ ವಸೂಲಾತಿ ಕಂಡಿಕೆ ಕೈ ಬಿಡಲು ಕೋರಿದೆ.

| | |
|---|---|
| **8.28. ಡಿ.ಡಿ (ಬೇಡಿಕೆ ಹುಂಡಿ) ಹಾಗೂ ಧನಾದೇಶಗಳು ನಗದೀಕರಣಗೊಂಡಿರುವ ದಾಖಲೆಗಳನ್ನು ಹಾಜರುಪಡಿಸದಿರುವುದು:**<br><br>2018–19ನೇ ಸಾಲಿನಲ್ಲಿಆಡಳಿತ ಶಾಖೆಯಲ್ಲಿ ವಿಶ್ವವಿದ್ಯಾನಿಲಯದಕಟ್ಟಡ ಸಭಾಂಗಣ ಹಾಗೂ ಭವನಗಳ ನಿರ್ವಹಣಾ ಶುಲ್ಕವನ್ನು ಡಿಮ್ಯಾಂಡ್ ಡ್ರಾಫ್ಟ್ ಹಾಗೂ ಧನಾದೇಶಗಳ ಮೂಲಕ ಸ್ವೀಕರಿಸಲಾಗಿದ್ದು, ರಶೀದಿ ನೀಡಲಾಗಿದೆ. ಆದರೆ ಹೀಗೆ ಸ್ವೀಕರಿಸಲಾದ ರೂ.61,93,249/–ಗಳ ಮೊತ್ತದ ಡಿ.ಡಿ/ಧನಾದೇಶಗಳನ್ನು ನಗದೀಕರಿಸಿ ವಿಶ್ವವಿದ್ಯಾನಿಲಯದ ಖಾತೆಗೆ ಜಮೆ ಮಾಡಿರುವುದಕ್ಕೆ ದಾಖಲೆಗಳನ್ನು ಲೆಕ್ಕಪರಿಶೋಧನೆಗೆ ಹಾಜರು ಪಡಿಸುವಂತೆ ವಿಚಾರಣಾ ಪತ್ರ ಸಂಖ್ಯೆ:23/2020–21, ದಿನಾಂಕ:08.06.2020ನ್ನು ನೀಡಲಾಗಿದ್ದರೂ ಯಾವುದೇ ಲೆಕ್ಕಪತ್ರಗಳನ್ನು ಲೆಕ್ಕಪರಿಶೋಧನೆಗೆ ಹಾಜರು ಪಡಿಸಿರುವುದಿಲ್ಲ. ವಿವರಗಳನ್ನು **ಅನುಬಂಧ–43ರಲ್ಲಿ** ನೀಡಲಾಗಿದೆ. ವಿಶ್ವವಿದ್ಯಾನಿಲಯದ ನಿಧಿಗೆ ಪ್ರಸ್ತಾವಿತ ಮೊತ್ತವು ಜಮೆಯಾಗಿರುವ ಬಗ್ಗೆ ದಾಖಲೆಗಳನ್ನು ಹಾಜರು ಪಡಿಸದಿರುವುದ ರಿಂದ, ಸದರಿ ಮೊತ್ತ **ರೂ.61,93,249/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.**<br>ದಿನಾಂಕ:29.09.2018 ರಂದು ರಾಣಿ ಬಹದ್ದೂರ್ ಸಭಾಂಗಣವನ್ನು ಕಾಯ್ದಿರಿಸಲು ಭದ್ರತಾ ಠೇವಣಿಯಾಗಿ ರೂ.20,000/–ಗಳನ್ನು (ಡಿ.ಡಿ ಸಂಖ್ಯೆ:704227,ದಿ:14.09.2018) ಪಡೆಯಲಾಗಿರುತ್ತದೆ. ಈ ಮೊತ್ತವನ್ನು ಹೆಚ್.ಬಿ.ಎ ಮುಂಗಡ ಮತ್ತು ಠೇವಣಿಗಳ ಖಾತೆಗೆ (ಖಾತೆ ಸಂಖ್ಯೆ:54007591368) ಜಮೆ ಮಾಡಿರುವುದಾಗಿ ಚಲನ್ ಸಂಖ್ಯೆ:43437,ದಿನಾಂಕ:15.09.2018ನ್ನು ಹಾಜರುಪಡಿಸಿರುತ್ತಾರೆ. ಆದರೆ ಸದರಿ ಮೊತ್ತವು ಬ್ಯಾಂಕ್‌ಗೆ ಜಮೆಯಾಗಿರುವ ಬಗ್ಗೆ ನಗದು ಪುಸ್ತಕದಲ್ಲಿ ಮತ್ತು ಬ್ಯಾಂಕ್ ಪಾಸ್ ಶೀಟ್‌ನಲ್ಲಿ ನಮೂದುಗಳು ಇರುವುದಿಲ್ಲ. ಈ ಬಗ್ಗೆ ಸೂಕ್ತ ಸ್ಪಷ್ಟೀಕರಣ ನೀಡುವಂತೆ ಲೆಕ್ಕತನಿಖಾ ವಿಚಾರಣಾ ಪತ್ರ ಸಂಖ್ಯೆ:106/ ದಿನಾಂಕ:27.05.2020ರಲ್ಲಿ ಕೋರಲಾಗಿ ಯಾವುದೇ ವಿವರಣೆ ನೀಡಿರುವುದಿಲ್ಲ. ಮೇಲ್ಕಂಡ ಖಾತೆಗೆ ಸದರಿ ಮೊತ್ತವು ಜಮೆಯಾಗಿರುವ ಬಗ್ಗೆ ಮಾಹಿತಿ ಲಭ್ಯವಿಲ್ಲದಿರುವುದರಿಂದ **ರೂ.20,000/–ಗಳನ್ನು ಸಂಬಂಧಿಸಿದವರಿಂದ ವಸೂಲಿಸಲು ಸೂಚಿಸಿದೆ.** | ಪ್ರಸ್ಥಾಪಿತ ಕಂಡಿಕೆಯಲ್ಲಿನ ವಿಷಯಕ್ಕೆ ಸಂಬಂಧಿಸಿದಂತೆ ಅನುಬಂಧ ಸಂಖ್ಯೆ–43 ರಲ್ಲಿ ಸೂಚಿತವಾಗಿರುವಂತೆ, ಡಿ.ಡಿಯ (ಡಿಮೆಂಡ್ ಡ್ರಾಫ್ಟ್) ಮೂಲಕ ವಿಶ್ವವಿದ್ಯಾನಿಲಯದ ಖಾತೆಗೆ ಹೊಂದಾಣಿಕೆಯಾಗಿರುವ ಮೊತ್ತದ ವಿವರಗಳನ್ನು ದಿನಾಂಕದ ವಿವರಗಳೊಂದಿಗೆ (ಬ್ಯಾಂಕ್ ಸ್ಟ್ರೋಲ್ ಆಧಾರಿತವಾಗಿ) 2019–20ನೇ ಸಾಲಿನ ಲೆಕ್ಕತನಿಖೆಗೆ ಹಾಜರುಪಡಿಸಲು ಕ್ರಮವಹಿಸಲಾಗಿದೆ ಎಂಬ ವಿಷಯವನ್ನು ಅವಗಾಹನೆಗೆ ತರಲಾಗಿದೆ. |
| **8.29. ವಿಶ್ವವಿದ್ಯಾನಿಲಯದ ವಿದ್ಯಾರ್ಥಿ ನಿಲಯಗಳಿಗೆ ಮುಖ್ಯ ಅಡುಗೆಯವರು ಹಾಗೂ ಸಹಾಯಕ ಅಡುಗೆಯವರ ಸೇವೆಯನ್ನು ಪಡೆಯಲು ಹಳೆಯ ಟೆಂಡರ್‌ದಾರರನ್ನು ಮುಂದುವರೆಸಿರುವುದು**<br><br>2018–19ನೇ ಸಾಲಿನಲ್ಲಿ ವಿಶ್ವವಿದ್ಯಾನಿಲಯದ ವಿದ್ಯಾರ್ಥಿನಿಲಯಗಳಿಗೆ ಹೊರಗುತ್ತಿಗೆ ಆಧಾರದ ಮೇಲೆ ಮುಖ್ಯ ಅಡುಗೆಯವರು ಹಾಗೂ ಸಹಾಯಕ ಅಡುಗೆಯವರ ಸೇವೆಯನ್ನು ಒದಗಿಸುವ ಸಲುವಾಗಿ ಟೆಂಡರ್ ಕರೆದಿದ್ದು, ಟೆಂಡರ್ ಪ್ರಕ್ರಿಯೆಯ ಕಡತ/ದಾಖಲೆಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ವಿಚಾರಣೆ ಪತ್ರ ಸಂ: 164/2020–21, ದಿನಾಂಕ:10.06.2020ನ್ನು ನೀಡಲಾಗಿತ್ತು. ಹಾಜರುಪಡಿಸಿದ ಟೆಂಡರ್ ಪ್ರಕ್ರಿಯೆಯ ಕಡತ ಹಾಗೂ ಸಂಬಂಧಿತ ದಾಖಲೆಗಳನ್ನು ಪರಿಶೀಲಿಸಲಾಗಿ, | ಪ್ರಸ್ಥಾವಿತ ಕಂಡಿಕೆಯಲ್ಲಿನ ವಿಷಯಕ್ಕೆ ಸಂಬಂಧಿಸಿದಂತೆ 2018–19ನೇ ಸಾಲಿಗೆ ವಿಶ್ವವಿದ್ಯಾನಿಲಯದ ವಿದ್ಯಾರ್ಥಿನಿಲಯಗಳಿಗೆ ಹೊರಗುತ್ತಿಗೆ ಅಧಾರದ ಮೇಲೆ ಮುಖ್ಯ ಅಡಿಗೆಯವರು ಮತ್ತು ಸಹಾಯಕ ಅಡುಗೆಯವರ ಸೇವೆಯನ್ನು ಒದಗಿಸಲು ನಿರ್ಧಾರಿತವಾಗಿದ್ದ ಏಜೆನ್ಸಿಯ ಸೇವೆಯ ಸೇವಾ ಅವಧಿಯು 07.01.2019ಕ್ಕೆ ಮುಕ್ತಾಯವಾಗಿರುತ್ತದೆ (ಮೆ॥ ಪನೋರಮ ಎಂಟರ್ ಪ್ರೈಸಸ್, ಬೆಂಗಳೂರು) ಈ ಹಿನ್ನಲೆಯಲ್ಲಿ ಪೂರ್ವಭಾವಿಯಾಗಿ ನೆಡದಿರುವಂತಹ ದಿನಾಂಕ:12.12.2018 ರ ವಿದ್ಯಾರ್ಥಿನಿಲಯಗಳ |

| | |
|---|---|
| ಸದರಿ ಟೆಂಡರ್‌ನಲ್ಲಿ ಎಲ್–1 ಟೆಂಡರುದಾರರಾದ ಮೆ॥ ಪನೋರಮ ಎಂಟರ್ ಪ್ರೈಸಸ್, ಬೆಂಗಳೂರು ರವರಿಂದ ಸೇವೆಯನ್ನು ಪಡೆದು ರೂ.1,87,77,303/–ಗಳನ್ನು ಪಾವತಿಸಲಾಗಿದೆ. ಪಾವತಿ ವಿವರ ಈ ಕೆಳಕಂಡಂತಿದೆ. | ಆಡಳಿತ ನಿರ್ವಹಣೆ ಮತ್ತು ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿ ಸಲಹಾ ಸಮಿತಿಯ 12.12.2018ರಂದು ತೀರ್ಮಾನಿಸಿದ ನಿರ್ಣಯವು ದಿನಾಂಕ:28.12.2018ರ ಸಿಂಡಿಕೇಟ್ ಸಾಮಾನ್ಯ ಸಭೆಯಲ್ಲಿ ಅನುಮೋಧಿತವಾಗಿದೆ |

| ಕ್ರ.ಸಂ | ಮಾಹೆ | ಬಿ.ಆರ್.ನಂ. ಮತ್ತು ದಿನಾಂಕ | ಮೊಬಲಗು | ಬಿಲ್ ವಿವರ | | ಕಾರ್ಯ ನಿರ್ವಹಿಸಿದ ಸಿಬ್ಬಂದಿ ವಿವರ | |
|---|---|---|---|---|---|---|---|
| | | | | ಸಂಖ್ಯೆ | ದಿನಾಂಕ | ಅಡುಗೆಯವರು | ಸಹಾಯಕ ಅಡುಗೆಯವರು |
| 1 | ಸೆಪ್ಟಂಬರ್& ಅಕ್ಟೋಬರ್–2018 | 7302/06.02.2019 | 53,62,774.00 | BLR0728 | – | 48 | 96 |
| 2 | ನವೆಂಬರ್& ಡಿಸೆಂಬರ್–2018 | 9255/27.03.2019 | 53,61,680.00 | BLR1099 | 01.01.18 | 48 | 96 |
| 3 | ಜನವರಿ& ಫೆಬ್ರವರಿ–2019 | 743/15.05.2019 | 53,68,566.00 | BLR1348 | – | 48 | 96 |
| 4 | ಮಾರ್ಚ್–2019 | 1671/27.06.2019 | 26,84,283.00 | BLR1470 | – | 48 | 96 |
| | | ಒಟ್ಟು ಮೊತ್ತ | **1,87,77,303.00** | | | | |

ಮೆ॥ ಪನೋರಮ ಎಂಟರ್ ಪ್ರೈಸಸ್, ಬೆಂಗಳೂರು ರವರೊಂದಿಗೆ ದಿನಾಂಕ:08.01.2018 ರಿಂದ 07.01.2019 ರವರೆಗೆ ಸೇವೆ ಒದಗಿಸಲು ಕರಾರು ಮಾಡಿಕೊಳ್ಳಲಾಗಿದ್ದು, ಕರಾರು ಅವಧಿ ಮುಗಿದ ನಂತರವೂ ಕೆ.ಟಿ.ಪಿ.ಪಿ ಕಾಯ್ದೆಯ ಪ್ರಕರಣ–5ನ್ನು ಉಲ್ಲಂಘಿಸಿ ಹಿಂದಿನ ಸಾಲಿನ ಟೆಂಡರುದಾರರನ್ನೇ ಮುಂದುವರೆಸಲಾಗಿದೆ. ಆದ್ದರಿಂದ ಕರಾರು ಅವಧಿ ಮುಗಿದ ನಂತರವೂ ಹಿಂದಿನ ಸಾಲಿನ ಟೆಂಡರುದಾರರನ್ನೇ ಮುಂದುವರೆಸಿ ಪಾವತಿಸಿರುವ ಒಟ್ಟು ಮೊತ್ತ **ರೂ.1,87,77,303/– ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.**

ಅಲ್ಲದೇ ಸದರಿ ಪ್ರಕರಣದಲ್ಲಿ ಮುಖ್ಯ ಅಡಿಗೆಯವರು (ಸಂಖ್ಯೆ 48) ಮತ್ತು ಅಡಿಗೆ ಸಹಾಯಕರು (ಸಂಖ್ಯೆ 96) ಇವರುಗಳ ಸೇವೆಯನ್ನು ಹಿಂದಿನ ದರದಲ್ಲಿಯೇ ಪಡೆಯಲಾಗಿದೆ ಮತ್ತು ಈ ರೀತಿಯ ಟೆಂಡರ್ ವಿಸ್ತರಣೆಯ 4 ತಿಂಗಳ ಅವಧಿಗೆ (ಅಂದರೆ ಜನವರಿ–2019 ರಿಂದ ಏಪ್ರಿಲ್–2019) ಮಾತ್ರ ವಿಸ್ತರಿತವಾದ ಸೀಮಿತ ಅವಧಿಯ ವಿಸ್ತರಣೆ ಆಗಿರುತ್ತದೆ. ನಂತರದ ಮಾಹೆಗೆ ಇ–ಟೆಂಡರ್ ಪ್ರಕ್ರಿಯೆ ಕೈಗೊಂಡು ಟೆಂಡರ್‌ನಲ್ಲಿ ನಿರ್ಧರಿತವಾಗಿರುವ ಏಜೆನ್ಸಿಯು ಒದಗಿಸಿರುವ ಅಡಿಗೆ ಸಿಬ್ಬಂದಿಯಿಂದ ಸ್ನಾತಕ ಮತ್ತು ಸ್ನಾತಕೋತ್ತರ ವಿದ್ಯಾರ್ಥಿನಿಲಯಗಳಲ್ಲಿ ವಿದ್ಯಾರ್ಥಿಗಳ ಭೋಜನೆ ವ್ಯವಸ್ಥೆ ಮಾಡಲಾಗಿದೆ ಎಂಬ ಅಂಶವನ್ನು ಲೆಕ್ಕಪರಿಶೋಧನೆ ಅವಗಾಹನೆಗೆ ತರಲಾಗಿದೆ.

ಆದ ಕಾರಣ ಈ ಸಂಬಂಧದ ಆಕ್ಷೇಪಣೆ ಮೊತ್ತ ರೂ.1,87,77,303/– ಕೈ ಬಿಡಲು ಕೋರಿದೆ.

**8.30. ತಾತ್ಕಾಲಿಕವಾಗಿ ಸಹಾಯಕ ಪ್ರಾಧ್ಯಾಪಕರು ಹಾಗೂ ಅತಿಥಿ ಉಪನ್ಯಾಸಕರನ್ನು ನೇಮಕ ಮಾಡಿಕೊಂಡಿರುವ ನೇಮಕಾತಿ ಕಡತಗಳನ್ನು ಹಾಜರು ಪಡಿಸದಿರುವುದು :**

2018–19ನೇ ಸಾಲಿನಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಲೆಕ್ಕ ತನಿಖೆಯಲ್ಲಿ ತಾತ್ಕಾಲಿಕ/ಸಂಚಿತ ವೇತನದಡಿ ಬೋಧಕ ನೌಕರರುಗಳನ್ನು ನೇಮಕಾತಿ ಮಾಡಿಕೊಂಡು ವೇತನ ಪಾವತಿಸಿರುವುದನ್ನು ಪರಿಶೀಲಿಸಲಾಗಿ 2018–19ನೇ ಸಾಲಿಗೆ **ರೂ.**13,85,58,798/–ಗಳನ್ನು ಪಾವತಿಸಿದ್ದು, ತಾತ್ಕಾಲಿಕ/ಸಂಚಿತ

ಪ್ರಸ್ತಾವಿತ ಕಂಡಿಕೆಯಲ್ಲಿ 2018–19ನೇ ಸಾಲಿನ ಅವಧಿಯಲ್ಲಿ ಸದರಿ ವಿಶ್ವವಿದ್ಯಾನಿಲಯದ ವಿವಿಧ ವಿಭಾಗಗಳಿಲ್ಲಿ ಕಾರ್ಯನಿರ್ವಹಿಸುತ್ತಿರುವ ಪ್ರಾಧ್ಯಾಪಕರುಗಳು ನಿವೃತ್ತಿಯಿಂದ ತೆರವಾದ ಕಾರಣದಿಂದ ನಿಗದಿತವಾದ ಪಾಠ ಪ್ರವಚನಗಳನ್ನು ನಿಗಧಿತವಾದ ಅವಧಿಯಲ್ಲಿ ಪೂರ್ಣಗೊಳಿಸಲು

| | |
|---|---|
| ವೇತನ/ಅತಿಥಿ ಉಪನ್ಯಾಸಕರುಗಳನ್ನು ನೇಮಕ ಮಾಡಿಕೊಂಡಿರುವ ನೇಮಕಾತಿ ಪ್ರಕ್ರಿಯೆ ಕಡತಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ಲೆಕ್ಕಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ:01/ದಿನಾಂಕ.01.02.2020 ಹಾಗೂ 45/2020-21 ದಿನಾಂಕ:18.09.2020ರಲ್ಲಿ ಕೋರಲಾಗಿ ಯಾವುದೇ ದಾಖಲಾತಿಗಳನ್ನು ಲೆಕ್ಕಪರಿಶೋಧನೆಗೆ ಹಾಜರು ಪಡಿಸಿರುವುದಿಲ್ಲ ಆದ್ದರಿಂದ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯಿದೆ 2000ರ ನಿಯಮ 55, 56ರನ್ವಯ ನೇಮಕಾತಿ ಪ್ರಕ್ರಿಯೆ ಕೈಗೊಳ್ಳಲಾಗಿರುವ ಬಗ್ಗೆ ಪರಿಶೀಲಿಸಲು ಸಾಧ್ಯವಾಗಿರುವುದಿಲ್ಲ. ಮುಂದುವರೆದು ವಿಷಯವಾರು ಮಂಜೂರಾಗಿರುವ ಬೋಧಕ ಹುದ್ದೆಗಳಲ್ಲಿ ಖಾಯಂ ಬೋಧಕ ವರ್ಗದವರು ಕರ್ತವ್ಯ ನಿರ್ವಹಿಸುತ್ತಿರುವ ಹುದ್ದೆಗಳನ್ನು ಬಿಟ್ಟು ಉಳಿಕೆ ಖಾಲಿ ಇರುವ ಹುದ್ದೆಗಳಿಗೆ ಎದುರಾಗಿ ತಾತ್ಕಾಲಿಕ/ಸಂಚಿತ/ಅತಿಥಿ ಉಪನ್ಯಾಸಕರುಗಳನ್ನು ಯು.ಜಿ.ಸಿ ನಿಯಮಾವಳಿಗಳ ಅನುಸಾರ ನೇಮಕ ಮಾಡಿಕೊಂಡಿರುವುದನ್ನು ಲೆಕ್ಕಪರಿಶೋಧನೆಯಲ್ಲಿ ಪರಿಶೀಲಿಸಲು ಸಾಧ್ಯವಾಗಿರುವುದಿಲ್ಲವಾದ್ದರಿಂದ ತಾತ್ಕಾಲಿಕ ಉಪನ್ಯಾಸಕರು ಹಾಗೂ ಅತಿಥಿ ಉಪನ್ಯಾಸಕರುಗಳಿಗೆ ಪಾವತಿಸಿರುವ **ಮೊತ್ತ ರೂ.13,85,58,798/-ಗಳನ್ನು ಆಕ್ಷೇಪಣೆಯಲ್ಲಿ** ಇಡಲಾಗಿದೆ. ವಿವರಗಳನ್ನು **ಅನುಬಂಧ-44ರಲ್ಲಿ** ವಿವರಿಸಲಾಗಿದೆ. | ವಿಶ್ವವಿದ್ಯಾನಿಲಯದಿಂದ ಅತಿಥಿ ಉಪನ್ಯಾಸಕರನ್ನು ನೇಮಕ ಮಾಡಿಕೊಂಡು ಪಾಠ ಪ್ರವಚನಗಳನ್ನು ಪೂರೈಸುವ ಸಲುವಾಗಿ ಪಾವತಿಸಿರುವ ಮೊತ್ತ ಅನುಬಂಧ-44 ರಲ್ಲಿ ಸೂಚಿತವಾಗಿರುವಂತೆ ಒಟ್ಟು ರೂ.13,85,58,798/-ಗಳನ್ನು ಆಕ್ಷೇಪಿಸಲಾಗಿದೆ.<br><br>**ಈ ಸಂಬಂಧ ವಿಶ್ವವಿದ್ಯಾನಿಲಯದ ವಿವರಣೆ ಈ ರೀತಿ ಇದೆ.**<br><br>ವಿಶ್ವವಿದ್ಯಾನಿಲಯದಲ್ಲಿ ಸ್ನಾತಕೋತ್ತರ ವಿಭಾಗದಲ್ಲಿ 50 ವಿಭಾಗಗಳು ಕಾರ್ಯನಿರ್ವಹಿಸುತ್ತಿವೆ. ಅಲ್ಲದೇ 4 ಸ್ನಾತಕೋತ್ತರ ಕೇಂದ್ರಗಳು (ಚಾಮರಾಜನಗರ, ಮಂಡ್ಯ, ಹಾಸನ, 04 ಘಟಕ ಕಾಲೇಜು ಯುವರಾಜ ಕಾಲೇಜು, ಮಹಾರಾಜ ಕಾಲೇಜು, ಲಲಿತ ಕಲೆಗಳ ಕಾಲೇಜುಗಳು ಕಾರ್ಯನಿರ್ವಹಿಸುತ್ತಿದ್ದು ಇವುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಖಾಯಂ ನೌಕರರ ನಿವೃತ್ತಿಯ ಪ್ರಕರಣಗಳಲ್ಲಿ ವಿದ್ಯಾರ್ಥಿಗಳ ಶೈಕ್ಷಣಿಕ ಕಾರ್ಯಕ್ರಮಗಳಿಗೆ ನಿರಂತರತೆ ಕಾಪಾಡಲು ಆಯಾ ವಿಭಾಗದ ಮುಖ್ಯಸ್ಥರಿಂದ ಬಂದಿರುವ ಅತಿಥಿ ಉಪನ್ಯಾಸಕರ ಸಂಖ್ಯೆಯ ಬೇಡಿಕೆಯನ್ನು ಪರಿಗಣಿಸಿಯೇ ನೇಮಕಾತಿಗೆ ಕ್ರಮವಹಿಸಲಾಗಿದೆ ಎಂಬ ಅಂಶವನ್ನು ಲೆಕ್ಕಪರಿಶೋಧನೆ ಅವಗಾಹನೆಗೆ ತರಲಾಗಿದೆ.<br><br>ಈ ಸಂಬಂಧದ ವಿಷಯವು ಸಿಂಡಿಕೇಟ್ ಸಭೆಯಲ್ಲಿ ಮಂಡಿತವಾಗಿ ಅನುಮೋದಿತವಾದ ನಂತರವೇ ಕ್ರಮವಹಿಸಲಾಗಿದೆ. (ದಿನಾಂಕ:28.06.2019 ಪ್ರತಿ ಅಡಕಗೊಳಿಸಿದೆ.)<br><br>ವಿಶ್ವವಿದ್ಯಾನಿಲಯದಲ್ಲಿ ಅತಿಥಿ ಉಪನ್ಯಾಸಕರು ನೇಮಕಾತಿಗೆ ಅವಕಾಶವು ಖಾಯಂ ಸಿಬ್ಬಂದಿಯ ನಿವೃತ್ತಿಯ ಕಾರಣವೇ ಅಲ್ಲದೇ ಯು.ಜಿ.ಸಿ ಮಾರ್ಗಸೂಚಿಯ ಕಂಡಿಕೆ ಸಂಖ್ಯೆ:15.1ರಲ್ಲಿ ವಾರಕ್ಕೆ 16 ಗಂಟೆ ಸಹಾಯಕ ಪ್ರಾಧ್ಯಾಪಕರು ಭೋದನಾ ಕಾರ್ಯ ನಿರ್ವಹಿಸಬೇಕೆಂದು ನಿಯಮದಲ್ಲಿ ಸೂಚಿತವಾಗಿದೆ. ಆದರೆ ಕಂಡಿಕೆ-15.2ರಲ್ಲಿ ವಾರಕ್ಕೆ 14 ಗಂಟೆಗಳ ಪ್ರಾಧ್ಯಾಪಕರುಗಳ ಭೋದನಾ ಅವಧಿಗೆ 2 ಗಂಟೆಗಳ ವಿನಾಯಿತಿ ಇರುವುದರಿಂದ ನಿಗಧಿತವಾಗಿ ಈ ಅವಧಿಯ ಪಾಠ ಪ್ರವಚನಗಳನ್ನು ಅತಿಥಿ ಉಪನ್ಯಾಸಕರುಗಳ ಮೂಲಕ ಪೂರ್ಣಗೊಳಿಸಲಾಗಿದೆ.<br><br>ಮೈಸೂರು ವಿಶ್ವವಿದ್ಯಾನಿಲಯವು ಘಟಕ ಕಾಲೇಜುಗಳು/ಸ್ನಾತಕೋತ್ತರ ಕೇಂದ್ರಗಳು/ಸಂಸ್ಥೆಗಳು/ಅಧ್ಯಯನ ವಿಭಾಗಗಳಲ್ಲಿ ಲಭ್ಯವಾಗುವ ವಿಷಯವಾರು ಒಟ್ಟು ಭೋಧನಾ ಕಾರ್ಯಭಾರದಲ್ಲಿ/ಅವಧಿಯಲ್ಲಿ ಖಾಯಂ ಅಧ್ಯಾಪಕರಿಗೆ ಮತ್ತು ಸಂಶೋಧನಾ ಅಭ್ಯರ್ಥಿಗಳಿಗೆ ನಿಯಮಾನುಸಾರ ಹಂಚಿಕೆ ಮಾಡಲಾಗುತ್ತಿದೆ.<br><br>ಅಯಾಯ ವಿಷಯಗಳ ವಿಭಾಗಗಳಲ್ಲಿ ಅಧ್ಯಾಪಕರುಗಳ ವಯೋನಿವೃತ್ತಿ ಹಾಗೂ ಕೋರ್ಸ್‌ಗಳ ನಿರ್ವಹಣೆ ಕುರಿತು ಲಭ್ಯವಾಗುವ ಹೆಚ್ಚುವರಿ ಭೋದನಾ ಕಾರ್ಯಭಾರಕ್ಕೆ ಯು.ಜಿ.ಸಿ ನಿಯಮನುಸಾರ ಅಯಾಯ, ಅಯಾಯ ವಿಭಾಗಗಳ ಮುಖ್ಯಸ್ಥರುಗಳು ನೀಡುವ ವಿಷಯವಾರು ಹೆಚ್ಚುವರಿ ಭೋದನಾ ಕಾರ್ಯಭಾರದ ಅಧಾರದ ಮೇಲೆ ಪ್ರತಿಕಾ ಪ್ರಕಟಣೆಯನ್ನು ಹೊರಡಿಸಿ ಅರ್ಹತೆ ಸೇವಾ ಅನುಭವದ ಆಧಾರದ ಮೇಲೆ ವಿಷಯವಾರು ವಾಕ್-ಇನ್-ಇಂಟ್‌ರೀವ್ಯೂ (ನೇರ ಸಂದರ್ಶನ) ಪದ್ಧತಿಯಲ್ಲಿ |

ಸಾಮಾಜಿಕ ನ್ಯಾಯ ನಿಯಮವನ್ನು ಪಾಲಿಸುವ ಮೂಲಕ ಸಂದರ್ಶನವನ್ನು ನಡಸಿ 04 ಗಂಟೆ, 08 ಗಂಟೆ, ಮತ್ತು ಗರಿಷ್ಠ 12 ಗಂಟೆಗಳ ಕಾರ್ಯಭಾರವನ್ನು ಹಂಚಿಕೆ ಮಾಡಿ ಸಂಭಾವನೆ ಪಾವತಿಗೆ ಕ್ರಮವಹಿಸಲಾಗಿದೆ.

ಅಲ್ಲದೇ ಸದರಿ ಸಂಭಾವನೆ ಪಾವತಿಯ ಬಾಬ್ತಿನ ಮೊತ್ತವನ್ನು ವಿಶ್ವವಿದ್ಯಾನಿಲಯದ ಆಂತರಿಕ ಸಂಪನ್ಮೂಲಗಳಿಂದ ಭರಿಸಲಾಗುತ್ತಿದೆ (ಈ ವೆಚ್ಚವನ್ನು ಆಯವ್ಯಯ ಅಂದಾಜುಗಳ ವೇತನ ಮತ್ತು ಭತ್ಯೆಗಳು) ಖಾತೆಯ **"ತಾತ್ಕಾಲಿಕ ಅಧ್ಯಾಪಕರ ವೇತನ"** (ಕೋಡ್228) ಶೀರ್ಷಿಕೆಯಿಂದ ಭರಿಸಲಾಗುತ್ತಿದೆ.

ಮುಂದುವರೆದು ಈ ಸಂಬಂಧ ಆಡಿಟ್ ವರದಿಯ ಅನುಬಂಧ–7 ಗಮನಿಸಲಾಗಿ ಅತಿಥಿ ಉಪನ್ಯಾಸಕರುಗಳ ಹೆಚ್ಚುವರಿ ನೇಮಕಾತಿಯ ಸಂಖ್ಯೆಯ ನಿರ್ದಿಷ್ಟವಾದ ಒಂದೇ ಆಗಿರದೇ ಇರುವುದರಿಂದ

2017–2018 ರಲ್ಲಿ–115

2018–2019 ರಲ್ಲಿ–122

ವಿಶ್ವವಿದ್ಯಾನಿಲಯವು ನಿರ್ದಿಷ್ಟವಾದ ಅವಶ್ಯಕತೆಗನುಗುಣವಾಗಿಯೇ ತಾತ್ಕಾಲಿಕ ಅತಿಥಿ ಉಪನ್ಯಾಸಕರ ನೇಮಕಾತಿಗೆ ಕ್ರಮವಹಿಸಿದೆ ಎಂಬ ಅಂಶವನ್ನು ದೃಢೀಕರಿಸುತ್ತದೆ. ಈ ವಿಷಯವನ್ನು ಲೆಕ್ಕಪರಿಶೋಧನೆ ಅವಗಾಹನೆಗೆ ತರಲಾಗಿದೆ.

ವಿಶ್ವವಿದ್ಯಾನಿಲಯವು ನಿವೃತ್ತಿಯಿಂದ ತೆರವಾದ ಪ್ರಾಧ್ಯಾಪಕ, ಸಹಪ್ರಾಧ್ಯಾಪಕ, ಸಹಾಯಕ ಪ್ರಾಧ್ಯಾಪಕರ ಹುದ್ದೆಗಳು ಭರ್ತಿಯಾಗದೇ ಉಳಿದಿರುವ ಕಾರಣ ವಿಶ್ವವಿದ್ಯಾನಿಲಯವು ಎದುರಿಸುತ್ತಿರುವ ಶೈಕ್ಷಣಿಕ ಸಮಸ್ಯೆಗೆ ವಿದ್ಯಾರ್ಥಿಗಳಿಗೆ ಉಂಟಾಗುತ್ತಿರುವ ಪಾಠ ಪ್ರವಚನಗಳ ಕೊರತೆಗೆ ಮುಕ್ತಾಯವನ್ನು/ಪರಿಹಾರವನ್ನು ಸೂಚಿಸಲು ವಿಶ್ವವಿದ್ಯಾನಿಲಯವು ನೇಮಕಾತಿಗೆ ಕ್ರಮವಹಿಸಿದೆ.

ಈ ಎಲ್ಲಾ ಅಂಶಗಳನ್ನು ಸಮಗ್ರವಾಗಿ ಪರಿಗಣಿಸಿ ವಿಶ್ವವಿದ್ಯಾನಿಲಯವು ತನ್ನ ಶೈಕ್ಷಣಿಕ ಗುಣಮಟ್ಟ, ಪ್ರಗತಿಯನ್ನು ಕಾಯ್ದುಕೊಳ್ಳಲು ಸಲುವಾಗಿಯೇ ಅತಿಥಿ ಉಪನ್ಯಾಸಕರ ನೇಮಕಾತಿಯನ್ನು ಆಯಾಯ ವಿಭಾಗದ ನಿರ್ದಿಷ್ಟವಾದ ಶೈಕ್ಷಣಿಕ ಬೇಡಿಕೆಗೆ ಅನುಗುಣವಾಗಿಯೇ ಕ್ರಮವಹಿಸಿದೆ.

ಅಲ್ಲದೆ ಸೂಚಿತವಾಗಿರುವ ಮೊತ್ತ ಒಟ್ಟು ರೂ.13,85,58,798/–ಗಳನ್ನು ಮೈಸೂರು ವಿಶ್ವವಿದ್ಯಾನಿಲಯವು ಸಂಬಂಧಿಸಿದ ಕೋರ್ಸ್‌ಗಳ ವಿದ್ಯಾರ್ಥಿಗಳ ಶುಲ್ಕದ ಬಾಬ್ತಿನಿಂದಲೇ (ವಿಶ್ವವಿದ್ಯಾನಿಲಯದ ಆಂತರಿಕ ಸಂಪನ್ಮೂಲದಿಂದಲೇ) ಭರಿಸಿದೆ. ಈ ಸಂಬಂಧ ಸರ್ಕಾರಕ್ಕೆ ಹೆಚ್ಚುವರಿ ಅನುದಾನದ ಬೇಡಿಕೆ ಪ್ರಸ್ತಾವನೆ ಸಲ್ಲಿಕೆಯಾಗಿಲ್ಲ ಎಂಬ ಅಂಶವನ್ನು ಪರಿಗಣಿಸಲು ಕೋರಿದೆ.

| | |
|---|---|
| **8.31. ಪರಿಷ್ಕೃತ ವೇತನ ಶ್ರೇಣಿಯಲ್ಲಿ ಮೂಲ ವೇತನವನ್ನು ತಪ್ಪಾಗಿ ನಿಗದಿಪಡಿಸಿ ಹೆಚ್ಚುವರಿ ಪಾವತಿಸಿರುವುದು :–**<br><br>ಆಡಳಿತಾಧಿಕಾರಿಗಳ ಕಛೇರಿಯ 2018–19ನೇ ಸಾಲಿನ ಲೆಕ್ಕಪರಿಶೋಧನೆಯಲ್ಲಿ ಭೋಧಕೇತರ ಸಿಬ್ಬಂದಿಗಳ ಸೇವಾ ವಹಿಗಳನ್ನು ಪರಿಶೀಲಿಸಲಾಗಿ, ಶ್ರೀ.ತಿಮ್ಮರಾಜು, ಪರಿಚಾರಕ ಉದ್ಯೋಗಿ ಸಂಖ್ಯೆ:4775 ಇವರಿಗೆ ಮೂಲ ವೇತನ **ರೂ.13,900/–ಕ್ಕೆ** ಎದುರಾಗಿ 2018ರ ಪರಿಷ್ಕೃತ ವೇತನ ಶ್ರೇಣಿಯಲ್ಲಿ **ರೂ.25,200/–ಕ್ಕೆ** ವೇತನವನ್ನು ನಿಗದಿಪಡಿಸುವ ಬದಲಾಗಿ **ರೂ.25,800/–ಗಳಿಗೆ** ನಿಗದಿಪಡಿಸಿದ್ದು **ರೂ.600/–ಗಳ** ಹೆಚ್ಚುವರಿಯಾಗಿ ನಿಗದಿಪಡಿಸಲಾಗಿರುತ್ತದೆ. ಈ ಹೆಚ್ಚುವರಿಯಾಗಿ ನಿಗದಿಪಡಿಸಿ ದಿನಾಂಕ.01.04.2018 ರಿಂದ ಆರ್ಥಿಕ ಸೌಲಭ್ಯ ನೀಡಿ ವೇತನ ಮತ್ತು ಭತ್ಯೆಗಳನ್ನು ಪಾವತಿಸಲಾಗಿರುತ್ತದೆ. ಈ ಹೆಚ್ಚುವರಿ ನಿಗದಿ ಮತ್ತು ಪಾವತಿಗೆ ಸಂಬಂಧಿಸಿದಂತೆ ಸೂಕ್ತ ಸ್ಪಷ್ಟೀಕರಣದೊಂದಿಗೆ ಪೂರಕ ದಾಖಲಾತಿಗಳನ್ನು ಹಾಜರುಪಡಿಸುವಂತೆ ವಿಚಾರಣಾ ಪತ್ರ ಸಂಖ್ಯೆ:05/2020–21, ದಿನಾಂಕ:30.06.2020ನ್ನು ನೀಡಲಾಗಿತ್ತು. ಅದಕ್ಕೆ ಸಲ್ಲಿಸಿರುವ ಅನುಪಾಲನಾ ವರದಿಯಲ್ಲಿ ಹೆಚ್ಚುವರಿ ಪಾವತಿಸಲಾದ ಮೊತ್ತವನ್ನು ವಸೂಲಿಸಿ ವಿಶ್ವವಿದ್ಯಾನಿಲಯದ ಖಾತೆಗೆ ಜಮೆ ಮಾಡಲು ಕ್ರಮವಹಿಸಲಾಗುವುದು ಎಂದು ತಿಳಿಸಿರುತ್ತಾರೆ. 2018–19ನೇ ಸಾಲಿನಲ್ಲಿ ಪಾವತಿಸಲಾದ ಹೆಚ್ಚುವರಿ ಮೊತ್ತ **ರೂ.8,724/–ಗಳನ್ನು** ಮತ್ತು ತದನಂತರ ಪಾವತಿಸಿರುವ ಮೊಬಲಗನ್ನು ಲೆಕ್ಕಾಚಾರ ಮಾಡಿ ಸಂಬಂಧಿಸಿದವರಿಂದ ವಸೂಲಿಸಲು ಸೂಚಿಸಿದೆ. ವಿವರಗಳನ್ನು **ಅನುಬಂಧ–45**ರಲ್ಲಿ ನೀಡಿದೆ. | ಪ್ರಸ್ಥಾವಿತ ಕಂಡಿಕೆಯಲ್ಲಿನ ವಿಷಯಕ್ಕೆ ಸಂಬಂಧಿಸಿದಂತೆ 2018ನೇ ವರ್ಷದಲ್ಲಿ ರಾಜ್ಯ ಸರ್ಕಾರಿ ನೌಕರರಿಗೆ ನೀಡಲಾದ 5ನೇ ವೇತನ ಅಯೋಗದ ಸೌಲಭ್ಯಗಳನ್ವಯ, ಸದರಿ ನೌಕರರಿಗೆ ಶ್ರೀ.ತಿಮ್ಮರಾಜು, ಪರಿಚಾರಕ ಉದ್ಯೋಗಿ ಪರಿಷ್ಕೃತ ವೇತನ ಶ್ರೇಣೀಯಲ್ಲಿ ಮೂಲವೇತನ ನಿಗಧಿ ಪಡಿಸುವ ಸಂಧರ್ಭದಲ್ಲಿ ಉಂಟಾಗಿರುವ ತಪ್ಪಿನಿಂದಾಗಿ ಮೂಲವೇತನ ರೂ.25200/– ಕ್ಕೆ ಬದಲಾಗಿ ರೂ.25800/–ಕ್ಕೆ ನಿಗಧಿಪಡಿಸಿರುವುದರಿಂದ ರೂ.600/– ಹೆಚ್ಚುವರಿ ನಿಗಧಿಪಡಿಸಿದಂತಾಗಿದೆ ಎಂದು ಉಲ್ಲೇಖಿಸಿ 01.07.2018 ರಿಂದ 31.12.2018 ರ ಅವಧಿಗೆ ಹೆಚ್ಚುವರಿ ಪಾವತಿಸಿರುವ ಮೊತ್ತ ರೂ.8724/– ವಸೂಲಾತಿಗೆ ಸೂಚಿತವಾಗಿದೆ.<br>ಈ ರೀತಿ ಹೆಚ್ಚುವರಿ ಪಾವತಿಯಾದ ಮೊತ್ತ 07/2020 ಮಾಹೆಯಿಂದ 12/2020 ರ ಮಾಹೆಯವರೆಗೆ ಪ್ರತಿ ಮಾಹೆಯಲ್ಲಿ 1,800/– ದರದಲ್ಲಿ ಕಟಾಯಿಸಲಾಗಿದೆ ಇದರಿಂದಾಗಿ ಕಡಿತಗೊಳಿಸಲಾಗಿರುವ ಮೊತ್ತ ರೂ.10800/– (2018–19ನೇ ಸಾಲಿನ ಲೆಕ್ಕಪರಿಶೋಧನಾ ವರದಿಯಲ್ಲಿ ಸೂಚಿತವಾಗಿರುವ ಮೊತ್ತಕ್ಕಿಂತ ರೂ.2,076/– ಹೆಚ್ಚುವರಿಯಾಗಿ ಕಟಾಯಿಸಲಾಗಿದೆ. ಕಟಾವಣೆ ದೃಡಪಡಿಸುವ (Pay slip) 07/2020 & 12.2020 ಅಡಕಗೊಳಿಸಿದೆ ಆದ್ದರಿಂದ ವಸೂಲಾತಿ ಕಂಡಿಕೆ ಕೈ ಬಿಡಲು ಕೋರಿದೆ. |
| **8.32. ವಾರ್ಷಿಕದಾಸ್ತಾನು ಪರಿಶೀಲನಾ ವರದಿಯನ್ನು ಹಾಜರುಪಡಿಸದಿರುವುದು :**<br>ಮೈಸೂರು ವಿಶ್ವವಿದ್ಯಾನಿಲಯದ ವಿವಿಧ ವಿಭಾಗಗಳ 2018–19ನೇ ಸಾಲಿನ ಲೆಕ್ಕಪರಿಶೋಧನೆಯಲ್ಲಿಎಲ್ಲಾ ವಿಭಾಗಗಳ/ಕಛೇರಿಗಳ ಕ್ರೋಢೀಕೃತ ವಾರ್ಷಿಕದಾಸ್ತಾನು ಪರಿಶೀಲನಾ ವರದಿಯನ್ನು ಹಾಗೂ ವಿವರಗಳ ತಃಖ್ತೆಯನ್ನು ಹಾಜರುಪಡಿಸುವಂತೆಕೋರಿ ವಿಚಾರಣಾ ಪತ್ರ ಸಂಖ್ಯೆ:171/2020–21 ದಿನಾಂಕ:10.06.2020 ಹಾಗೂ 177/, ದಿನಾಂಕ:10.06.2020ಗಳನ್ನು ನೀಡಿದ್ದರೂ ಸಹ ವಾರ್ಷಿಕದಾಸ್ತಾನು ಪರಿಶೀಲನಾ ವರದಿಯನ್ನು ಹಾಜರುಪಡಿಸಿರುವುದಿಲ್ಲ.<br>ಕರ್ನಾಟಕಆರ್ಥಿಕ ಸಂಹಿತೆ 1958ರ ಅನುಚ್ಛೇದ 169 ರಿಂದ 172 ರವರೆಗೆ ತಿಳಿಸಿರುವಂತೆ ವಿವಿಧ ವಿಭಾಗಗಳಿಗೆ ಹಿಂದಿನ ಸಾಲಿನಲ್ಲಿಖರೀದಿಸಲಾಗಿರುವ ಸಾಮಗ್ರಿಗಳನ್ನು ದಾಸ್ತಾನಿಗೆತೆಗೆದುಕೊಂಡಿರುವ, ಅವುಗಳ ಸ್ಥಿತಿಗತಿಯ ಬಗ್ಗೆ ದಾಸ್ತಾನು ಪರಿಶೀಲನೆ ಮಾಡಿ ವಾರ್ಷಿಕದಾಸ್ತಾನು ಪರಿಶೀಲನಾ ವರದಿಯನ್ನು ತಯಾರಿಸಿ ಸಕ್ಷಮ ಪ್ರಾಧಿಕಾರಕ್ಕೆ ಸಲ್ಲಿಸಬೇಕಾಗಿರುತ್ತದೆ. ಆದರೆ ವಿಶ್ವವಿದ್ಯಾನಿಲಯದವರುಕ್ರೋಢೀಕೃತ ವಾರ್ಷಿಕದಾಸ್ತಾನು ಪರಿಶೀಲನಾ ವರದಿಯನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲ. ಹೀಗಾಗಿ ಸದರಿ ಸಾಲಿನಲ್ಲಿ ಖರೀದಿಸಿರುವ ಸಾಮಗ್ರಿ, | ಪ್ರಸ್ತಾವಿತ ಕಂಡಿಕೆಯಲ್ಲಿನ ಸೂಚನೆಯ ಅನ್ವಯ ವಾರ್ಷಿಕ ದಾಸ್ತಾನು ಪರಿಶೀಲನಾ ವರದಿಯನ್ನು ನಿರ್ವಹಿಸಲಾಗಿದೆ. ಮತ್ತು ಈ ವಿವರಗಳನ್ನು 2019–20ನೇ ಸಾಲಿನ ಲೆಕ್ಕಪರಿಶೋಧನೆಗೆ ಹಾಜರು ಪಡಿಸಲು ಕ್ರಮವಹಿಸಲಾಗಿದೆ. ಎಂಬ ಅಂಶವನ್ನು ನಿವೆದಿಸಿದೆ. |

| | |
|---|---|
| ಸಲಕರಣೆಗಳನ್ನು ದಾಸ್ತಾನು ವಹಿಯಲ್ಲಿ ಲೆಕ್ಕಕ್ಕೆ ತೆಗೆದುಕೊಂಡ ಬಗ್ಗೆ, ಸುಸ್ಥಿತಿಯಲ್ಲಿರುವ, ರಿಪೇರಿ ಮಾಡಬಹುದಾದ ಹಾಗೂ ರಿಪೇರಿ ಮಾಡಲು ಸಾಧ್ಯವಾಗದ ಸಾಮಗ್ರಿ, ಸಲಕರಣೆಗಳ ಬಗ್ಗೆ ಖಚಿತಪಡಿಸಿಕೊಳ್ಳಲು ಸಾಧ್ಯವಾಗಿರುವುದಿಲ್ಲ. ಈ ಬಗ್ಗೆ ಸೂಕ್ತ ಆಡಳಿತಾತ್ಮಕ ಕ್ರಮ ವಹಿಸಲು ಸೂಚಿಸಿದೆ. | |
| **8.33. ಪ್ರಯಾಣ ಭತ್ಯೆ ಬಿಲ್ಲನ್ನು ಕಾಲ ವಿಳಂಬ ವಿನಾಯಿತಿ ಪಡೆಯದೆಯೆ ಪಾವತಿಸಿರುವುದು :**<br>2018-19ನೇ ಸಾಲಿನ ಜೆನೆಟಿಕ್ಸ್ ಮತ್ತು ಜಿನೋಮಿಕ್ಸ್ ವಿಭಾಗದ ಪ್ರಯಾಣ ಭತ್ಯೆ ಬಿಲ್ಲನ್ನು ಪರಿಶೀಲಿಸಿದಾಗ ಶ್ರೀ ಮೇಘ ಮೂರ್ತಿರವರು 31ನೇ ಮೇ 2016 ರಿಂದ 23 ನವೆಂಬರ್ 2016ರವರೆಗೆ ಪ್ರಯಾಣ ಭತ್ಯೆ ಬಿಲ್ಲನ್ನು ಚೆಕ್ ಸಂಖ್ಯೆ:492017/12.12.2018ರಲ್ಲಿ ರೂ.70,549/-ಗಳನ್ನು ಪಾವತಿ ಮಾಡಿರುವುದು ಕಂಡು ಬಂದಿರುತ್ತದೆ. ಅಂದರೆ ಸುಮಾರು 2 ವರ್ಷಗಳ ನಂತರ ಬಿಲ್ಲುಗಳನ್ನು ಪಡೆದು ಪಾವತಿ ಮಾಡಿರುವುದು ಕಂಡು ಬಂದಿದ್ದು, ವಿವರಣೆ ನೀಡುವಂತೆ ವಿಚಾರಣಾ ಪತ್ರ ಸಂಖ್ಯೆ:07/22.07.2020ನ್ನು ನೀಡಲಾಗಿ ಯಾವುದೇ ವಿವರಣೆಯನ್ನು ನೀಡಿರುವುದಿಲ್ಲ.<br>ಯಾವುದೇ ಪ್ರಯಾಣ ಭತ್ಯೆ ಬಿಲ್ಲನ್ನು ಪ್ರಯಾಣದ ಮಾಹೆಯ ಮುಂದಿನ ಮಾಹೆಯ 10ನೇ ದಿನಾಂಕದೊಳಗೆ ಸಲ್ಲಿಸಿ ಒಂದು ವರ್ಷದೊಳಗೆ ಪಾವತಿಗೆ ಕ್ರಮವಹಿಸಬಹುದಾಗಿರುತ್ತದೆ. ಹಾಗೂ ಕೆ.ಎಫ್.ಸಿ ಪರಿಚ್ಛೇದ 22 (ಎ) ನಿಯಮ 14ರ ಉಲ್ಲಂಘನೆ ಮಾಡಿರುವುದಲ್ಲದೆ 2 ವರ್ಷಗಳ ನಂತರ ಬಿಲ್ಲನ್ನು ಕಾಲವಿಳಂಬ ವಿನಾಯಿತಿ ಇಲ್ಲದೆ ಪಾವತಿಸಲಾದ ಮೊತ್ತ **ರೂ.70,549/-ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.** | ಪ್ರಸ್ಥಾವಿತ ಕಂಡಿಕೆಯಲ್ಲಿನ 2018-19ನೇ ಸಾಲಿನಲ್ಲಿ ಜೆನೆಟಿಕ್ಸ್ ಮತ್ತು ಜಿನೋಮಿಕ್ಸ್ ವಿಭಾಗದ DOS ಆಗಿರುವ ಶ್ರೀ ಮೇಘ ಮೂರ್ತಿರವರು 31ನೇ ಮೇ 2016 ರಿಂದ 23 ನವೆಂಬರ್ 2016ರವರೆಗೆ ಪ್ರಯಾಣ ಭತ್ಯೆ ಬಿಲ್ ರೂ.70549/- ಈ 02 ವರ್ಷಗಳ ನಂತರ ವಿಳಂಬಪಾವತಿ ಆಗಿರುವುದನ್ನು ಉಲ್ಲೇಖಿಸಿ ರೂ.70,549/- ಆಕ್ಷೇಪಿಸಲಾಗಿದೆ.<br>ಈ ಸಂಬಂಧ, ಸಂಬಂಧಪಟ್ಟ ನೌಕರರು ತಮ್ಮ ಪ್ರಯಾಣಕ್ಕೆ ಸಂಬಂಧಿಸಿದ Air Tickets (Boarding Pass) ಕಳೆದು ಹೋಗಿದ್ದರಿಂದ ನಿಗಧಿತವಾದ ಅವಧಿಯಲ್ಲಿ ಪ್ರಯಾಣ ಭತ್ಯೆಯ ಬಿಲ್‌ಅನ್ನು ಸಲ್ಲಿಸಲು ಉಂಟಾಗಿರುವ ವಿಳಂಬಕ್ಕೆ ಕಾರಣ ನೀಡಿರುತ್ತಾರೆ. ಇವರ ಮನವಿಯು ಅಧ್ಯಕ್ಷರು ಜೆನೆಟಿಕ್ಸ್ ಮತ್ತು ಜಿನೋಮಿಕ್ಸ್ ಅಧ್ಯಯನ ವಿಭಾಗ ಮಾನಸ ಗಂಗೋತ್ರಿ ಮೈಸೂರು ಇವರಿಂದ ದೃಢೀಕೃತವಾಗಿ ಬಂದಿರುತ್ತದೆ.<br>ಸದರಿ ನೌಕರರು ವಿದೇಶದಲ್ಲಿ ಯು.ಕೆ (University of Barkshaire – UK) ಅಧ್ಯಯನ ಮಾಡಲು ನಿಗಧಿತವಾಗಿರುವ ಅನುದಾನ ಹಂಚಿಕೆ ಕುಲಸಚಿವರಿಂದ ಅನುಮೋದಿವಾಗಿರುತ್ತದೆ (ಪ್ರತಿ ಅಡಕಗೊಳಿಸಿದೆ)<br>ಆದ ಕಾರಣ ಸಂಬಂಧಿಸಿದ ನೌಕರರ ಸಕಾರಣದ ಮನವಿ ಪರಿಗಣಿಸಿ ಅಕ್ಷೇಪಿತ ಮೊತ್ತ ರೂ.70,549/- ಕಂಡಿಕೆ ಕೈ ಬಿಡಲು ಕೋರಿದೆ. |

**8.34. ವೈದ್ಯಕೀಯ ವೆಚ್ಚಕ್ಕಾಗಿ ಮುಂಗಡ ಪಾವತಿಸಿ ಹೊಂದಾಣಿಕೆ ಬಿಲ್ಲುಗಳ ವಿವರಗಳನ್ನು ಲೆಕ್ಕತನಿಖೆಗೆ ಹಾಜರುಪಡಿಸದಿರುವುದು :**

ಮೈಸೂರು ವಿಶ್ವವಿದ್ಯಾನಿಲಯದ ಆಡಳಿತ ವಿಭಾಗದ 2018–19ನೇ ಸಾಲಿನ ಲೆಕ್ಕಪರಿಶೋಧನೆಯಲ್ಲಿ ವಿಭಾಗದ ಸಿಬ್ಬಂದಿಗಳಿಗೆ ಒಟ್ಟಾರೆ **ರೂ.5,37,500/–ಗಳನ್ನು** ವೈದ್ಯಕೀಯ ವೆಚ್ಚ ಮುಂಗಡ ಪಾವತಿಸಲಾಗಿರುವುದು ಕಂಡು ಬಂದಿರುತ್ತದೆ. ವಿವರ ಈ ಕೆಳಕಂಡಂತಿರುತ್ತದೆ.

| ಕ್ರಸಂ | ಬಿ.ಆರ್.ಸಂಖ್ಯೆ/ ದಿನಾಂಕ | ಮುಂಗಡ ಬಿಲ್ಲಿನ ಮೊತ್ತ |
|---|---|---|
| 1 | 240/14.09.2018 | 225000 |
| 2 | 255/24.09.2018 | 112500 |
| 3 | 419/19.02.2019 | 200000 |
| | **ಒಟ್ಟು** | **537500** |

ಮೇಲ್ಕಂಡ ಪಾವತಿಗೆ ಸಂಬಂಧಿಸಿದಂತೆ, ಕುಲಸಚಿವರ/ಹಣಕಾಸು ಅಧಿಕಾರಿಗಳಿಂದ ಮಂಜೂರಾತಿ ನೀಡಿರುವ ಆಡಳಿತಾತ್ಮಕ ಅನುಮೋದನಾ ಪ್ರತಿಗಳು, ಆಸ್ಪತ್ರೆಯ ಮುಖ್ಯಸ್ಥರಿಂದ ಪಡೆದಿರುವ ಧನಾದೇಶ ಸ್ವೀಕೃತಿ ಪತ್ರ ಹಾಗೂ ಸದರಿ ಮುಂಗಡ ಬಿಲ್ಲುಗಳು ಹೊಂದಾಣಿಕೆಯಾಗಿರುವ ಬಗ್ಗೆ ವಿವರ/ದಾಖಲೆಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ವಿಚಾರಣೆ ಪತ್ರ ಸಂಖ್ಯೆ:17/ ದಿನಾಂಕ:06.06.2020 ರಲ್ಲಿ ಕೋರಲಾಗಿತ್ತು. ಲೆಕ್ಕ ತನಿಖೆಗೆ ಕೋರಿರುವ ಯಾವುದೇ ವಿವರಗಳನ್ನು ಹಾಜರುಪಡಿಸದಿರುವುದರಿಂದ ವೈದ್ಯಕೀಯ ವೆಚ್ಚ ಮುಂಗಡ ಬಿಲ್ಲುಗಳ ಒಟ್ಟು ಮೊತ್ತ **ರೂ.5,37,500/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.** ಮುಂಗಡಗಳನ್ನು ನೀಡಿದ ನಂತರ ಅವುಗಳನ್ನು ಹೊಂದಾಣಿಕೆ ಮಾಡಿಕೊಳ್ಳಬೇಕಾಗಿರುವುದು ಸಿಬ್ಬಂದಿ ಹಾಗೂ ವಿಭಾಗಗಳ ಮುಖ್ಯಸ್ಥರ ಕರ್ತವ್ಯವಾಗಿದ್ದು ಹೊಂದಾಣಿಕೆ ಮಾಡಿಕೊಂಡ ವಿವರಗಳನ್ನು ಪೂರಕ ದಾಖಲಾತಿಗಳೊಂದಿಗೆ ಅನುಪಾಲನಾ ವರದಿ ಸಲ್ಲಿಸಲು ಸೂಚಿಸಿದೆ.

ಪ್ರಸ್ಥಾವಿತ ಕಂಡಿಕೆಯಲ್ಲಿನ ವಿಷಯಕ್ಕೆ ಸಂಬಂಧಿಸಿದಂತೆ ವಿಶ್ವವಿದ್ಯಾನಿಲಯದ ಆಡಳಿತ ವಿಭಾಗದಲ್ಲಿ 2018–19ನೇ ಸಾಲಿನಲ್ಲಿ ವಿಭಾಗದ ಸಿಬ್ಬಂಧಿಗಳಿಗೆ ವೈದ್ಯಕೀಯ ವೆಚ್ಚದ ಮುಂಗಡ ನೀಡಿರುವ ಮೊತ್ತಕ್ಕೆ ಸಂಬಂಧಿಸಿದ ಪೂರಕ ದಾಖಲೆಗಳಾದ, ಆಡಳಿತಾತ್ಮಕ ಅನುಮೋದನೆ ಪತ್ರಗಳು ಆಸ್ಪತ್ರೆಯ ಮುಖ್ಯಸ್ಥರಿಂದ ಧನಾದೇಶ ಸ್ವೀಕೃತಿ ಪತ್ರ ಮತ್ತು ಮುಂಗಡದ ಮೊತ್ತ ಹೊಂದಾಣಿಕೆಯಾಗಿರುವ ವಿವರ ಹಾಜರುಪಡಿಸದೇ ಇರುವ ವಿಷಯ ಉಲ್ಲೇಖಿಸಿ ಈ ಸಂಬಂಧದ 3 ಬಿಲ್‌ಗಳ ಒಟ್ಟು ಮೊತ್ತ ರೂ.5,37,500/– ಆಕ್ಷೇಪಿಸಲಾಗಿದೆ ಪ್ರಸ್ತುತ ಈ ಸಂಬಂಧದ ವಿವರಗಳನ್ನು ಸಲ್ಲಿಸಲಾಗಿದೆ ಅವುಗಳ ವಿವರ ಈ ರೀತಿಯಿದೆ.

1. ಬಿ,ಆರ್ ಸಂಖ್ಯೆ240/14.09.2018 ರಲ್ಲಿ ವೈದ್ಯಕೀಯ ವೆಚ್ಚದ ಮುಂಗಡ ರೂ.2,25,000/– ಅದೇಶ ಸಂಖ್ಯೆ:ಜಿಎಲ್/02/155/2006–07 ದಿನಾಂಕ:14.09.2018 ನಾರಾಯಣ ಹೃದಯಾಲಯ ಮೈಸೂರು 17718147706 ಚೆಕ್ ಸಂಖ್ಯೆ:954484/14.04.2018 ರೂ.2,25,000/– ಹೊಂದಾಣಿಕೆ ಬಿಲ್ ಅಡಕಗೊಳಿಸಿದೆ

2. (a) ಶ್ರೀ ಬೀರ ತೊಟಗಾರ ವೈದ್ಯಕೀಯ ಮುಂಗಡ ಮೊತ್ತ ರೂ.1,12,500/–

   (b) ಅದೇಶ ಸಂಖ್ಯೆ:ಜಿಎಲ್/02/71/2014–15 ದಿನಾಂಕ:12.12.2018

   (c) ಹಣ ಸಂದಾಯದ ಸ್ವಿಕೃತಿ ಕಾಮಾಕ್ಷಿ ಅಸ್ಪತ್ರೆ ಮೈಸೂರು. ರಶೀದಿ ಸಂಖ್ಯೆ:ಆರ್‌ಟಿ/2018/009415/26.09.2018 ರೂ.1,12,500/–

   (d) ಈ ಸಂಬಂಧಿಸಿದ ಎನ್,ಡಿ,ಸಿ ಬಿಲ್ ಅಡಕಗೊಳಿಸಿದೆ

3. (a) ಶ್ರೀ ಬೀರ ತೋಟಗಾರ ವೈದ್ಯಕೀಯ ಮುಂಗಡ ಮೊತ್ತ ರೂ.2,00,000/–

   (b) ಅದೇಶ ಸಂಖ್ಯೆ:ಜಿಎಲ್/02/71/2014–15 ದಿನಾಂಕ:17.01.2019

   (c) ಹಣ ಸಂದಾಯದ ಸ್ವಿಕೃತಿ ಭಾರತ್ ಕ್ಯಾನ್ಸರ್ ಅಸ್ಪತ್ರೆ ಮೈಸೂರು ಚೆಕ್ ಸಂಖ್ಯೆ:955656/23.01.2019 ರೂ.2,00,000/–

   (d) ಈ ಸಂಬಂಧಿಸಿದ ಎನ್,ಡಿ,ಸಿ ಬಿಲ್ ಅಡಕಗೊಳಿಸಿದೆ

ಆದ ಕಾರಣ ಪ್ರಸ್ಥಾವಿತ ಕಂಡಿಕೆ ಆಕ್ಷೇಪಣೆ ಮೊತ್ತ ರೂ.5,37,500/– ಕೈ ಬಿಡಲು ಕೋರಿದೆ.

## ಅಧ್ಯಾಯ–9

## ಮೌಲ್ಯಮಾಪನ ವಿಭಾಗ (ಪರೀಕ್ಷಾಂಗ)

**9.1. 2018–19ನೇ ಸಾಲಿನಲ್ಲಿಅಂಕಪಟ್ಟಿ ಮುದ್ರಣ ಮತ್ತು ವಿತರಣೆಯಲ್ಲಿನ ಸಂಖ್ಯೆಗಳಲ್ಲಿ ವ್ಯತ್ಯಾಸಗಳಿರುವುದು :**

ಮೈಸೂರು ವಿಶ್ವವಿದ್ಯಾನಿಲಯದ ಕುಲಸಚಿವರು (ಪರೀಕ್ಷಾಂಗ) ವಿಭಾಗದವರು 2018–19ನೇ ಸಾಲಿನ ಲೆಕ್ಕಪರಿಶೋಧನೆಗೆ ಹಾಜರುಪಡಿಸಲಾದ ದಾಖಲಾತಿಗಳನ್ವಯ ಅಂಕಪಟ್ಟಿಗಳ ಖರೀದಿ, ವಿತರಣೆ ಮತ್ತು ಬಾಕಿಯ ವಿವರಗಳು ಈ ಕೆಳಕಂಡಂತಿದೆ.

| | | |
|---|---|---|
| 1 | ಆರಂಭಿಕ ಶಿಲ್ಕು | ಇಲ್ಲ |
| 2 | 2018–19ನೇ ಸಾಲಿನ ಒಟ್ಟು ಖರೀದಿ | 2,20,000 |
| 3 | 2018–19ನೇ ಸಾಲಿನ ಒಟ್ಟು ವಿತರಣೆ | 2,20,000 |
| 4 | ಅಖೈರು ಶಿಲ್ಕು | ಇಲ್ಲ |

ಮೇಲಿನಂತೆ 2,20,000 ಸಂಖ್ಯೆಯ ಖಾಲಿ ಅಂಕ ಪಟ್ಟಿಗಳನ್ನು ಮೆ॥ ಮೈಸೂರು ಸೇಲ್ಸ್‌ಇಂಟರ್ ನ್ಯಾಷನಲ್ ಲಿ., ಬೆಂಗಳೂರು ರವರಿಂದ ಖರೀದಿಸಿ ಮೆ॥ ಲರ್ನಿಂಗ್ ಸ್ಪೈರಲ್ ಪ್ರೈ.ಲಿ., ರವರಿಂದ ಮುದ್ರಿಸಿ ವಿತರಿಸಲಾಗಿದೆ.

ಮೈಸೂರು ವಿಶ್ವವಿದ್ಯಾನಿಲಯ ವ್ಯಾಪ್ತಿಯಲ್ಲಿ 2018–19ನೇ ಶೈಕ್ಷಣಿಕ ವರ್ಷದಲ್ಲಿ ಕಾಲೇಜುವಾರು/ಕೋರ್ಸ್‌ವಾರು/ಸೆಮಿಸ್ಟರ್‌ವಾರು ಒಟ್ಟು 2,29,925 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿರುತ್ತಾರೆ. ಆದರೆ ವಿಶ್ವವಿದ್ಯಾನಿಲಯವು ಹಾಜರುಪಡಿಸಿರುವ ವಿವರಗಳನ್ನು ಪರಿಶೀಲಿಸಿದಾಗ ಒಟ್ಟಾರೆ 2,20,000 ಅಂಕಪಟ್ಟಿಗಳನ್ನು ಮಾತ್ರವೇ ಖರೀದಿಸಿ ವಿತರಿಸಲಾಗಿದೆ. ಯಾವುದೇ ಆರಂಭಿಕ ಶಿಲ್ಕು ಇರುವುದಿಲ್ಲ. ಪರೀಕ್ಷೆಗೆ ಹಾಜರಾದ ಎಲ್ಲಾ ವಿದ್ಯಾರ್ಥಿಗಳಿಗೂ (ಉತ್ತೀರ್ಣ/ಅನುತ್ತೀರ್ಣ) ಅಂಕಪಟ್ಟಿಗಳನ್ನು ವಿತರಿಸಬೇಕಾಗಿರುತ್ತದೆ. ಹೀಗಾಗಿ ಉಳಿದ 9,925 ವಿದ್ಯಾರ್ಥಿಗಳಿಗೆ ಅಂಕಪಟ್ಟಿಗಳನ್ನು ಹೇಗೆ ವಿತರಿಸಲಾಯಿತು ಎಂಬುದನ್ನು ಪರೀಕ್ಷಾಂಗ ವಿಭಾಗದಿಂದ ಹಾಜರುಪಡಿಸಲಾದ ಅಂಕಿ ಸಂಖ್ಯೆಗಳಿಂದ ಖಚಿತಪಡಿಸಿಕೊಳ್ಳಲು ಸಾಧ್ಯವಾಗಿರುವುದಿಲ್ಲ. ಈ ಸಂಬಂಧ ವಿಚಾರಣಾ ಪತ್ರ ಸಂಖ್ಯೆ:07/26.05.2020 & 12/28.05.2020ಗಳನ್ನು ನೀಡಿ ಮಾಹಿತಿ ಒದಗಿಸುವಂತೆ ಕೋರಲಾಗಿದ್ದರೂ ಯಾವುದೇ ಮಾಹಿತಿಯನ್ನು ವಿಶ್ವವಿದ್ಯಾನಿಲಯದವರು ನೀಡಿರುವುದಿಲ್ಲ. ಆದ್ದರಿಂದ ಈ ಬಗ್ಗೆ ಪರಿಶೀಲಿಸಿ ಸರಿಯಾದ ಮಾಹಿತಿಯನ್ನು ಪೂರಕ ದಾಖಲೆಗಳೊಡನೆ ಲೆಕ್ಕಪರಿಶೋಧನೆಗೆ ಒದಗಿಸಲು ಸೂಚಿಸಿದೆ.

ಮೈಸೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿ 2018–19ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ ಕಾಲೇಜುವಾರು/ಕೋರ್ಸ್‌ವಾರು/ಸೆಮಿಸ್ಟರ್‌ವಾರು ಒಟ್ಟು 2,29,925 ವಿದ್ಯಾರ್ಥಿಗಳ ಪರೀಕ್ಷೆಗೆ ಹಾಜರಾಗಿರುತ್ತಾರೆ ಆದರೆ 2018–19ನೇ ಸಾಲಿನಲ್ಲಿ 2,20,000 ಅಂಕಪಟ್ಟಿಗಳನ್ನು ಮಾತ್ರ ಖರೀದಿಸಿದ್ದು ಉಳಿದ ವಿದ್ಯಾರ್ಥಿಗಳಿಗೆ ಅಂಕಪಟ್ಟಿಗಳನ್ನು ಹೇಗೆ ವಿತರಿಸಲಾಯಿತ್ತು ಎಂಬ ಬಗ್ಗೆ ಕಂಡಿಕೆಯಲ್ಲಿ ಪ್ರಸ್ತಾಪಿಸಲಾಗಿದೆ.

ಲೆಕ್ಕಪರಿಶೋಧನೆಗೆ ಹಿಂದಿನ ಸಾಲಿನ ಅಂತಿಮ ಶಿಲ್ಕುನಲ್ಲಿ ಆರಂಭಶಿಲ್ಕಿನಲ್ಲಿ ಪರಿಗಣಿಸದೇ ಅಂಕಪಟ್ಟಿಗಳ ಖರೀದಿ ವಿತರಣೆ ಬಾಕಿಯ ವಿವರಗಳು ಈ ಕೆಳಕಂಡಂತಿರುತ್ತದೆ.

| | | | |
|---|---|---|---|
| 1 | ಆರಂಭಿಕ ಶಿಲ್ಕು | | |
| i | ದಾಸ್ತಾನು ವಹಿ ಪುಟಸಂಖ್ಯೆ–82 | 8000 | 9925 |
| ii | ಸದರಿ ಸಂಸ್ಥೆಯಲ್ಲಿ ಹಿಂದಿನ ಸಾಲಿನಲ್ಲಿ ಉಳಿದ | 1925 | |
| 2 | 2018–19ನೇ ಸಾಲಿನ ಒಟ್ಟು ಖರೀದಿ | | 2,20,000 |
| | | ಒಟ್ಟು | 229925 |
| 3 | 2018–19ನೇ ಸಾಲಿನ ಒಟ್ಟು ವಿತರಣೆ | | 229925 |
| 4 | ಅಖೈರು ಶಿಲ್ಕು | | ಇಲ್ಲ |

ಮೇಲೆ ವಿವರಿಸಿರುವಂತೆ 2018–19ಣೇ ಶೈಕ್ಷಣಿಕ ವರ್ಷದಲ್ಲಿ ಪರೀಕ್ಷೆಗೆ ಹಾಜರಾಗಿದ್ದ ಒಟ್ಟು 229925 ವಿದ್ಯಾರ್ಥಿಗಳಿಗೆ ಅಂಕಪಟ್ಟಿಗಳನ್ನು ವಿತರಣೆ ಮಾಡಿರುವುದಾಗಿ ತಮ್ಮಲ್ಲಿ ನಿವೇದಿಸಿದೆ.

**9.2. 2018–19ನೇ ಸಾಲಿನಲ್ಲಿಅಂಕಪಟ್ಟಿಖರೀದಿಗೆಸಂಬಂಧಿಸಿದಂತೆ ಉಪ ದಾಸ್ತಾನು ವಹಿ ನಿರ್ವಹಿಸದಿರುವುದು :**

2018–19ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ ಮೈಸೂರು ವಿಶ್ವವಿದ್ಯಾನಿಲಯ ವ್ಯಾಪ್ತಿಯ ಎಲ್ಲಾ ಕಾಲೇಜುಗಳ ಸ್ನಾತಕ/ಸ್ನಾತಕೋತ್ತರ/ಡಿಪ್ಲೊಮಾ/ಸರ್ಟಿಫಿಕೇಟ್ ಕೋರ್ಸುಗಳ ವಿದ್ಯಾರ್ಥಿಗಳಿಗೆ ಅಗತ್ಯವಿರುವ ಖಾಲಿ ಅಂಕಪಟ್ಟಿಗಳನ್ನು ಮೆ॥ ಮೈಸೂರು ಸೇಲ್ಸ್ ಇಂಟರ್ ನ್ಯಾಷನಲ್ ಲಿ., ಬೆಂಗಳೂರು ರವರಿಂದ ಖರೀದಿಸಲಾಗಿದ್ದು, ವಿವರಗಳು ಈ ಕೆಳಕಂಡಂತಿವೆ.

| ಕ್ರ.ಸಂ | ಇನ್‌ವಾಯ್ಸ್ ಸಂಖ್ಯೆ& ದಿನಾಂಕ | ಮೊಬಲಗು | ಖರೀದಿಸಿದ ಒಟ್ಟು ಅಂಕಪಟ್ಟಿಗಳು |
|---|---|---|---|
| 1 | BLR0166/21.06.2018 | 18,60,656 | 45000 |
| 2 | BLR0184/20.07.2018 | 34,94,960 | 85000 |
| 3 | BLR0793/20.12.2018 | 36,98,416 | 90000 |
| | **ಒಟ್ಟು** | **90,54,032** | 220000 |

ಮೇಲಿನಂತೆ ಒಟ್ಟು ರೂ.90,54,032/–ಗಳ ವೆಚ್ಚದಲ್ಲಿ ಖಾಲಿ ಅಂಕಪಟ್ಟಿಗಳನ್ನು ಖರೀದಿಸಿ, ಮೆ॥ ಲರ್ನಿಂಗ್ ಸ್ಪೆಷಲ್ ಪ್ರೈ.ಲಿ., ಹಾಗೂ ವಿಶ್ವವಿದ್ಯಾನಿಲಯ ಮುದ್ರಣಾಲಯಗಳಿಗೆ ಮುದ್ರಣಕ್ಕಾಗಿ ನೀಡಲಾಗಿದೆ. ವಿವರಗಳನ್ನು **ಅನುಬಂಧ–46**ರಲ್ಲಿ ಲಗತ್ತಿಸಿದೆ. ಆದರೆ ಸದರಿ ಸಂಸ್ಥೆಗಳಿಂದ ಮುದ್ರಿಸಿ ಸಂಬಂಧಿಸಿದ ವಿಭಾಗಗಳಿಗೆ ವಿತರಿಸಿರುವ ಮತ್ತು ಮುದ್ರಣದ ಸಂದರ್ಭದಲ್ಲಿ ಹಾಳಾದ ಅಂಕಪಟ್ಟಿಗಳಿಗೆ ಸಂಬಂಧಿಸಿದಂತೆ ಉಪ–ದಾಸ್ತಾನು ವಹಿಯನ್ನು ನಿರ್ವಹಿಸಿ ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲ. ಇದರಿಂದ ವಿಭಾಗವಾರು/ಕೋರ್ಸುವಾರು ಅಂಕಪಟ್ಟಿಗಳ ವಿತರಣೆ ಹಾಗೂ ಮುದ್ರಣದ ಸಂದರ್ಭದಲ್ಲಿ ಮುದ್ರಣದೋಷ ಇತ್ಯಾದಿಗಳಿಂದ ಹಾಳಾದ ಅಂಕಪಟ್ಟಿಗಳ ವಿವರಗಳನ್ನು ಖಚಿತಪಡಿಸಿಕೊಳ್ಳಲು ಸಾಧ್ಯವಾಗಿರುವುದಿಲ್ಲ. ಈ ಸಂಬಂಧ ವಿವರಣೆ ನೀಡುವಂತೆ ಲೆಕ್ಕಪರಿಶೋಧನಾ ವಿಚಾರಣಾ ಪತ್ರದ ಸಂಖ್ಯೆ:07/26.05.2020 ಮತ್ತು 12/28.05.2020ರ ಮೂಲಕ ಕೋರಲಾಗಿದ್ದರೂ ಯಾವುದೇ ವಿವರಗಳನ್ನು ಹಾಜರು ಪಡಿಸಿರುವುದಿಲ್ಲ. ಆದ್ದರಿಂದಈ ಬಗ್ಗೆ ವಿವರಗಳನ್ನು ಲೆಕ್ಕಪರಿಶೋಧನೆಗೆ ಹಾಜರು ಪಡಿಸುವವರೆಗೆ ಅಂಕಪಟ್ಟಿಗಳ ಖರೀದಿ ವೆಚ್ಚ ಬಾಬ್ತು **ರೂ.90,54,032/–ಗಳನ್ನು ಅಕ್ಷೇಪಣೆಗೆಯಲ್ಲಿಡಲಾಗಿದೆ.**

2018–19ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ ಪೂರ್ವ ಮುದ್ರಿತ ಅಂಕಪಟ್ಟಿಗಳನ್ನು ಮುದ್ರಣಕ್ಕಾಗಿ ಮೆ॥ ಲರ್ನಿಂಗ್ ಸ್ಪೈರಲ್ ಪ್ರೈ.ಲಿ ಸದರಿ ಸಂಸ್ಥೆಯವರಿಗೆ ಕರಾರು ಒಪ್ಪಂದ ಅನ್ವಯ ವಿಶ್ವವಿದ್ಯಾನಿಲಯದ ಅಂಕಪಟ್ಟಿಗಳ ದಾಸ್ತಾನಿನ ವಿಭಾಗದಿಂದ ಒಟ್ಟು.2,20,000 ಗಳ ಪೂರ್ವ ಮುದ್ರಿತ ಅಂಕಪಟ್ಟಿಗಳನ್ನು ನೀಡಲಾಗಿದ್ದು ಮುದ್ರಣ ಕಾರ್ಯದ ನಂತರ ಹಾಳಾಗಿರುವ ಅಂಕಪಟ್ಟಿಗಳ ವಿವರಗಳನ್ನು ಕ್ರಮವಾಗಿ ಮುದ್ರಿಸಿದ ವಿವರಗಳನ್ನೊಳಗೊಂಡ ಉಪ ದಾಸ್ತಾನುವಿಗೆ ಸಂಬಂಧಿಸಿದ ಮಾಹಿತಿಯನ್ನು ಸಲ್ಲಿಸಲಾಗಿದೆ.

**ಮುಖ್ಯ ದಾಸ್ತಾನುವಿನಿಂದ ಪಡೆದ ಅಂಕಪಟ್ಟಿಗಳು 2,20,000**

| ಕ್ರ ಸಂಖ್ಯೆ | ವಿವರ | ಅಂಕಪಟ್ಟಿ ಸಂಖ್ಯೆ |
|---|---|---|
| 01 | ಮುದ್ರಣಾ ಸಂದರ್ಭದಲ್ಲಿ ರದ್ದುಪಡಿಸಲಾದ ಅಂಕಪಟ್ಟಿಗಳು *ಮುದ್ರಣಾದೋಷ NCL. Name Correction ಮರುಮೌಲ್ಯಮಾಪನ ಈ ಕಾರಣಗಳಿಗಾಗಿ ರದ್ದಾದ ಅಂಕಪಟ್ಟಿಗಳ ಒಟ್ಟು | 6207 |
| 02 | ಕ್ರಮವಾಗಿ ಮುದ್ರಣವಾದ ಅಂಕಪಟ್ಟಿಗಳ (ಕ್ರಮ ಸಂಖ್ಯೆಗಳು:– 1195001 ರಿಂದ 1415000) | 213793 |
| | ಒಟ್ಟು | **220000** |

ಮೆ॥ ಲರ್ನಿಂಗ್ ಸ್ಪೈರಲ್ ಸಂಸ್ಥೆಯವರು ನಿರ್ಗಮಿಸಿದ್ದು ಇವರ ನಂತರ ಬಂದ META-1 ಸಂಸ್ಥೆಯವರು ಎಲ್ಲಾ ನಿಯಮಗಳನ್ನು ಪಾಲಿಸುವಂತೆ ಸೂಚಿಸಲಾಗಿದ್ದು ಉಪ ದಾಸ್ತಾನಿನ ವ್ಯವಸ್ಥೆಯು ಸಹ ನಡೆಯುತ್ತಿದ್ದು ಮುಂದಿನ ಲೆಕ್ಕ ತನಿಖೆಯ ವೇಳೆ ಉಪದಾಸ್ತಾನು ಲೆಕ್ಕವನ್ನು ಹಾಜರುಪಡಿಸಲಾಗುವುದು.

ಆದ್ದರಿಂದ ಕಂಡಿಕೆ ಆಕ್ಷೇಪಣೆಯನ್ನು ಕೈ ಬಿಡುವಂತೆ ಈ ಮೂಲಕ ಕೋರಿದೆ.

| | |
|---|---|
| **9.3. ಗುತ್ತಿಗೆಯ ಕರಾರಿನ ಅವಧಿ ಮುಗಿದ ನಂತರವೂ ಮತ್ತೆ ಎರಡು ವರ್ಷಗಳ ಗುತ್ತಿಗೆ ಕರಾರು ಮಾಡಿಕೊಂಡು, ದರ ಪರಿಷ್ಕರಿಸಿ ಹಣ ಪಾವತಿಸಿರುವುದು :**<br><br>2018–19ನೇ ಸಾಲಿನ ಪರೀಕ್ಷಾ ಖಾತೆಯ ಮಾರ್ಚ್–2019 ರ ವೋಚರ್‌ಗಳ ಪರಿಶೀಲನೆಯಲ್ಲಿ ಮೆ॥ ಮೆಟಾ–ಐ–ಟೆಕ್ನಾಲಜೀಸ್ ಪ್ರೈ.ಲಿ ಬೆಂಗಳೂರು ಇವರಿಗೆ ಬಿ.ಆರ್ ಸಂಖ್ಯೆ–10479/ದಿನಾಂಕ:31.03.2019ರಲ್ಲಿ ಮೂರು ಇನ್‌ವಾಯ್ಸ್‌ಗಳ (ಸಂ:ಎಂಇಟಿಎ/ಎಸ್‌ಟಿ/1415/1403, 1404 ಹಾಗೂ 1405/4–7–2014) ಮೊತ್ತ ಕ್ರಮವಾಗಿ ರೂ.5,65,810/–, ರೂ.4,500/–ರೂ.1,07,275/–, ಒಟ್ಟು ರೂ.6,77,585/–ಗಳನ್ನು ಧನಾದೇಶ ಸಂಖ್ಯೆ–597004/31.03.2019 ರಲ್ಲಿ ಪಾವತಿಸಲಾಗಿದೆ.<br><br>ಮೇಲ್ಕಂಡ ಸಂಸ್ಥೆಗೆ ನೀಡಿದ್ದ ಗುತ್ತಿಗೆ ಅವಧಿ ಜನವರಿ–2012ರಲ್ಲೇ ಕೊನೆ ಗೊಂಡಿದ್ದು, ಕುಲಸಚಿವರು, ಪರೀಕ್ಷಾಂಗ ರವರು ತಮ್ಮ ಆದೇಶ ಸಂಖ್ಯೆ–ಪ.ವಿ/ಮಾ.ವಿ/10/2012–13/19.01.2015ರಲ್ಲಿ ದಿನಾಂಕ:27.03.2012ರಂದು ಜರುಗಿದ ಸಿಂಡಿಕೇಟ್ ಸಭೆಯ ನಿರ್ಣಯದನುಸಾರ ಈ ಅವಧಿಯನ್ನು ಎರಡು ವರ್ಷಗಳ ಅವಧಿಗೆ ವಿಸ್ತರಿಸಿ, ಪರಿಷ್ಕೃತದರದೊಡನೆ ಎರಡು ವರ್ಷದ ಅವಧಿಗೆ ಒಡಂಬಡಿಕೆ ಮಾಡಿಕೊಂಡಿರುತ್ತಾರೆ. ಇದು ಪಾರದರ್ಶಕತೆಯ ನಿಯಮಗಳಿಗೆ ವಿರುದ್ಧವಾಗಿದ್ದು, ಈ ಸಂಬಂಧ 2013–14ನೇ ಸಾಲಿನಲ್ಲಿ ಪಾವತಿಸಿರುವ ಮೊತ್ತ ರೂ.81,39,812/–ಗಳ ಸಂಬಂಧ 2013–14ನೇ ಸಾಲಿನ ಲೆಕ್ಕಪರಿಶೋಧನಾ ವರದಿಯಲ್ಲಿ ಆಕ್ಷೇಪಣೆ ಮಾಡಲಾಗಿರುತ್ತದೆ. ಹೀಗಿದ್ದರೂ ಬಾಕಿ ಬಿಲ್ಲುಗಳ ಮೊತ್ತ ರೂ.6,77,585/–ಗಳನ್ನು 2018–19ನೇ ಸಾಲಿನಲ್ಲಿ ಪಾವತಿಸಿರುವುದಕ್ಕೆ ಹಾಗೂ ಆಯವ್ಯಯದಲ್ಲಿ ಈ ಬಾಬ್ತು ಅವಕಾಶ ಮಾಡಿಕೊಂಡಿರುವ ಬಗ್ಗೆ ವಿವರಣೆ ನೀಡಲು ವಿಚಾರಣಾ ಪತ್ರ ಸಂಖ್ಯೆ–56/2019–20/18.03.2020ರಲ್ಲಿ ಕೋರಲಾಗಿದ್ದು, ಯಾವುದೇ ಉತ್ತರ ನೀಡಿರುವುದಿಲ್ಲ. 2013–14ನೇ ಸಾಲಿನಲ್ಲಿ ಲೆಕ್ಕಪರಿಶೋಧನಾ ವರದಿಯಲ್ಲಿ ಆ ಹಿಂದೆ ಪಾವತಿಸಿದ್ದ ಮೊತ್ತವನ್ನು ಆಕ್ಷೇಪಣೆಯಲ್ಲಿರಿಸಿದ್ದರೂ ಸಹ ಅದಕ್ಕೆ ಸೂಕ್ತ ಸಮಜಾಯಿಷಿ ನೀಡದೇ, ಬಾಕಿ ಮೊತ್ತವನ್ನು 2018–19ನೇ ಸಾಲಿನಲ್ಲಿ ಪಾವತಿಸಿರುವುದು ಲೆಕ್ಕಪರಿಶೋಧನೆಯ ಬಗ್ಗೆ ವಿಶ್ವವಿದ್ಯಾನಿಲಯಕ್ಕೆ ಯಾವುದೇ ಗೌರವ ವಿಲ್ಲದಿರುವುದನ್ನು ಬಿಂಬಿಸುತ್ತದೆ. ಹೀಗಾಗಿ 2018–19ನೇ ಸಾಲಿನಲ್ಲಿ ಪಾವತಿಸಿರುವ **ಮೊತ್ತರೂ.6,77,585/–ಗಳನ್ನು ಸಹ ಆಕ್ಷೇಪಣೆಯಲ್ಲಿರಿಸಿದೆ.** | ನವೆಂಬರ್/ಡಿಸೆಂಬರ್ 2011 ರ ಪರೀಕ್ಷಾ ಕಾರ್ಯಗಳ ನಂತರ ಮೆ॥ ಮೆಟಾ–ಐ–ಟೆಕ್ನಾಲಜೀಸ್, ಪ್ರೈ. ಲೀ, ಬೆಂಗಳೂರು ರವರ ಗುತ್ತಿಗೆ ಅವಧಿಯು ಮುಕ್ತಾಯಗೊಂಡಿದ್ದು, ಏಪ್ರಿಲ್/ಮೇ–2012ರ ಪರೀಕ್ಷಾ ಕಾರ್ಯಗಳಿಗೆ ಪೂರ್ವ ತಯಾರಿ ಕಾರ್ಯಗಳನ್ನು ಆರಂಭಿಸಬೇಕಾಗಿದ್ದ ಹಿನ್ನೆಲೆಯಲ್ಲಿ ಮಾನ್ಯ ಕುಲಪತಿಗಳು ಹಾಲಿ ಹೊರಗುತ್ತಿಗೆಯ ಆಧಾರದ ಮೇಲೆ ಪರೀಕ್ಷಾ ಕಾರ್ಯಚಟುವಟಿಕೆಗಳನ್ನು ನಿರ್ವಹಿಸುತ್ತಿದ್ದ, ಮೆ॥ ಮೆಟಾ–ಐ–ಟೆಕ್ನಾಲಜೀಸ್, ಪ್ರೈ. ಲೀ, ಬೆಂಗಳೂರು ರವರ ತಾಂತ್ರಿಕ ಕಾರ್ಯ ಕ್ಷಮತೆ ಹಾಗೂ ಗೌಪ್ಯತೆಯ ಬಗ್ಗೆ ಅಧ್ಯಯನ ನಡೆಸಲು ಕುಲಸಚಿವರ ಅಧ್ಯಕ್ಷತೆಯಲ್ಲಿ ತಾಂತ್ರಿಕ ಪರಿಣಿತರ ಸಮಿತಿಯೊಂದನ್ನು ರಚಿಸಿ, ಸದರಿ ಸಮಿತಿಯು ನೀಡಿದ ವರದಿಯನ್ನು ದಿನಾಂಕ: 27–03–2012 ರಂದು ಜರುಗಿದ ಸಿಂಡಿಕೇಟ್ ಸಭೆಯ ಅವಗಾಹನೆಗಾಗಿ ಮಂಡಿಸಿದ್ದು, ಸಿಂಡಿಕೇಟ್ ಸಭೆಯು ಪರೀಕ್ಷಾ ಕಾರ್ಯಗಳನ್ನು ಹೊರಗುತ್ತಿಗೆಯ ಆಧಾರದ ಮೇಲೆ ನಿರ್ವಹಿಸುತ್ತಿರುವ ಮೆ॥ ಮೆಟಾ–ಐ–ಟೆಕ್ನಾಲಜೀಸ್, ಪ್ರೈ. ಲೀ, ಬೆಂಗಳೂರು ರವರ ಗುತ್ತಿಗೆಯನ್ನು 02 ವರ್ಷಗಳ ಅವಧಿಗೆ (ಏಪ್ರಿಲ್/ಮೇ–2012, ನವೆಂಬರ್/ಡಿಸೆಂಬರ್–2012, ಏಪ್ರಿಲ್/ಮೇ–2013, ನವೆಂಬರ್/ಡಿಸೆಂಬರ್–2013) ವಿಸ್ತರಿಸಲು ತೀರ್ಮಾನಿಸಿದ ಹಿನ್ನೆಲೆಯಲ್ಲಿ ಸದರಿ ಸಂಸ್ಥೆಯವರ ಹೊರಗುತ್ತಿಗೆ ಅವಧಿಯನ್ನು 02ವರ್ಷಗಳ ಅವಧಿಗೆ ವಿಸ್ತರಿಸಲಾಯಿತು. ಈ ಮಧ್ಯೆ ಮೆ॥ ಮೆಟಾ–ಐ–ಟೆಕ್ನಾಲಜೀಸ್, ಪ್ರೈ. ಲೀ, ಬೆಂಗಳೂರು ರವರು ಸದರಿ ಕಾರ್ಯಗಳಿಗೆ ಪಡೆಯುತ್ತಿರುವ ದರಗಳನ್ನು ಪರಿಷ್ಕರಿಸಬೇಕೆಂದು ಕೋರಿದ ಹಿನ್ನೆಲೆಯಲ್ಲಿ ದಿನಾಂಕ:27–03–2012 ರಂದು ಜರುಗಿದ ಸಿಂಡಿಕೇಟ್ ಸಭೆಯು ದರ ಸಂಧಾನಕ್ಕಾಗಿ ಕುಲಸಚಿವರ ಅಧ್ಯಕ್ಷತೆಯಲ್ಲಿ ಸಮಿತಿಯೊಂದನ್ನು ರಚಿಸಿ ಸದರಿ ಸಮಿತಿಯು ದಿನಾಂಕ:17–04–2012 ರಂದು ಸದರಿ ಗುತ್ತಿಗೆದಾರರೊಡನೆ ದರ ಸಂಧಾನ ನಡೆಸಿ ನಿಗಧಿಗೊಳಿಸಿದ ದರಪಟ್ಟಿಯನ್ನು ದಿನಾಂಕ: 08–05–2012 ರಂದು ಜರುಗಿದ ಸಿಂಡಿಕೇಟ್ ಸಭೆಯಲ್ಲಿ ಮಂಡಿಸಿ, ಸಿಂಡಿಕೇಟ್ ಸಭೆಯು ಅನುಮೋದಿಸಿದ ದರದಂತೆ ಪರೀಕ್ಷಾ ಕಾರ್ಯಚಟುವಟಿಕೆಗಳನ್ನು ನಿರ್ವಹಿಸಲು ಸೇವಾ ಕರಾರು ಒಪ್ಪಂದ ಮಾಡಿಕೊಳ್ಳಲಾಗಿದೆ.<br>ಈ ಸಂಬಂಧ ಬಾಕಿ ಇದ್ದ ಹುಂಡಿಗಳ ಮೊತ್ತ ರೂ.6,77,858/–ಗಳನ್ನು ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ 2018–19 ನೇ ಸಾಲಿನಲ್ಲಿ ಪಾವತಿಸಲಾಗಿದೆ.<br><br>ಈ ಮೇಲಿನ ಎಲ್ಲಾ ಅಂಶಗಳನ್ನು ಪರಿಗಣಿಸುವ ಮೂಲಕ ಆಕ್ಷೇಪಣೆಯನ್ನು ಕೈಬಿಡುವಂತೆ ಕೋರಲಾಗಿದೆ. |

| | |
|---|---|
| **9.4.ದೂರ ವ್ಯಾಪಿ (Outreach) ಹಾಗೂ ವಿಶೇಷ (Specialised) ಕೋರ್ಸ್‌ನ ವಿದ್ಯಾರ್ಥಿಗಳ ಆನ್‌ಲೈನ್ ಪರೀಕ್ಷಾ ಕಾರ್ಯಗಳ ನಿರ್ವಹಣೆ ಟೆಂಡರ್ ಪ್ರಕ್ರಿಯೆಯ ನ್ಯೂನತೆಗಳು :**<br><br>2018-19ನೇ ಸಾಲಿನಲ್ಲಿ ವಿಶ್ವವಿದ್ಯಾನಿಲಯದ ಸಹೋದ್ಯಮ ಕೋರ್ಸುಗಳು (Collaboration courses)ಖಾತೆಗೆ ಸಂಬಂಧಿಸಿದಂತೆ ವಿಶ್ವವಿದ್ಯಾನಿಲಯ ದೂರ ವ್ಯಾಪಿ(Outreach) ಹಾಗೂ ವಿಶೇಷ(Specialised) ಕೋರ್ಸ್‌ನ ವಿದ್ಯಾರ್ಥಿಗಳಿಗೆ ಆನ್‌ಲೈನ್ ಮುಖಾಂತರ ಪರೀಕ್ಷಾ ಕಾರ್ಯಗಳ ನಿರ್ವಹಣೆ ಸೇವೆ ಒದಗಿಸುವ ಸಂಬಂಧ 2016-17ನೇ ಸಾಲಿನಲ್ಲಿ ಟೆಂಡರ್ ಕರೆದಿದ್ದು, ಟೆಂಡರ್ ಪ್ರಕ್ರಿಯೆಯ ಕಡತ/ದಾಖಲೆಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ಕೋರಿ ವಿಚಾರಣೆ ಪತ್ರ:89/2020-21/22.05.2020 ಹಾಗೂ ಸಂ:121/2020-21/08.06.2020ಗಳನ್ನು ನೀಡಿದಾಗ, ಹಾಜರುಪಡಿಸಿದ ಕಡತ ಹಾಗೂ ದಾಖಲೆಗಳನ್ನು ಪರಿಶೀಲಿಸಲಾಗಿ, ಸದರಿ ಟೆಂಡರ್‌ನಲ್ಲಿ ಯಶಸ್ವಿ ಟೆಂಡರುದಾರರಾದ ಮೆ.ಎಂ.ಎಸ್.ಎಲ್ ಲರ್ನಿಂಗ್ ಸಿಸ್ಟಂಸ್ ಪ್ರೈ ಲಿ., ಗುರುಗ್ರಾಮ, ಹರಿಯಾಣರವರಿಂದ ಸೇವೆಯನ್ನು ಪಡೆದು ರೂ.2,12,06,700/-ಗಳನ್ನು ಪಾವತಿಸಲಾಗಿರುತ್ತದೆ ಸದರಿ ಟೆಂಡರ್ ಪ್ರಕ್ರಿಯೆಯಲ್ಲಿನ ನ್ಯೂನ್ಯತೆಗಳನ್ನು ಈ ಕೆಳಕಂಡಂತೆ ಪಟ್ಟಿ ಮಾಡಲಾಗಿದೆ.<br>• ಟೆಂಡರ್‌ನ ಮೌಲ್ಯ ರೂ.2.00 ಕೋಟಿ ಅಥವಾ ಅದಕ್ಕಿಂತ ಅಧಿಕವಿದ್ದ ಪ್ರಕರಣಗಳಲ್ಲಿ ಟೆಂಡರ್ ಸಲ್ಲಿಕೆಗೆ ಕ.ಸಾ.ಸಂ.ಪಾ.ನಿಯಮಗಳು-2000ದ ನಿಯಮ-17 (1) (ಬಿ) ರನ್ವಯ ಕನಿಷ್ಠ 60 ದಿನಗಳ ಕಾಲಾವಕಾಶ ನೀಡಬೇಕಿರುತ್ತದೆ. ಆದರೆ ಇಲ್ಲಿ ನಿಗದಿತ ಕಾಲಾವಧಿಯನ್ನು ನೀಡಿರುವುದಿಲ್ಲ. ಅವಧಿ ಕಡಿತಗೊಳಿಸಿರುವುದಕ್ಕೆ ಸಕ್ಷಮ ಪ್ರಾಧಿಕಾರದ ಅನುಮೋದನೆ ಪಡೆದಿರುವ ಬಗ್ಗೆ ಕೂಡ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ. ವಿಶ್ವವಿದ್ಯಾನಿಲಯದವರು ಇದಕ್ಕೆ ಉತ್ತರಿಸಿ ಪರೀಕ್ಷಾ ಪ್ರಕ್ರಿಯೆಗಳನ್ನು ನಡೆಸಲು ಸಿಬ್ಬಂದಿ ಕೊರತೆಯಿದ್ದ ಕಾರಣ ವಿದ್ಯಾರ್ಥಿಗಳಿಗೆ ತೊಂದರೆಯಾಗ ಬಾರದೆಂದು ಆನ್‌ಲೈನ್ ಮೂಲಕ ಪ್ರವೇಶಾತಿ ಮತ್ತು ಪರೀಕ್ಷಾ ಪ್ರಕ್ರಿಯೆಗಳನ್ನು ನಡೆಸಲು ಅಲ್ಪಾವಧಿ ಟೆಂಡರ್ ಕರೆಯಲಾಗಿದೆ ಎಂದು ವಿವರಣೆ ನೀಡಿರುತ್ತಾರೆ.<br>• ಆನ್‌ಲೈನ್ ಮೂಲಕ ಪ್ರವೇಶಾತಿ ಮತ್ತು ಪರೀಕ್ಷಾ ಪ್ರಕ್ರಿಯೆಗಳನ್ನು ನಡೆಸುವ ಯೋಜನೆಗೆ ಟೆಂಡರ್ ಪೂರ್ವದಲ್ಲಿ ವಿದ್ಯಾರ್ಥಿಗಳ ಸಂಖ್ಯೆ, ಯೋಜನೆಯ ವಿನ್ಯಾಸ (ತಾಂತ್ರಿಕ ಅಂಶಗಳೂ ಒಳಗೊಂಡು) ಹಾಗೂ ವೆಚ್ಚದ ಅಂದಾಜುಗಳನ್ನೊಳಗೊಂಡ ಸವಿವರ ಯೋಜನಾ ವರದಿ ತಯಾರಿಸಿರುವ ಬಗ್ಗೆ ಮಾಹಿತಿಯನ್ನು ಒದಗಿಸಿರುವುದಿಲ್ಲ.<br>• ಟೆಂಡರ್‌ನ ಅಂದಾಜು ವೆಚ್ಚ ರೂ.80.00 ಲಕ್ಷಗಳಾಗಿದ್ದು, 2018-19ನೇ ಸಾಲಿನಲ್ಲಿ ಸೇವಾ ಸಂಸ್ಥೆಯವರಿಗೆ ಪಾವತಿಸಿರುವ ಮೊತ್ತ ರೂ.2.00ಕೋಟಿಗಳಿಗೂ ಮೀರಿರುತ್ತದೆ. ಸದರಿ ಸಾಲಿನಲ್ಲಿ ಹಾಗೂ ಹಿಂದಿನ ಸಾಲಿನಲ್ಲಿ ವಿದ್ಯಾರ್ಥಿಗಳ ಸಂಖ್ಯೆಯಲ್ಲಿ ಗಣನೀಯವಾಗಿ ಹೆಚ್ಚಳವಾದ್ದರಿಂದ | 2018-19ನೇ ಸಾಲಿನಲ್ಲಿ ಸಹೋಧ್ಯಮ ಕೋರ್ಸ್‌ಗಳ ಖಾತೆಗೆ ಸಂಬಂಧಿಸಿದಂತೆ ಔಟ್‌ರೀಚ್ ಹಾಗೂ ಸ್ಪೇಷಲೈಜ್ಡ್ ಕೋರ್ಸ್‌ನ ವಿದ್ಯಾರ್ಥಿಗಳಿಗೆ ಆನ್‌ಲೈನ್ ಮುಖಾಂತರ ಪರೀಕ್ಷಾ ಕಾರ್ಯಗಳ ನಿರ್ವಹಣೆ ಸೇವೆ ಒದಗಿಸುವ ಸಂಬಂಧ 2016-17ನೇ ಸಾಲಿನಲ್ಲಿ ಟೆಂಡರ್ ಪ್ರಕ್ರಿಯೆಯಲ್ಲಿನ ನ್ಯೂನ್ಯತೆಗಳ ಬಗ್ಗೆ ಪ್ರಸ್ತಾಪಿಸಲಾಗಿರುತ್ತದೆ.<br><br>2018-19ನೇ ಸಾಲಿನಲ್ಲಿ ಹಾಗೂ ಹಿಂದಿನ ಸಾಲಿನಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಗಣನೀಯವಾಗಿ ಹೆಚ್ಚಳವಾದ್ದರಿಂದ ವೆಚ್ಚ ಅಧಿಕವಾಗಿದ್ದು, ಟೆಂಡರ್ ಮೊತ್ತಕ್ಕಿಂತ ರೂ.2.00 ಕೋಟಿಗಳಿಗೆ ಅಧಿಕವಾಗಿರುವುದು ಎಂಬುದಾಗಿ ನಿವೇದಿಸುತ್ತಾ,<br><br>ಸಿಂಡಿಕೇಟ್ ಸಭಾ ನಿರ್ಣಯದಂತೆ ಐದು ವರ್ಷದ ಅವಧಿಗೆ ಮಾಡಿಕೊಳ್ಳಲಾಗಿದ್ದು, ಸಿಂಡಿಕೇಟ್ ಸಭೆ ಅನುಮೋದಿಸಿರುತ್ತದೆ. ಕಂಡಿಕೆಯಲ್ಲಿ ಪ್ರಸ್ತಾಪಿಸಿರುವ ಎಲ್ಲಾ ನ್ಯೂನ್ಯತೆಗಳ ಬಗ್ಗೆ ಸಂಬಂಧಪಟ್ಟ ಸೂಕ್ತ ದಾಖಲಾಗಳನ್ನು ಮುಂದಿನ ಲೆಕ್ಕಪರಿಶೋಧನೆಯಲ್ಲಿ ಒದಗಿಸಲಾಗುವುದಾಗಿ ನಿವೇದಿಸಿದೆ. |

| | |
|---|---|
| ವೆಚ್ಚ ಅಧಿಕವಾಗಿರುತ್ತದೆ ಎಂದು ವಿಶ್ವವಿದ್ಯಾನಿಲಯದವರು ವಿವರಣೆಯನ್ನು ನೀಡಿರುತ್ತಾರೆ.<br><br>• ಸಕಾಲದಲ್ಲಿ ಗುಣಮಟ್ಟದ ಸೇವೆಯ ಖಾತರಿಯಾಗಿ ಪಾರದರ್ಶಕತೆ ನಿಯಮಗಳನುಸಾರ ಟೆಂಡರ್ ಮೌಲ್ಯದ ಶೇ.5ರಷ್ಟು ಮೊತ್ತವನ್ನು ಕಾರ್ಯನಿರ್ವಹಣಾ ಖಾತರಿಯಾಗಿ ಭದ್ರತಾ ಠೇವಣಿಯನ್ನು ಪಡೆಯಬೇಕಿದ್ದು, ವಿಶ್ವವಿದ್ಯಾನಿಲಯದಿಂದ ಈ ಕ್ರಮ ಆಗಿರುವುದಿಲ್ಲ. ವಿಶ್ವವಿದ್ಯಾನಿಲಯವು ಇದಕ್ಕೆ ಉತ್ತರಿಸಿ ಔಟ್‌ರೀಚ್ ಮತ್ತು ಸ್ಪೆಷಲೈಜ್ಡ್ ಪ್ರೋಗ್ರಾಂಗಳನ್ನು ಸ್ಥಗಿತಗೊಳಿಸಿದ್ದು, ಸದರಿ ಅವಧಿಯಲ್ಲಿ ಕೆಲವೇ ವಿದ್ಯಾರ್ಥಿಗಳ ಮರುಪರೀಕ್ಷೆಗಳನ್ನು ನಡೆಸಲಾಗಿದ್ದು, ಮೆ.ಎಂ.ಎಸ್.ಎಲ್ ಸಂಸ್ಥೆಯವರು ಹೆಚ್ಚಿನ ಕೆಲಸಗಳನ್ನು ನಿರ್ವಹಿಸಿರುತ್ತಾರೆ. ಹೀಗಾಗಿ ವಿಶ್ವವಿದ್ಯಾನಿಲಯಕ್ಕೆ ಯಾವುದೇ ರೀತಿಯ ನಷ್ಟವಾಗಿರುವುದಿಲ್ಲ ಎಂಬ ವಿವರಣೆಯನ್ನು ನೀಡಿರುತ್ತಾರೆ.<br>• ಯಶಸ್ವಿ ಟೆಂಡರುದಾರರೊಡನೆ ಐದು ವರ್ಷಗಳ ಅವಧಿಗೆ ಕರಾರು ಪತ್ರವನ್ನು ಮಾಡಿಕೊಳ್ಳಲಾಗಿರುತ್ತದೆ. ಆದರೆ ಟೆಂಡರ್ ಪ್ರಕಟಣೆಯ ಅವಧಿಯಲ್ಲಿ ಟೆಂಡರ್ ಕಾಲಾವಧಿಯ ಬಗ್ಗೆ ಯಾವುದೇ ಮಾಹಿತಿಯನ್ನು ಪ್ರಕಟಿಸಿರುವುದಿಲ್ಲ. ಈ ಬಗ್ಗೆ ವಿಶ್ವವಿದ್ಯಾನಿಲಯವು ಸ್ಪಷ್ಟೀಕರಣ ನೀಡಿ, ಶಿಕ್ಷಣ ವಿಷಯಗಳಿಗೆ ಸಂಬಂಧಿಸಿದ ಎಲ್ಲಾ ಒಡಂಬಡಿಕೆಗಳು ಐದು ವರ್ಷಗಳ ಅವಧಿಯದ್ದಾಗಿರುತ್ತವೆ. ಅದರಂತೆ ಒಡಂಬಡಿಕೆಯನ್ನು ಐದು ವರ್ಷದ ಅವಧಿಗೆ ಮಾಡಿಕೊಳ್ಳಲಾಗಿದ್ದು, ಒಡಂಬಡಿಕೆಯನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿರುತ್ತದೆ ಎಂದು ವಿವರಣೆಯನ್ನು ನೀಡಿರುತ್ತಾರೆ. ಆದರೆ ಈ ಸಂಬಂಧ ಯಾವುದೇ ಅಧಿಕೃತ ಆದೇಶ/ದಾಖಲಾತಿಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲ.<br>ಮೇಲ್ಕಂಡ ಕಾರಣಗಳಿಂದ ಆನ್‌ಲೈನ್ ಪರೀಕ್ಷಾ ಕಾರ್ಯಗಳ ನಿರ್ವಹಣೆ ಟೆಂಡರುದಾರರಿಗೆ ಪಾವತಿಸಲಾಗಿರುವ ಒಟ್ಟು ಮೊತ್ತ **ರೂ.2,12,06,700/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ**. ವಿವರಗಳನ್ನು **ಅನುಬಂಧ–47**ರಲ್ಲಿ ನೀಡಲಾಗಿದೆ. | |

**9.5. ಪ್ರಶ್ನೆ ಪತ್ರಿಕೆಗಳ ಮುದ್ರಣಕ್ಕೆ ಏಜೆನ್ಸಿ ಆಯ್ಕೆ ಮಾಡುವಾಗ ಪಾರದರ್ಶಕತೆಯ ನಿಯಮಗಳನ್ನು ಪಾಲನೆ ಮಾಡದಿರುವುದು ಹಾಗೂ ಕರಾರಿನ ದರಕ್ಕಿಂತ ಹೆಚ್ಚು ದರದಲ್ಲಿ ಬಿಲ್ಲು ಪಾವತಿಮಾಡಿರುವುದು:**

ಪರೀಕ್ಷಾ ಖಾತೆಗೆ ಸಂಬಂಧಿಸಿದಂತೆ ಸೆಪ್ಟೆಂಬರ್–2018 ಮಾಹೆಯ ವೋಚರನ್ನು (ಬಿ.ಆರ್ ಸಂಖ್ಯೆ:110/ ದಿನಾಂಕ:28.08.2018) ಪರಿಶೋಧಿಸಲಾಗಿ ಪ್ರಶ್ನೆಪತ್ರಿಕೆ ಮುದ್ರಿಸಿರುವುದಕ್ಕೆ ಮೆ.ವೈ.ಎಸ್.ಹೈಟೆಕ್ ಸೆಕ್ಯೂರ್ ಪ್ರಿಂಟ್ ಪ್ರೈವೇಟ್ ಲಿಮಿಟೆಡ್ ರವರಿಗೆ ಧನಾದೇಶ ಸಂಖ್ಯೆ:596686/22.09.2018ರ ಮೂಲಕ ರೂ.45,60,023/–ಗಳನ್ನು ಪಾವತಿಸಲಾಗಿದೆ. ಈ ವ್ಯವಹರಣೆಗೆ ಸಂಬಂಧಿಸಿದ ಲೆಕ್ಕಪತ್ರ ದಾಖಲೆಗಳನ್ನು ಹಾಜರುಪಡಿಸುವಂತೆ ಕೋರಿ ನೀಡಿದ ವಿಚಾರಣಾ ಪತ್ರ ಸಂಖ್ಯೆ:31/2019–20/11.03.2020 ಮತ್ತು 87/2020–21/22.05.2020ಗಳಿಗೆ ಪ್ರತಿಕ್ರಿಯಿಸಿ ವಿಶ್ವವಿದ್ಯಾನಿಲಯದವರು ಭಾಗಶಃ ಲೆಕ್ಕಪತ್ರ ದಾಖಲೆಗಳನ್ನು ಮಾತ್ರ ಹಾಜರುಪಡಿಸಿರುತ್ತಾರೆ.

ಮೆ.ವೈ.ಎಸ್.ಹೈಟೆಕ್ ಸೆಕ್ಯೂರ್ ಪ್ರಿಂಟ್ ಪ್ರೈವೇಟ್ ಲಿಮಿಟೆಡ್ ರವರಿಂದ ಪ್ರಶ್ನೆಪತ್ರಿಕೆ ಮುದ್ರಿಸಿಕೊಳ್ಳುವುದಕ್ಕೆ ಸಂಬಂಧಿಸಿದಂತೆ ಕೆ.ಟಿ.ಪಿ.ಪಿ ಅಧಿನಿಯಮದ ಪ್ರಕರಣ4(ಜಿ)ಅಡಿ 2018–19ನೇ ಸಾಲಿಗೆ ಪಾರದರ್ಶಕತೆ ಕಾಯ್ದೆಯಿಂದ ವಿನಾಯಿತಿಯನ್ನು ಪಡೆದಿರುವ ಸರ್ಕಾರದ ಅಧಿಸೂಚನೆಯ ಪ್ರತಿಯನ್ನು ಹಾಜರುಪಡಿಸುವಂತೆ ಕೋರಿದಾಗ ವಿಶ್ವವಿದ್ಯಾನಿಲಯವು 2003–04ನೇ ಸಾಲಿನ ಅಧಿಸೂಚನೆಯ ಪ್ರತಿಯನ್ನು ಹಾಜರುಪಡಿಸಿದ್ದು, ಅದು ಲೆಕ್ಕತಪಾಸಣಾ ವರ್ಷದಲ್ಲಿ ಚಾಲ್ತಿಯಲ್ಲಿರುವುದಿಲ್ಲ. ಸರ್ಕಾರದೊಂದಿಗೆ ಪತ್ರ ವ್ಯವಹಾರ ಮಾಡಿ ನವೀಕರಣ ಮಾಡಿಕೊಳ್ಳಲು ಕ್ರಮ ಕೈಗೊಳ್ಳುತ್ತಿರುವುದಾಗಿ ವಿಶ್ವವಿದ್ಯಾನಿಲಯದವರು ತಮ್ಮ ಉತ್ತರದಲ್ಲಿ ತಿಳಿಸಿರುತ್ತಾರೆ.

ಹಣ ಪಾವತಿಸಿರುವ ವೋಚರನ್ನು ಪರಿಶೀಲಿಸಲಾಗಿ, ಸಂಸ್ಥೆಗೆ ನಿಗಧಿಪಡಿಸಿದ್ದ ದರಕ್ಕಿಂತ ಶೇ.20ರಷ್ಟು ಹೆಚ್ಚುವರಿದರದಲ್ಲಿ ಬಿಲ್ಲು ಪಾವತಿಸಿರುವುದನ್ನು ಗಮನಿಸಲಾಗಿದೆ. ಈ ಸಂಬಂಧ ಹಾಜರುಪಡಿಸಿದ ಕರಾರು ಪತ್ರವನ್ನು ಪರಿಶೀಲಿಸಲಾಗಿ ಕರಾರಿನ ಷರತ್ತು ಸಂಖ್ಯೆ–03 ರಲ್ಲಿ ವಿಶ್ವವಿದ್ಯಾನಿಲಯಕ್ಕೆ 7 ದಿನಗಳೊಳಗಾಗಿ ತುರ್ತಾಗಿ ಸೇವೆ ಪಡೆಯುವ ಅವಶ್ಯಕತೆ ಕಂಡು ಬಂದಾಗ ನಿಗಧಿಪಡಿಸಿದ ದರಕ್ಕಿಂತ ಶೇ.20ರಷ್ಟು ಹೆಚ್ಚುವರಿಯಾಗಿ ದರ ವಿಧಿಸಲಾಗುತ್ತದೆಂಬ ನಿಬಂಧನೆಯಿರುತ್ತದೆ. ಸದರಿ ಸೇವೆಯು ಆ ಸಂದರ್ಭದಲ್ಲಿ ತುರ್ತಿನದಾಗಿತ್ತು ಎನ್ನುವುದಕ್ಕೆ ನಿಖರ ಮಾಹಿತಿ ಅಥವಾ ದಾಖಲೆಗಳನ್ನು ಹಾಜರುಪಡಿಸುವಂತೆ ಕೋರಿ ವಿಚಾರಣಾ ಪತ್ರ ಸಂಖ್ಯೆ:101/2020–21/27.05.2020ನ್ನು ನೀಡಲಾಗಿತ್ತು. ಆದರೆ ವಿಶ್ವವಿದ್ಯಾನಿಲಯವು ಈ ಬಗ್ಗೆ ನೀಡಿರುವ ಉತ್ತರವು ಸಮಂಜಸವಾಗಿರುವುದಿಲ್ಲ. ಹೆಚ್ಚುವರಿಯಾಗಿ ಪಾವತಿಸಿರುವ ದರ ರೂ.1,77,313/–ಗಳಿಗೆ ವಿವರಗಳನ್ನು **ಅನುಬಂಧ–48**ರಲ್ಲಿ ನೀಡಲಾಗಿದೆ.

ಹೀಗೆ ಮೆ.ವೈ.ಎಸ್.ಹೈಟೆಕ್ ಸೆಕ್ಯೂರ್ ಪ್ರಿಂಟ್ ಪ್ರೈವೇಟ್ ಲಿಮಿಟೆಡ್‌ರವರಿಂದ ಪ್ರಶ್ನೆಪತ್ರಿಕೆ ಮುದ್ರಿಸಿಕೊಳ್ಳುವುದಕ್ಕೆ ಕ.ಸಾ.ಸಂ.ಪಾ.ಅಧಿನಿಯಮ–1999ರ ಕಲಂ–4(ಜಿ)ಅಡಿಯಲ್ಲಿ 2018–19ನೇ ಸಾಲಿಗೆ

ಮೈಸೂರು ವಿಶ್ವವಿದ್ಯಾನಿಲಯವು ವಿವಿಧ ಪದವಿ ಪರೀಕ್ಷೆಗಳನ್ನು ಶೈಕ್ಷಣಿಕ ವೇಳಾಪಟ್ಟಿಯ ಅನ್ವಯ ಸಕಾಲದಲ್ಲಿ ಸುಸೂತ್ರವಾಗಿ ನಡೆಸಿಕೊಂಡು ಬರುತ್ತಿದೆ. ಇದರಲ್ಲಿ ಪ್ರಶ್ನೆಪತ್ರಿಕೆಯ ಮುದ್ರಣ ಕಾರ್ಯದ ಗೌಪ್ಯತೆಯನ್ನು ಕಾಪಾಡುವ ಸಲುವಾಗಿ ವಿಶ್ವವಿದ್ಯಾನಿಲಯವು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿ ಪ್ರಕ್ರಿಯೆಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999ರ 4(G) ಅಡಿಯಲ್ಲಿ ಕರ್ನಾಟಕ ರಾಜ್ಯದ ಇತರೆ ವಿಶ್ವವಿದ್ಯಾನಿಲಯಗಳು ಟೆಂಡರ್‌ಗೆ ಸಂಬಂಧಿಸಿದ ಪ್ರಕ್ರಿಯೆಗಳ ಬಗ್ಗೆ ವಿನಾಯಿತಿಯನ್ನು ಪಡೆದಿರುತ್ತವೆ.

ಮೇಲ್ಕಂಡ ವಿನಾಯಿತಿಯನ್ನು ಕರ್ನಾಟಕ ರಾಜ್ಯ ಸರ್ಕಾರವು ಉಲ್ಲೇಖದ ಅಧಿಸೂಚನೆಯ ಮುಖಾಂತರ 2003ರಲ್ಲಿ ಪ್ರಕಟಿಸಿರುತ್ತದೆ. (ಅನುಬಂಧ–ಅ) ಆದರೆ ಈ ಅಧಿಸೂಚನೆಯಲ್ಲಿ ವಿನಾಯಿತಿಯ ಅವಧಿಯನ್ನು ನಿರ್ದಿಷ್ಟವಾಗಿ ನಮೂದಿಸಿರುವುದಿಲ್ಲದ ಕಾರಣ 4(G) ಅಡಿಯಲ್ಲಿ ಪ್ರತಿ ವರ್ಷವೂ ಪ್ರಶ್ನೆಪತ್ರಿಕೆಗಳ ಮುದ್ರಣ ಕಾರ್ಯವನ್ನು ಕೈಗೊಳ್ಳುತ್ತಾ ಬಂದಿದ್ದೇವೆ.

ದಿನಾಂಕ 03/01/2018ರ ಪತ್ರದಲ್ಲಿ ವಿಶ್ವವಿದ್ಯಾನಿಲಯದ ಪ್ರಶ್ನೆಪತ್ರಿಕೆಗಳ ತಯಾರಿಕೆಯ ಗೌಪ್ಯತೆಯನ್ನು ಹಾಗೂ ಪರೀಕ್ಷೆಗಳ ಪಾವಿತ್ರ್ಯತೆಯನ್ನು ಕಾಯ್ದುಕೊಳ್ಳುವ ಹಿತದೃಷ್ಟಿಯಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999ರ 4(G) ಅಡಿಯಲ್ಲಿ ಈ ಕಾರ್ಯಗಳಿಗೆ ವಿನಾಯಿತಿಯನ್ನು ಪುನರ್ ನವೀಕರಿಸಬೇಕೆಂದು ಸರ್ಕಾರಕ್ಕೆ ಈಗಾಗಲೇ ಕೋರಲಾಗಿದೆ. ಹಾಗೂ ಇದರ ಬಗ್ಗೆ ದಿನಾಂಕ 08/02/2018, 21/1/2019, 6/5/2020 ಮತ್ತು 23/07/2020 ರಲ್ಲಿ ನೆನಪೋಲೆಗಳನ್ನು ಸರ್ಕಾರಕ್ಕೆ ಕಳುಹಿಸಲಾಗಿದೆ. ಆದರೆ ಇದುವರೆವಿಗೂ ಯಾವುದೇ ಉತ್ತರವು ಬಂದಿರುವುದಿಲ್ಲ.

ಈ ಸಂಬಂಧ ದಿನಾಂಕ 5/3/2018 ಮತ್ತು 23/3/2020ರಲ್ಲಿ ನಡೆದ ಸಿಂಡಿಕೇಟ್ ಸಭೆಗಳಲ್ಲಿ ಈ ವಿಷಯವನ್ನು ಮಂಡಿಸಲಾಗಿದ್ದು ಸಿಂಡಿಕೇಟ್ ಸಭೆಯು ಸರ್ಕಾರದಿಂದ ಉತ್ತರ ಬರುವವರೆಗೂ 4(G) ಅಡಿಯಲ್ಲಿ ನೀಡಿರುವ ವಿನಾಯಿತಿಯನ್ನು ಯಥಾಸ್ಥಿತಿಯಲ್ಲೇ ಮುಂದುವರೆಸಲು ಅನುಮೋದಿಸಿರುತ್ತದೆ.

ದಿನಾಂಕ 6/8/2021 ರ ಸರ್ಕಾರದ ಅಧೀನ ಕಾರ್ಯದರ್ಶಿಯವರ ಪತ್ರದಲ್ಲಿ ಮೇಲಿನ ಪ್ರಸ್ತಾವನೆಗೆ ಉತ್ತರಿಸುತ್ತಾ, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ, 1999ರ ಕಾಯಿದೆ ಮತ್ತು ನಿಯಮಗಳಡಿಯಲ್ಲಿ ಘಟನೋತ್ತರವಾಗಿ ವಿನಾಯಿತಿ ನೀಡಲು ಅವಕಾಶವಿರುವುದಿಲ್ಲ. ಆದುದರಿಂದ ಭವಿಷ್ಯಾವರ್ತಿಯಾಗಿ ವಿನಾಯಿತಿಗೆ ಪ್ರಸ್ತಾವನೆ ಸಲ್ಲಿಸಿದ್ದಲ್ಲಿ

| | |
|---|---|
| ವಿನಾಯಿತಿ ಪಡೆಯದಿರುವುದು ಹಾಗೂ ವಾಸ್ತವಿಕ ದರಕ್ಕಿಂತ ಹೆಚ್ಚುವರಿ ದರ ಪಾವತಿಸಿರುವುದಕ್ಕೆ ಸೂಕ್ತ ಸ್ಪಷ್ಟೀಕರಣ ನೀಡದಿರುವುದರಿಂದ ಸಂಸ್ಥೆಗೆ ಪಾವತಿಸಿರುವ ಒಟ್ಟು ಮೊತ್ತ**ರೂ.45,60,023/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.** | ನಿಯಮಾನುಸಾರ ಪರಿಗಣಿಸಬಹುದಾಗಿರುತ್ತದೆಂದು ತಿಳಿಸಿರುತ್ತಾರೆ. ಅದರಂತೆ ದಿನಾಂಕ 24/8/2021ರಲ್ಲಿ ಮತ್ತೊಂದು ನೆನೆಪೋಲೆಯನ್ನು ಕಳುಹಿಸಿ ವಿನಾಯಿತಿಯನ್ನು ಮುಂದುವರೆಸುವಂತೆ ಕೋರಲಾಗಿದೆ. (ಅಡಕ–ಅ) ಈ ಬಗ್ಗೆ ಮಾನ್ಯ ಕುಲಪತಿಯವರು ಸಹ ಹಲವಾರು ಬಾರಿ ಉನ್ನತ ಶಿಕ್ಷಣ ಇಲಾಖೆಗೆ ಭೇಟಿ ನೀಡಿ ವಿನಾಯಿತಿ ನೀಡುವಂತೆ ಕೋರಿರುತ್ತಾರೆ. ಸದ್ಯದಲ್ಲೇ ಈ ವಿನಾಯಿತಿ ಬಗ್ಗೆ ಸರ್ಕಾರದಿಂದ ಪತ್ರ ಬರುವ ನಿರೀಕ್ಷೆ ಇರುವುದರಿಂದ ಸದರಿ ಆಕ್ಷೇಪಣೆಯನ್ನು ಕೈಬಿಡಬೇಕೆಂದು ಈ ಮೂಲಕ ಕೋರಲಾಗಿದೆ.<br><br>ಮೈಸೂರು ವಿಶ್ವವಿದ್ಯಾನಿಲಯವು ನಡೆಸುವ ಎಲ್ಲಾ ಪರೀಕ್ಷೆಗಳ ಪ್ರಶ್ನೆಪತ್ರಿಕೆಗಳ ಮುದ್ರಣ ಕಾರ್ಯವನ್ನು ಮೆ॥ ವೈ.ಎಸ್.ಹೈಟೆಕ್ ಸೆಕ್ಯೂರ್ ಪ್ರಿಂಟ್ ಪ್ರೈವೇಟ್ ಲಿಮಿಟೆಡ್ ರವರೊಂದಿಗೆ ದಿನಾಂಕ 13/4/2018 ರಿಂದ 12/4/2020 ರವರೆಗೆ ಒಡಂಬಡಿಕೆ ಮಾಡಿಕೊಂಡಿರುತ್ತದೆ. ಅದರ ಪ್ರಕಾರ ಒಟಿಟಿಜಥಣಡಿಜ–1 ಈ ರೀತಿಯಾಗಿ ಇರುತ್ತದೆ.<br><br>**“If the University is requires any emergency services to be performed by Printer for dispatch within 7 days from the date of receipt of original manuscript/center wise list of packing/doubt clarification/final proof approval, whichever occurs last, for such supplies Printer is entitled to charge 20% extra on the stipulated rates under this agreement.”**<br><br>ಈಗಾಗಲೇ ಪಾವತಿ ಮಾಡಿರುವ ಮೊತ್ತವು ಒಡಂಬಡಿಕೆಯ ಪ್ರಕಾರವೇ ಪಾವತಿಯಾಗಿರುತ್ತದೆ.<br><br>**ಪ್ರಶ್ನೆಪತ್ರಿಕೆಗಳ ಮುದ್ರಣ ಕಾರ್ಯಕ್ಕೆ ಬೇಡಿಕೆ ಪಟ್ಟಿಯನ್ನು 7 ದಿವಸದೊಳಗೆ ನೀಡಿರುವ ಬಗ್ಗೆ ಸ್ಪಷ್ಟೀಕರಣ**<br><br>2018–19ನೇ ಸಾಲಿನಲ್ಲಿ ಕೋವಿಡ್–19 ಸಾಂಕ್ರಾಮಿಕ ವೈರಾಣು ಹೆಚ್ಚಾದ ಕಾರಣ ಹಾಗೂ ಹಲವಾರು ಕಾಲೇಜುಗಳ ಸಿಬ್ಬಂದಿಗಳಿಗೆ ಕೋವಿಡ್–19 ತಗುಲಿದ್ದ ಕಾರಣ ಸಿಬ್ಬಂದಿಗಳ ಗೈರುಹಾಜರಾತಿಯಿಂದ ನಿಗದಿತ ವೇಳೆಯಲ್ಲಿ ವಿದ್ಯಾರ್ಥಿಗಳ ಪರೀಕ್ಷಾ ಅರ್ಜಿಗಳನ್ನು ಮತ್ತು ಬೇಡಿಕೆ ಪಟ್ಟಿಯನ್ನು ಅಂತರ್ಜಾಲದಲ್ಲಿ ನಮೂದಿಸಲು ವಿಳಂಬ ಮಾಡಿರುತ್ತಾರೆ. ಆದರೆ, ಶೈಕ್ಷಣಿಕ ವೇಳಾಪಟ್ಟಿಯಂತೆ ಹಾಗೂ ಪರೀಕ್ಷಾ ಅಧಿಸೂಚನೆಯ ಪ್ರಕಾರ ನಿಗದಿತ ದಿನಾಂಕದಿಂದ ಪರೀಕ್ಷೆಗಳನ್ನು ನಡೆಸಲೇಬೇಕಾಗಿದ್ದುದರಿಂದ ಪ್ರಶ್ನೆಪತ್ರಿಕೆಗಳನ್ನು ಮುದ್ರಿಸಿ ಪರೀಕ್ಷೆಗಳನ್ನು ಸುಸೂತ್ರವಾಗಿ ನಡೆಸಲಾಯಿತು. ಆದುದರಿಂದ ಈ ಸಂಬಂಧ ಆಕ್ಷೇಪಣೆಯನ್ನು ಕೈಬಿಡಬೇಕೆಂದು ಕೋರಲಾಗಿದೆ. |

<table>
<tr>
<td>

**9.6. ವಿಶ್ವವಿದ್ಯಾನಿಲಯವು ನಡೆಸುವ ಪರೀಕ್ಷೆಗಳಿಗೆ ಬಾರ್‌ಕೋಡ್ ಮತ್ತು ಓ.ಎಂ.ಆರ್ ಅಳವಡಿಸಿರುವ ಉತ್ತರ ಪತ್ರಿಕೆಗಳ ಸರಬರಾಜು ಸಂಬಂಧ ಕರೆಯಲಾದ ಟೆಂಡರ್‌ನಲ್ಲಿನ ನ್ಯೂನತೆಗಳು:**

2018–19ನೇ ಸಾಲಿನಲ್ಲಿ ವಿಶ್ವವಿದ್ಯಾನಿಲಯವು ನಡೆಸಿದ ವಿವಿಧ ಪದವಿ ಪರೀಕ್ಷೆಗಳಿಗೆ ಅಗತ್ಯವಿರುವ ಬಾರ್‌ಕೋಡ್ ಹಾಗೂ ಓ.ಎಂ.ಆರ್ ಅಳವಡಿಸಿರುವ ಉತ್ತರ ಪತ್ರಿಕೆಗಳನ್ನು ಮುದ್ರಿಸಿ ಸರಬರಾಜು ಮಾಡುವುದಕ್ಕಾಗಿ ಏಜೆನ್ಸಿಯನ್ನು ಆಯ್ಕೆ ಮಾಡಲು 2016–17ನೇ ಸಾಲಿನಲ್ಲಿ ಟೆಂಡರ್ ಆಹ್ವಾನಿಸಿದ್ದು, ಸದರಿ ಟೆಂಡರ್‌ನಲ್ಲಿ ಯಶಸ್ವಿ ಟೆಂಡರುದಾರರಾದ ಮೆ॥ ಜೆಮಿನಿ ಗ್ರಾಫಿಕ್ಸ್, ಪ್ರೈ. ಲಿ., ಬೀದರ್ ರವರಿಂದ ಉತ್ತರ ಪತ್ರಿಕೆಗಳ ಮುದ್ರಣ ಸೇವೆಯನ್ನು ಪಡೆದುಕೊಂಡು ಮುದ್ರಣ ಸಂಸ್ಥೆಯವರು ಸಲ್ಲಿಸಿದ ಇನ್‌ವಾಯ್ಸ್ ಸಂ:ಪಿಟಿಜಿ0065,ದಿ:16–04–2018 ಹಾಗೂ ಸಂ:ಪಿಟಿಜಿ1025,ದಿ:27–10–2018ಗಳಲ್ಲಿ ಕ್ಲೇಮು ಮಾಡಿದ ಮೊತ್ತ ಕ್ರಮವಾಗಿ ರೂ.46,94,760/– ಹಾಗೂ ರೂ.53,07,120/–ಒಟ್ಟು ರೂ.1,00,01,880/–ಗಳನ್ನು ಪಾವತಿಸಲಾಗಿರುತ್ತದೆ. ಟೆಂಡರ್ ಪ್ರಕ್ರಿಯೆಯ ಕಡತ/ದಾಖಲೆಗಳನ್ನು ಪರಿಶೀಲಿಸಲಾಗಿ, ಈ ಕೆಳಕಂಡ ನ್ಯೂನ್ಯತೆಗಳು ಕಂಡುಬಂದಿರುತ್ತವೆ.

- ವಿಶ್ವವಿದ್ಯಾನಿಲಯದಲ್ಲೇ ಮುದ್ರಣಾಲಯ ಮತ್ತು ಲೇಖನ ಸಾಮಾಗ್ರಿ ವಿಭಾಗವು ಕಾರ್ಯ ನಿರ್ವಹಿಸುತ್ತಿದ್ದು, ವಿಶ್ವವಿದ್ಯಾನಿಲಯಕ್ಕೆ ಅಗತ್ಯವಿರುವ ಉತ್ತರ ಪತ್ರಿಕೆಗಳನ್ನು ಇಲ್ಲೇ ಮುದ್ರಿಸಿಕೊಳ್ಳಬಹುದಾಗಿದ್ದರೂ ಹೊರಗಿನವರಿಂದ ಉತ್ತರ ಪತ್ರಿಕೆಗಳನ್ನು ಮುದ್ರಿಸಿ ಸರಬರಾಜು ಮಾಡಿಸಿಕೊಂಡಿರುವುದು ಸ್ಪಷ್ಟೀಕರಣ ನೀಡುವಂತೆ ವಿಚಾರಣೆ ಪತ್ರ ನೀಡಿದರೂ, ಯಾವುದೇ ಉತ್ತರವನ್ನು ನೀಡಿರುವುದಿಲ್ಲ.
- ಟೆಂಡರ್‌ನ ಅವಧಿ ಎರಡು ವರ್ಷವಾಗಿದ್ದು, ಮೆ॥ ಜೆಮಿನಿ ಗ್ರಾಫಿಕ್ಸ್ ಪ್ರೈ.ಲಿ ಬೀದರ್ ರವರಿಂದ ಟೆಂಡರ್‌ನ ಕರಾರು ಅವಧಿ ಮುಗಿದ ನಂತರವೂ ಹೊಸದಾಗಿ ಟೆಂಡರ್ ಕರೆಯದೆಯೇ, ಹಿಂದಿನ ಸಾಲಿನ ಟೆಂಡರುದಾರರನ್ನೇ ಮುಂದುವರಿಸಲಾಗಿರುತ್ತದೆ. ಇದು ಕೆ.ಟಿ.ಪಿ.ಪಿ ನಿಯಮಗಳು–2000ದ ನಿಯಮ–5 ರ ಉಲ್ಲಂಘನೆಯಾಗಿರುತ್ತದೆ.

ಹೀಗಾಗಿ ಸದರಿ ಟೆಂಡರುದಾರರಿಗೆ ಪಾವತಿಸಲಾಗಿರುವಒಟ್ಟು ಮೊತ **ರೂ.1,00,01,880/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.**

</td>
<td>

2018–19ನೇ ಸಾಲಿನಲ್ಲಿ ವಿಶ್ವವಿದ್ಯಾನಿಲಯವು ನಡೆಸಿದ ವಿವಿಧ ಪದವಿ ಪರೀಕ್ಷೆಗಳಿಗೆ ಬಾರ್‌ಕೋಡ್ ಹಾಗೂ ಓ.ಎಂ.ಆರ್ ಅಳವಡಿಸಿರುವ ಉತ್ತರ ಪತ್ರಿಕೆಗಳನ್ನು ಮುದ್ರಿಸಿ ಸರಬರಾಜು ಮಾಡುವುದಕ್ಕಾಗಿ ಏಜೆನ್ಸಿಯನ್ನು ಆಯ್ಕೆ ಮಾಡಲು ಟೆಂಡರ್ ಆಹ್ವಾನಿಸಿದ್ದು, ಸದರಿ ಸಂಸ್ಥೆಯವರು ಸಲ್ಲಿಸಿರುವ ಇನ್‌ವಾಯ್ಸ್‌ಗಳಲ್ಲಿ ಪಾವತಿಸಿರುವ ಮೊತ್ತಕ್ಕೆ ಟೆಂಡರ್ ಪ್ರಕ್ರಿಯೆಯ ಕಡತ/ದಾಖಲೆಗಳನ್ನು ಪರಿಶೀಲಿಸಿ ಕೆಲವು ನ್ಯೂನ್ಯತೆಗಳ ಬಗ್ಗೆ ಪ್ರಸ್ತಾಪಿಸಲಾಗಿರುತ್ತದೆ.

ವಿಶ್ವವಿದ್ಯಾನಿಲಯದ ಮುದ್ರಣಾಲಯ ಮತ್ತು ಲೇಖನ ಸಾಮಾಗ್ರಿ ವಿಭಾಗದ ಪತ್ರ ಸಂಖ್ಯೆ: ಮೈ.ವಿ.ವಿ.ಮು/ಎಸ್.ಡಿ/1054/2016–17 ದಿನಾಂಕ:24–03–2017 ಮತ್ತು ಇದೇ ಪತ್ರ ಸಂಖ್ಯೆ:744/2017–18 ದಿನಾಂಕ:14–02–2018ರಲ್ಲಿ ಹಾಗೂ 734/2018–19 ದಿನಾಂಕ:30–01–2019 ರಲ್ಲಿ ಮುದ್ರಣಾಲಯದ ನಿರ್ದೇಶಕರು ಸದರಿ ಕಾರ್ಯದಕ್ಷತೆಯ ವಿಫಲತೆಯ ಬಗ್ಗೆ ವಿವರಿಸಿ ಪತ್ರ ಬರೆದಿರುತ್ತಾರೆ. ಆದ್ದರಿಂದ ಸದರಿ ಪರೀಕ್ಷಾ ಕಾರ್ಯಗಳ ಬಾರ್‌ಕೋಡ್ ಹಾಗೂ ಓ.ಎಂ.ಆರ್ ಅಳವಡಿಸಿದ ಉತ್ತರ ಪತ್ರಿಕೆಗಳನ್ನು ಮುದ್ರಿಸಲು ಖಾಸಗಿ ಏಜೆನ್ಸಿಯವರಿಗೆ ನೀಡಿರುವ ಬಗ್ಗೆ ತಮ್ಮಲ್ಲಿ ನಿವೇದಿಸಿದೆ. (ಪ್ರತಿಗಳನ್ನು ಲಗತ್ತಿಸಿದೆ)

ದಿನಾಂಕ:25–03–2017ರಂದು ನಡೆದ ಸಿಂಡಿಕೇಟ್ ಸಭಾ ನಿರ್ಣಯದಲ್ಲಿ ಮುಂದಿನ ಎರಡು ವರ್ಷಗಳು (ನಾಲ್ಕು ಸೆಮಿಸ್ಟರ್) ವಿಶ್ವವಿದ್ಯಾನಿಲಯಕ್ಕೆ ಅವಶ್ಯಕವಿರುವ ಉತ್ತರ ಪತ್ರಿಕೆಗಳನ್ನು ಕಾಲಾನುಕಾಲಕ್ಕೆ ಪ್ರತ್ಯೇಕವಾಗಿ ಆದೇಶ ನೀಡಿರುವುದರ ಮೂಲಕ ಉತ್ತರ ಪತ್ರಿಕೆಗಳನ್ನು ಖರೀದಿಸಲು ತಾಂತ್ರಿಕ ಸಮಿತಿಯು ಒಪ್ಪಿರುವುದನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿರುವ ಹಿನ್ನೆಲೆಯಲ್ಲಿ ಹಿಂದಿನ ಟೆಂಡರ್‌ದಾರರನ್ನೇ ಮುಂದುವರೆಸಲಾಗಿರುತ್ತದೆ.

ಆದ್ದರಿಂದ ಕಂಡಿಕೆಯಲ್ಲಿನ ಆಕ್ಷೇಪಣೆಯ ಮೊತ್ತ ರೂ.1,00,01,880/–ಗಳನ್ನು ತೀರುವಳಿಗೊಳಿಸುವಂತೆ ಕೋರಿದೆ.

</td>
</tr>
</table>

| | |
|---|---|
| **9.7. ವಿಶ್ವವಿದ್ಯಾನಿಲಯದ ವಿವಿಧ ಪರೀಕ್ಷೆಗಳಿಗೆ ಸಂಬಂಧಪಟ್ಟಂತೆ ಮುದ್ರಣಾಲಯಕ್ಕೆ ಡಬಲ್ ಡಮ್ಮಿ ವೈಟ್ ಮ್ಯಾಪ್‌ಲಿತೊ ಪೇಪರ್‌ಗಳ ಸರಬರಾಜಿಗಾಗಿ ಆಹ್ವಾನಿಸಲಾದ ಟೆಂಡರ್ ಪ್ರಕ್ರಿಯೆಯ ನ್ಯೂನತೆಗಳು**<br><br>2018-19ನೇ ಸಾಲಿನಲ್ಲಿ ವಿಶ್ವವಿದ್ಯಾನಿಲಯದ ಮುದ್ರಣಾಲಯಕ್ಕೆ ವಿವಿಧ ಪರೀಕ್ಷೆಗಳಿಗೆ ಸಂಬಂಧಪಟ್ಟಂತೆ ಮುದ್ರಣ ಕಾರ್ಯಗಳಿಗೆ ಡಬಲ್ ಡಮ್ಮಿ ವೈಟ್ ಮ್ಯಾಪ್‌ಲಿತೊ ಪೇಪರ್‌ಗಳನ್ನು ಸರಬರಾಜಿಗಾಗಿ ಟೆಂಡರ್ ಆಹ್ವಾನಿಸಲಾಗಿದ್ದು, ಸದರಿ ಟೆಂಡರ್‌ನಲ್ಲಿ ಯಶಸ್ವಿ ಟೆಂಡರುದಾರರಾದ ಮೆ॥ ಸುಧೀರ್ ಪೇಪರ್, ಬೆಂಗಳೂರು ರವರಿಂದ ಕಾಗದವನ್ನು ಖರೀದಿಸಿ ರೂ.95,74,295/-ಗಳನ್ನು ಪಾವತಿಸಲಾಗಿದೆ. ಸದರಿ ಟೆಂಡರ್ ಪ್ರಕ್ರಿಯೆಯಲ್ಲಿ ಈ ಕೆಳಕಂಡ ನ್ಯೂನ್ಯತೆಗಳನ್ನು ಗಮನಿಸಲಾಗಿದೆ.<br><br>• ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆಯ ನಿಯಮಗಳು-2000ದ ನಿಯಮ-10ರನ್ವಯ ಟೆಂಡರ್ ಆಹ್ವಾನಿಸಿದ ನೋಟೀಸನ್ನು ಜಿಲ್ಲಾ/ರಾಜ್ಯ ಮಟ್ಟದ ವೃತ್ತ ಪತ್ರಿಕೆಗಳಲ್ಲಿ ಪ್ರಕಟಿಸುವ ಮೂಲಕ ವ್ಯಾಪಕ ಪ್ರಚಾರ ಮಾಡಬೇಕಿದ್ದು. ಪತ್ರಿಕಾ ಪ್ರಕಟಣೆ ನೀಡಿರುವ ದಾಖಲಾತಿಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ಕೋರಿದ್ದರೂ ಹಾಜರುಪಡಿಸಿರುವುದಿಲ್ಲ.<br>• ಗುತ್ತಿಗೆದಾರರೊಡನೆ ಮಾಡಿಕೊಂಡ ಕರಾರಿನ ಮೊತ್ತವು ರೂ.94,45,640/-ಗಳಾಗಿದ್ದು, ಟೆಂಡರುದಾರರಿಗೆ ಪಾವತಿಸಲಾದ ಮೊತ್ತ ರೂ.95,74,295/-ಗಳಾಗಿರುತ್ತದೆ. ಹೀಗಾಗಿ ರೂ.1,28,655/-ಗಳನ್ನು ಹೆಚ್ಚುವರಿಯಾಗಿ ಪಾವತಿಸಲಾಗಿರುತ್ತದೆ. ಈ ಬಗ್ಗೆ ವಿಶ್ವವಿದ್ಯಾನಿಲಯವು ಯಾವುದೇ ಸ್ಪಷ್ಟೀಕರಣವನ್ನು ನೀಡಿರುವುದಿಲ್ಲ. **ಆದ್ದರಿಂದ** ಹೆಚ್ಚುವರಿಯಾಗಿ ಪಾವತಿಸಿರುವ ಮೊತ್ತ **ರೂ.1,28,655/-ಗಳನ್ನು ವಸೂಲಾತಿಗೆ ಸೂಚಿಸಿದೆ.**<br>• ಗುತ್ತಿಗೆ ಕರಾರು ಮಾಡಿಕೊಳ್ಳುವಾಗ ಯಶಸ್ವಿ ಟೆಂಡರುದಾರರಾದ ಮೆ॥ ಸುಧೀರ್ ಪೇಪರ್, ಬೆಂಗಳೂರು ರವರಿಂದ ಪಡೆದಿರುವ ಭದ್ರತಾ ಠೇವಣಿ (Performance Guarantee)ಗೆ ಸಂಬಂಧಿಸಿದ ಯಾವುದೇ ದಾಖಲೆಗಳನ್ನು ವಿಶ್ವವಿದ್ಯಾನಿಲಯವು ಹಾಜರುಪಡಿಸಿರುವುದಿಲ್ಲ.<br><br>ಮೇಲ್ಕಂಡ ಕಾರಣಗಳಿಂದ, ಈ ಬಾಬ್ತು ಪಾವತಿಸಲಾಗಿರುವ ಒಟ್ಟು ಮೊತ್ತ **ರೂ.94,45,640/-ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.** ವಿವರವನ್ನು **ಅನುಬಂಧ-49ರಲ್ಲಿ** ನೀಡಲಾಗಿದೆ. | ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆಯ ನಿಯಮಗಳು-2000ದ ನಿಯಮ-10ರನ್ವಯ ಟೆಂಡರ್ ಆಹ್ವಾನಿಸಿದ ನೋಟೀಸನ್ನು ಜಿಲ್ಲಾ/ರಾಜ್ಯ ಮಟ್ಟದ ದಿನ ಪ್ರತಿಕೆಗಳಾದ ಇಂಡಿಯನ್ ಎಕ್ಸ್‌ಪ್ರೆಸ್, ಕನ್ನಡ ಪ್ರಭ ಹಾಗೂ ಪ್ರಜಾವಾಣಿ ಪೇಪರ್‌ಗಳಲ್ಲಿ ಪ್ರಕಟಿಸಲಾಗಿರುತ್ತದೆ. (ಮಾಹಿತಿಗಾಗಿ ಪೇಪರ್ ಪ್ರಕಟಣೆಯ ಜ಼ೆರಾಕ್ಸ್ ಪ್ರತಿಯನ್ನು ಲಗತ್ತಿಸಿದೆ.<br><br>ಟೆಂಡರ್ ಪ್ರಕ್ರಿಯೆಗಳು ಮುಗಿದು ಯಶ್ವಸಿ ಟೆಂಡರ್‌ದಾರರಿಂದ ಮೆ॥ ಸುದೀರ್ ಪೇಪರ್ ಬೆಂಗಳೂರು, ಇವರಿಗೆ ಸರಬರಾಜು ಆದೇಶ ನೀಡುವಾಗ ಒಂದು ರೀಲ್ಸ್‌ಗೆ (ಅಂದಾಜು) 500ಕೆ.ಜಿ ಬರಬಹುದು ಎಂಬ ನಿರೀಕ್ಷೆಯಲ್ಲಿ 150 ರೀಲ್ಸ್‌ಗೆ ಆದೇಶ ನೀಡಲಾಗಿತ್ತು. ಆದರೆ ಸದರಿ ಪೇಪರ್ ರೀಲ್ಸ್‌ಗಳು ಕಂಪನಿಯಿಂದ ನೇರವಾಗಿ ನಮ್ಮ ವಿಭಾಗಕ್ಕೆ ಸರಬರಾಜು ಆಗಿದ್ದು ಪ್ರತಿಯೊಂದು ರೀಲ್ಸ್‌ನಲ್ಲಿಯೂ ಕೆ.ಜಿ.ಗಳು ವ್ಯತ್ಯಾಸವಾಗಿ ಬಂದಿರುತ್ತದೆ. ಉದಾ:- ಕೆಲವು ರೀಲ್‌ಗಳಲ್ಲಿ 480 ಕೆ.ಜಿ, 580 ಕೆ.ಜಿ, 583 ಕೆ.ಜಿ, 560 ಕೆ.ಜಿಗಳು ಬಂದಿರುತ್ತದೆ. ಟೆಂಡರ್ ಕರೆಯುವ ಸಂದರ್ಭದಲ್ಲಿ ಟೆಂಡರ್ ನೋಟಿಫಿಕೇಷನ್‌ನಲ್ಲಿ ಅಂದಾಜು ಮೊತ್ತ ರೂ.95.00 ಲಕ್ಷ ಎಂದು ನಮೂದಿಸಲಾಗಿರುತ್ತದೆ. ಅಲ್ಲದೇ ನಾವು ಖರೀದಿಸಿರುವ ಪೇಪರ್‌ಗಳು ಮೂಲ ಬೆಲೆ 85,48,478/-ರೂಗಳು ಆಗಿದ್ದು ಜಿ.ಎಸ್.ಟಿ ಸೇರಿ ರೂ.95,74,295/-ಗಳಾಗಿರುತ್ತದೆ.<br><br>ಮೇಲಿನ ಎಲ್ಲಾ ವಿಷಯಗಳನ್ನು ತಮ್ಮ ಗಮನಕ್ಕೆ ತರುತ್ತಾ ಸಂಬಂಧಪಟ್ಟ ಪತ್ರಗಳ ಜ಼ೆರಾಕ್ಸ್ ಪ್ರತಿಗಳನ್ನು ಲಗತ್ತಿಸಲಾಗಿರುತ್ತದೆ.<br><br>ಯಶಸ್ವಿ ಟೆಂಡರ್‌ದಾರರು ಮೆ॥ ಸುದೀರ್ ಪೇಪರ್ ಬೆಂಗಳೂರು, ಇವರಿಂದ ರೂ.4,72,282/-ಗಳ ಭದ್ರತಾ ಠೇವಣಿಯನ್ನು (Performance Guarantee) ಪಡೆಯಲಾಗಿರುತ್ತದೆ. (ಮಾಹಿತಿಗಾಗಿ ಭದ್ರತಾ ಠೇವಣಿಗೆ ಸಂಬಂಧಿಸಿದ ಡಿ.ಡಿಯ ಜ಼ೆರಾಕ್ಸ್ ಪ್ರತಿಯನ್ನು ಲಗತ್ತಿಸಿದೆ.)<br><br>ದಯವಿಟ್ಟು ಸದರಿ ಆಕ್ಷೇಪಣೆಯನ್ನು ಕೈ ಬಿಡುವಂತೆ ಕೋರಲಾಗಿದೆ. |

**9.8. ಕೆ.ಟಿ.ಪಿ.ಪಿ ಕಾಯ್ದೆ–2000 ರ ನಿಯಮ ಉಲ್ಲಂಘಿಸಿ, ವಾಹನ ಬಾಡಿಗೆ ಪಡೆದು ಪಾವತಿ ಮಾಡಿರುವುದು ಮತ್ತು ಹೆಚ್ಚುವರಿಯಾಗಿ ಜಿ.ಎಸ್.ಟಿ ಯನ್ನು ಪಾವತಿಸಿರುವ ಕುರಿತು :**

2018–19ನೇ ಸಾಲಿನ ಪರೀಕ್ಷಾ ಖಾತೆಯ ಮಾರ್ಚ್–2019 ಮಾಹೆಯ ಓಚರ್‌ಗಳ ಪರಿಶೀಲನೆಯಲ್ಲಿ ನವೆಂಬರ್/ಡಿಸೆಂಬರ್–2018 ಮಾಹೆಯಲ್ಲಿ ಪರೀಕ್ಷಾ ಕಾರ್ಯಗಳಿಗೆ ಮತ್ತು ಇನ್ನಿತರೆ ಕಛೇರಿ ಕಾರ್ಯಗಳಿಗಾಗಿ ವಾಹನಗಳನ್ನು ಮೆ.ಕಾವೇರಿ ಟೂರ್ಸ್ ಮತ್ತು ಟ್ರಾವೆಲ್ಸ್‌ರಿಂದ ಬಾಡಿಗೆಗೆ ಪಡೆಯಲಾಗಿರುತ್ತದೆ. ವಿವರಗಳನ್ನು ಕೆಳಗಿನ ಕೋಷ್ಟಕದಲ್ಲಿ ನೀಡಲಾಗಿದೆ.

| ಕ್ರ ಸಂ | ಬಿ.ಆರ್ ಸಂಖ್ಯೆ/ ದಿನಾಂಕ | ಧನಾದೇಶ ಸಂಖ್ಯೆ/ ದಿನಾಂಕ | ಉದ್ದೇಶ | ಬಿಲ್ ದಿನಾಂಕ | ಮೊತ್ತ |
|---|---|---|---|---|---|
| 1 | 7493 19.12.2018 | – | ಪರೀಕ್ಷಾ ಕಾರ್ಯ– ಅಕ್ಟೋಬರ್/ನವೆಂಬರ್–2018 | 19.12.2018 | 3,12,608.00 |
| 2 | 9114/15.02.2019 | 596956 23.03.2019 | ಪರೀಕ್ಷಾ ಕಾರ್ಯ– ಅಕ್ಟೋಬರ್/ಡಿಸೆಂಬರ್–2018 | 19.12.2018 | 4,93,791.00 |
| 3 | 8547/29.01.2019 | 596957 23.03.2019 | ಪರೀಕ್ಷಾ ಕಾರ್ಯ– ಅಕ್ಟೋಬರ್/ಡಿಸೆಂಬರ್–2018 | – | 36,549.00 |
| 4 | 9395/30.03.2019 | 956432 31.03.2019 | ವಿಶ್ವವಿದ್ಯಾನಿಲಯದ ವಿವಿಧ ಕಾರ್ಯಗಳಿಗೆ | – | 10,534.00 |
| 5 | 9424/30.03.2019 | 956421 31.03.2019 | ವಿಶ್ವವಿದ್ಯಾನಿಲಯದ ವಿವಿಧ ಕಾರ್ಯಗಳಿಗೆ | – | 1,22,892.00 |
| | | | | **ಒಟ್ಟು ಮೊತ್ತರೂ.** | **9,76,374.00** |

ಮೆ.ಕಾವೇರಿ ಟೂರ್ಸ್ ಮತ್ತು ಟ್ರಾವೆಲ್ಸ್ ರವರೊಂದಿಗೆ ಮಾಡಿಕೊಂಡಿರುವ ಒಪ್ಪಂದವು ದಿನಾಂಕ:08.11.2017 ರಿಂದ ದಿನಾಂಕ:07.11.2018 ರವರೆಗೆ ಒಂದು ವರ್ಷದ ಅವಧಿಗೆ ಮಾತ್ರ ಜಾರಿಯಲ್ಲಿರುತ್ತದೆ. ವಿಶ್ವವಿದ್ಯಾನಿಲಯದಲ್ಲಿ ಪರೀಕ್ಷಾ ಪ್ರಕ್ರಿಯೆಯು ನಿರಂತರ ಮತ್ತು ನಿರ್ದಿಷ್ಟ ಅವಧಿಯಲ್ಲೇ ನಡೆಯುವ ಕಾರ್ಯವಾದ್ದರಿಂದ, ಕರಾರು ಒಡಂಬಡಿಕೆಯ ಅವಧಿಯು ಪೂರ್ಣಗೊಳ್ಳುವ ಮೊದಲೇ ಟೆಂಡರ್ ಪ್ರಕ್ರಿಯೆ ಕೈಗೊಂಡು ಕಡಿಮೆ ದರ ನಮೂದಿಸಿದ ಬಿಡ್‌ದಾರರಿಂದ ವಾಹನ ಪಡೆಯಬೇಕಾಗಿರುತ್ತದೆ. ಆದರೆ ಈ ಪ್ರಕರಣದಲ್ಲಿ ಕರಾರು ಒಪ್ಪಂದದ ಅವಧಿ ಮುಗಿದ ನಂತರವೂ

2018–19ನೇ ಸಾಲಿನಲ್ಲಿ ದಿನಾಂಕ:02–11–2017 ರಿಂದ 07–11–2018ರ ವರೆಗೆ ಒಂದು ವರ್ಷದ ಅವಧಿಗೆ ಮೆ: ಕಾವೇರಿ ಟೂರ್ಸ್ ಮತ್ತು ಟ್ರಾವೆಲ್ಸ್, ಮೈಸೂರು ರವರೊಂದಿಗೆ ಮಾಡಿಕೊಂಡಿದ್ದ ಕರಾರು ಒಪ್ಪಂದ ಮುಗಿದು ಹೋಗಿರುವುದರಿಂದ, ದಿನಾಂಕ:16–11–2018ರ ಸಿಂಡಿಕೇಟ್ ಸಭೆಯಲ್ಲಿ ಪರೀಕ್ಷಾ ಕಾರ್ಯಗಳಿಗೆ ಹಾಗೂ ಕಛೇರಿ ತುರ್ತು ಕೆಲಸಗಳಿಗೆ ಬಾಡಿಗೆ ವಾಹನವನ್ನು ಈಗಾಗಲೇ ಮಾಡಿಕೊಂಡ ಒಡಂಬಡಿಕೆಯಂತೆ ದರ ಪರಿಷ್ಕರಣೆ ಮಾಡದೆ ಮುಂದಿನ ಟೆಂಡರ್ ಯಶಸ್ವಿ ಬಿಡ್‌ದಾರರಿಗೆ ಆದೇಶ ನೀಡುವವರೆಗೆ ಮುಂದುವರಿಯುವಂತೆ ಸಿಂಡಿಕೇಟ್ ಸಭೆಯು ಅನುಸಮರ್ಥಿಸಿರುವ ಹಿನ್ನೆಲೆಯಲ್ಲಿ ವಿಶ್ವವಿದ್ಯಾನಿಲಯ ಆದೇಶ ಸಂಖ್ಯೆ:ಜಿ.ಎಲ್.8/531/2000–2001, ದಿನಾಂಕ:10–12–2018ರ ಆದೇಶದನ್ವಯ ಈ ವಾಹನವನ್ನು ಬಾಡಿಕೆ ಪಡೆಯಲಾಗಿದೆ. ಅದರಂತೆ ಹುಂಡಿಯನ್ನು ಪಾವತಿಗಾಗಿ ಸಲ್ಲಿಸಲಾಗಿದೆ.

ಕೋಷ್ಟಕದಲ್ಲಿ ಸೂಚಿಸಿರುವ 05 ಹುಂಡಿಗಳಲ್ಲಿ ಕ್ರ.ಸಂ.01 ಮತ್ತು 02 ಮಾತ್ರ ಪರೀಕ್ಷಾ ವಿಭಾಗಕ್ಕೆ ಸಂಬಂಧಪಟ್ಟಿದ್ದು ಈ ಸಂಬಂಧ ಕೇಂದ್ರ ಸರಕು ಮತ್ತು ಸೇವಾ ತೆರಿಗೆ ಕಾಯಿದೆ 17ರ ಪ್ರಕಾರ Revise Charge Mechanism (RCM) ನಿಯಮದ ಪ್ರಕಾರ ಮೆ.ಕಾವೇರಿ ಟೂರ್ಸ್ ಮತ್ತು ಟ್ರಾವೆಲ್ಸ್, ಮೈಸೂರು ರವರಿಂದ ವಾಹನವನ್ನು ಬಾಡಿಕೆ ಪಡೆಯಲಾಗಿದ ಬಿಲ್ಲುನೊಂದಿಗೆ ಶೇ.5 ರಷ್ಟು ಜಿ.ಎಸ್.ಟಿ ತೆರಿಗೆಯನ್ನು ಸೇರಿಸಿ ಸಲ್ಲಿಸಿರುತ್ತಾರೆ. ಇದು ಜಿ.ಎಸ್.ಟಿ ಕಾಯಿದೆ ಪ್ರಕಾರ ಸರಿಯಾದ ಕ್ರಮವಾಗಿದ್ದು ಅದರಂತೆ ಜಿ.ಎಸ್.ಟಿ ಸೇರಿಸಿ ಬಿಲ್ಲು ಅನ್ನು ಪಾವತಿಸಲಾಗಿರುತ್ತದೆ. ಶೇ.2 ರ ದರದಲ್ಲಿ (ರಾ.ಜಿ.ಎಸ್.ಟಿ ಶೇ. 01 ರಷ್ಟು + ಕೇಂ ಜಿಎಸ್.ಟಿ. ಶೇ.01 ರಷ್ಟು) ಜಿ.ಎಸ್‌ಟಿ–ಟಿಡಿಎಸ್ ಕಟಾವಣೆ ಮಾಡಲಾಗಿರುತ್ತದೆ ಎಂಬ ಅಂಶವನ್ನು ತಮ್ಮ ಅವಗಾಹನೆಗೆ ತರುತ್ತಾ ಈ ಆಕ್ಷೇಪಣೆಯನ್ನು ಕೈಬಿಡಬೇಕೆಂದು ಈ ಮೂಲಕ ಕೋರಲಾಗಿದೆ.

ಈ ಸಂಬಂಧದ ನಿಯಮದ ಪ್ರತಿಯನ್ನು ಹಾಗೂ ಆದೇಶಗಳನ್ನು ಲಗತ್ತಿಸಲಾಗಿದೆ.

ಟೆಂಡರ್ ಪ್ರಕ್ರಿಯೆ ಇಲ್ಲದೆಯೇ ವಾಹನವನ್ನು ಬಾಡಿಗೆಗೆ ಪಡೆದುಕೊಂಡು ಹಣ ಪಾವತಿ ಮಾಡುವ ಮೂಲಕ ಪಾರದರ್ಶಕತೆಯ ನಿಯಮಗಳನ್ನು ಉಲ್ಲಂಘಿಸಲಾಗಿರುತ್ತದೆ. ಹೀಗಾಗಿ ಮೇಲ್ಕಾಣಿಸಿದ ಬಿಲ್ಲುಗಳಲ್ಲಿ ಪಾವತಿಸಿರುವ ಒಟ್ಟು ಮೊತ್ತ **ರೂ.9,76,374/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.**

(2) ಕಾವೇರಿ ಟೂರ್ಸ್&ಟ್ರಾವೆಲ್ಸ್‌ನ ಟೆಂಡರ್ ಬಿಡ್‌ನಲ್ಲಿ ನಮೂದಿಸಲಾಗಿರುವದರದಲ್ಲಿ, ನಮೂದಿಸಿದ ದರವು ಎಲ್ಲವನ್ನೂ ಒಳಗೊಂಡಿರುತ್ತದೆ ಎಂದಿರುತ್ತದೆ. ಆದರೆ ಮೇಲಿನ ಕೋಷ್ಟಕದಲ್ಲಿನ ಬಿಲ್ಲುಗಳಲ್ಲಿ ರಾಜ್ಯ ಮತ್ತು ಕೇಂದ್ರ ಸರಕು ಮತ್ತು ಸೇವಾ ತೆರಿಗೆಯನ್ನು ತಲಾ ಶೇ.2.5ರಂತೆ ಒಟ್ಟು ಶೇ.5ರಷ್ಟನ್ನು ಸೇರಿಸಿ ಬಿಲ್ಲುಗಳನ್ನು ಕ್ಲೇಮು ಮಾಡಲಾಗಿದೆ. ಹೀಗೆ ಹೆಚ್ಚುವರಿಯಾಗಿ ಪಾವತಿಸಲಾಗಿರುವ ಜಿ.ಎಸ್.ಟಿ ಬಾಬ್ತಿನ ಮೊತ್ತ **ರೂ.94,394/–ಗಳನ್ನು ವಸೂಲಾತಿಗೆ ಸೂಚಿಸಿದೆ.** ವಿವರವನ್ನು **ಅನುಬಂಧ–50**ರಲ್ಲಿ ನೀಡಲಾಗಿದೆ.

**9.9. ಮೆ॥ ಜೆರಾಕ್ಸ್ ಇಂಡಿಯಾ ಲಿಮಿಟೆಡ್, ಬೆಂಗಳೂರು ರವರಿಗೆ ಪಾವತಿಸಿರುವ ಬಗ್ಗೆ :**

ಮೈಸೂರು ವಿಶ್ವವಿದ್ಯಾನಿಲಯದ ಪರೀಕ್ಷಾ ನಿಧಿ ಖಾತೆಯ ಓಚರ್‌ಗಳ ಪರಿಶೀಲನೆಯಲ್ಲಿ ಮೆ॥ ಜೆರಾಕ್ಸ್ ಇಂಡಿಯಾ ಲಿಮಿಟೆಡ್, ಬೆಂಗಳೂರು ರವರಿಗೆ ವಿವಿಧ ಬಿಲ್ಲುಗಳಲ್ಲಿ ಸದರಿ ಸಾಲಿಗೆ ರೂ.2,49,904/–ಗಳನ್ನು ಪಾವತಿಸಿರುವುದು ಕಂಡು ಬಂದಿರುತ್ತದೆ. ಪಾವತಿ ವಿವರ ಕೆಳಗಿನಂತಿದೆ.

| ಕ್ರಸಂ | ಬಿ.ಆರ್ ಸಂಖ್ಯೆ/ದಿನಾಂಕ | ಧನಾದೇಶ ಸಂಖ್ಯೆ/ದಿನಾಂಕ | ಮೊತ್ತ |
|---|---|---|---|
| 1 | 4507/27.08.2018 | 596674/75/ 06.09.2018 | 53,555.00 |
| 2 | 4508/27.08.2018 | 596674/75/ 06.09.2018 | 6,931.00 |
| 3 | 4679/20.09.2018 | 596708/09/ 09.12.2018 | 17,136.00 |
| 4 | 7519/20.12.2018 | 596833/34/ 02.01.2019 | 92,785.00 |
| 5 | 8228/10.01.2019 | 596851/52/ 23.01.2019 | 7,386.00 |
| 6 | 9716/07.03.2019 | 596921/22/ 11.03.2019 | 72,111.00 |
| | | **ಒಟ್ಟು ಮೊತ್ತ ರೂ.** | **2,49,904.00** |

ಈ ಪಾವತಿಗೆ ಸಂಬಂಧಿಸಿಂತೆ ಹಾಜರು ಪಡಿಸಲಾದ ಓಚರ್‌ಗಳು ಹಾಗೂ ಪೂರಕ ಲೆಕ್ಕಪತ್ರ ದಾಖಲೆಗಳ ಪರಿಶೀಲಿಸಿದಾಗ ಸದರಿ ಬಿಲ್ಲುಗಳು ವಿಶ್ವವಿದ್ಯಾನಿಲಯದ ಪರೀಕ್ಷಾ ಕಾರ್ಯ ಚಟುವಟಿಕೆಗಳಾದ ಕೋಡಿಂಗ್, ಡಿ–ಕೋಡಿಂಗ್, ಅಂಕಪಟ್ಟಿ ಹಾಗೂ ಪದವಿ ಪ್ರಮಾಣ ಪತ್ರಗಳ

ಕಂಡಿಕೆಯಲ್ಲಿ ಪ್ರಸ್ತಾಪಿಸಿರುವ ಪರೀಕ್ಷಾ ಕಾರ್ಯಚಟುವಟಿಕೆಗಳಾದ ಕೋಡಿಂಗ್, ಡಿ–ಕೋಡಿಂಗ್, ಅಂಕಪಟ್ಟಿ ಹಾಗೂ ಪದವಿ ಪ್ರಮಾಣ ಪತ್ರಗಳ ಮುದ್ರಣದೊಂದಿಗೆ ವಿಶ್ವವಿದ್ಯಾನಿಲಯ ಒದಗಿಸುವ ಯಂತ್ರೋಪಕರಣಗಳ ನಿರ್ವಹಣೆಗಾಗಿ ನಿರ್ವಾಹಣ ಸೇವೆಯನ್ನು ಪಡೆದುಕೊಂಡಿರುವ ಸಂಬಂಧವಾಗಿ ಮೆ॥ ಜೆರಾಕ್ಸ್ ಇಂಡಿಯಾ ಲೀ. ಬೆಂಗಳೂರು. ಇವರಿಗೆ ದಿನಾಂಕ: 28–05–2016 ರಂದು ಕುಲಸಚಿವರು (ಪರೀಕ್ಷಾಂಗ) ರವರು ಒಡಂಬಡಿಕೆ ಮಾಡಿಕೊಂಡಿರುತ್ತಾರೆ. ಅದರನ್ವಯ ಕಂಡಿಕೆಯಲ್ಲಿನ ಒಟ್ಟು ಮೊತ್ತ ರೂ.2,49,904/–ಗಳನ್ನು ಪಾವತಿಸಲಾಗಿರುತ್ತದೆ.

ಮುಂದುವರೆದು ಮೆ॥ ಲರ್ನಿಂಗ್ ಸ್ಪೈರಲ್ ಪ್ರೈ. ಲೀ. ಸಂಸ್ಥೆಯವರೊಡನೆ ದಿನಾಂಕ:27–10–2017 ರಂದು ಕುಲಸಚಿವರು (ಆಡಳಿತ) ಇವರು ಒಡಂಬಡಿಕೆ ಮಾಡಿಕೊಂಡಿರುತ್ತಾರೆ. ಈ ಸಮಯದಲ್ಲಿ ಕಣ್‌ತಪ್ಪಿನಿಂದ ಬೇರೆ ಬೇರೆ ವರ್ಷದಲ್ಲಿ ಬೇರೆ ಬೇರೆ ಸಂಸ್ಥೆಗಳಿಗೆ ಒಡಂಬಡಿಕೆಯಾಗಿರುವುದನ್ನು ತಮ್ಮಲ್ಲಿ ನಿವೇದಿಸುತ್ತಾ, ಇನ್ನು ಮುಂದೆ ಈ ರೀತಿ ಆಗದಂತೆ ಸೂಕ್ತ ನಿಗಾವಹಿಸಿ ಪರೀಕ್ಷಾ ಕಾರ್ಯಚಟುವಟಿಕೆಗಳಿಗೆ ಒಡಂಬಡಿಕೆ ಮಾಡಿಕೊಳ್ಳಲಾಗುವುದು. ಆದ್ದರಿಂದ ಕಂಡಿಕೆಯಲ್ಲಿನ ಆಕ್ಷೇಪಣೆ ಮೊತ್ತ ರೂ.2,49,904/–ಗಳನ್ನು ತೀರುವಳಿಗೊಳಿಸುವಂತೆ ಕೋರಿದೆ.

| | |
|---|---|
| ಮುದ್ರಣದೊಂದಿಗೆ ವಿಶ್ವವಿದ್ಯಾನಿಲಯದಿಂದ ಒದಗಿಸಲಾಗುವ ಯಂತ್ರೋಪಕರಣಗಳ ನಿರ್ವಹಣೆಗಾಗಿ ನಿರ್ವಹಣಾ ಸೇವೆಯನ್ನು ಪಡೆದು ಕೊಂಡಿರುವುದಕ್ಕೆ ಸಂಬಂಧಿಸಿದ್ದಾಗಿರುತ್ತದೆ. ಈ ಸಂಬಂಧ ಮೆ॥ ಲರ್ನಿಂಗ್ ಸ್ಪೈರಲ್ ಪ್ರೈ.ಲಿ ಸಂಸ್ಥೆಯವರೊಡನೆ ದಿನಾಂಕ:27.10.2017ರಂದು ಮಾಡಿಕೊಂಡಿರುವ ಗುತ್ತಿಗೆ ಕರಾರು ಪತ್ರದಲ್ಲಿನ **"Mutual Obligations"** ನ ಕ್ರಮ ಸಂಖ್ಯೆ:03 ರಂತೆ ವಿಶ್ವವಿದ್ಯಾನಿಲಯದ ಪರೀಕ್ಷಾ ಕಾರ್ಯ ಚಟುವಟಿಕೆಗಳಾದ ಕೋಡಿಂಗ್, ಡಿ–ಕೋಡಿಂಗ್, ಅಂಕಪಟ್ಟಿ ಹಾಗೂ ಪದವಿ ಪ್ರಮಾಣ ಪತ್ರಗಳ ಮುದ್ರಣದೊಂದಿಗೆ ವಿಶ್ವವಿದ್ಯಾನಿಲಯದಿಂದ ಒದಗಿಸಲಾಗುವ ಯಂತ್ರೋಪಕರಣಗಳ ನಿರ್ವಹಣೆಯನ್ನು ಸದರಿ ಸಂಸ್ಥೆಯೇ ನಿರ್ವಹಿಸಬೇಕಾಗಿ ಕರಾರಾಗಿದ್ದರೂ ಸಹ ಅದೇ ನಿರ್ವಹಣೆಯನ್ನು ಮತ್ತೊಮ್ಮೆ ಮೆ॥ ಜೆರಾಕ್ಸ್ ಇಂಡಿಯಾ ಲಿಮಿಟೆಡ್ ಸಂಸ್ಥೆಗೆ ವಹಿಸಿರುವುದು ಕಂಡು ಬಂದಿರುತ್ತದೆ. ಯಂತ್ರೋಪಕರಣಗಳ ನಿರ್ವಹಣೆಗಾಗಿ ಮೆ॥ ಜೆರಾಕ್ಸ್ ಇಂಡಿಯಾ ಲಿ., ರವರಿಂದ ದಿನಾಂಕ:28.05.2016 ರಲ್ಲಿ ಪ್ರತ್ಯೇಕಕರಾರು ಮಾಡಿಕೊಂಡು ಒಟ್ಟು ರೂ.2,49,904/–ಗಳನ್ನು ಪಾವತಿಸಿರುವುದು ವಿಶ್ವವಿದ್ಯಾನಿಲಯಕ್ಕೆ ಆರ್ಥಿಕ ನಷ್ಟ ಉಂಟಾದಂತಾಗಿರುತ್ತದೆ. ಸದರಿ ನ್ಯೂನತೆಗೆ ಸಂಬಂಧಿಸಿದಂತೆ ಪೂರಕ ಲೆಕ್ಕಪತ್ರ ದಾಖಲೆಗಳನ್ನು ಮತ್ತು ಸೂಕ್ತ ಸ್ಪಷ್ಟೀಕರಣವನ್ನು ನೀಡುವಂತೆ ಲೆಕ್ಕತನಿಖಾ ವಿಚಾರಣಾ ಪತ್ರ ಸಂಖ್ಯೆ:83/19.05.2020 ಮತ್ತು 156/10.06.2020 ರಲ್ಲಿ ಕೋರಲಾಗಿ, ಯಾವುದೇ ದಾಖಲಾತಿ ಹಾಗೂ ಉತ್ತರ ನೀಡದಿರುವುದರಿಂದ, ಮೆ॥ ಜೆರಾಕ್ಸ್ ಇಂಡಿಯಾ ಲಿಮಿಟೆಡ್ ರವರಿಗೆ ಪಾವತಿಸಿರುವ ಮೊತ್ತ **ರೂ.2,49,904/–ಗಳನ್ನು ಆಕ್ಷೇಪಣೆಯಲ್ಲಿರಿಸಿದೆ.** | |
| **9.10. ಪರೀಕ್ಷಾ ಕಾರ್ಯಕ್ಕಾಗಿ ಹೊರಗುತ್ತಿಗೆಗೆ ನೀಡಿದ್ದ ಸಂಸ್ಥೆಯ ಕಾರ್ಯ ನಿರ್ವಹಣೆಯಲ್ಲಿ ಸಹಕರಿಸಿದ ವಿಶ್ವವಿದ್ಯಾನಿಲಯದ ಅಧಿಕಾರಿ/ಸಿಬ್ಬಂದಿಗೆ ವಿಶ್ವವಿದ್ಯಾನಿಲಯದಿಂದ ಹೆಚ್ಚುವರಿ ಸಂಭಾವನೆ ಪಾವತಿಸಿರುವುದು :**<br><br>2018–19ನೇ ಸಾಲಿನಲ್ಲಿ ಪದವಿ ಪರೀಕ್ಷೆ ಉತ್ತರ ಪತ್ರಿಕೆಗಳ ಕೇಂದ್ರ ಮೌಲ್ಯ ಮಾಪನ ಕಾರ್ಯವನ್ನು ಹೊರಗುತ್ತಿಗೆ ಆಧಾರದ ಮೇಲೆ ಟೆಂಡರ್ ಮೂಲಕ ಮೆ॥ ಲರ್ನಿಂಗ್ ಸ್ಪೈರಲ್ ಪ್ರೈ.ಲಿ ರವರಿಗೆ ವಹಿಸಲಾಗಿದ್ದರೂ ಸಹ ಪರೀಕ್ಷಾ ವಿಭಾಗದ ಅಧಿಕಾರಿಗಳು/ಸಿಬ್ಬಂದಿಗಳನ್ನು ಸದರಿ ಕಾರ್ಯಕ್ಕೆ ನೇಮಿಸಿ, ಹೊರಗುತ್ತಿಗೆ ಸಂಸ್ಥೆಯ ಸಿಬ್ಬಂದಿ ವರ್ಗದವರೊಂದಿಗೆ ಕೆಲಸ ನಿರ್ವಹಿಸಿದುದಕ್ಕಾಗಿ ರೂ.23,000/–ಗಳ ಸಂಭಾವನೆಯನ್ನು ಧನಾದೇಶ ಸಂಖ್ಯೆ:596886/14.02.2019 ರಲ್ಲಿ ಪಾವತಿ ಮಾಡಲಾಗಿರುತ್ತದೆ.<br><br>ಮೆ॥ ಲರ್ನಿಂಗ್ ಸ್ಪೈರಲ್ ಪ್ರೈ.ಲಿ ಸಂಸ್ಥೆಯವರೊಂದಿಗೆ ವಿಶ್ವವಿದ್ಯಾನಿಲಯವು ಮಾಡಿಕೊಂಡಿರುವ ಒಡಂಬಡಿಕೆಯಲ್ಲಿ, ಮೌಲ್ಯಮಾಪನ ಕಾರ್ಯಗಳಲ್ಲಿ ಲೋಪದೋಷಗಳು ಕಂಡುಬಂದಲ್ಲಿ ಒಡಂಬಡಿಕೆಯನ್ನು ಒಂದು ವರ್ಷಕ್ಕೆ ಕೊನೆಗೊಳಿಸಬಹುದಾದ ಷರತ್ತು ಇದ್ದರೂ, ಸದರಿ ಸಂಸ್ಥೆಯನ್ನು ಮುಂದುವರೆಸಿರುವುದರ ಜೊತೆಗೆ ವಿಶ್ವವಿದ್ಯಾನಿಲಯದ ಅಧಿಕಾರಿಗಳು/ಸಿಬ್ಬಂದಿಗಳನ್ನು ನೇಮಕ ಮಾಡಿ ಸಂಭಾವನೆಯನ್ನು ಪಾವತಿಸಲಾಗಿದೆ. ವಿಶ್ವವಿದ್ಯಾನಿಲಯದ ಅಧಿಕಾರಿಗಳು ಮತ್ತು ಸಿಬ್ಬಂದಿಯವರಿಗೆ | ಪದವಿ ಪರೀಕ್ಷೆ ಉತ್ತರ ಪತ್ರಿಕೆಗಳ ಕೇಂದ್ರ ಮೌಲ್ಯಮಾಪನ ಕಾರ್ಯಗಳ ಪರೀಕ್ಷಾ ಭವನ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು. ಮತ್ತು ಮೌಲ್ಯಭವನ, ಮಾನಸಗಂಗೋತ್ರಿ, ಮೈಸೂರು. ಇಲ್ಲಿ ಏಕಕಾಲದಲ್ಲಿ ಜರುಗಲಿದ್ದು, ಈ ಸಂದರ್ಭದಲ್ಲಿ ಪ್ರತಿ ಕೇಂದ್ರಗಳಲ್ಲಿ ಸಾವಿರಕ್ಕೂ ಹೆಚ್ಚು ಮೌಲ್ಯಮಾಪಕರು ಉಪಸ್ಥಿತರಿರುವುದರಿಂದ ಮೌಲ್ಯಮಾಪನ ಕೇಂದ್ರಗಳಲ್ಲಿ ಉಂಟಾಗಬಹುದಾದ ಗೊಂದಲಗಳ ನಿವಾರಣೆಗಾಗಿ ಕಛೇರಿ ಕೆಲಸದ ಜೊತೆಗೆ ಹೆಚ್ಚುವರಿಯಾಗಿ ಕೆಲಸ ನಿರ್ವಹಿಸಲು ಪರೀಕ್ಷಾ ವಿಭಾಗದ ಅಧಿಕಾರಿಗಳು/ಸಿಬ್ಬಂದಿ ವರ್ಗದವರುಗಳನ್ನು ನಿಯೋಜಿಸಲಾಗಿದ್ದು, ಸಿಂಡಿಕೇಟ್ ಸಭೆಯ ನಿರ್ಣಯದಂತೆ ಸದರಿ ಸಿಬ್ಬಂದಿ ವರ್ಗದವರಿಗೆ ಸಂಭಾವನೆಯನ್ನು ನೀಡುತ್ತಿದ್ದು ಸದರಿ ಆಕ್ಷೇಪಣೆಯನ್ನು ಕೈಬಿಡಬೇಕಾಗಿ ಕೋರಿದೆ.<br><br>ಆದೇಶದ ಪ್ರತಿ ಲಗತ್ತಿಸಿದೆ. |

| | |
|---|---|
| ಮಾಹೆಯಾನ ವೇತನ ಪಾವತಿಸುತ್ತಿದ್ದರೂ ಸಹ ಖಾಸಗಿ ಸಂಸ್ಥೆಯವರ ಕಾರ್ಯದೊಂದಿಗೆ ಸಹಕರಿಸಲು ಸೂಚಿಸಿ ಸಂಭಾವನೆಯನ್ನು ಪಾವತಿಸಿರುವುದು ನಿಯಮಾವಳಿಗಳ ಉಲ್ಲಂಘನೆಯಾಗಿರುತ್ತದೆ.<br><br>ಮುಂದುವರೆದು, ವಿಶ್ವವಿದ್ಯಾನಿಲಯದ ಅಧಿಕಾರಿಗಳು/ಸಿಬ್ಬಂದಿಯವರಿಗೆ ಸಂಭಾವನೆ ಪಾವತಿಸಿರುವುದರಿಂದ ಮೇಲ್ಕಂಡ ಸಂಸ್ಥೆಯವರ ಬಿಲ್ಲಿನಲ್ಲಿ ಸಂಭಾವನೆ ಮೊತ್ತವನ್ನು ಕಟಾಯಿಸಲಾಗಿದೆಯೆ? ಎಂಬ ಬಗ್ಗೆ ವಿವರಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಲು ಲೆಕ್ಕತಪಾಸಣಾ ವಿಚಾರಣಾ ಪತ್ರ ಸಂಖ್ಯೆ–146/08.06.2020ನ್ನು ನೀಡಲಾಗಿದ್ದರೂ ಸಹ ವಿಶ್ವವಿದ್ಯಾನಿಲಯದಿಂದ ಯಾವುದೇ ಉತ್ತರ ನೀಡಿರುವುದಿಲ್ಲ. ಆದಕಾರಣ ನಿಯಮಗಳನ್ನು ಉಲ್ಲಂಘಿಸಿ ಪಾವತಿ ಮಾಡಲಾಗಿರುವ **ಮೊತ್ತರೂ.23,000/–ಗಳನ್ನು ಸಂಬಂಧಿಸಿದವ ರಿಂದ ವಸೂಲಿಸಿ ವಿಶ್ವವಿದ್ಯಾನಿಲಯದ ಖಾತೆಗೆ ಜಮೆ ಮಾಡಲು ಸೂಚಿಸಿದೆ.** | |
| **ಅಧ್ಯಾಯ–10**<br>**ವಿದ್ಯಾರ್ಥಿಕ್ಷೇಮಪಾಲನಾ ನಿರ್ದೇಶನಾಲಯ**<br>**10.1. ವಿದ್ಯಾರ್ಥಿನಿಲಯಗಳಲ್ಲಿ ಆಹಾರ ಸರಬರಾಜು ಮಾಡಿಕೊಳ್ಳಲು ಆಹ್ವಾನಿಸಿರುವ ಟೆಂಡರ್ ಪ್ರಕ್ರಿಯೆಯಲ್ಲಿ ಕಂಡು ಬಂದಿರುವ ನ್ಯೂನತೆಗಳು :**<br><br>2017–18ನೇ ಶೈಕ್ಷಣಿಕ ಸಾಲಿನ ಎರಡನೇ ಸೆಮೆಸ್ಟರ್‌ನ ಪ್ರಾರಂಭದಿಂದ ಶಿಕ್ಷಕ ಸಲಹೆಗಾರರ ನೇತೃತ್ವದಲ್ಲಿ ನಡೆಸುತ್ತಿರುವ ವಿಶ್ವವಿದ್ಯಾನಿಲಯದ ಸ್ನಾತಕ/ಸ್ನಾತಕೋತ್ತರ ವಿದ್ಯಾರ್ಥಿನಿಲಯಗಳಿಗೆ ಅಗತ್ಯ ದಿನಸಿ ಪದಾರ್ಥಗಳನ್ನು ಮಾಸಿಕ ಅವಶ್ಯಕತೆ ಆಧರಿಸಿ ಒಂದು ವರ್ಷದ ಅವಧಿಗೆ (ದಿನಾಂಕ:08.01.2018 ರಿಂದ 07.01.2019 ರವರೆಗೆ) ಸರಬರಾಜು ಮಾಡಲು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಅಲ್ಪಾವಧಿ ಮರು ಟೆಂಡರ್ ಕರೆದು ಎಲ್–1 ಟೆಂಡರ್ ದಾರರಾದ ಮೆ॥ಪ್ರದ್ಯುಮ್ನ ಎಂಟರ್ ಪ್ರೈಸಸ್, ಮೈಸೂರು ರವರೊಡನೆ ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶನಾಲಯದ ನಿರ್ದೇಶಕರು ವಾರ್ಷಿಕ ದರ ಒಪ್ಪಂದ ಕರಾರು ಮಾಡಿಕೊಂಡಿರುತ್ತಾರೆ. 2018–19ನೇ ಸಾಲಿನ ಲೆಕ್ಕಪರಿಶೋಧನೆಯಲ್ಲಿ ಈ ಸಂಬಂಧದ ಲೆಕ್ಕಪತ್ರದಾಖಲೆ/ಕಡತಗಳನ್ನು ಪರಿಶೀಲಿಸಲಾಗಿ, ಸದರಿ ಸರಬರಾಜುದಾರರು ಸದರಿ ಸಾಲಿನಲ್ಲಿ ವಿದ್ಯಾರ್ಥಿನಿಲಯಗಳಿಗೆ ಒಟ್ಟಾರೆ ರೂ.2,69,27,996/–ಗಳ ಮೌಲ್ಯದ ದಿನಸಿ ಪದಾರ್ಥಗಳನ್ನು ಸರಬರಾಜು ಮಾಡಿರುವುದಾಗಿ ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶಕರು ದೃಢೀಕರಿಸಿ ಬಿಲ್ಲುಗಳು ಪಾವತಿಯಾಗಿರುತ್ತದೆ. ಮೇಲಿನ ವ್ಯವಹರಣೆಯಲ್ಲಿ ಈ ಕೆಳಕಂಡ ನ್ಯೂನತೆಗಳನ್ನು ಗಮನಿಸಲಾಗಿರುತ್ತದೆ<br><br>• ಕ.ಸಾ.ಸಂ.ಪಾ.ನಿಯಮಗಳು–2000ದ ನಿಯಮ–7(ಎ) ಅನ್ವಯ ವಿಶ್ವವಿದ್ಯಾನಿಲಯಗಳ ಸಂದರ್ಭದಲ್ಲಿ ಹಾಗೂ ನಿಯಮ–7(ಬಿ) ಅನ್ವಯ ಸಂಗ್ರಹಣೆಯ ಮೌಲ್ಯವು ಒಂದು ಕೋಟಿ ರೂಪಾಯಿಗಳು ಅಥವಾ ಅದಕ್ಕೂ ಹೆಚ್ಚಾಗಿರುವ ಸಂದರ್ಭದಲ್ಲಿ ರಾಜ್ಯ ಟೆಂಡರ್ ಬುಲೆಟಿನ್‌ನಲ್ಲಿ ಪ್ರಕಟಿಸಬೇಕಾಗಿರುತ್ತದೆ. ಆದರೆ ಈ ಬಗ್ಗೆ ಯಾವುದೇ ದಾಖಲಾತಿಗಳನ್ನು | 2017–18ನೇ ಶೈಕ್ಷಣಿಕ ಸಾಲಿನ ಎರಡನೇ ಸೆಮೆಸ್ಟರ್‌ನ ಪ್ರಾರಂಭದಿಂದ ಅಂದರೆ ದಿನಾಂಕ:08.01.2018 ರಿಂದ 07.01.2019 ರವರೆಗೆ ವಿಶ್ವವಿದ್ಯಾನಿಲಯದ ಸ್ನಾತಕ/ಸ್ನಾತಕೋತ್ತರ ವಿದ್ಯಾರ್ಥಿನಿಲಯಗಳಿಗೆ ಅಗತ್ಯ ದಿನಸಿ ಪದಾರ್ಥಗಳನ್ನು ಮಾಸಿಕ ಅವಶ್ಯಕತೆ ಆಧಾರಿಸಿ ಒಂದು ವರ್ಷದ ಅವಧಿಗೆ ಸರಬರಾಜು ಮಾಡಲು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಅಲ್ಪಾವಧಿ ಮರು ಟೆಂಡರ್ ಕರೆದು ಎಲ್–1 ಟೆಂಡರ್ ದಾರರಾದ ಮೆ॥ಪ್ರದ್ಯುಮ್ನ ಎಂಟರ್ ಪ್ರೈಸಸ್, ಮೈಸೂರು ರವರಿಗೆ ಟೆಂಡರ್ ಆಗಿರುತ್ತದೆ. ಸದರಿ ಸರಬರಾಜುದಾರರು 2018–19ನೇ ಸಾಲಿನಲ್ಲಿ ವಿದ್ಯಾರ್ಥಿನಿಲಯಗಳಿಗೆ ಒಟ್ಟಾರೆ ರೂ.26927996/–ಗಳ ಮೌಲ್ಯದ ದಿನಸಿ ಪದಾರ್ಥಗಳನ್ನು ಸರಬರಾಜು ಮಾಡಿರುವ ಸಂಬಂಧ ಭರಿಸುವ ವೆಚ್ಚದ ಬಗ್ಗೆ ಪ್ರಸ್ತಾಪಿಸಲಾಗಿರುತ್ತದೆ.<br><br>ವಿಶ್ವವಿದ್ಯಾನಿಲಯದ ಆದೇಶ ಸಂಖ್ಯೆ:ವಿಕ್ಷೇಪಾ7/1051/2017–18 ದಿನಾಂಕ:03.11.2017 ರಂದು ಹಾಗೂ ವಿಕ್ಷೇಪಾ7/214/2017–18 ದಿನಾಂಕ:13.12.2017 ರಂದು ಅಲ್ಪಾವಧಿ ಟೆಂಡರ್ ಮೂಲಕ ಇ–ಪ್ರೊಕ್ಯೂರ್‌ಮೆಂಟ್ ಮಾಡಲು ವಿದ್ಯಾರ್ಥಿ ಕ್ಷೇಮಾಪಾಲನಾ ನಿರ್ದೇಶಕರಿಗೆ ಅನುಮತಿಯನ್ನು ನೀಡಿದ್ದು ಅದರನ್ವಯ ಅಲ್ಪಾವಧಿ ಮರು ಟೆಂಡರ್‌ನ್ನು ದ್ವಿ ಲಕೋಟೆ ಪದ್ಧತಿಯಲ್ಲಿ ಆಹ್ವಾನಿಸಿರುತ್ತಾರೆ ತಾವು ದಯಮಾಡಿ ಈ ಪ್ರಕಟನೆಯನ್ನು ರಾಜ್ಯ ಟೆಂಡರ್ ಬಿಲ್‌ನಲ್ಲಿ ಪ್ರಕಟಿಸಬೇಕೆಂದು ರಾಜ್ಯ ಟೆಂಡರ್ ಬುಲೆಟಿನ್ ಅಧಿಕಾರಿಗಳು ಬಹು ಮಹಡಿ ಕಟ್ಟಡ ಬೆಂಗಳೂರುರವರನ್ನು ಅಡಕಗಳೊಂದಿಗೆ |

ಹಾಜರುಪಡಿಸಿರುವುದಿಲ್ಲ.

- ಯಶಸ್ವೀ ಬಿಡ್‌ದಾರರು ಟೆಂಡರ್ ಒಪ್ಪಿರುವ ಪತ್ರವನ್ನು ಸ್ವೀಕರಿಸಿದ 20 ದಿನಗಳೊಳಗೆ ಟೆಂಡರ್ ಮೌಲ್ಯದ ಶೇ.5ರಷ್ಟು ಮೊತ್ತವನ್ನು ಕಾರ್ಯ ನಿರ್ವಹಣೆ ಖಾತರಿಯಾಗಿ ಭದ್ರತಾ ಠೇವಣಿಯನ್ನು ಪಾವತಿಸಿ ಕರಾರು ಒಪ್ಪಂದ ಮಾಡಿಕೊಳ್ಳಬೇಕಾಗುತ್ತದೆ. ಆದರೆ ಇಲ್ಲಿ ಟೆಂಡರ್ ಆಹ್ವಾನಿಸಿದ ಪ್ರಾಧಿಕಾರವು ಟೆಂಡರ್ ಒಪ್ಪಿರುವ ಪತ್ರವನ್ನು ದಿನಾಂಕ:06–01–2018ರಂದು ಕಳುಹಿಸಿದ್ದು, ದಿನಾಂಕ:04–01–2018ರಂದು ಕರಾರು ಒಪ್ಪಂದ ಮಾಡಿಕೊಂಡು, ದಿನಾಂಕ:06–01–2018ರಂದು ಸರಬರಾಜು ಆದೇಶ ನೀಡಿರುತ್ತಾರೆ. ಅಲ್ಲದೆ ಕರಾರು ಒಪ್ಪಂದ ಮಾಡಿಕೊಂಡ ದಿನವೇ ಕಾರ್ಯನಿರ್ವಹಣಾ ಭದ್ರತಾ ಠೇವಣಿಯನ್ನು ಪಡೆದುಕೊಳ್ಳದೇ ದಿನಾಂಕ:15–02–2018ರಂದು ಭದ್ರತಾ ಠೇವಣಿಯನ್ನು ಪಡೆದು ಕೊಂಡಿರುವುದು ನಿಯಮಾವಳಿಗಳ ಉಲ್ಲಂಘನೆಯಾಗಿರುತ್ತದೆ.
- ಮೆ॥ ಪ್ರದ್ಯುಮ್ನಎಂಟರ್ ಪ್ರೈಸಸ್, ಮೈಸೂರುರವರೊಂದಿಗೆ ದಿನಾಂಕ:08.01.2018 ರಿಂದ 07.01.2019ರವರೆಗೆ ದಿನಸಿ ಸಾಮಗ್ರಿಗಳ ಸರಬರಾಜಿಗೆ ಕರಾರು ಮಾಡಿಕೊಂಡಿದ್ದು, ಕರಾರಿನ ಅವಧಿ ಮುಗಿದ ಬಳಿಕವೂ ಹೊಸದಾಗಿ ಟೆಂಡರ್ ಕರೆಯದೇ ಹಿಂದಿನ ಸಾಲಿನ ಟೆಂಡರುದಾರರಿಂದಲೇ ದಿನಸಿ ಸಾಮಗ್ರಿಗಳನ್ನು ಖರೀದಿಸುವ ಮೂಲಕ ಕೆ.ಟಿ.ಪಿ.ಪಿ ನಿಯಮಾವಳಿಗಳನ್ನು ಉಲ್ಲಂಘಿಸಲಾಗಿರುತ್ತದೆ.

ಹೀಗಾಗಿ ಸದರಿ ಟೆಂಡರುದಾರರಿಗೆ 2018–19ನೇ ಸಾಲಿನಲ್ಲಿ ಪಾವತಿಸಲಾಗಿರುವ ಒಟ್ಟು ಮೊತ್ತ **ರೂ.2,69,27,996/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ**. ವಿವರಗಳನ್ನು **ಅನುಬಂಧ–51ರಲ್ಲಿ** ನೀಡಲಾಗಿದೆ.

ವಿಶ್ವವಿದ್ಯಾನಿಲಯದ ಪತ್ರ ಸಂಖ್ಯೆ:ವಿಕ್ಷೇಪಾ7/2144/2017–18 ದಿನಾಂಕ:14.12.2017 ರಂದು ಕೋರಲಾಗಿರುತ್ತದೆ. ಹಾಗೂ ಸರ್ಕಾರದ ಪತ್ರ ಸಂಖ್ಯೆ:ಇಡಿ168/ವಿವಿಧ2017/ದಿನಾಂಕ:26.12.2017 ರಂದು ಮಾನ್ಯ ನಿರ್ದೇಶಕರು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಶಿವಾಜಿನಗರ ಬೆಂಗಳೂರು–01 ರವರಿಗೆ ಪತ್ರ ಬರಿಯಾಲಾಗಿದ್ದು ಹಾಗೂ ಈ ಬಗ್ಗೆ ಜಿಲ್ಲಾ ಟೆಂಡರ್ ಬುಲೆಟಿನ್ ಮೈಸೂರುರವರಲ್ಲಿ ಪ್ರಕಟಣೆಗಾಗಿ ಕೋರಲಾಗಿರುತ್ತದೆ. ಈ ಎಲ್ಲಾ ಧೃಢೀಕರಿಸಿದ ಪ್ರತಿಗಳನ್ನು ಸಲ್ಲಿಸಿದೆ.

ಯಶಸ್ವೀ ಬಿಡ್‌ದಾರರು ಟೆಂಡರ್ ಒಪ್ಪುವ ಸಮಯದಲ್ಲಿಯೇ ಭದ್ರತಾ ಠೇವಣಿಯನ್ನು ಸಲ್ಲಿಸಲು ಕಾಲಾವಕಾಶಬೇಕೆಂದು ಮೌಖಿಕವಾಗಿ ಕೋರಲಾಗಿದ್ದು ಹಾಗೂ 2018–19ನೇ ಶೈಕ್ಷಣಿಕ ಸಾಲಿನ ಸ್ನಾತಕ/ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ 2ನೇ ಚಾತುರ್ಮಾಸದ ಅವಧಿಯಲ್ಲಿ ತರಗತಿಗಳು ಪ್ರಾರಂಭಗೊಂಡಿದ್ದು ವಿದ್ಯಾರ್ಥಿನಿಲಯಗಳಿಗೆ ಭೋಜನ ವ್ಯವಸ್ಥೆಯನ್ನು ಒದಗಿಸುವ ಹಿತದೃಷ್ಠಿಯಿಂದ ಸರಬರಾಜು ಆದೇಶ ನೀಡಿ ನಂತರ ಭದ್ರತಾ ಠೇವಣಿಯನ್ನು 22 ದಿನ ತಡವಾಗಿ ಪಡೆದುಕೊಳ್ಳಲಾಗಿದೆ. ಇನ್ನು ಮುಂದೆ ಈ ರೀತಿ ಆಗದಂತೆ ಸೂಕ್ತ ನಿಗಾವಹಿಸಿ ನಿಯಾಮಾನುಸಾರ ಕ್ರಮವಹಿಸುವುದಾಗಿ ನಿವೇದಿಸಿದೆ.

ಮೆ॥ ಪ್ರದ್ಯುಮ್ನಎಂಟರ್ ಪ್ರೈಸಸ್, ಮೈಸೂರುರವರೊಂದಿಗೆ ದಿನಾಂಕ:08.01.2018 ರಿಂದ 07.01.2019ರವರೆಗೆ ದಿನಸಿ ಪದಾರ್ಥಗಳನ್ನು ಸಾರಬರಾಜಿಗೆ ಕರಾರು ಮಾಡಿಕೊಂಡಿದ್ದರು ಸರಿಯಷ್ಟೇ ಆದರೆ 2018–19ನೇ ಸಾಲಿನ ಅವಧಿಯು ಜೂನ್‌ಗೆ ಅಂತ್ಯಗೊಳ್ಳಲಿದ್ದು ಹಾಗೂ 2ನೇ ಚಾತುರ್ಮಾಸಾದ ಪರೀಕ್ಷೆಗಳು ಇದ್ದ ಕಾರಣ ವಿದ್ಯಾರ್ಥಿಗಳಿಗೆ ತೊಂದರೆಯಾಗಬಾರದೆಂಬ ಹಿತದೃಷ್ಠಿಯಿಂದ ಹಿಂದಿನ ಸಾಳಿನ ದರ ಒಪ್ಪಂದದ ಆಧಾರದ ಮೇಲೆ ಸರಬರಾಜು ಆದೇಶ ನೀಡಲು ದಿನಾಂಕ:12.12.2018 ರಂದು ನಡೆದ ಸಭಾ ನಿರ್ಣಾಯವನ್ನು ದಿನಾಂಕ:28.12.018 ರಂದು ನಡೆದ ಸಿಂಡಿಕೇಟ್ ಸಭೆಯು ಅನುಮೋದಿಸಿದ ಮೇರೆಗೆ ವಿಶ್ವವಿದ್ಯಾನಿಲಯದ ಆದೇಶ ಸಂಖ್ಯೆ:ವಿಕ್ಷೇಪಾ7/ಇಪೊ/11769/ ದಿನಾಂಕ:05.01.2019ರಲ್ಲಿ ದಿನಾಂಕ:08.01.2019 ರಿಂದ 30.04.2019ರವರೆಗೆ ಹಿಂದಿನ ಸಾಲಿನ ಸರಬರಾಜುದಾರನ್ನು ಮುಂದುವರಿಸಿರುವುದಾಗಿ ನಿವೇದಿಸುತ್ತಾ ಪ್ರತಿಗಳನ್ನು ಲಗತ್ತಿಸಿ ಸಲ್ಲಿಸಿದೆ.

ಈ ಮೇಲಿನ ಎಲ್ಲಾ ಅಂಶಗಳನ್ನು ಪರಿಗಣಿಸಿ ಕಂಡಿಕೆಯಲ್ಲಿ ಆಕ್ಷೇಪಿಸಿರುವ ಮೊತ್ತ ರೂ.26927996/–ಗಳನ್ನು ತೀರುವಳಿಗೊಳಿಸುವಂತೆ ಕೋರಲಾಗಿದೆ.

**10.2.ವಿದ್ಯಾರ್ಥಿನಿಲಯಗಳಿಗೆ ಕೋಳಿ ಮಾಂಸ ಖರೀದಿಸುವಾಗ ಪಾರದರ್ಶಕತೆಯ ನಿಯಮಗಳನ್ನು ಪಾಲನೆ ಮಾಡದಿರುವುದು:**

ವಿಶ್ವವಿದ್ಯಾನಿಲಯದ ಸ್ನಾತಕ ಹಾಗೂ ಸ್ನಾತಕೋತ್ತರ ವಿದ್ಯಾರ್ಥಿನಿಲಯಗಳಿಗೆ 2018–19ನೇ ಸಾಲಿನಲ್ಲಿ ರೂ.11,54,898/–ಗಳ ವೆಚ್ಚದಲ್ಲಿ ಸ್ಥಳೀಯ ವ್ಯಾಪಾರಿಗಳಿಂದ ವಿದ್ಯಾರ್ಥಿನಿಲಯವಾರು ಕೋಳಿ ಮಾಂಸವನ್ನು ಖರೀದಿಸಲಾಗಿದ್ದು, ವಿವರಗಳನ್ನು **ಅನುಬಂಧ–52ರಲ್ಲಿ** ನೀಡಲಾಗಿದೆ. ಈ ಬಗ್ಗೆ ಸ್ಪಷ್ಟೀಕರಣ ಕೋರಿ ನೀಡಿದ ವಿಚಾರಣೆ ಸಂಖ್ಯೆ:148/2020–21/09.06.2020ಕ್ಕೆ ವಿದ್ಯಾರ್ಥಿನಿಲಯದ ಶಿಕ್ಷಕ ಸಲಹೆಗಾರರು ಉತ್ತರಿಸಿ ನಿಯಮಾನುಸಾರ ಖರೀದಿಸಲು ದಿನಾಂಕ:03.08.2017 ರಂದು ನಡೆದ ಸಿಂಡಿಕೇಟ್ ಸಭೆಯಲ್ಲಿ ಅನುಮೋದನೆ ಪಡೆಯಲಾಗಿದೆ ಎಂಬ ವಿವರಣೆಯನ್ನು ನೀಡಿರುತ್ತಾರೆ.

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ–1999 ಹಾಗೂ ಕೆ.ಟಿ.ಪಿ.ಪಿ (ತಿದ್ದುಪಡಿ) ನಿಯಮಗಳು–2001ರ ಉಪನಿಯಮ–4(ಇ) ಹಾಗೂ 4(ಇ)(ಇ) ಮತ್ತು ಸರ್ಕಾರದ ಅಧಿಸೂಚನೆ ಸಂಖ್ಯೆ:ಸಿ.ಆ.ಸು.ಇ.ಇ/ಇಸಂಗ್ರ/2009/09.10.2012ರ ಅನುಸಾರ ರೂ.1.00ಲಕ್ಷ ಮೀರಿದ ಸರಕು/ಸಾಮಗ್ರಿ ಖರೀದಿಯನ್ನು ಟೆಂಡರ್ ಮೂಲಕ ಹಾಗೂ ರೂ.5.00 ಲಕ್ಷಗಳನ್ನು ಮೀರಿದ ಪ್ರತಿಯೊಂದು ಸಂಗ್ರಹಣೆ/ಸೇವೆಯನ್ನು ವಿದ್ಯುನ್ಮಾನ ಸಂಗ್ರಹಣಾ ವೇದಿಕೆ (E-Procurement Portal) ಮುಖಾಂತರ ಟೆಂಡರ್ ಆಹ್ವಾನಿಸಿ ಪಡೆಯಬೇಕಾಗಿರುತ್ತದೆ. ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸಭೆಯಲ್ಲಿ ಖರೀದಿ ನಿಯಮಗಳನ್ನು ಅನುಸರಿಸಿ ಖರೀದಿಸಲು ತಿಳಿಸಿದ್ದಾಗ್ಯೂ, ಪಾರದರ್ಶಕತೆ ನಿಯಮಗಳನ್ನು ಉಲ್ಲಂಘಿಸಿ ಕೋಳಿ ಮಾಂಸವನ್ನು ಸ್ಥಳೀಯ ವ್ಯಾಪಾರಿಗಳಿಂದ ಖರೀದಿಸಲಾಗಿರುತ್ತದೆ. ಹೀಗಾಗಿ ಸದರಿ ಸಾಲಿನಲ್ಲಿ ಕೋಳಿ ಮಾಂಸ ಖರೀದಿಗೆ ಭರಿಸಿರುವ ವೆಚ್ಚ **ರೂ.11,54,898/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.**

ವಿಶ್ವವಿದ್ಯಾನಿಲಯದ ಸ್ನಾತಕ ಹಾಗೂ ಸ್ನಾತಕೊತ್ತರ ವಿದ್ಯಾರ್ಥಿನಿಲಯಗಳಿಗೆ ಭೋಜನ ವ್ಯವಸ್ಥೆಯನ್ನು ಶಿಕ್ಷಕ ಸಲಹೆಗಾರರ ನೇತೃತ್ವದಲ್ಲಿ ನಡೆಸಲು ದಿನಾಂಕ:20.06.2017 ಮತ್ತು ದಿನಾಂಕ:01.07.2017 ರಂದು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ನಡೆದ ಸಲಹಾ ಸಮಿತಿ ಸಭೆಯಲ್ಲಿ ಪ್ರಸ್ತಾಪಿಸಿರುವ ವಿಷಯಗಳನ್ನು (ವಿಷಯ ಸೂಚಿ ಸಂಖ್ಯೆ–12) ದಿನಾಂಕ:03.08.2017 ರಂದು ನಡೆದ ಸಿಂಡಿಕೇಟ್ ಸಭೆಯ ಅನುಮೋದನೆಯ ಮೇರೆಗೆ ವಿಶ್ವವಿದ್ಯಾನಿಲಯದ ಆದೇಶ ಸಂಖ್ಯೆ:ವಿಷೇಪಾ7/ಇಪ್ರೋ/2452/2017–18 ದಿನಾಂಕ:05.01.2018 ಹಾಗೂ ವಿಷೇಪಾ7/ಇಪ್ರೋ/776/2017–18 ದಿನಾಂಕ:05.01.2019 ರಂದು ಭೋಜನ ತಯಾರಿಕೆಗೆ ಬೇಕಾದಂತಹ ಅಗತ್ಯ ವಸ್ತುಗಳು ಹಾಫ್‌ಕಾಮ್ಸ್ ಮತ್ತು ಕೆ.ಎಂಎಫ್‌ನಲ್ಲಿ ಲಭ್ಯವಿರದ ಪಕ್ಷದಲ್ಲಿ (ಉದಾಹರಣೆ:ಚಿಕನ್, ಗ್ಯಾಸ್ ಸಿಲಿಂಡರ್ ಮುತಾಂದವುಗಳು) ಜನತಾ ಬಜಾರ್ ಅಥವಾ ಖಾಸಗಿ ವ್ಯಾಪಾರಿಗಳಿಂದ ನಿಲಯದ ಶಿಕ್ಷಕ ಸಲಹೆಗಾರರು ವಿಶ್ವವಿದ್ಯಾನಿಲಯದ ನಿಯಮಾನುಸಾರ ಖರೀದಿಸಲು ಅನುಮತಿ ನೀಡಿರುವ ಮೇರೆಗೆ ನಿಲಯದ ಶಿಕ್ಷಕ ಸಲಹೆಗಾರರು ಸ್ಥಳೀಯ ವ್ಯಾಪಾರಿಗಳಿಂದ ಕೋಳಿ ಮಾಂಸವನ್ನು ಖರೀದಿಸಿ ವೆಚ್ಚಭರಿಸಿರುವುದಾಗಿ ತಮ್ಮಲ್ಲಿ ನಿವೇದಿಸಿದೆ.

2018–19ನೇ ಸಾಲಿನಲ್ಲಿ ಊಟೋಪಚಾರಕ್ಕಾಗಿ ವಿದ್ಯಾರ್ಥಿನಿಲಯಗಳಲ್ಲಿ ಸ್ಥಳೀಯ ವ್ಯಾಪಾರಿಗಳಿಂದ ಕೋಳಿ ಮಾಂಸ ಖರೀದಿಸಿರುವ ಬಗ್ಗೆ **ಅನುಬಂಧ–52ರಲ್ಲಿನ** ಒಟ್ಟು 14 ವಿದ್ಯಾರ್ಥಿನಿಲಯಗಳ ಪೈಕಿ ಕ್ರಮ ಸಂಖ್ಯೆ:**01,02 ಮತ್ತು 11** ರ 3 ವಿದ್ಯಾರ್ಥಿನಿಲಯಗಳಲ್ಲಿ ಕ್ರಮವಾಗಿ ರೂ.113118/– ರೂ.108316/– ಮತ್ತು ರೂ.110520/–ಗಳ ವೆಚ್ಚ ಭರಿಸಿದೆ. ಕಾರಣ ವಿದ್ಯಾರ್ಥಿನಿಲಯಗಳಲ್ಲಿ ಮಾಂಸಹಾರಿ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಳವಾಗಿರುವುದು ಮತ್ತು ಉಳಿದ ವಿದ್ಯಾರ್ಥಿನಿಲಯಗಳಲ್ಲಿ **ರೂ.1ಲಕ್ಷದ** ಒಳಗಡೆಯೇ ವಿದ್ಯಾರ್ಥಿನಿಲಯದ ಶಿಕ್ಷಕ ಸಲಹೆಗಾರರು ಕೋಳಿ ಮಾಂಸ ಖರೀದಿಸಿ ವೆಚ್ಚ ಭರಿಸಿರುವುದಾಗಿ ನಿವೇದಿಸಿದೆ. ವಿಶ್ವವಿದ್ಯಾನಿಲಯದ ಆದೇಶದ ಪ್ರಕಾರ ಆಯಾಯ ವಿದ್ಯಾರ್ಥಿನಿಲಯಗಳ ಶಿಕ್ಷಕ ಸಲಹೆಗಾರರು ಪ್ರತ್ಯೇಕವಾಗಿ ವೆಚ್ಚ ಭರಿಸಿರುತ್ತಾರೆ ಇನ್ನು ಮುಂದೆ ತಮ್ಮ ಸಲಹೆ ಮತ್ತು ಸೂಚನೆಯ ಮೇರೆಗೆ ವಿಶ್ವವಿದ್ಯಾನಿಲಯದ ಎಲ್ಲಾ ವಿದ್ಯಾರ್ಥಿನಿಲಯಗಳಲ್ಲಿ ಇ–ಪ್ರಕ್ಯೂರ್‌ಮೆಂಟ್ ಮೂಲಕ ಕೋಳಿ ಮಾಂಸ ಖರೀದಿಸುವ ಬಗ್ಗೆ ಕ್ರಮವಹಿಸುವುದಾಗಿ ತಮ್ಮಲ್ಲಿ ನಿವೇದಿಸುತ್ತಾ ಕಂಡಿಯಲ್ಲಿನ ಆಕ್ಷೇಪಣೆ ಮೊತ್ತ ರೂ.1154898/–ಗಳನ್ನು ತೀರುವಳಿಗೊಳಿಸುವಂತೆ ಕೋರಲಾಗಿದೆ.

| | |
|---|---|
| **10.3. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳ ಭೋಜನ ವೆಚ್ಚಕ್ಕಾಗಿ ಮುಂಗಡ ನೀಡಲಾಗಿದ್ದು, ಎನ್.ಡಿ.ಸಿ ಯನ್ನು ಹಾಜರು ಪಡಿಸದೇ ನೇರವಾಗಿ ಎ.ಸಿ ಹುಂಡಿಯ ಮೊತ್ತವನ್ನು ಜಮೆ ಮಾಡಿರುವುದು:**<br>2018–19ನೇ ಸಾಲಿನಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ವಿಶೇಷ ಘಟಕರವರಿಗೆ ವಿಶ್ವವಿದ್ಯಾನಿಲಯದ ವಿದ್ಯಾರ್ಥಿನಿಲಯಗಳಲ್ಲಿರುವ ವಿದ್ಯಾರ್ಥಿಗಳ ಭೋಜನ ವೆಚ್ಚಕ್ಕಾಗಿ 11 ಎ.ಸಿ ಬಿಲ್ಲುಗಳ ಮೂಲಕ ರೂ.333.14 ಲಕ್ಷಗಳನ್ನು ವಿಶ್ವವಿದ್ಯಾನಿಲಯದ ಜಿ.ಆರ್.ಎ ಖಾತೆಯಿಂದ ಮುಂಗಡ ನೀಡಿದ್ದು, ಇವುಗಳಲ್ಲಿ ಕ್ರ.ಸಂ.5ರವರೆಗಿನ ಮೊತ್ತಗಳನ್ನು ಸಮಾಜ ಕಲ್ಯಾಣ ಇಲಾಖೆಯಿಂದ ಹಣ ಬಂದ ನಂತರ ಜಿ.ಆರ್.ಎಖಾತೆ ಸಂಖ್ಯೆ:54007591471ಗೆ ಮರುಪಾವತಿಸಲಾಗಿದೆ. ವಿವರಗಳನ್ನು **ಅನುಬಂಧ–53ರಲ್ಲಿ** ನೀಡಲಾಗಿದೆ. ಉಳಿದ ಕ್ರ.ಸಂ.6 ರಿಂದ 11ರವರೆಗಿನ ಮೊತ್ತಗಳು ಆಡಿಟ್ ಸಂದರ್ಭದವರೆಗೂ ಮರುಪಾವತಿಯಾಗದಿರುವುದನ್ನು ಗಮನಿಸಲಾಗಿದೆ.<br><br>11 ಎ.ಸಿ.ಬಿಲ್ಲುಗಳ ಮೂಲಕ ಡ್ರಾ ಮಾಡಿ ಭರಿಸಿದ ವೆಚ್ಚಗಳಿಗೆ ಸಂಬಂಧಿಸಿದಂತೆ ವೋಚರ್‌ಗಳೊಡನೆ ಎನ್.ಡಿ.ಸಿ ತಯಾರಿಸಿ ಸಕ್ಷಮ ಪ್ರಾಧಿಕಾರದ ಮೇಲು ಸಹಿ ಪಡೆದು ಹಣಕಾಸು ಶಾಖೆಗೆ ಸಲ್ಲಿಸಿ ಲೆಕ್ಕ ಹೊಂದಾಣಿಕೆ ಮಾಡಬೇಕಾಗಿರುತ್ತದೆ. ಇದಕ್ಕೆ ಸಂಬಂಧಿಸಿದಂತೆ, ದಾಖಲಾತಿಗಳನ್ನು ಹಾಜರುಪಡಿಸುವಂತೆ ವಿಚಾರಣಾ ಪತ್ರ ಸಂಖ್ಯೆ:180/2020–21, ದಿನಾಂಕ:11.06.2020ನ್ನು ನೀಡಿದ್ದರೂ ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ.<br><br>ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ವಿಶೇಷ ಘಟಕ ಕಛೇರಿಯ ಬ್ಯಾಂಕ್ ಖಾತೆಯಲ್ಲಿ ಹಣದ ಕೊರತೆಯಿದ್ದಲ್ಲಿ ವಿಶ್ವವಿದ್ಯಾನಿಲಯದ ಇತರೆ ಬ್ಯಾಂಕ್ ಖಾತೆಯಿಂದ ತಾತ್ಕಾಲಿಕವಾಗಿ ಹಣವನ್ನು ವರ್ಗಾವಣೆ ಮಾಡಿಕೊಂಡು, ಇಲಾಖೆಯಿಂದ ಹಣ ಬಂದಾಗ ಸದರಿ ಮೊತ್ತವನ್ನು ಮರು ಪಾವತಿಸುವ ಕ್ರಮ ವಹಿಸಬೇಕಾಗುತ್ತದೆ. ವಿದ್ಯಾರ್ಥಿನಿಲಯಗಳ ವೆಚ್ಚವನ್ನು ಡಿ.ಸಿ ಬಿಲ್ಲುಗಳ ಮೂಲಕ ಮಾಡಬೇಕಾಗಿರುತ್ತದೆ. ತುರ್ತು ಸಂದರ್ಭಗಳಲ್ಲಿ ಮಾತ್ರವೇ ಸಕ್ಷಮ ಪ್ರಾಧಿಕಾರದ ಮಂಜೂರಾತಿಯೊಡನೆ ಎ.ಸಿ. ಬಿಲ್ಲುಗಳ ಮೂಲಕ ಹಣ ಡ್ರಾ ಮಾಡಿ, ನಂತರದ ಮಾಹೆಯ ಒಂದು ವಾರದೊಳಗೆ ಎನ್.ಡಿ.ಸಿಯನ್ನು ಹಣಕಾಸು ವಿಭಾಗಕ್ಕೆ ಸಲ್ಲಿಸಿ ಹೊಂದಾಣಿಕೆ ಮಾಡಿಕೊಳ್ಳಬೇಕಾಗಿರುತ್ತದೆ. ಆದರೆ ವಿಶ್ವವಿದ್ಯಾನಿಲಯವು ಈ ವಿಷಯದಲ್ಲಿ ಅನುಸರಿಸುತ್ತಿರುವ ಕ್ರಮವು ನಿಯಮಾನುಸಾರವಾಗಿರದೇಗೊಂದಲಮಯವಾಗಿರುತ್ತದೆ.ಈ ಬಗ್ಗೆ ತುರ್ತುಕ್ರಮ ವಹಿಸಲು ಸೂಚಿಸಿದೆ. | 2018–19 ನೇ ಸಾಲಿನಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ವಿಶೇಷ ಘಟಕ ರವರಿಗೆ ವಿಶ್ವವಿದ್ಯಾನಿಲಯದ ವಿದ್ಯಾರ್ಥಿನಿಲಯಗಳಲ್ಲಿರುವ ವಿದ್ಯಾರ್ಥಿಗಳ ಭೋಜನ ವೆಚ್ಚಕ್ಕಾಗಿ 11 ಎ.ಸಿ ಬಿಲ್ಲುಗಳ ಮೂಲಕ ರೂ. 333.14 ಲಕ್ಷಗಳನ್ನು ಜಿ.ಆರ್.ಎ ಖಾತೆಯಿಂದ ಮುಂಗಡ ನೀಡಿದ್ದು ಅನುಬಂಧ–53ರಲ್ಲಿ ವಿವರಿಸಿರುವಂತೆ ಕ್ರಮ ಸಂಖ್ಯೆ 01 ರಿಂದ 05ರವರೆಗೆ ಮೊತ್ತ ರೂ.1,42,45,780/–ಗಳು ಜಿ.ಆರ್.ಎ ಖಾತೆಗೆ ಮರು ಪಾವತಿಸಿದ್ದು ಉಳಿಕೆ ಕ್ರಮ ಸಂಖ್ಯೆ: 06 ರಿಂದ 11 ರವರೆಗಿನ ಮೊತ್ತಗಳು (ರೂ.1,90,67,370/–) ಆಡಿಟ್ ಸಂಧರ್ಭದವರೆಗೂ ಮರು ಪಾವತಿಯಾಗಿರುವ ಬಗ್ಗೆ ಕಂಡಿಕೆಯಲ್ಲಿ ಪ್ರಸ್ತಾಪಿಸಲಾಗಿರುತ್ತದೆ.<br><br>ಮುಂದುವರೆದು 11 ಎ.ಸಿ ಬಿಲ್ಲುಗಳ ಮೂಲಕ ಡ್ರಾ ಮಾಡಿ ಭರಿಸಿದ ವೆಚ್ಚಗಳಿಗೆ ಸಂಬಂಧಿಸಿದಂತೆ ದಾಖಾಲಾತಿಗಳನ್ನು ಹಾಜರುಪಡಿಸುವಂತೆ ವಿಚಾರಣಾ ಪತ್ರ ಸಂಖ್ಯೆ:180/2020–21 ದಿನಾಂಕ:11.06.2020ನ್ನು ನೀಡಿದ್ದರೂ ಯಾವುದೇ ದಾಖಾಲೆಗಳನ್ನು ಹಾಜರುಪಡಿಸಿರುವುದು ಎಂಬುದಾಗಿ ಪ್ರಸ್ತಾಪಿಸಿ ಅನುಬಂಧ–53ರಲ್ಲಿ ಕ್ರಮ ಸಂಖ್ಯೆ 01 ರಿಂದ 05ರವರೆಗಿನ ಮೊತ್ತಗಳನ್ನು ಜಿ.ಆರ್.ಎ ಖಾತೆ ಸಂಖ್ಯೆ 54007591471 ಗೆ ಮರು ಪಾವತಿಸಾಗಿದೆ ಎಂಬ ಅಂಶವನ್ನು ತಮ್ಮ ಅವಗಾಹನೆಗೆ ತರಬಯಸುತ್ತಾ ಉಳಿದ ಕ್ರಮ ಸಂಖ್ಯೆ 06 ರಿಂದ 11ರವರೆಗಿನ ಮೊತ್ತಗಳು ಜಿ.ಆರ್.ಎ ಖಾತೆಗೆ (ಕ್ರಮ ಸಂಖ್ಯೆ 06 ಮತ್ತು 07ರ ಮೊತ್ತ ದಾನಂಕ 26.03.2019 ರಂದು ಕ್ರಮ ಸಂಖ್ಯೆ 08 ಮತ್ತು 09ರ ಮೊತ್ತ ದಿನಾಂಕ 24.04.209 ಹಾಗೂ ಸಂಖ್ಯೆ 10ರ ಮೊತ್ತ ದಿನಾಂಕ:25.06.2019 ಕ್ರಮ ಸಂಖ್ಯೆ 11ರ ಮೊತ್ತ ದಿನಾಂಕ;09.07.2019 ರಂದು ಜಿ.ಆರ್.ಎ ಕಾತೆಗೆ ಜಮಾ ಮಾಡಿರುವ ಬಗ್ಗೆ ಚಲನ್ ನಂ, ಬ್ಯಾಂಕ್ ಸ್ಟೇಟ್ಮೆಂಟ್ ಎನ್.ಡಿ.ಸಿ ಪ್ರಪತ್ರದ ಪ್ರತಿಗಳೊಡನೆ ಸಲ್ಲಿಸುತ್ತಾ ಸಷಮ ಪ್ರಾಧಿಕಾರ ಅನುಮೋದನೆ ಪಡೆದು ಎ.ಸಿ ಬಿಲ್ಲಿನ ಮೂಲಕ ಹಣ ಪಡೆದು ಸಮಾಜ ಕಲ್ಯಾಣ ಇಲಾಖೆಯಿಂದ ಹಣ ಬಂದ ನಂತರ ಯಾವ ಖಾತೆಯಿಂದ ಹಣ ಪಡೆದಿದೇವು ಅದೇ ಖಾತೆಗೆ ಜಮಾ ಮಾಡಿರುವುದಾಗಿ ನಿವೇದಿಸಿದೆ. |

| | |
|---|---|
| **10.4. ವಿದ್ಯಾರ್ಥಿನಿಲಯದಲ್ಲಿ ವಾಸ್ತವ್ಯ ಮಾಡಿರುವ ಸಂಶೋಧನಾ ವಿದ್ಯಾರ್ಥಿಗಳಿಂದ ಮನೆ ಬಾಡಿಗೆ ಭತ್ಯೆ ರೂ.15,67,360/–ಗಳನ್ನು ವಸೂಲಿಸದಿರುವುದು :**<br>ಮೈಸೂರು ವಿಶ್ವವಿದ್ಯಾನಿಲಯದ ಪುರುಷರ ಸ್ನಾತಕೋತ್ತರ ವಿದ್ಯಾರ್ಥಿನಿಲಯ ಬ್ಲಾಕ್–2ಕ್ಕೆ 2018–19ನೇ ಸಾಲಿನಲ್ಲಿ 36 ಜನ ಸಂಶೋಧನಾ ವಿದ್ಯಾರ್ಥಿಗಳು ಪ್ರವೇಶ ಪಡೆದಿರುತ್ತಾರೆ. ವಿವರಗಳನ್ನು **ಅನುಬಂಧ–54ರಲ್ಲಿ** ನೀಡಲಾಗಿದೆ. ಸಂಶೋಧನಾ ವಿದ್ಯಾರ್ಥಿಗಳಿಗೆ ಯು.ಜಿ.ಸಿ ವತಿಯಿಂದ ಶಿಷ್ಯವೇತನ ನೀಡಲಾಗುತ್ತಿದ್ದು, ಇದರಲ್ಲಿ ಮನೆ ಬಾಡಿಗೆ ಭತ್ಯೆಯೂ ಸಹ ಸೇರಿರುತ್ತದೆ. ಕಾರ್ಯದರ್ಶಿ, ವಿಶ್ವವಿದ್ಯಾನಿಲಯ ಧನ ಸಹಾಯ ಆಯೋಗ ಇವರ ಪತ್ರ ಸಂ.ಎಫ್.ನಂ21–1:2010 ಎಸ್‌ಎ–III, ದಿ:07.11.2019ರಂತೆ ಶೇ.16.00ರ ದರದಲ್ಲಿ ಮೈಸೂರಿನಲ್ಲಿಸಂಶೋಧನಾ ವಿದ್ಯಾರ್ಥಿಗಳಿಗೆ ಮನೆ ಬಾಡಿಗೆ ಭತ್ಯೆಯನ್ನು ನೀಡಲಾಗುತ್ತದೆ. ರಾಜೀವ್ ಗಾಂಧಿ ರಾಷ್ಟ್ರೀಯ ಶಿಷ್ಯ ವೇತನದ ಮಾರ್ಗಸೂಚಿ ಸಂ–9.1ರ ಅನುಸಾರ ಸಂಶೋಧನಾ ವಿದ್ಯಾರ್ಥಿಯು ವಿಶ್ವವಿದ್ಯಾನಿಲಯದ ವಿದ್ಯಾರ್ಥಿನಿಲಯದಲ್ಲಿ ವಾಸ್ತವ್ಯ ಮಾಡಿದ್ದರೆ, ಅವರು ಮನೆ ಬಾಡಿಗೆ ಭತ್ಯೆಗೆ ಅರ್ಹರಾಗಿರುವುದಿಲ್ಲ. ಶಿಷ್ಯ ವೇತನದೊಡನೆ ಪಡೆದ ಮನೆ ಬಾಡಿಗೆ ಭತ್ಯೆಯನ್ನು ವಿಶ್ವವಿದ್ಯಾನಿಲಯವು ಕಟಾಯಿಸಿಕೊಳ್ಳ ಬೇಕಾಗಿರುತ್ತದೆ. ಹೀಗೆ ವಿಶ್ವವಿದ್ಯಾನಿಲಯದ ವಿದ್ಯಾರ್ಥಿನಿಲಯದಲ್ಲಿ ವಾಸ್ತವ್ಯ ಹೂಡಿರುವ ಸಂಶೋಧನಾ ವಿದ್ಯಾರ್ಥಿಗಳಿಂದ ವಸೂಲಿಸಿರುವ ಮನೆ ಬಾಡಿಗೆ ಭತ್ಯೆ ವಿವರಗಳನ್ನು ಲೆಕ್ಕತಪಾಸಣೆಗೆ ಹಾಜರುಪಡಿಸುವಂತೆ ಕೋರಿ ವಿಚಾರಣಾ ಪತ್ರ ಸಂಖ್ಯೆ:02/2020–21, ದಿನಾಂಕ:31.08.2020ನ್ನು ನೀಡಲಾಗಿದ್ದರೂ ಯಾವುದೇ ದಾಖಲಾತಿಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲ. ಆದ್ದರಿಂದ ವಿದ್ಯಾರ್ಥಿನಿಲಯದಲ್ಲಿ ವಾಸ್ತವ್ಯ ಹೂಡಿರುವ ಸಂಶೋಧನಾ ವಿದ್ಯಾರ್ಥಿಗಳಿಂದ ಬಾಕಿ ಇರುವ ಮನೆ ಬಾಡಿಗೆ ಭತ್ಯೆ ಮೊಬಲಗು **ರೂ.15,67,360/–ಗಳನ್ನು ವಸೂಲಿಸಿ** ವಿಶ್ವವಿದ್ಯಾನಿಲಯದ ಖಾತೆಗೆ ಜಮೆ ಮಾಡಲು ಸೂಚಿಸಿದೆ. | ಮೈಸೂರು ವಿಶ್ವವಿದ್ಯಾನಿಲಯದ ಪುರುಷರ ಸ್ನಾತಕೋತ್ತರ ವಿದ್ಯಾರ್ಥಿನಿಲಯ ಬ್ಲಾಕ್–2ರಲ್ಲಿ 2018–19ನೇ ಸಾಲಿನಲ್ಲಿ 36 ಜನ ಸಂಶೋಧನಾ ವಿದ್ಯಾರ್ಥಿಗಳು (ಅನುಬಂಧ–54) ಪ್ರವೇಶಾತಿ ಪಡೆದು ವಿದ್ಯಾರ್ಥಿನಿಲಯದಲ್ಲಿ ವಾಸ್ತವ್ಯ ಹೂಡಿದ್ದು ಇವರುಗಳಿಂದ ಯು,ಜಿ,ಸಿ ನಿಯಾಮವಳಿಯನುಸಾರ ಮನೆ ಬಾಡಿಗೆ ಭತ್ಯೆ ರೂ.1567360/–ಗಳನ್ನು ವಸೂಲಿಸಿ ವಿಶ್ವವಿದ್ಯಾನಿಲಯದ ಖಾತೆಗೆ ಜಮಾ ಮಾಡುವಂತೆ ಕಂಡಿಕೆಯಲ್ಲಿ ಪ್ರಸ್ತಾಪಿಸಲಾಗಿರುತ್ತದೆ.<br><br>ವಿಶ್ವವಿದ್ಯಾನಿಲಯದ ಆದೇಶ ಸಂಖ್ಯೆ:ವಿಕ್ಷೇಪಾ1/01/502/2017–18 ದಿನಾಂಕ:22.09.2021ರಲ್ಲಿ ದಿನಾಂಕ:09.03.2021ರಂದು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ನಡೆದ ವಿದ್ಯಾರ್ಥಿನಿಲಯಗಳ ಆಡಳಿತ ನಿರ್ವಹಣೆ ಹಾಗೂ ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿ ಸಲಹಾ ಸಮಿತಿ ಸಭೆಯ ತೀರ್ಮಾನದಂತೆ 2017–18ನೇ ಸಾಲಿನ ಆರ್ಥಿಕ ವರ್ಷದ ಮಾರ್ಚ್2021 ರವರೆಗೆ ವಿದ್ಯಾರ್ಥಿನಿಲಯಗಳಲ್ಲಿ ಪ್ರವೇಶಾತಿ ಪಡೆದಿದ್ದ ಎಲ್ಲಾ ಸಂಶೋಧಕರುಗಳ ಕೊಠಡಿ ಬಾಡಿಗೆ ಭತ್ಯೆಯನ್ನು ಪಾವತಿಸುವ ಸಂಬಂಧ ಇದೊಂದು ಬಾರಿಗೆ ಅನ್ವಯವಾಗುವಂತೆ ವಿನಾಯಿತಿ ನೀಡಲಾಗಿರುವ ಹಿನ್ನಲೆಯಲ್ಲಿ ಕಂಡಿಕೆಯಲ್ಲಿ ವಸೂಲಾತಿಗೆ ಸೂಚಿಸಿರುವ ಮೊತ್ತ ರೂ.1567360/–ಗಳನ್ನು ತೀರುವಳಿಗೊಳಿಸುವಂತೆ ಕೋರಲಾಗಿದೆ. |
| **10.5.ಮಹಿಳಾ ಸಂಶೋಧನಾ ವಿದ್ಯಾರ್ಥಿಗಳ ಶಿಷ್ಯ ವೇತನದಿಂದ ಮನೆ ಬಾಡಿಗೆ ಭತ್ಯೆ ಕಟಾಯಿಸದಿರುವುದು :**<br>ಸ್ನಾತಕೋತ್ತರ ಮಹಿಳಾ ವಿದ್ಯಾರ್ಥಿನಿಲಯ ಬ್ಲಾಕ್–1ಕ್ಕೆ 2018–19ನೇ ಸಾಲಿನಲ್ಲಿ 08 ಜನ ಸಂಶೋಧನಾ ವಿದ್ಯಾರ್ಥಿಗಳು ಪ್ರವೇಶ ಪಡೆದಿರುತ್ತಾರೆ. ವಿಶ್ವವಿದ್ಯಾನಿಲಯದ ಆದೇಶ ಸಂಖ್ಯೆ:ವಿಕ್ಷೇಪಾ/1/01/329/2017–18, ದಿನಾಂಕ:03.06.2019ರಲ್ಲಿನ ಆದೇಶದಂತೆ ಶಿಷ್ಯವೇತನ ಪಡೆಯುತ್ತಿರುವ ವಿದ್ಯಾರ್ಥಿನಿಲಯದಲ್ಲಿನ ಸಂಶೋಧಕರಿಗೆ ಮಾಹೆಯಾನ ರೂ.1500/–ರಂತೆ ಮನೆ ಬಾಡಿಗೆ ಭತ್ಯೆಯನ್ನು ದಿನಾಂಕ:01.04.2018 ರಿಂದ ಪೂರ್ವಾನ್ವಯವಾಗುವಂತೆ ಕಟಾಯಿಸಬೇಕಾಗಿದ್ದರೂ, ಸಂಶೋಧನಾ ವಿದ್ಯಾರ್ಥಿಗಳಿಂದ ಮನೆ ಬಾಡಿಗೆ ಭತ್ಯೆಯನ್ನು ಕಟಾಯಿಸಿರುವುದಿಲ್ಲ. ವಿವರಗಳನ್ನು **ಅನುಬಂಧ–55ರಲ್ಲಿ** ನೀಡಲಾಗಿದೆ. ಆದ್ದರಿಂದಸಂಶೋಧನಾ ವಿದ್ಯಾರ್ಥಿಗಳಿಂದ ವಸೂಲಿಯಾಗದಿರುವ ಮನೆ ಬಾಡಿಗೆ ಭತ್ಯೆ **ಮೊತ್ತರೂ.58,500/–ಗಳನ್ನು ವಸೂಲಿಸಿ** ವಿಶ್ವವಿದ್ಯಾನಿಲಯದ ಖಾತೆಗೆ ಜಮೆ ಮಾಡಲು ಸೂಚಿಸಿದೆ. | 2018–19ನೇ ಸಾಲಿನಲ್ಲಿ ಸ್ನಾತಕೋತ್ತರ ಮಹಿಳಾ ವಿದ್ಯಾರ್ಥಿನಿಲಯ ಬ್ಲಾಕ್–1ರಲ್ಲಿ 08 ಜನ ಸಂಶೋಧನಾ ವಿದ್ಯಾರ್ಥಿಗಳು ವಾಸ್ತವ್ಯ ಹೂಡಿದ್ದು ವಿಶ್ವವಿದ್ಯಾನಿಲಯದ ಆದೇಶ ಸಂಖ್ಯೆ:ವಿಕ್ಷೇಪಾ1/01/329/2017–18 ದಿನಾಂಕ:03.06.2019ರಲ್ಲಿನ ಆದೇಶದಂತೆ ವಿದ್ಯಾರ್ಥಿನಿಲಯದಲ್ಲಿನ ಸಂಶೋಧಕರಿಗೆ ಮಾಹೆಯಾನ ರೂ.1500/–ರಂತೆ ಅನುಬಂಧ–55ರಲ್ಲಿ ವಿವರಿಸಿರುವಂತೆ ರೂ.58500/–ಗಳನ್ನು ಸಂಶೋಧನಾ ವಿದ್ಯಾರ್ಥಿಗಳಿಂದ ವಸೂಲಿಸಿ ವಿಶ್ವವಿದ್ಯಾನಿಲಯದ ಖಾತೆಗೆ ಜಮಾ ಮಾಡುವಂತೆ ಕಂಡಿಕೆಯಲ್ಲಿ ಪ್ರಸ್ತಾಪಿಸಲಾಗಿರುತ್ತದೆ.<br><br>ವಿಶ್ವವಿದ್ಯಾನಿಲಯದ ಆದೇಶ ಸಂಖ್ಯೆ:ವಿಪ್ಷೆಪಾ1/01/1062/2017–18 ದಿನಾಂಕ:07.11.2019ರಲ್ಲಿ ಮಾನ್ಯ ಕುಲಪತಿಗಳ ಅನುಮೋದನೆಯ ಮೇರೆಗೆ ಹಾಗೂ ಮುಂಬರುವ ವಿದ್ಯಾರ್ಥಿನಿಲಯಗಲ ಆಡಳಿತ |

| | |
|---|---|
| | ನಿರ್ವಹಣೆ ಹಾಗೂ ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿ ಸಲಹಾ ಸಮಿತಿ ಸಭೆ ಮತ್ತು ಸಿಂಡಿಕೇಟ್ ಸಭೆಯ ನಿರ್ಣಯವನ್ನು ಕಾಯ್ದಿರಿಸಿ ವಿದ್ಯಾರ್ಥಿನಿಲಯಗಳಲ್ಲಿ ಹಾಲಿ ವಾಸ್ತವ್ಯವಿರುವ ಸಂಶೋಧನಾರ್ಥಿಗಳಿಗೆ ಅನ್ವಯಿಸುವಂತೆ ಮನೆ ಬಾಡಿಗೆ ಭತ್ಯೆ ಸಂಬಂಧ ಈ ಹಿಂದೆ ವಿಶ್ವವಿದ್ಯಾನಿಲಯದ ವತಿಯಿಂದ ಹೊರಡಿಸಿದ ಎಲ್ಲಾ ಆದೇಶಗಳನ್ನು ಈ ತಕ್ಷಣದಿಂದ ಜಾರಿಗೆ ಬಂದಂತೆ ರದ್ದು ಪಡಿಸಿ ಕೆಲವು ನಿಬಂಧನೆಗಳನ್ನೊಳಗೊಂಡಂತೆ ಹೆಚ್,ಆರ್,ಎ ಖಾತೆಗೆಗೆ ವಿನಾಯಿತಿ ನೀಡಲು ಅನುಮತಿಸಿದ್ದು ಹಾಗೂ ನಿಬಂಧನೆ–01ರಲ್ಲಿ ವಿಶ್ವವಿದ್ಯಾನಿಯದ ವತಿಯಿಂದ ಮುಂದಿನ ಆದೇಶವನ್ನು ಹೊರಡಿಸುವವರೆಗೂ ಹೆಚ್,ಆರ್,ಎ ಗೆ ಸಂಬಂಧಿಸಿದಂತೆ ಯಾವುದೇ ಮೊತ್ತವನ್ನು ಪಡೆಯದಿರಲು ಆದೇಶಿಸಲಾಗಿದೆ.<br><br>ಮುಂದುವರಿದು ವಿಶ್ವವಿದ್ಯಾನಿಲಯದ ಆದೇಶ ಸಂಖ್ಯೆ ವಿಕ್ಷೇಪಾ1/01/5022017–18 ದಿನಾಂಕ:22.09.2021ರಲ್ಲಿ ದಿನಾಂಕ:09.03.2021 ರಂದು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿನ ನಡೆದ ಸಭೆಯ ತೀರ್ಮಾನದಂತೆ 2017–18ನೇ ಆರ್ಥಿಕ ವರ್ಷದಿಂದ ಮಾರ್ಚ್ 2021 ರವರೆಗೆ ವಿದ್ಯಾರ್ಥಿನಿಲಯಗಳಲ್ಲಿ ಪ್ರವೇಶಾತಿ ಪಡೆದಿದ್ದ ಎಲ್ಲಾ ಸಂಶೋಧಕರುಗಳು ಕೊಠಡಿ ಬಾಡಿಗೆ ಭತೆಯನ್ನು ಪಾವತಿಸುವ ಸಂಬಂಧ ಇದೊಂದು ಬಾರಿಗೆ ಅವ್ಯಯವಾಗುವಂತೆ ವಿನಾಯಿತಿ ನೀಡಲಾಗಿರುತ್ತದೆ ಆದಾಗ್ಯೂ ವಿಶ್ವವಿದ್ಯಾನಿಲಯದ ಆದೇಶ ಸಂಖ್ಯೆ:ವಿಕ್ಷೇಪಾ1/01/1062/2017–18 ದಿನಾಂಕ:07.11.2019ರ ನಿಬಂಧನೆ (4) ರ ಆದೇಶದಂತೆ ಅನುಬಂಧ–55ರ ಕ್ರಮ ಸಂಖ್ಯೆ 01 02 ಹಾಗೂ 07 ರ ಸಂಶೋಧ ವಿದ್ಯಾರ್ಥಿಗಳಿಂದ ಒಟ್ಟು ರೂ.33000/–ಗಳನ್ನು ವಸೂಲಿಸಿ ವಿಶ್ವವಿದ್ಯಾನಿಲಯದ ಖಾತೆಗೆ ಜಮಾ ಮಾಡಲಾಗಿರುತ್ತದೆ. ಉಳಿಕೆ ಮೊತ್ತ ರೂ.25500/–ಗಳ ವಿಶ್ವವಿದ್ಯಾನಿಲಯದ ಆದೇಶ ದಿನಾಂಕ:22.09.2021ರ ಪ್ರಕಾರ ವಿನಾಯಿತಿ ನೀಡಿರುವ ಹಿನ್ನೆಲೆಯಲ್ಲಿ ಕಂಡಿಕೆಯಲ್ಲಿ ವಸೂಲಾತಿಗೆ ಸೂಚಿಸಿರುವ ಮೊತ್ತ ರೂ.58500/–ಗಳನ್ನು ತೀರುವಳಿಗೊಳಿಸುವಂತೆ ಕೋರಿದೆ. |
| **10.6. 2013–14 ರಿಂದ 2018–19 ನೇ ಸಾಲಿನ ವರೆಗೆ ಸರ್ಕಾರದ ವತಿಯಿಂದ ಬರಬೇಕಾದ ವಿದ್ಯಾರ್ಥಿ ವೇತನ ಮತ್ತು ಅಧಿಕ ಭೋಜನ ವೆಚ್ಚದ ಮೊತ್ತವನ್ನು ಹಿಂಭರ್ತಿ ಮಾಡಿಕೊಳ್ಳದಿರುವುದು :**<br><br>ಮೈಸೂರು ವಿಶ್ವವಿದ್ಯಾನಿಲಯದ 18 ವಿದ್ಯಾರ್ಥಿನಿಲಯಗಳಲ್ಲಿನ ವಿದ್ಯಾರ್ಥಿಗಳಿಗೆ 2018–19ನೇ ಸಾಲಿನಲ್ಲಿ ಸ್ವೀಕೃತಗೊಂಡಿರುವ ವಿದ್ಯಾರ್ಥಿ ವೇತನ ಮತ್ತು ಅಧಿಕ ಭೋಜನ ವೆಚ್ಚ ಹಾಗೂ ಸ್ವೀಕೃತಗೊಳ್ಳಬೇಕಾದ ವಿದ್ಯಾರ್ಥಿ ವೇತನ ಹಾಗೂ ಅಧಿಕ ಭೋಜನ ವೆಚ್ಚದ ವಿವರಗಳ ಕಡತಗಳನ್ನು ಪರಿಶೀಲಿಸಿದಾಗ 2018–19ನೇ ಸಾಲಿನ ಬೇಡಿಕೆ (ಜುಲೈ–2018 ರಿಂದ ಮೇ–2019) ಮೊತ್ತ ರೂ.4,23,38,702/–ಗಳಿದ್ದು, ಸದರಿ ಸಾಲಿನಲ್ಲಿ ಸರ್ಕಾರದಿಂದ ಸ್ವೀಕೃತವಾದ ಮೊತ್ತ ರೂ.44,06,040/–ಗಳಾಗಿರುತ್ತವೆ. ಹಿಂದಿನ ಸಾಲುಗಳ ಮರು ಭರ್ತಿಯಾಗದಿರುವ ಬಾಕಿ ಮೊತ್ತ ರೂ.3,23,38,934/–ಗಳಿದ್ದು, 2018–19ನೇ ಸಾಲಿನಲ್ಲಿ ಸರ್ಕಾರದಿಂದ ಬಿಡುಗಡೆಯಾಗಿರುವ ಮೊತ್ತ ಯಾವ ಸಾಲಿನ ಬಾಕಿಗೆ | ಕಂಡಿಕೆಯಲ್ಲಿ ಪ್ರಸ್ತಾಪಿಸಿರುವ 2013–14 ರಿಂದ 2017–18ನೇ ಸಾಲಿನವರೆಗಿನ ವಿದ್ಯಾರ್ಥಿವೇತನ ಮತ್ತು ಅಧಿಕ ಭೋಜನ ವೆಚ್ಚದ ಪ್ರಾರಂಭಿಕ ಶಿಲ್ಕಿನ ಒಟ್ಟು ಮೊತ್ತ **ರೂ.3,23,38,934/–**ಗಳಲ್ಲಿ 2019–20ನೇ ಸಾಲಿನಲ್ಲಿ **ಒಟ್ಟು ರೂ.1,22,21,846/–ಗಳು ಮರು** ಭರಿಕೆಯಾಗಿದ್ದು ರೂ.2,01,17,088/–ಗಳು ಬಾಕಿ ಉಳಿದಿದ್ದು 2020–21ನೇ ಸಾಲಿನಲ್ಲಿ **ರೂ.12,00,651/–ಗಳು** ಮರುಭರಿಕೆಯಾಗಿದ್ದು ರೂ.1,89,16,437/–ಬಾಕಿ ಉಳಿದಿದ್ದು 2021–22ನೇ ಸಾಲಿನಲ್ಲಿ **ಒಟ್ಟು ರೂ.15,12,880/–ಗಳ** ವಿದ್ಯಾರ್ಥಿ ವೇತನ ಮತ್ತು ಆಧಿಕ ಭೋಜನದ ವೆಚ್ಚ ಮರು ಭರಿಕೆಯಾಗಿದ್ದು **2022ರ ಮಾರ್ಚ್ ಅಂತ್ಯಕ್ಕೆ ರೂ.17,403,557/–ಗಳು** ಬಾಕಿ ಉಳಿದಿರುತ್ತದೆ. ಸದರಿ ಮೊತ್ತವನ್ನು ಮುಂಬರುವ ದಿನಗಳಲ್ಲಿ |

| | |
|---|---|
| ಸೇರಿದ್ದು, ಎಂಬ ವಿವರಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲ. | ಮರುಭರಿಕೆ ಮಾಡಿಕೊಳ್ಳಲು ಅಗತ್ಯ ಕ್ರಮವಹಿಸಲಾಗುವುದು. |

| | |
|---|---|
| ಪ್ರಾರಂಭಿಕ ಶಿಲ್ಕು (2013–14 ರಿಂದ 2017–18 ರವರೆಗಿನ ವಿದ್ಯಾರ್ಥಿ ವೇತನ ಮತ್ತು ಅಧಿಕ ಭೋಜನ ವೆಚ್ಚದ ಒಟ್ಟು ಮೊತ್ತ | 3,23,38,934 |
| ಬೇಡಿಕೆ (ದಿನಾಂಕ:01.07.2018 ರಿಂದ ದಿನಾಂಕ:31.05.2019 ರವರೆಗೆ) | 4,23,38,702 |
| **ಒಟ್ಟು** | **7,46,77,636** |
| ಹೊಂದಾಣಿಕೆ (ದಿನಾಂಕ:01.07.2018 ರಿಂದ ದಿನಾಂಕ:31.05.2019 ರವರೆಗೆ) | 44,06,040 |
| ಅಂತಿಮ ಶಿಲ್ಕು (2013–14 ರಿಂದ 2018–19 ನೇ ಸಾಲಿನ ಅಂತ್ಯದವರೆಗೆ ಬರಬೇಕಾದ ವಿದ್ಯಾರ್ಥಿ ವೇತನ ಮತ್ತು ಅಧಿಕ ಭೋಜನ ವೆಚ್ಚದ ಒಟ್ಟು ಮೊತ್ತ | **7,02,71,596** |

ಹೀಗಾಗಿ 2018–19ನೇ ಸಾಲಿನ ಬೇಡಿಕೆಯ ಮೊತ್ತ **ರೂ.4,23,38,702/–ಗಳನ್ನು** ಸರ್ಕಾರದಿಂದ ಹಿಂಭರಿಕೆ ಮಾಡಿಕೊಳ್ಳಲು ಹಾಗೂ 2013–14ನೇ ಶೈಕ್ಷಣಿಕ ವರ್ಷದಿಂದ 2017–18ನೇ ವರ್ಷದವರೆಗಿನ ಬಾಕಿ ಮೊತ್ತ ರೂ.2,79,32,894/– (ಸ್ವೀಕೃತವಾದ ರೂ.44,06,934/–)ಗಳನ್ನು ಕೂಡ ಹಿಂಭರ್ತಿ ಮಾಡಿಸಿಕೊಳ್ಳಲು ಕ್ರಮ ವಹಿಸಲು ಸೂಚಿಸಿದೆ.

ಮುಂದುವರಿದು 2018–19ನೇ ಸಾಲಿನ ಬೇಡಿಕೆಯ ಒಟ್ಟು ಮೊತ್ತ **ರೂ.4,23,38,702/–ಗಳು** ದಿನಾಂಕ:01.07.2018 ರಿಂದ 31.03.2019ರವರೆಗೆ ಒಟ್ಟು ಮೊತ್ತ **ರೂ.44,06,040/–ಗಳು** ವಿದ್ಯಾರ್ಥಿವೇತನ ಮತ್ತು ಅಧಿಕ ಭೋಜನದ ವೆಚ್ಚ ಮರುಭರಿಕೆಯಾಗಿದ್ದು ಮಾರ್ಚ್ 2019ರ ಅಂತ್ಯಕ್ಕೆ ವಿದ್ಯಾರ್ಥಿವೇತನ ಮತ್ತು ಅಧಿಕ ಭೋಜನ ವೆಚ್ಚದ ಒಟ್ಟು ಮೊತ್ತ **ರೂ.3,79,32,662/–ಗಳು** ಬಾಕಿ ಇದ್ದು 2019–20ರಲ್ಲಿ ವಿದ್ಯಾರ್ಥಿವೇತನ ಮತ್ತು ಅಧಿಕ ಭೋಜನ ವೆಚ್ಚದ ಒಟ್ಟು ಮೊತ್ತ **ರೂ.2,56,50,820/–ಗಳು** ಮರುಭರಿಕೆಯಾಗಿದ್ದು ಉಳಿಕೆ ಮೊತ್ತ ರೂ.1,22,81,842/–ಗಳು ಬಾಕಿ ಉಳಿದಿರುತ್ತದೆ. 2020–21ನೇ ಸಾಲಿನಲ್ಲಿ ವಿದ್ಯಾರ್ಥಿವೇತನ ಮತ್ತು ಅಧಿಕ ಭೋಜನದ ವೆಚ್ಚದ ಒಟ್ಟು ಮೊತ್ತ **ರೂ.64,11,539/–ಗಳು** ಮರುಭರಿಕೆಯಾಗಿದ್ದು 2021ರ ಮಾರ್ಚ್ **ಅಂತ್ಯಕ್ಕೆ ರೂ.58,70,303/–ಗಳು** ಬಾಕಿ ಮರುಭರಿಕೆಯಾಗಬೇಕಾಗಿರುತ್ತದೆ.

ಇದರಿಂದಾಗಿ 2013–14 ರಿಂದ 2017–18ನೇ ಸಾಲಿನವರೆಗೆ ಒಟ್ಟು **ರೂ.1,74,03,557/–ಗಳು** ಮತ್ತು 2018–19ನೇ ಸಾಲಿನಲ್ಲಿ ಒಟ್ಟು **ರೂ.58,70,303/–ಗಳು** ಸೇರಿದಂತೆ ಒಟ್ಟು **ರೂ.2,32,72,860/–ಗಳು** ಮರುಭರಿಕೆಯಾಗಬೇಕಾಗಿರುತ್ತದೆ. ಸದರಿ ಮೊತ್ತವನ್ನು ಮುಂಬರುವ ದಿನಗಳಲ್ಲಿ ಲೆಕ್ಕ ಹೊಂದಾಣಿಕೆ ಮಾಡಿಕೊಳ್ಳಲು ಕ್ರಮ ಕೈಗೊಳ್ಳಲಾಗುವುದು ಹಾಗೂ ಕಂಡಿಕೆಯಲ್ಲಿ ಪ್ರಸ್ತಾಪಿಸಿರುವ 2018–19ನೇ ಸಾಲಿನಲ್ಲಿ ಬಿಡುಗಡೆಯಾಗಿರುವ ಮೊತ್ತ **ರೂ.44,06,040/–ಗಳು** 2018–19ನೇ ಸಾಲಿಗೆ ಸಂಬಂಧಿಸಿರುವುದಾಗಿ ತಮ್ಮಲ್ಲಿ ನಿವೇದಿಸಿದೆ.

**10.7. ಅಡಿಗೆ ಅನಿಲ ಸಿಲಿಂಡರ್‌ಗಳ ಖರೀದಿ ಬಿಲ್ಲಿನ ಮೊತ್ತಕ್ಕಿಂತ ಹೆಚ್ಚುವರಿ ಪಾವತಿಸಿರುವುದು :**

2018–19ನೇ ಸಾಲಿನಲ್ಲಿ (ಆಗಸ್ಟ್–18 ರಿಂದ ಮೇ–19) ರೇನ್ ಏಜೆನ್ಸಿ ರವರಿಂದ ಸ್ನಾತಕೋತ್ತರ ವಿದ್ಯಾರ್ಥಿನಿಲಯಕ್ಕೆ (ಪುರುಷ ಬ್ಲಾಕ್–1) ಸಬ್ಸಿಡಿ ಸಿಲಿಂಡರ್‌ಗಳನ್ನು ಖರೀದಿ ಮಾಡಲಾಗಿರುತ್ತದೆ. ಖರೀದಿಸಿದ ಬಿಲ್ಲುಗಳನ್ನು ಪರಿಶೀಲಿಸಲಾಗಿ ಬಿಲ್ಲಿನಲ್ಲಿ 1 ಸಿಲಿಂಡರ್‌ಗೆ ರೂ.623/–ಗಳಂತೆ ಸಿಲಿಂಡರ್ ಸರಬರಾಜು ಮಾಡಿ ಬಿಲ್ಲನ್ನು ಸಲ್ಲಿಸಿರುತ್ತಾರೆ. ಆದರೆ ವಿದ್ಯಾರ್ಥಿನಿಲಯದಲ್ಲಿ ಸಿಲಿಂಡರ್‌ಗೆ ರೂ.623/–ಗಳ ಬದಲಿಗೆ ರೂ.654/–ಗಳಂತೆ ಪಾವತಿ ಮಾಡಿರುವುದು ಕಂಡು ಬಂದಿದ್ದು, ವಿವರ ಈ ಕೆಳಕಂಡಂತಿದೆ.

| ಮಾಹೆ | ಸಿಲಿಂಡರ್ ಸಂಖ್ಯೆ | ಸಿಲಿಂಡರ್ 1 ಕ್ಕೆ ದರ | ಒಟ್ಟು ಮೊತ್ತ | ಷರಾ |
|---|---|---|---|---|
| ಆಗಸ್ಟ್–18 ರಿಂದ ಮೇ–19 | 697 | 654 | 4,55,838 | ಪಾವತಿ ಮಾಡಲಾದ |

2018–19ನೇ ಸಾಲಿನಲ್ಲಿ (ಆಗಸ್ಟ್–18 ರಿಂದ ಮೇ–19) ರೇನ್ ಏಜೆನ್ಸಿ ರವರಿಂದ ಸ್ನಾತಕೋತ್ತರ ವಿದ್ಯಾರ್ಥಿನಿಲಯಕ್ಕೆ (ಪುರುಷ ಬ್ಲಾಕ್–1) ಸಬ್ಸಿಡಿ ಸಿಲಿಂಡರ್‌ಗಳನ್ನು ಖರೀದಿ ಮಾಡಲಾಗಿರುತ್ತದೆ. ಖರೀದಿಸಿದ ಬಿಲ್ಲುಗಳನ್ನು ಪರಿಶೀಲಿಸಲಾಗಿ ಬಿಲ್ಲಿನಲ್ಲಿ 1 ಸಿಲಿಂಡರ್‌ಗೆ ರೂ.623/–ಗಳಂತೆ ಸಿಲಿಂಡರ್ ಸರಬರಾಜು ಮಾಡಿ ಬಿಲ್ಲನ್ನು ಸಲ್ಲಿಸಿರುತ್ತಾರೆ. ಆದರೆ ವಿದ್ಯಾರ್ಥಿನಿಲಯದಲ್ಲಿ ಪ್ರತಿ ಸಿಲಿಂಡರ್‌ಗೆ ರೂ.623/–ಗಳ ಬದಲಿಗೆ ರೂ.654/–ಗಳಂತೆ ಪಾವತಿ ಮಾಡಿರುವುದಾಗಿ ಕಂಡಿಕೆಯಲ್ಲಿ ಪ್ರಸ್ತಾಪಿಸಿ ಹೆಚ್ಚುವರಿಯಾಗಿ ಪಾವತಿಸಿರುವ ಮೊತ್ತ ರೂ.21782/–ಗಳನ್ನು ವಸೂಲಾತಿಗೆ ಸೂಚಿಸಲಾಗಿರುತ್ತದೆ.

2018ರ ಏಪ್ರಿಲ್ ಮಾಹೆಯಲ್ಲಿ ರೇನ್ ಏಜೆನ್ಸಿರವರು ವಿದ್ಯಾರ್ಥಿನಿಲಯಕ್ಕೆ ಪ್ರತಿ ಸಿಲಿಂಡರ್‌ಗೆ ರೂ.622.85 ಪೈಸೆಗಳು + ರೂ.31.14 ಪೈಸೆ ಜಿ.ಎಸ್.ಟಿ ಸೇರಿದಂತೆ ಒಟ್ಟು ಮೊತ್ತ ರೂ.653.99 ಪೈಸೆಗಳಂತೆ ಬಿಲ್ಲಿನಲ್ಲಿ ಕ್ಲೈಮ್ ಮಾಡಿದ್ದು ಅದರಂತೆ ವಿದ್ಯಾರ್ಥಿನಿಲಯ ಪ್ರತಿ ಸಿಲಿಂಡರ್‌ಗೆ ಜಿ.ಎಸ್.ಟಿ

| | | | | |
|---|---|---|---|---|
| | | | | ಮೊತ್ತ |
| ಆಗಸ್ಟ್–18 ರಿಂದ ಮೇ–19 | 697 | 622.75 | 4,34,056 | ಪಾವತಿಸಬೇಕಾದ ಮೊತ್ತ |
| **ಹೆಚ್ಚುವರಿ ಪಾವತಿ (ವ್ಯತ್ಯಾಸ)** | | | **21,782** | |

ಆದ್ದರಿಂದ ಒಟ್ಟು 697 ಸಿಲಿಂಡರ್‌ಗಳಿಗೆ ರೂ.622.75 ರಂತೆ ಒಟ್ಟು ರೂ.4,34,056/–ಗಳನ್ನು ಪಾವತಿ ಮಾಡಬೇಕಾಗಿದ್ದು, ಈಗಾಗಲೇ ರೂ.4,55,838/–ಗಳನ್ನು ಪಾವತಿ ಮಾಡಿರುವುದು ಲೆಕ್ಕತಪಾಸಣೆಯಲ್ಲಿ ಕಂಡು ಬಂದಿದ್ದು, ಹೆಚ್ಚುವರಿ ಪಾವತಿ ರೂ.21,782/–ಗಳನ್ನು ಪಾವತಿ ಮಾಡಿರುವ ಬಗ್ಗೆ ವಿಚಾರಣೆ ಸಂಖ್ಯೆ:04/2020–21 ದಿನಾಂಕ:07.07.2020ನ್ನು ನೀಡಲಾಗಿದ್ದು, ಯಾವುದೇ ವಿವರಣೆಯನ್ನು ನೀಡಿರುವುದಿಲ್ಲ. ಆದ್ದರಿಂದ **ರೂ.21,782/**–ಗಳನ್ನು ಸಂಬಂಧಪಟ್ಟವರಿಂದ ವಸೂಲಿಸಿ ವಿಶ್ವವಿದ್ಯಾನಿಲಯ ನಿಧಿಗೆ ಜಮಾ ಮಾಡುವಂತೆ ಸೂಚಿಸಿದೆ.

ಸೇರಿದಂತೆ ಒಟ್ಟು ರೂ.653.99 ಪೈಸೆಗಳಂತೆ ಪಾವತಿ ಮಾಡಿರುವುದಾಗಿ ನಿವೇದಿಸಿದೆ.

ಮುಂದುವರಿದು ಕಂಡಿಕೆಯಲ್ಲಿ ಪ್ರಸ್ತಾಪಿಸಿರುವ 2018ರ ಆಗಸ್ಟ್ ಮಾಹೆಯಿಂದ 2019ರ ಮೇ ಮಾಹೆಯವರೆಗೆ ಸದರಿ ವಿದ್ಯಾರ್ಥಿನಿಲಯಕ್ಕೆ ಒಟ್ಟು 552 ಸಿಲಿಂಡರ್‌ಗಳನ್ನು ಮಾತ್ರ ಖರೀದಿಸಿದ್ದು ಸದರಿ ಬಿಲ್ಲುಗಳಲ್ಲಿ ಪ್ರತಿ ತಿಂಗಳು ಸಿಲಿಂಡರ್ ಬೆಲೆಯಲ್ಲಿ ವ್ಯತ್ಯಾಸವಾಗುತ್ತಿದ್ದು ಅದಕ್ಕೆನುಗುಣವಾಗಿ ಜಿ.ಎಸ್.ಟಿ ಸೇರಿದಂತೆ ಪ್ರತಿ ತಿಂಗಳು ಸಿಲಿಂಡರ್ ಖರೀದಿ ದರವು ಸಹ ಹೆಚ್ಚು/ಕಡಿಮೆಯಾಗಿದ್ದು ಮಾರುಕಟ್ಟೆಯ ದರದಲ್ಲಿಯೇ ಸಿಲಿಂಡರ್ ಖರೀದಿಸಿರುವುದಾಗಿ ನಿವೇದಿಸಿದೆ.

ಉದಾಹರಣೆಗೆ 2018 ಆಗಸ್ಟ್ ಮಾಹೆಯಲ್ಲಿ ಸಿಲಿಂಡರ್ ದರ ರೂ.757.62 ಪೈಸೆ+ರೂ.37.88 ಪೈಸೆ ಜಿ.ಎಸ್.ಟಿ ಸೇರಿದಂತೆ ಒಟ್ಟು ರೂ.795.50 ಪೈಸೆಗಳು 2019ರ ಮಾರ್ಚ್ ಮಾಹೆಯಲ್ಲಿ ರೂ.670+ರೂ.33.50ಪೈಸೆ ಜಿ.ಎಸ್.ಟಿ ಸೇರಿದಂತೆ ಒಟ್ಟು ರೂ.703.50 ಪೈಸೆಗಳು 2019ರ ಏಪ್ರಿಲ್ ಮಾಹೆಯಲ್ಲಿ ರೂ.674.77+ರೂ.33.74ಪೈಸೆ ಜಿ.ಎಸ್.ಟಿ ಸೇರಿದಂತೆ ಒಟ್ಟು ರೂ.708.51ಪೈಸೆ 2019ರ ಮೇ ಮಾಹೆಯಲ್ಲಿ ರೂ.680.48ಪೈಸೆ+ರೂ.34.02ಪೈಸೆ ಜಿ.ಎಸ್.ಟಿ ಸೇರಿದಂತೆ ಒಟ್ಟು ರೂ.714.50ಪೈಸೆಗಳಂತೆ ಆಯಾಯ ತಿಂಗಳು ಗಳಲ್ಲಿ ಮಾರುಕಟ್ಟೆ ದರದಲ್ಲಿ ಸಿಲಿಂಡರ್‌ಗಳನ್ನು ಖರೀದಿಸಲಾಗಿರುತ್ತದೆ.

ಮೇಲಿನ ಸದರಿ ಬಿಲ್ಲುಗಳ ಪ್ರತಿಯನ್ನು ಲೆಕ್ಕಪರಿಶೋಧಕರು ಪರಿಶೀಲಿಸಿರುವುದಾಗಿ ತಮ್ಮಲ್ಲಿ ನಿವೇದಿಸುತ್ತಾ 2018ರ ಆಗಸ್ಟ್ ರಿಂದ 2019ರ ಮೇ ಮಾಹೆಯ ಖರೀದಿಯ ವಿವರ ಮತ್ತು ಘೋಷ್ವರೆ ಹಾಗೂ ಖರೀದಿ ಬಿಲ್‌ಗಳ ಪ್ರತಿ ಲಗತ್ತಿಸಿ ಸಲ್ಲಿಸುತ್ತಾ ಸರಬರಾಜುದಾರರು ಬಿಲ್ಲಿನಲ್ಲಿ ಕೋರಿರುವ ಮಾರುಕಟ್ಟೆ ದರದಲ್ಲಿಯೇ ಪಾವತಿ ಮಾಡಿರುವುದಾಗಿ ಹಾಗೂ ಹೆಚ್ಚುವರಿ ದರ ಪಾವತಿಸಿರುವುದಿಲ್ಲವಾಗಿ ನಿವೇದಿಸುತ್ತಾ ಕಂಡಿಕೆಯಲ್ಲಿ ವಸೂಲಾತಿಗೆ ಸೂಚಿಸಿರುವ ಮೊತ್ತ ರೂ.21782/–ಗಳನ್ನು ತೀರುವಳಿಗೊಳಿಸುವಂತೆ ಕೋರಿದೆ.

## ಅಧ್ಯಾಯ–11

## ಇಂಜಿನಿಯರಿಂಗ್ ವಿಭಾಗ

### 11.1. ಟೆಂಡರ್ ಅವಧಿಯು ಮುಗಿದಿದ್ದರೂ ಭದ್ರತಾ ಸೇವೆಯ ಹೊರ ಗುತ್ತಿಗೆಯನ್ನು ಮುಂದುವರೆಸಿರುವುದು ಹಾಗೂ ಭದ್ರತಾ ಠೇವಣಿ ಕಡಿಮೆ ಪಡೆದಿರುವುದು :

2018–19ನೇ ಸಾಲಿನಲ್ಲಿ ಮೆ.ಶಾರ್ಪ್–ವಾಚ್ ಇನ್ವೆಸ್ಟಿಗೇಷನ್ ಸೆಕ್ಯುರಿಟಿ ಸರ್ವಿಸಸ್, ಮೈಸೂರುರವರಿಂದ ಹೊರಗುತ್ತಿಗೆ ಮೂಲಕ ಭದ್ರತಾ ಸಿಬ್ಬಂದಿಯ ಸೇವೆಯನ್ನು ಸೆಪ್ಟೆಂಬರ್–2017 ರಿಂದ ಆಗಸ್ಟ್–2018ರವರೆಗೆ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಪಡೆಯಲಾಗಿರುತ್ತದೆ. ಟೆಂಡರ್ ನಕರಾರು ಅವಧಿಯು ಮುಕ್ತಾಯವಾಗಿದ್ದರೂ ಸಹ ಸೆಪ್ಟೆಂಬರ್–2018 ರಿಂದ ಮಾರ್ಚ್–2019 ರವರೆಗೆ ಟೆಂಡರ್

ಕಂಡಿಕೆಯಲ್ಲಿ ಮೆ.ಶಾರ್ಪ್–ವಾಚ್ ಇನ್ವೆಸ್ಟಿಗೇಷನ್ ಸೆಕ್ಯುರಿಟಿ ಸರ್ವಿಸಸ್, ಮೈಸೂರುರವರಿಂದ ಹೊರಗುತ್ತಿಗೆ ಮೂಲಕ ಭದ್ರತಾ ಸಿಬ್ಬಂದಿಯ ಸೇವೆಯು 2018ರ ಆಗಸ್ಟ್ ಮಾಹೆಯಲ್ಲಿ ಮುಕ್ತಾಯವಾಗಿದ್ದು 2018ರ ಸೆಪ್ಟೆಂಬರ್ ಮಾಹೆಯಿಂದ 2019ರ ಮಾರ್ಚ್ ಮಾಹೆಯವರೆಗೆ ಮುಂದುವರಿಸಿರುವ ಬಗ್ಗೆ ಪ್ರಸ್ತಾಪಿಸಲಾಗಿರುತ್ತದೆ.

| | |
|---|---|
| ಪ್ರಕ್ರಿಯೆ ಕೈಗೊಳ್ಳದೆಯೇ ನಿಯಮವನ್ನು ಉಲ್ಲಂಘಿಸಿ ಭದ್ರತಾ ಸಿಬ್ಬಂದಿಯ ಸೇವೆಯನ್ನು ಮುಂದುವರೆಸಿರುವುದಕ್ಕೆ ಸೂಕ್ತ ವಿವರಣೆಯನ್ನು ನೀಡುವಂತೆ ಲೆಕ್ಕಪರಿಶೋಧನಾ ವಿಚಾರಣೆ ಪತ್ರ ಸಂಖ್ಯೆ:25/17.07.2020ರಲ್ಲಿ ಕೋರಲಾಗಿತ್ತು. ಇದಕ್ಕೆ ವಿಶ್ವವಿದ್ಯಾನಿಲಯವು ಸಮರ್ಪಕ ಉತ್ತರವನ್ನು ನೀಡದಿರುವುದರಿಂದ ಮೆ.ಶಾರ್ಪ್–ವಾಚ್ ಇನ್ವೆಷ್ಟಿಗೇಷನ್ ಸೆಕ್ಯುರಿಟಿ ಸರ್ವೀಸಸ್, ಮೈಸೂರುರವರಿಗೆ ಟೆಂಡರ್ ಅವಧಿಯು ಮುಕ್ತಾಯವಾಗಿದ್ದರೂ ಸೆಪ್ಟೆಂಬರ್–2018ರಿಂದ ಮಾರ್ಚ್–2019ರವರೆಗೆ ಪಾವತಿಸಿರುವ ಒಟ್ಟು ಮೊತ್ತ **ರೂ.1,27,86,362/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ**. ವಿವರಗಳನ್ನು **ಅನುಬಂಧ–56ರಲ್ಲಿ** ನೀಡಲಾಗಿದೆ.<br><br>ಈ ಟೆಂಡರ್‌ನ ಅಂದಾಜು ಮೊತ್ತ ರೂ.250.00 ಲಕ್ಷಗಳಿದ್ದು, ಕರಾರು ಮಾಡಿಕೊಳ್ಳುವಾಗ ಟೆಂಡರ್ ದಸ್ತಾವೇಜಿನ ಖಂಡ–25ರಂತೆ ಅಂದಾಜು ಮೊತ್ತದ ಶೇ.5ರಷ್ಟು ಮೊತ್ತ ರೂ.12.50ಲಕ್ಷಗಳನ್ನು ಕಾರ್ಯನಿರ್ವಹಣಾ ಭದ್ರತೆಯಾಗಿ ಪಡೆದುಕೊಳ್ಳಬೇಕಾಗಿರುತ್ತದೆ. ಆದರೆ ಅದಕ್ಕೆ ಬದಲಾಗಿ ರೂ.5.00ಲಕ್ಷಗಳನ್ನು ಮಾತ್ರ ಪಡೆದುಕೊಂಡು ಕರಾರು ಮಾಡಿಕೊಳ್ಳಲಾಗಿರುತ್ತದೆ. ಗುತ್ತಿಗೆ ಕರಾರಿನ ಷರತ್ತುಗಳಲ್ಲಿ ನಂಬುಗೆ ಹಣದ ಮೊತ್ತವನ್ನು ಭದ್ರತಾ ಠೇವಣಿಯನ್ನಾಗಿ ಮಾರ್ಪಡಿಸಿಕೊಳ್ಳಲಾಗುವುದು ಎಂದು ತಿಳಿಸಿರುವುದು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆಯ ಅಧಿನಿಯಮಗಳ ಉಪ ಬಂಧಗಳಿಗೆ ವಿರುದ್ಧವಾಗಿರುತ್ತದೆ.ಈ ಬಗ್ಗೆ ವಿವರಣೆ ಕೋರಿ ಲೆಕ್ಕಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ:37/04.08.2020ನ್ನು ನೀಡಲಾಗಿದ್ದರೂ, ಯಾವುದೇ ವಿವರಣೆಯನ್ನು ನೀಡಿರುವುದಿಲ್ಲ. ಅಲ್ಲದೆ ನಂಬುಗೆ ಹಣದ ಮೊತ್ತ ರೂ.5.00 ಲಕ್ಷಗಳನ್ನು ಭದ್ರತಾ ಠೇವಣಿಯನ್ನಾಗಿ ಪರಿವರ್ತಿಸಿಕೊಂಡು ವಿಶ್ವವಿದ್ಯಾನಿಲಯದ ಖಾತೆಗೆ ಜಮೆ ಮಾಡಿಕೊಂಡಿರುವ ಬಗ್ಗೆ ಸಹ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ಭದ್ರತಾ ಠೇವಣಿಯನ್ನು ಕಡಿಮೆ ಪಡೆದಿರುವುದು ಗುತ್ತಿಗೆ ಸಂಸ್ಥೆಗೆ ಪರೋಕ್ಷವಾಗಿ ಅನುಕೂಲ ಮಾಡಿ ಕೊಟ್ಟಂತಾಗಿರುತ್ತದೆ. ಆದ್ದರಿಂದ ಈ ಲೋಪಕ್ಕೆ ಕಾರಣರಾದವರ ಮೇಲೆ ಆಡಳಿತಾತ್ಮಕ ಕ್ರಮ ವಹಿಸಲು ಸೂಚಿಸಿದೆ. | 2018–19ನೇ ಸಾಲಿನ ಅಂದರೆ 2018 ರ ಸೆಪ್ಟೆಂಬರ್ ಮಾಹೆಯಲ್ಲಿ ಹೊರಗುತ್ತಿಗೆಯ ಮೂಲಕ ಭದ್ರತಾ ಸೇವೆಯನ್ನು ಪಡೆಯುವ ಸಂಬಂಧವಾಗಿ ಟೆಂಡರ್ ಪ್ರಕ್ರಿಯೆ ಕೈಗೊಳ್ಳಲು ಕೆಲವು ಆಡಳಿತಾತ್ಮಕ ಕಾರಣಗಳಿಂದ ವಿಳಂಬವಾದುದರಿಂದ ಸದರಿ ಗುತ್ತಿಗೆದಾರರನ್ನೇ 2018–19ನೇ ಸಾಲಿನಲ್ಲಿ ಮುಂದುವರಿಸಲಾಗಿರುತ್ತದೆ. ಅಲ್ಲದೇ ಸದರಿಯವರಿಗೆ ಕನಿಷ್ಠ ಸೇವಾ ಶುಲ್ಕವನ್ನು ಮಾತ್ರ ಪಾವತಿಸಲಾಗಿದ್ದು, ಯಾವುದೇ ಆರ್ಥಿಕ ಹೊರೆಯಾಗದಂತೆ ಹೊರ ಗುತ್ತಿಗೆ ಸೇವೆಯನ್ನು ಪಡೆಯಲಾಗಿರುತ್ತದೆ. ಇನ್ನು ಮುಂದೆ ಈ ರೀತಿ ಆಗದಂತೆ ಸೂಕ್ತ ನಿಗಾವಹಿಸಿ ಕ್ರಮಬದ್ಧವಾಗಿ ಪಾರದರ್ಶಕತೆ ನಿಯಾಮನುಸಾರ ಕ್ರಮವಹಿಸುವುದಾಗಿ ನಿವೇದಿಸುತ್ತಾ, ಆಕ್ಷೇಪಣೆ ತೀರುವಳಿಗೊಳಿಸಲು ಕೋರಿದೆ. |
| **11.2. ಕಾಮಗಾರಿಗೆ ನಿಗದಿಪಡಿಸಿರುವ ಟೆಂಡರ್ ದರಕ್ಕಿಂತ ಹೆಚ್ಚುವರಿಯಾಗಿ ಗುತ್ತಿಗೆದಾರರಿಗೆ ಪಾವತಿಸಿರುವುದು:**<br>ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್ ಭವನದ ಮೊಗ ಶಾಲೆಯಲ್ಲಿ ಸುಧಾರಣಾ ಕಾಮಗಾರಿಯು ಪ್ಯಾಕೇಜ್–2ರಡಿಯಲ್ಲಿ ಇರುತ್ತದೆ. ಈ ಕಾಮಗಾರಿಯನ್ನು ಮೆ.ಬಿ.ಎಸ್.ಆರ್‌ಇನ್‌ಪ್ರಾಟೆಕ್ ಇಂಡಿಯಾ ಲಿ., ಬೆಂಗಳೂರು ಇವರಿಗೆ ವಹಿಸಲಾಗಿರುತ್ತದೆ. ಈ ಕಾಮಗಾರಿಯ ಅಂದಾಜು ಮೊತ್ತ ರೂ.200.00ಲಕ್ಷಗಳಾಗಿದ್ದು, ಕಾಮಗಾರಿಯ ಕರಾರು ಸಂಖ್ಯೆ 273 ಬಿ.ಆರ್.ಸಂಖ್ಯೆ 180 ದಿನಾಂಕ:26.06.2018ರಲ್ಲಿನ ಒಟ್ಟು ಬಿಲ್ಲಿನ ಮೊತ್ತ ರೂ.1,39,90,293/–ಗಳಾಗಿರುತ್ತದೆ. ಬಿಲ್ಲು ಮತ್ತು ಇ– | ಕಂಡಿಕೆಯಲ್ಲಿ ಪ್ರಸ್ತಾಪಿಸಿರುವ ಕಾಮಗಾರಿಯ ಷೆಡ್ಯೂಲ್ 'ಬಿ' ನಲ್ಲಿನ ಕ್ರಮ ಸಂಖ್ಯೆ:–86ರ ಐಟಂಗೆ ಷೆಡ್ಯೂಲ್ 'ಬಿ' ದರಕ್ಕಿಂತ ಹೆಚ್ಚುವರಿಯಾಗಿ ಪ್ರತಿ ಚದರಕ್ಕೆ ರೂ.500/–ಗಳಂತೆ 177.06 ಚದರಗಳಿಗೆ ರೂ.88,530/–ಗಳನ್ನು ಹೆಚ್ಚುವರಿಯಾಗಿ ಪಾವತಿಸಲಾಗಿದ್ದು ವಸೂಲಾತಿಗೆ ಸೂಚಿಸಲಾಗಿರುತ್ತದೆ.<br><br>ಅದರನ್ವಯ ಮೆ.ಬಿ.ಎಸ್.ಆರ್‌ಇನ್‌ಪ್ರಾಟೆಕ್ ಇಂಡಿಯಾ ಲಿ., ಬೆಂಗಳೂರುವರ ಸದರಿ |

ಎಂ.ಬಿಯನ್ನು ಪರಿಶೀಲಿಸಲಾಗಿ ಷೆಡ್ಯೂಲ್–ಬಿನಲ್ಲಿನ ಕ್ರ.ಸಂ.86ರ ರಖಮಿಗೆ ಷೆಡೂಲ್–ಬಿನಲ್ಲಿನ ದರ ರೂ.19,000/–ಗಳಿದ್ದು, 177.06ಚದರಗಳಿಗೆ ರೂ.19,500/–ಗಳಂತೆ ಪಾವತಿ ಮಾಡಲಾಗಿರುತ್ತದೆ. ಆದುದರಿಂದ ಹೆಚ್ಚುವರಿಯಾಗಿ ಪಾವತಿಸಿರುವ ಮೊತ್ತ **ರೂ.88,530/–ಗಳನ್ನು ವಸೂಲಾತಿಗೆ ಸೂಚಿಸಿದೆ.**

ವಿವರಗಳು ಈ ಕೆಳಕಂಡಂತಿದೆ.

| ಐಟಂ ಸಂಖ್ಯೆ | ಸ್ಟೆಡೂಲ್ ಬಿ ದರ | ಪಾವತಿಸಿರುವ ದರ | ವ್ಯತ್ಯಾಸ | ಪರಿಮಾಣ | ಮೊತ್ತ |
|---|---|---|---|---|---|
| 86 | 19,000 | 19,500 | 500 | 177.06 | 88,530 |

ಮುಂದುವರೆದು ಲೆಕ್ಕಪರಿಶೋಧನೆಗೆ ಹಾಜರುಪಡಿಸಿದ ಪ್ಯಾಕೇಜ್ ಕಾಮಗಾರಿಯನ್ನು ಪರಿಶೀಲಿಸಲಾಗಿ ಕರ್ನಾಟಕ ಲೋಕೋಪಯೋಗಿ ಇಲಾಖಾ ಸಂಹಿತೆ 2014ರ ಕಂಡಿಕೆ 110(5) ಮತ್ತು (9) ರಂತೆ ಸಹಾಯಕ ಕಾರ್ಯ ಪಾಲಕ ಅಭಿಯಂತರರು ಶೇ 100 ರಷ್ಟು ಮತ್ತು ಕಾರ್ಯಪಾಲಕ ಅಭಿಯಂತರರು ಶೇ 25ರಷ್ಟು ಮೌಲ್ಯದ ಅಳತೆ ಪರಿಶೀಲನೆ ಮಾಡಬೇಕಾಗಿರುತ್ತದೆ. ಆದರೆ ಈ ಕಾಮಗಾರಿಗಳಲ್ಲಿ ಕಾರ್ಯಪಾಲಕ ಅಭಿಯಂತರರು ಯಾವುದೇ ಅಳತೆ ಪರಿಶೀಲನೆ ಮಾಡದಿರುವುದು ಕಂಡು ಬಂದಿರುತ್ತದೆ. ಸದರಿ ಕಾಮಗಾರಿಗಳಿಗೆ ಉಪಯೋಗಿಸಿರುವ ಕಬ್ಬಿಣ, ಜಲ್ಲಿ, ಮರಳು, ಇಟ್ಟಿಗೆ ಮತ್ತು ಮಣ್ಣು ಇವುಗಳ ಗುಣಮಟ್ಟದ ಬಗ್ಗೆ ಫಲಿತಾಂಶದ ವರದಿಯನ್ನು ಹಾಜರುಪಡಿಸಿರುವುದಿಲ್ಲ. ಸರ್ಕಾರದ ಆದೇಶ ಸಂಖ್ಯೆ:55 ಪಿ.ಡಬ್ಲ್ಯೂಡಿ 2014 ಬೆಂಗಳೂರು ದಿನಾಂಕ:17.02.2005 ರಂತೆ ಕಾಮಗಾರಿ ಪೂರ್ಣಗೊಂಡ ಮೇಲೆ ಗುಣಮಟ್ಟವನ್ನು ಖಾತರಿಪಡಿಸಲು ಮೂರನೇ ಪಕ್ಷಾಕಾರರಿಂದ ತಪಾಸಣೆ ಮಾಡಿಸಿ ನಂತರ ಬಿಲ್ಲನ್ನು ಪಾವತಿಸಬೇಕಾಗಿರುತ್ತದೆ. ಆದರೆ ಈ ಬಗ್ಗೆ ಯಾವುದೇ ಕ್ರಮವಹಿಸದಿರುವುದು ಕಂಡು ಬಂದಿರುತ್ತದೆ.

ಕಾಮಗಾರಿಯ 4ನೇ ಮತ್ತು ಅಂತಿಮ ಬಿಲ್ಲಿನಲ್ಲಿ ಷೆಡ್ಯೂಲ್ 'ಬಿ'ನ ಪ್ರಕಾರ ಹೆಚ್ಚುವರಿಯಾಗಿ ಪಾವತಿಸಿರುವ ಮೊತ್ತ ರೂ.88,530/–ಗಳನ್ನು ಕಡಿತಗೊಳಿಸಿ ಜಿ.ಆರ್.ಎ ಖಾತೆಗೆ ಜಮಾ ಮಾಡಿಲಾಗಿರುತ್ತದೆ.

2016–17ನೇ ಸಾಲಿನ ಬಾಬ್ತು ರೂ.87,956/–, 2017–18ನೇ ಸಾಳಿನ ಬಾಬ್ತು ರೂ.4,67,466/– ಹಾಗೂ 2018–19ನೇ ಸಾಲಿನ 11.2 ಕಂಡಿಕೆ ಮೊತ್ತ ರೂ.88,530/– ಮತ್ತು 11.3ರ ಕಂಡಿಕೆ ಮೊತ್ತ ರೂ.1,90,139/–ಗಳು ಆಡಿಟ್‌ಮೊತ್ತ ಸೇರಿದಂತೆ ರೂ.8,34,591/–ಗಳು ಧನಾದೇಶ ಸಂಖ್ಯೆ:–746620 ದಿನಾಂಕ:31.03.2021 ರಲ್ಲಿ ಜಿ.ಆರ್.ಎ ಖಾತೆಗೆ ದಿನಾಂಕ:15.04.2021 ರಂದು ಜಮಾ ಮಾಡಲಾಗಿರುತ್ತದೆ. ಜಮಾ ಮಾಡಿರುವ ಚಲನ್‌ಪ್ರತಿ ಮತ್ತು ಬ್ಯಾಂಕ್ ಸ್ಕ್ರೊಲ್ ಪ್ರತಿ ಲಗತ್ತಿಸಿ ಸಲ್ಲಿಸುತ್ತಾ ವಸೂಲಾತಿ ಮೊತ್ತ ರೂ.88,530/–ಗಳನ್ನು ತೀರುವಳಿಗೊಳಿಸುವಂತೆ ಕೋರಲಾಗಿದೆ.

ಮುಂದುವರಿದು ತಮ್ಮ ಸಲಹೆ ಮತ್ತು ಮಾರ್ಗದರ್ಶನದಂತೆ ಕಾಮಗಾರಿಯ 4ನೇ ಮತ್ತು ಅಂತಿಮ ಬಿಲ್‌ನ ಇ.ಎಂ.ಬಿ–06ರ ಪುಟಸಂಖ್ಯೆ–17,18,19 ಮತ್ತು 20ರಲ್ಲಿ ಕಾರ್ಯಪಾಲಕ ಅಭಿಯಂತರು ಶೇ25ರಷ್ಟು ಅಳತೆ ಪರಿಶೀಲನೆ ಮಾಡಿರುತ್ತಾರೆ ಇನ್ನು ಮುಂದೆ ಕಾಮಗಾರಿ ಪೂರ್ಣಗೊಂಡ ಖಾತರಿಪಡಿಸಿಕೊಂಡು ಪಾವತಿಯ ಬಗ್ಗೆ ಕ್ರಮವಹಿಸುವುದಾಗಿ ನಿವೇದಿಸಿದೆ.

| | |
|---|---|
| **11.3. ಕಾಮಗಾರಿಗಳ ಅನುಮೋದಿತ ದರಕ್ಕಿಂತ ಕಾಮಗಾರಿ ಬಿಲ್ಲುಗಳಲ್ಲಿ ಹೆಚ್ಚುವರಿಯಾಗಿ ಪಾವತಿಸಿರುವುದು :–**<br><br>ಮೈಸೂರು ವಿಶ್ವವಿದ್ಯಾನಿಲಯದ ಯೋಜನೆ ಮತ್ತು ವಾಸ್ತು ಶಿಲ್ಪ ವಿದ್ಯಾಲಯದ ಕಟ್ಟಡ ನಿರ್ಮಾಣ ಕಾಮಗಾರಿಯು ಪ್ಯಾಕೇಜ್–2ರ ಅಡಿ ಹಾಗೂ ಮೈಸೂರು ವಿಶ್ವವಿದ್ಯಾನಿಲಯದ ಶತಮಾನೋತ್ಸವ ಸಭಾಂಗಣ, ಕಾನೂನು ವಿಭಾಗ ಕಟ್ಟಡ, ಈಜು ಕೊಳ ಅಭಿವೃದ್ಧಿ ಈ ಮೂರು ಕಾಮಗಾರಿಗಳು ಪ್ಯಾಕೇಜ್–4ರ ಅಡಿಯಲ್ಲಿರುತ್ತವೆ. ಈ ಕಾಮಗಾರಿಗಳನ್ನು ಮೆ.ಬಿ.ಎಸ್.ಆರ್ಇನ್ಪ್ರಾಟೆಕ್ ಇಂಡಿಯಾ ಲಿ., ಬೆಂಗಳೂರು ಇವರಿಗೆ ವಹಿಸಲಾಗಿರುತ್ತದೆ.<br><br>ಸದರಿ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಬಿಲ್ಲುಗಳನ್ನು ಪರಿಶೀಲಿಸಿದಾಗ ಕೆಲವು ಐಟಂಗಳಲ್ಲಿ ಟೆಂಡರ್ ಅನುಮೋದನೆ ದರಕ್ಕಿಂತ ಹೆಚ್ಚಿನ ದರಗಳನ್ನು ಪಾವತಿಸಿದ್ದು, ಅಂತಿಮ ಬಿಲ್ಲಿನಲ್ಲಿ ಭಾಗಶಃ ದರಗಳನ್ನು ಬಿಡುಗಡೆ ಮಾಡಲಾಗಿರುತ್ತದೆ. ಆದರೆ ಇದಕ್ಕೆ ಪೂರಕವಾಗಿ ವರ್ಕ್ಸ್ಲಿಪ್ ಅನುಮೋದನೆಯಾದ ಮಾಹಿತಿಗಳನ್ನು ಹಾಗೂ ಈ ಹಿಂದೆ ಪಾವತಿಸಿದ ಪರಿಮಾಣ ಮತ್ತು ದರದ ವಿವರಗಳನ್ನು ಹಾಜರುಪಡಿಸಿರುವುದಿಲ್ಲ. ಈ ನ್ಯೂನ್ಯತೆಗೆ ಸ್ಪಷ್ಟೀಕರಣ ನೀಡುವಂತೆ ಲೆಕ್ಕಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ:18/2020–21, ದಿನಾಂಕ:09.07.2020ನ್ನು ನೀಡಲಾಗಿದ್ದರೂ, ಯಾವುದೇ ಉತ್ತರವನ್ನು ನೀಡಿರುವುದಿಲ್ಲ. ಆದ್ದರಿಂದ ಈ ಬಾಬ್ತು **ರೂ.1,90,140/–ಗಳನ್ನು ವಸೂಲಿಸಲು ಸೂಚಿಸಿದೆ.** ವಿವರಗಳನ್ನು **ಅನುಬಂಧ–57ರಲ್ಲಿ** ಲಗತ್ತಿಸಿದೆ. | ಕಂಡಿಕೆಯಲ್ಲಿ ಪ್ರಸ್ತಾಪಿಸಿರುವ ಮೂರು ಕಾಮಗಾರಿಗಳು ಪ್ಯಾಕೇಜ್–4ರ ಅಡಿಯಲ್ಲಿದ್ದು, ಸದರಿ ಕಾಮಗಾರಿಗಳನ್ನು ಮೆ॥ ಬಿ.ಎಸ್.ಆರ್ ಇನ್ಪ್ರಾಟೆಕ್ ಇಂಡಿಯಾ ಲೀ. ಬೆಂಗಳೂರು. ಇವರು ನಿರ್ವಹಿಸಿದ್ದು, ಕೆಲವು ಐಟಂಗಳಲ್ಲಿ ಟೆಂಡರ್ ಅನುಮೋದನೆ ದರಕ್ಕಿಂತ ಹೆಚ್ಚಿನ ದರಗಳನ್ನು ಪಾವತಿಸಿರುವ ಬಗ್ಗೆ ಅನುಬಂದ–57 ರಲ್ಲಿ ಪ್ರಸ್ತಾಪಿಸಿದ್ದು, ಅನುಬಂಧದ ರೀತ್ಯ ಹೆಚ್ಚುವರಿಯಾಗಿ ಪಾವತಿಸಿರುವ ಮೊತ್ತ ರೂ.1,90,139/–ಗಳನ್ನು ವಸೂಲಾತಿಗೆ ಸೂಚಿಸಲಾಗಿರುತ್ತದೆ.<br><br>ಕಂಡಿಕೆಯ ಪ್ರಸ್ತಾವನೆಯಂತೆ ಮೆ॥ ಬಿ.ಎಸ್.ಆರ್ ಇನ್ಪ್ರಾಟೆಕ್ ಇಂಡಿಯಾ ಲೀ. ಬೆಂಗಳೂರು. ಇವರು ನಿರ್ವಹಿಸಿರುವ ಕಾಮಗಾರಿಯ ನಾಲ್ಕನೇ ಮತ್ತು ಅಂತಿಮ ಬಿಲ್ಲಿನಲ್ಲಿ ಹೆಚ್ಚುವರಿಯಾಗಿ ಪಾವತಿಸಿರುವ ಒಟ್ಟು ಮೊತ್ತ ರೂ.1,90,139/–ಗಳನ್ನು ದಿನಾಂಕ:31–03–2021ರಂದು ಪಾವತಿಸಿರುವ ಬಿಲ್ಲಿನಲ್ಲಿ ಕಡಿತ ಮಾಡಿ ಜಿ.ಆರ್.ಎ ಖಾತೆಗೆ ಜಮಮಾಡಲಾಗಿರುತ್ತದೆ. ಹಾಗೂ 2016–17ನೇ ಸಾಲಿನ ಬಾಬ್ತು ರೂ.4,67,466/–ಗಳು, 2018–19ನೇ ಸಾಲಿನ ಕಂಡಿಕೆ 11.02ರ ಮೊತ್ತ ರೂ.88,530/– ಮತ್ತು ಕಂಡಿಕೆ 11.03ರ ಮೊತ್ತ ರೂ.1,90,139/–ಗಳ ಆಡಿಟ್ ವಸೂಲಾತಿ ಮೊತ್ತ ಸೇರಿದಂತೆ ಒಟ್ಟು ಮೊತ್ತ ರೂ.8,34,591/–ಗಳನ್ನು ದಿನಾಂಕ:15–04–2021ರಂದು ಜಿ.ಆರ್.ಎ ಖಾತೆಗೆ ಜಮಮಾಡಲಾಗಿರುತ್ತದೆ. ಆದ ಕಾರಣ ಕಂಡಿಕೆಯಲ್ಲಿ ವಸೂಲಾತಿಗೆ ಸೂಚಿಸಿರುವ ಮೊತ್ತ ರೂ.1,90,140/–ಗಳನ್ನು ತೀರುವಳಿಗೊಳಿಸುವಂತೆ ಕೋರಿದೆ. |
| **11.4. ಒಂದೇ ರೀತಿಯ ಕಾಮಗಾರಿಗಳನ್ನು ಒಗ್ಗೂಡಿಸಿ ಇ–ಟೆಂಡರ್ ಕರೆಯುವ ಬದಲು ಬಿಡಿ ಬಿಡಿಯಾಗಿ ಮ್ಯಾನುಯಲ್ ಟೆಂಡರ್ ಮೂಲಕ ನಿರ್ವಹಿಸಿರುವುದು :**<br><br>2018–19ನೇ ಸಾಲಿನಲ್ಲಿ ಇಂಜಿನಿಯರಿಂಗ್ ವಿಭಾಗದಿಂದ ಹೊರಡಿಸಿರುವ ಟೆಂಡರ್ ಪ್ರಕಟಣೆಗಳನ್ನು ಪರಿಶೀಲಿಸಿದಾಗ ಒಂದೇ ರೀತಿಯ ಕಾಮಗಾರಿಗಳನ್ನು ಒಗ್ಗೂಡಿಸಿ ಇ–ಟೆಂಡರ್ ಕರೆಯುವ ಬದಲು ಬಿಡಿ ಬಿಡಿಯಾಗಿ ರೂ.2 ಲಕ್ಷ ಮೊಬಲಗಿನ ಒಳಗೆ ಅಂದಾಜು ಮೌಲ್ಯ ಬರುವಂತೆ ಅಂದಾಜು ಪಟ್ಟಿ ತಯಾರಿಸಿ ಮ್ಯಾನುಯಲ್ ಟೆಂಡರ್ ಮೂಲಕ ನಿರ್ವಹಿಸಿರುವುದನ್ನು ಗಮನಿಸಲಾಗಿದೆ. ವಿಶ್ವವಿದ್ಯಾನಿಲಯದಿಂದ ಕಾಮಗಾರಿಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡುವಾಗ ಪಾರದರ್ಶಕ ನಿಯಮಗಳನ್ನು ಅನುಸರಿಸಿ ಕಾಮಗಾರಿಗಳನ್ನು ನಿರ್ವಹಿಸುವಂತೆ ಷರತ್ತು ವಿಧಿಸಿ ಮಂಜೂರಾತಿ ನೀಡಲಾಗಿದೆ. ಅಲ್ಲದೆ ಸರ್ಕಾರದ ಸುತ್ತೋಲೆ ಸಂ:ಸಿಆಸುಇ 2ಇಸಂಗ್ರ 2009, ದಿನಾಂಕ:09–10–2012ರ ಅನುಸಾರ ರೂ.5.00ಲಕ್ಷ ಮೀರಿದ ಎಲ್ಲಾ ಸಂಗ್ರಹಣೆಯನ್ನು ಇ–ಸಂಗ್ರಹಣೆ ವಿಧಾನದ ಮೂಲಕವೇ | ಒಂದೇ ರೀತಿಯ ಕಾಮಗಾರಿಗಳನ್ನು ಒಗ್ಗೂಡಿಸಿ ಇ–ಟೆಂಡರ್ ಕರೆಯುವ ಬದಲು ಬಿಡಿ ಬಿಡಿಯಾಗಿ ಮ್ಯಾನ್ಯುಯಲ್ ಟೆಂಡರ್ ಮೂಲಕ ಕಾಮಗಾರಿಗಳನ್ನು ನಿರ್ವಹಿಸಿರುವ ಬಗ್ಗೆ ಕಂಡಿಕೆಯಲ್ಲಿ ಪ್ರಸ್ತಾಪಿಸಲಾಗಿರುತ್ತದೆ.<br><br>ಕಂಡಿಕೆಯಲ್ಲಿ ಪ್ರಸ್ತಾಪಿಸಿರುವ ಕಾಮಗಾರಿಗಳು ರೂ.5.00 ಲಕ್ಷಗಳಿಗಿಂತ ಕಡಿಮೆ ಕಾಮಗಾರಿಗಳಾಗಿದ್ದು, ಎಲ್ಲವೂ ಸಹ ಒಂದೇ ರೀತಿಯ ಕಾಮಗಾರಿಗಳಾಗಿರದೆ, ಪ್ರತ್ಯೇಕ ಕಾಮಗಾರಿಗಳಾಗಿರುತ್ತವೆ. ಅಲ್ಲದೆ ಈ ಕಾಮಗಾರಿಗಳಿಗೆ ಪ್ರತ್ಯೇಕವಾಗಿ, ಆಡಳಿತಾತ್ಮಕವಾಗಿ ಮಂಜೂರಾತಿಯಾದ ಯಾವುದೇ ಕಾಮಗಾರಿಗಳನ್ನು ವಿಭಜಿಸದೇ ಟೆಂಡರ್ ಪ್ರಕ್ರಿಯೆಗಳನ್ನು ಕೈಗೊಳ್ಳಲಾಗಿರುತ್ತದೆ. |

| | |
|---|---|
| ಮಾಡಬೇಕಾಗಿರುತ್ತದೆ. ಆದರೆ ಇಲ್ಲಿ ಒಂದೇ ರೀತಿಯ ಕಾಮಗಾರಿಗಳನ್ನು ಒಗ್ಗೂಡಿಸಿ ಇ–ಟೆಂಡರ್‌ಕರೆಯುವ ಬದಲು ಬಿಡಿ ಬಿಡಿಯಾಗಿ ರೂ.2 ಲಕ್ಷ ಮೊಬಲಗಿನ ಒಳಗೆ ಅಂದಾಜಿಸಿ ಮ್ಯಾನ್ಯುವಲ್ ಟೆಂಡರ್ ಮೂಲಕ ನಿರ್ವಹಿಸಿರುವುದು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆಯ ಅಧಿನಿಯಮ ಹಾಗೂ ಮೇಲಿನ ಸರ್ಕಾರದ ಸುತ್ತೋಲೆಯ ಮಾರ್ಗಸೂಚಿಯ ಆಶಯಗಳಿಗೆ ವಿರುದ್ಧವಾಗಿರುತ್ತದೆ. ಆದ್ದರಿಂದ ಇಂತಹ ಘಟನೆಗಳು ಪುನರಾವರ್ತನೆಯಾಗದಂತೆ ಎಚ್ಚರ ವಹಿಸಲು ಸೂಚಿಸಿದೆ. | ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ನಿಯಮ 1999 ಅಧಿನಿಯಮ 2000ರ ನಿಯಮ 4 e (1) ನಿಯೋಜಿಸಲಾದ ಪ್ರಾಧಿಕಾರಗಳಿಗೆ ರೂ.5.00 ಲಕ್ಷ ಮೀರಿದ ನಿರ್ಮಾಣ ಕಾಮಗಾರಿಗಳ ಸಂಗ್ರಹಣೆಯನ್ನು ಕೈಗೊಳ್ಳಲು ಕೆ.ಟಿ.ಪಿ.ಪಿ. ಕಾಯ್ದೆಯಿಂದ ವಿನಾಯಿತಿ ನೀಡಲಾಗಿದ್ದು, ಮೇಲಿನ ಅಂಶಗಳ ಹಿನ್ನೆಲೆಯಲ್ಲಿ ಹಾಗೂ ಇನ್ನು ಮುಂದೆ ಸರ್ಕಾರದ ಸುತ್ತೋಲೆಯ ಮಾರ್ಗಸೂಚಿಯ ಅನ್ವಯ ಕ್ರಮವಹಿಸುವುದಾಗಿ ನಿವೇದಿಸುತ್ತಾ, ಆಕ್ಷೇಪಣೆಯನ್ನು ಕೈಬಿಡುವಂತೆ ಕೋರಲಾಗಿದೆ. |
| **11.5. ಮೈಸೂರು ವಿಶ್ವವಿದ್ಯಾನಿಲಯದ ಒಡೆತನದ ವಾಣಿಜ್ಯ ಸಂಕೀರ್ಣಗಳು, ಎಸ್.ಟಿ.ಡಿ ಬೂತ್‌ಗಳು ಮತ್ತು ಕ್ಯಾಂಟೀನ್‌ಗಳಿಂದ ಬಾಕಿಯಿರುವ ಬಾಡಿಗೆ ವಸೂಲಾತಿ ಬಗ್ಗೆ :**<br>ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಒಳಪಡುವ ವಾಣಿಜ್ಯ ಸಂಕೀರ್ಣ ಮಳಿಗೆಗಳು, ಎಸ್.ಟಿ.ಡಿ ಬೂತ್‌ಗಳು ಮತ್ತು ಕ್ಯಾಂಟೀನ್‌ನ ಬಾಡಿಗೆಗೆ ಸಂಬಂಧಿಸಿದಂತೆ ಬೇಡಿಕೆ, ವಸೂಲಾತಿ ಮತ್ತು ಬಾಕಿ ತಃಖ್ತೆ (ಡಿ.ಸಿ.ಬಿ)ಯನ್ನು ಪರಿಶೀಲಿಸಲಾಗಿ 21 ವಾಣಿಜ್ಯ ಮಳಿಗೆಗಳು, 07 ಎಸ್.ಟಿ.ಡಿ ಬೂತ್‌ಗಳು ಹಾಗೂ 04 ಕ್ಯಾಂಟೀನ್‌ಗಳು ಇದ್ದು, ಏಪ್ರಿಲ್–2016ರಲ್ಲಿ 9 ವಾಣಿಜ್ಯ ಮಳಿಗೆಗಳನ್ನು ಬಾಡಿಗೆದಾರರಿಂದ ತೆರವುಗೊಳಿಸಲಾಗಿದೆ. ಉಳಿದ ವಾಣಿಜ್ಯ ಮಳಿಗೆಗಳು, ಎಸ್.ಟಿ.ಡಿ ಬೂತ್‌ಗಳನ್ನು ಬಾಡಿಗೆ ನೀಡುವ ಸಂಬಂಧ ಟೆಂಡರ್ ಕರೆದಿರುವ ಬಗ್ಗೆ ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ.<br>ಆದರೆ ಕ್ಯಾಂಟೀನ್‌ಗಳಿಗೆ ಬಾಡಿಗೆ ನೀಡುವ ಸಂಬಂಧ 2017ರಲ್ಲಿ ಟೆಂಡರ್ ಕರೆಯಲಾಗಿರುತ್ತದೆ. 2017ರಲ್ಲಿ ನಿಗದಿಪಡಿಸಿದ್ದ ದರಗಳನ್ನು 2018–19ನೇ ಸಾಲಿನಲ್ಲಿ ಸಹ ಮುಂದುವರೆಸಲಾಗಿರುತ್ತದೆ. ಕ್ಯಾಂಟೀನ್‌ಗಳಿಂದ ಹಾಗೂ ತೆರವುಗೊಂಡಿರುವ ಮಳಿಗೆಗಳಿಂದ ದಿನಾಂಕ:31.03.2019ರ ಅಂತ್ಯಕ್ಕೆ ವಸೂಲಿಯಾಗಬೇಕಾಗಿರುವ ಬೇಡಿಕೆ ಶುಲ್ಕಕ್ಕೆ ಸಂಬಂಧಿಸಿದಂತೆ ಡಿ.ಸಿ.ಬಿ ವಹಿಯನ್ನು ಪರಿಶೀಲಿಸಲಾಗಿ ಒಟ್ಟು ರೂ.4,41,406/–ಗಳು (2017–18ರ ಅಂತಿಮ ಶಿಲ್ಕನ್ನು ಹೊರತು ಪಡಿಸಿ) ಬಾಕಿ ಇರುವುದು ಕಂಡು ಬಂದಿರುತ್ತದೆ. ಡಿ.ಸಿ.ಬಿ ವಹಿಯನ್ನು ಕ್ರಮಬದ್ಧವಾಗಿ ನಿರ್ವಹಿಸಿರುವುದಿಲ್ಲವಾದ್ದರಿಂದ ದಾಖಲಿಸಿರುವ ಮಾಹಿತಿಯ ನಿಖರತೆಯನ್ನು ಖಚಿತಪಡಿಸಿಕೊಳ್ಳಲು ಸಾಧ್ಯವಾಗಿರುವುದಿಲ್ಲ.<br>ವಾಣಿಜ್ಯ ಮಳಿಗೆಗಳು, ಎಸ್.ಟಿ.ಡಿ ಬೂತ್‌ಗಳು ಹಾಗೂ ಕ್ಯಾಂಟೀನ್‌ಗಳನ್ನು ಬಾಡಿಗೆಗೆ ನೀಡುವ ಸಂಬಂಧಪ್ರತಿ ವರ್ಷಟೆಂಡರ್/ಹರಾಜು ಪ್ರಕ್ರಿಯೆ ನಡೆಸಿ ಹೆಚ್ಚು ಮೊತ್ತಕ್ಕೆ ಬಿಡ್ ಮಾಡಿದವರಿಗೆ ಬಾಡಿಗೆಗೆ ನೀಡಬೇಕಾಗಿರುತ್ತದೆ. ಆದರೆ ಇಲ್ಲಿ ಈ ಕ್ರಮ ಅನುಸರಿಸಿರುವುದಿಲ್ಲ. ಇದರಿಂದಾಗಿ ವಿಶ್ವವಿದ್ಯಾನಿಲಯಕ್ಕೆ ಆರ್ಥಿಕ ನಷ್ಟ ಉಂಟಾಗಿರುವ ಸಂಭವವಿರುತ್ತದೆ. ಆದ್ದರಿಂದ ಸಂಬಂಧಿಸಿದವರ ಮೇಲೆ ಆಡಳಿತಾತ್ಮಕ ಕ್ರಮ ಕೈಗೊಳ್ಳಲು ಸೂಚಿಸಿದೆ ಹಾಗೂ ಬಾಕಿ ಇರುವ ಬಾಡಿಗೆ ಮೊತ್ತ **ರೂ.4,41,406/–ಗಳನ್ನು ಸಂಬಂಧಪಟ್ಟ ಬಾಡಿಗೆದಾರರಿಂದ ವಸೂಲಿಸಿ** ವಿಶ್ವವಿದ್ಯಾನಿಲಯದ ಖಾತೆಗೆ ಜಮೆ ಮಾಡಲು ಸೂಚಿಸಿದೆ. ವಿಶ್ವವಿದ್ಯಾನಿಲಯಕ್ಕೆ ಬರಬೇಕಾದ ಬಾಡಿಗೆ ಬಾಕಿ ವಿವರಗಳನ್ನು **ಅನುಬಂಧ–58ರಲ್ಲಿ**ನೀಡಲಾಗಿದೆ. | ಕ್ಯಾಂಟೀನ್‌ಗಳನ್ನು ವಿಶ್ವವಿದ್ಯಾನಿಲಯದ ಆದೇಶಾನುಸಾರ ಟೆಂಡರ್ ಕರೆಯಲಾಗಿರುತ್ತದೆ. ಹಾಗೂ ಡಿ.ಸಿ.ಬಿ ವಹಿಯನ್ನು ಕ್ರಮಬದ್ಧವಾಗಿ ನಿರ್ವಹಿಸಲಾಗಿರುತ್ತದೆ ಕ್ಯಾಂಟೀನ್‌ಗಳಿಂದ ಹಾಗೂ ತೆರವುಗೊಂಡಿರುವ ಮಳಿಗೆಗಳಿಂದ ದಿನಾಂಕ:31.03.2019ರ ಅಂತ್ಯಕ್ಕೆ ವಸೂಲಿಯಾಗಬೇಕಾಗಿರುವ ಕಂಡಿಕೆ ಸಂಖ್ಯೆ:–11.5 ರ ಪ್ರಕಾರ ಬಾಕಿ ಮೊತ್ತ ರೂ.4,41,406/–ಗಳಿಗೆ ಸಂಬಂಧಿಸಿದಂತೆ ಆಕ್ಷೇಪಣಾವರದಿಯಲ್ಲಿ ನಿಖರವಾದ ಮಾಹಿತಿ ಲಭ್ಯವಿಲ್ಲದ ಕಾರಣ ದಿನಾಂಕ:31.03.2019ರ ಅಂತ್ಯಕ್ಕೆ ಇರುವ ಬಾಕಿ ಮೊತ್ತ ರೂ.8,53,278/–ಗಳಲ್ಲಿ ರೂ.5,54,218/–ಗಳಲ್ಲಿ ವಸೂಲಿಸಲಾಗಿದ್ದು ವಸೂಲಿಸಿದ ರಶೀದಿ ಮತ್ತು ಬ್ಯಾಂಕಿಗೆ ಪಾವತಿ ಮಾಡಿರುವ ಚಲನ್‌ಗಳನ್ನು ಕಂಡಿಕೆ ಐಟಂವಾರು ಕ್ರಮ ಸಂಖ್ಯೆಕ್ಕನುಗುಣವಾಗಿ ಹಾಗೂ ಕ್ರಮಬದ್ಧವಾಗಿ ಲಗತ್ತಿಸಲಾಗಿದೆ. ಹಾಗೂ ವಾಣಿಜ್ಯ ಮಳಿಗೆಗಳ ಕ್ರಮ ಸಂಖ್ಯೆ:–01 ರಿಂದ 09ರ ವರೆಗೆ ಬರಬೇಕಾದ ಬಾಕಿ ಮೊತ್ತ ರೂ.2,85,060/–ಗಳ ವಸೂಲಾತಿಯ ಬಗ್ಗೆ ಸೂಕ್ತ ನಿರ್ದೇಶನ ನೀಡುವಂತೆ ಕುಲಸಚಿವರಿಗೆ ಪತ್ರ ಬರೆಯಲಾಗಿದೆ. (ಪತ್ರ ಲಗತ್ತಿಸಿದೆ) ಹಾಗೂ ಜೆ.ಲತಾ (ಎಸ್.ಟಿ.ಡಿ ಬೂತ್ ಕ್ರ.ಸಂಖ್ಯೆ–3) ಇವರಿಂದ ಬರಬೇಕಾದ ಬಾಕಿ ಮೊತ್ತ ರೂ.14,000/–ಗಳನ್ನು ವಸೂಲಾತಿಯಾಗುವ ಸಂಬಂಧ ಸೂಕ್ತ ಕ್ರಮ ವಹಿಸಲಾಗವುದು ಆದ್ದರಿಂದ ಆಡಿಟ್ ಆಕ್ಷೇಪಣೆಯನ್ನು ಕೈ ಬಿಡುವಂತೆ ನಿವೇದಿಸಿದೆ. |

| | |
|---|---|
| **11.6. ವಿಶ್ವವಿದ್ಯಾನಿಲಯದ ವಸತಿ ಗೃಹಗಳ ಬಾಡಿಗೆಯ ಬೇಡಿಕೆ, ವಸೂಲಿ ಮತ್ತು ಬಾಕಿ (ಡಿ.ಸಿ.ಬಿ) ವಿವರಗಳು :**<br><br>ವಿಶ್ವವಿದ್ಯಾನಿಲಯದ 2018–19ನೇ ಸಾಲಿನ ವಸತಿ ಗೃಹಗಳ ಬೇಡಿಕೆ, ವಸೂಲಾತಿ ಮತ್ತು ಬಾಕಿ ವಿವರಗಳ ವಹಿಯನ್ನು (ಡಿ.ಸಿ.ಬಿ) ಪರಿಶೀಲಿಸಲಾಗಿ ವಸತಿ ಗೃಹ ಹಂಚಿಕೆ ಹೊಂದಿದ ಖಾಯಂ, ತಾತ್ಕಾಲಿಕ ನೌಕರರು/ಅಧ್ಯಾಪಕ, ಅಧ್ಯಾಪಕೇತರ ನೌಕರರಿಂದ ಪ್ರತಿ ಮಾಹೆ ಬಾಡಿಗೆಯನ್ನು ವಸೂಲಿಸಿ ಡಿ.ಸಿ.ಬಿ ವಹಿಯಲ್ಲಿ ದಾಖಲಿಸಿರುವುದು ಕಂಡುಬಂದಿರುತ್ತದೆ. ಅದರನುಸಾರ ವಿಶ್ವವಿದ್ಯಾನಿಲಯದಲ್ಲಿ ಒಟ್ಟು 317 ವಸತಿ ಗೃಹಗಳಿದ್ದು, ಇವುಗಳಲ್ಲಿ 309 ವಸತಿ ಗೃಹಗಳು ನೌಕರರುಗಳಿಗೆ ಹಂಚಿಕೆಯಾಗಿರುತ್ತದೆ ಹಾಗೂ 8 ವಸತಿಗೃಹಗಳು ಖಾಲಿ ಇರುತ್ತವೆ.<br><br>2018–19ನೇ ಸಾಲಿನಲ್ಲಿ ವಸತಿಗೃಹ ಹಂಚಿಕೆ ಪಡೆದ ನೌಕರರುಗಳು ಒಟ್ಟು ರೂ.2,09,02,023/–ಗಳ ಬಾಡಿಗೆಯನ್ನು ವಿಶ್ವವಿದ್ಯಾನಿಲಯಕ್ಕೆ ಪಾವತಿಸಬೇಕಾಗಿರುತ್ತದೆ. ಆದರೆ ವಸತಿಗೃಹಗಳ ಹಂಚಿಕೆ ಪಡೆದ ನೌಕರರಿಂದ 2018–19ನೇ ಸಾಲಿನಲ್ಲಿ ಒಟ್ಟು ರೂ.1,87,05,511/–ಗಳು ಮಾತ್ರ ವಸೂಲಿಯಾಗಿದ್ದು, ರೂ.21,96,512/–ಗಳು (2017–18ರ ಅಂತಿಮ ಶಿಲ್ಕನ್ನು ಹೊರತು ಪಡಿಸಿ)ವಸೂಲಾತಿಗೆ ಬಾಕಿಯಿರುತ್ತದೆ. ಬಾಕಿ ಮೊತ್ತವನ್ನು ಏಪ್ರಿಲ್–2019ರ ಮಾಹೆಯಲ್ಲಿ ವಸೂಲಾತಿ ಮಾಡಿ ಜಿ.ಆರ್.ಎ ಖಾತೆಗೆ ಜಮಾ ಮಾಡಲಾಗಿದೆ ಎಂದು ವಿಶ್ವವಿದ್ಯಾನಿಲಯದವರು ಅನುಪಾಲನಾ ವರದಿ ಸಲ್ಲಿಸಿರುತ್ತಾರೆ. ಆದರೆ ಜಮೆಯಾಗಿರುವುದಕ್ಕೆ ಯಾವುದೇ ಮೂಲ ದಾಖಲಾತಿಗಳನ್ನು ಅನುಪಾಲನಾ ವರದಿಯೊಂದಿಗೆ ಸಲ್ಲಿಸಿರುವುದಿಲ್ಲ. ಆದ್ದರಿಂದ **ಬಾಡಿಗೆ ಬಾಕಿ ಮೊತ್ತವನ್ನು ಸಂಬಂಧಿಸಿದವರಿಂದ ವಸೂಲಾತಿ** ಮಾಡಿ ಜಿ.ಆರ್.ಎ ಖಾತೆಗೆ ಜಮೆ ಮಾಡಿರುವ ಮೂಲ ದಾಖಲಾತಿಗಳನ್ನು ಹಾಜರುಪಡಿಸುವವರೆಗೆ **ರೂ.21,96,512/–ಗಳನ್ನು ವಸೂಲಾತಿಗೆ** ಸೂಚಿಸಿದೆ. ವಿವರಗಳನ್ನು **ಅನುಬಂಧ–59** ರಲ್ಲಿ ನೀಡಿದೆ. | ಕಂಡಿಕೆಯಲ್ಲಿ 2018–19ನೇ ಸಾಲಿನ ವಿಶ್ವವಿದ್ಯಾನಿಲಯದ ವಸತಿ ಗೃಹಗಳ ಬೇಡಿಕೆ ವಸೂಲಾತಿ ಮತ್ತು ಬಾಕಿ ವಿವರಗಳ ಬಗ್ಗೆ ಪ್ರಸ್ತಾಪಿಸಲಾಗಿರುತ್ತದೆ. (ಅನುಬಂಧ–59)<br><br>2018–19ಣೇ ಸಾಲಿನಲ್ಲಿ ಅಧ್ಯಾಪಕ/ಅಧ್ಯಾಪಕೇತರ ನೌಕರರುಗಳ ವಸತಿಗೃಹಗಳ ಬಾಡಿಗೆ ಬಾಕಿ, ಬೇಡಿಕೆ ಮತ್ತು ವಸೂಲಾತಿ ಹಾಗೂ ಬಾಕಿ ವಿವರಗಳ ಬಗ್ಗೆ ಅನುಬಂಧದಲ್ಲಿ ವಿವರಿಸಿದ್ದು 2018–19ಣೇ ಸಾಲಿನಲ್ಲಿ 309 ವಸತಿಗೃಹಗಳ ಆರಂಭ ಶುಲ್ಕ(ಬಾಕಿ) ರೂ.4,91,167/–ಗಳು ರೂ.2,09,02,023/–ಗಳು ಬೇಡಿಕೆ ಸೇರಿದಂತೆ ರೂ.2,13,93,190/–ಗಳು ಒಟ್ಟು ಮೊತ್ತದಲ್ಲಿ ರೂ.2,10,80,988/–ಗಳು ವಸೂಲಾತಿಯಾಗಿದ್ದು ರೂ.3,12,202/–ಗಳು ಬಾಕಿ ಉಳಿದಿರುತ್ತದೆ. ಈ ಬಾಕಿ ಉಳಿದಿರುವ ಮೊತ್ತಗಳನ್ನು ಮುಂದಿನ ತಿಂಗಳ ವಸೂಲಾತಿ ಂಆಡುವ ಬಗ್ಗೆ ಅಗತ್ಯ ಕ್ರಮವಹಿಸಲಾಗುವುದು. ವಸೂಲಾತಿ ಮಾಡಿರುವ ಮೊತ್ತವನ್ನು ಜಿ.ಆರ್.ಎ ಖಾತೆಗೆ ಜಮಾ ಮಾಡಿರುವ ವಿವರವನ್ನು ಹಾಗೂ ಚಲನ್ ಪ್ರತಿಗಳನ್ನು ಅಡಹಾಕ್ ಸಮಿತಿ ಸಭೆಗೆ ಮಂಡಿಸುವದಾಗಿ ಹಾಗೂ 309ರ ವಸತಿ ಗೃಹಗಳ ಡಿ.ಸಿ.ಬಿ ವಿವರಣಾ ಪಟ್ಟಿ ಮತ್ತು ಬಾಕಿ ಪಟ್ಟಿಯನ್ನು ಲಗತ್ತಿಸಿ ಸಲ್ಲಿಸುತ್ತಾ ಕಂಡಿಕೆಯ ವಸೂಲಾತಿ ಮೊತ್ತವನ್ನು ತೀರುವಳಿಗೊಳಿಸುವಂತೆ ಕೋರಿದೆ. |
| **11.7.ಕಾಮಗಾರಿ ಬಿಲ್ಲುಗಳಲ್ಲಿ ರೂ.71,344/–ಗಳಷ್ಟು ಕಡಿಮೆ ರಾಜಧನ ಕಟಾಯಿಸಿರುವುದು :**<br><br>ಇಂಜಿನಿಯರಿಂಗ್ ವಿಭಾಗದಿಂದ 2018–19ನೇ ಸಾಲಿನಲ್ಲಿ ನಿರ್ವಹಿಸಲಾದ ವಿವಿಧ ಕಾಮಗಾರಿಗಳಲ್ಲಿ ಬಳಸಲಾದ ಉಪ ಖನಿಜಗಳಿಗೆ ನಿಗದಿತ ದರದಲ್ಲಿ ರಾಜಧನವನ್ನು ಕಟಾಯಿಸದಿರುವುದು/ಕಡಿಮೆ ಮೊತ್ತ ಕಟಾಯಿಸಿ ಕೆಲವು ಬಿಲ್‌ಗಳನ್ನು ಪಾವತಿಸಿರುವುದು ಕಂಡು ಬಂದಿರುತ್ತದೆ. ವಿವರಗಳನ್ನು **ಅನುಬಂಧ–60ರಲ್ಲಿ** ನೀಡಿದೆ. ಈ ಬಗ್ಗೆ ವಿವರಣೆ ನೀಡಲು ವಿಚಾರಣಾ ಪತ್ರ ಸಂಖ್ಯೆ:24/2020–21, ದಿನಾಂಕ:16.07.2020ನ್ನು ನೀಡಲಾಗಿದ್ದರೂ, ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ. ಹೀಗಾಗಿ ರಾಜಧನದ ವ್ಯತ್ಯಾಸದ ಒಟ್ಟು ಮೊತ್ತ **ರೂ.71,344/–ಗಳನ್ನು** | ಇಂಜಿನಿಯರಿಂಗ್ ವಿಭಾಗದಲ್ಲಿ 2018–19ನೇ ಸಾಲಿನಲ್ಲಿ ನಿರ್ವಹಿಸಿದ ವಿವಿಧ ಕಾಮಗಾರಿಗಳಲ್ಲಿ ಬಳಸಲಾದ ಉಪಖನಿಜಗಳಿಗೆ ನಿಗದಿತ ದರದಲ್ಲಿ ರಾಜಧನವನ್ನು ಕಟಾಯಿಸದಿರುವುದು/ಕಡಿಮೆ ಮೊತ್ತ ಕಟಾಯಿಸಿರುವ ವಿವರಗಳನ್ನು ಅನುಬಂಧ–60ರಲ್ಲಿ ಪ್ರಸ್ತಾಪಿಸಿದ ಈ ವ್ಯತ್ಯಾಸದ ಒಟ್ಟು ಮೊತ್ತ ರೂ.71,344/–ಗಳನ್ನು ವಸೂಲಿಸಿ ಸರ್ಕಾರದ ಸಂಬಂಧಪಟ್ಟ ಖಾತೆಗೆ ಪ್ರಸ್ತಾಪಿಸಲಾಗಿರುತ್ತದೆ.<br>ಕಂಡಿಕೆಯ ಪ್ರಸ್ತಾವನೆಯ ಅನ್ವಯ ಮೆ॥ ಬಿ.ಎಸ್.ಆರ್ ಇನ್‌ಪ್ರಾಟೆಕ್ ಇಂಡಿಯಾ ಲೀ. ಬೆಂಗಳೂರು. ಇವರ 4ನೇ ಮತ್ತು ಅಂತಿಮ ಬಿಲ್ಲಿನಲ್ಲಿ ಅನುಬಂಧ–60ರ ರೀತ್ಯ ರಾಜಧನದ ಒಟ್ಟು ಮೊತ್ತ |

| | |
|---|---|
| ಸಂಬಂಧಿಸಿದ ಗುತ್ತಿಗೆದಾರರಿಂದ ವಸೂಲಿಸಿ ಸರ್ಕಾರದ ಸಂಬಂಧಿಸಿದ ಖಾತೆಗೆ ಜಮೆ ಮಾಡಲು ಸೂಚಿಸಿದೆ. | ರೂ.71,344/–ಗಳನ್ನು ಕಡಿತಗೊಳಿಸಿ ಸರ್ಕಾರದ ಸಂಬಂಧಪಟ್ಟ ಖಾತೆಗೆ ಜಮಮಾಡಿರುವುದಾಗಿ ನಿವೇದಿಸುತ್ತಾ, ಕಂಡಿಕೆಯಲ್ಲಿನ ವಸೂಲಾತಿ ಮೊತ್ತ ರೂ.71,344/–ಗಳನ್ನು ತೀರುವಳಿಗೊಳಿಸುವಂತೆ ಕೋರಿದೆ.<br><br>ಮುಂದುವರಿದು ರಾಜಧನ ವ್ಯತ್ಯಾಸದ ಮೊತ್ತದ ಬಗ್ಗೆ ಕೆಳಕಂಡಂತೆ ವಸೂಲಾತಿಯ ಕಂಡಿಕೆ.<br>2015–16ನೇ ಸಾಲು ರೂ.2,55,265/–<br>2016–17ನೇ ಸಾಲು ರೂ.4,99,029/–<br>2017–18ನೇ ಸಾಲು ರೂ. 10,498/–<br>2018–19ನೇ ಸಾಲು ರೂ. 71,344/– (ಕಂಡಿಕೆ 11.7)<br>ಒಟ್ಟು ರೂ. 8,36,136/–<br><br>ಒಟ್ಟು ಮೊತ್ತ ರೂ.8,36,136/–ಗಳನ್ನು ದಿನಾಂಕ:18–04–2021ರಂದು ಸರ್ಕಾರದ ಸಂಬಂಧಪಟ್ಟ ಖಾತೆಗೆ ಜಮಮಾಡಿರುವ ಚಲನ್ ಪ್ರತಿ ಲಗತ್ತಿಸಿ, ತೀರುವಳಿಗಾಗಿ ಸಲ್ಲಿಸಲಾಗಿರುತ್ತದೆ. |
| **11.8. ವಿಶ್ವವಿದ್ಯಾನಿಲಯದ ವಿವಿಧ ವಿಭಾಗಗಳು ಹಾಗೂ ಅಣುಜೀವ ವಿಜ್ಞಾನ ಮತ್ತು ಸಾವಯವ ರಸಾಯನ ವಿಜ್ಞಾನ ಅಧ್ಯಯನ ವಿಭಾಗ ಹಾಗೂ ಜೆನೆಟಿಕ್ಸ್ ಮತ್ತು ಜೀನೊಮಿಕ್ಸ್ ಅಧ್ಯಯನ ವಿಭಾಗಕ್ಕೆ ಸರಬರಾಜು ಮಾಡಲಾಗಿರುವ ಪೀಠೋಪಕರಣಗಳ ಗುಣಮಟ್ಟದ ಬಗ್ಗೆ ಪ್ರಮಾಣ ಪತ್ರ ಹಾಜರುಪಡಿಸದಿರುವುದು :**<br><br>ವಿಶ್ವವಿದ್ಯಾನಿಲಯದ ವಿವಿಧ ವಿಭಾಗಗಳ ತರಗತಿಗಳಿಗೆ ಮೆ.ಎರ್ಗೊಮ್ಯಾಕ್ಸ್ಇಂಡಿಯಾ ಪ್ರೈ ಲಿ., ಚೆನ್ನೈರವರಿಂದ ರೂ.38,94,250/–ಗಳ ಮೊತ್ತಕ್ಕೆ ಡೆಸ್ಕ್‌ಗಳನ್ನು ಹಾಗೂ ಅಣುಜೀವ ವಿಜ್ಞಾನ ಮತ್ತು ಸಾವಯವ ರಸಾಯನ ವಿಜ್ಞಾನ ಅಧ್ಯಯನ ವಿಭಾಗ ಹಾಗೂ ಜೆನೆಟಿಕ್ಸ್ ಮತ್ತು ಜೀನೊಮಿಕ್ಸ್ ಅಧ್ಯಯನ ವಿಭಾಗಕ್ಕೆ ಮೆ.ಡಿ.ಎಸ್.ಎಂಅಸೋಷಿಯೇಟ್ಸ್‌ರವರಿಂದ ರೂ.31,17,709/–ಗಳ ಮೊತ್ತಕ್ಕೆ ಪೀಠೋಪಕರಣಗಳನ್ನು ಖರೀದಿಸಲಾಗಿರುತ್ತದೆ. ಡೆಸ್ಕ್‌ಗಳ ಖರೀದಿಗೆ ಟೆಂಡರ್‌ಗಿಟ್ಟ ಮೊತ್ತ ರೂ.99,74,250/–ಗಳಿದ್ದು, ಟೆಂಡರ್ ಆದ ಮೊತ್ತ ರೂ.38,94,250/–ಗಳಾಗಿರುತ್ತದೆ. ಹೀಗಾಗಿ ಟೆಂಡರ್‌ಗಿಟ್ಟ ಮೊತ್ತಕ್ಕಿಂತ ಟೆಂಡರ್‌ನಲ್ಲಿ ನಮೂದಿಸಿದ ಮೊತ್ತ ಶೇ.60.95ರಷ್ಟು ಕಡಿಮೆಯಿರುತ್ತದೆ. ಅಣುಜೀವ ವಿಜ್ಞಾನ ಮತ್ತು ಸಾವಯವ ರಸಾಯನ ವಿಜ್ಞಾನ ಅಧ್ಯಯನ ವಿಭಾಗ ಹಾಗೂ ಜೆನೆಟಿಕ್ಸ್ ಮತ್ತು ಜೀನೊಮಿಕ್ಸ್ ಅಧ್ಯಯನ ವಿಭಾಗಕ್ಕೆ ಪೀಠೋಪಕರಣಗಳ ಖರೀದಿಯಲ್ಲಿ ಟೆಂಡರ್‌ಗಿಟ್ಟ ಮೊತ್ತ ರೂ.50.00ಲಕ್ಷಗಳಿದ್ದು, ಟೆಂಡರ್‌ಆದ ಮೊತ್ತ ರೂ.41,24,019/–ಗಳಾಗಿರುತ್ತದೆ. ಇಲ್ಲಿ ಟೆಂಡರ್‌ಗಿಟ್ಟ ಮೊತ್ತಕ್ಕಿಂತ ಟೆಂಡರ್‌ನಲ್ಲಿ ನಮೂದಿಸಿದ ಮೊತ್ತ ಶೇ.17.32ರಷ್ಟು ಕಡಿಮೆಯಿರುತ್ತದೆ. | ವಿಶ್ವವಿದ್ಯಾನಿಲಯದ ವಿವಿಧ ವಿಭಾಗಗಳು ಹಾಗೂ ಅಣುಜೀವ ವಿಜ್ಞಾನ ಮತ್ತು ಸಾವಯವ ರಸಾಯನ ವಿಜ್ಞಾನ ಅಧ್ಯಯನ ವಿಭಾಗ ಹಾಗೂ ಜೆನಿಟಿಕ್ಸ್ ಮತ್ತು ಜಿನೋಮಿಕ್ಸ್ ಅಧ್ಯಯನ ವಿಭಾಗಕ್ಕೆ ಸರಬರಾಜು ಮಾಡಲಾಗಿರುವ ಪೀಠೋಪಕರಣಗಳ ಗುಣಮಟ್ಟದ ಬಗ್ಗೆ ಪ್ರಮಾಣ ಪತ್ರ ಹಾಜರು ಪಡಿಸದಿರುವ ಬಗ್ಗೆ, ಹಾಗೂ ಈ ವ್ಯವಹರಣೆಯಲ್ಲಿ ನ್ಯೂನ್ಯತೆಗಳ ಬಗ್ಗೆ ಕಂಡಿಕೆಯಲ್ಲಿ ಪ್ರಸ್ತಾಪಿಸಲಾಗಿರುತ್ತದೆ.<br><br>ಕಂಡಿಕೆಯಲ್ಲಿ ತಿಳಿಸಿರುವ ಎಲ್ಲಾ ನ್ಯೂನ್ಯತೆಗಳು ಮತ್ತು ವ್ಯತ್ಯಾಸದ ಮೊತ್ತ ಹಾಗೂ ಇತರೆ ಎಲ್ಲಾ ಅಂಶಗಳನ್ನು ಪರಿಗಣಿಸಲಾಗಿದ್ದು, ಇನ್ನು ಮುಂದೆ ಪೀಠೋಪಕರಣಗಳ ಖರೀದಿಯಲ್ಲಿನ ಟೆಂಡರ್‌ಅನ್ನು ಕ್ರಮಬದ್ಧವಾಗಿ ನಿರ್ವಹಿಸಿ ಹಾಗೂ ಖರೀದಿಸಿದ ಪೀಠೋಪಕರಣಗಳ ಗುಣಮಟ್ಟವನ್ನು ಸಕ್ಷಮ ಪ್ರಾಧಿಕಾರದಿಂದ ಪರಿಶೀಲಿಸಿ, ಪರಿಶೀಲನಾ ಪ್ರಮಾಣ ಪತ್ರವನ್ನು ಪಡೆದುಕೊಳ್ಳುವ ಬಗ್ಗೆ ಅಗತ್ಯ ಕ್ರಮವಹಿಸುವುದಾಗಿ ನಿವೇದಿಸುತ್ತಾ ಕಂಡಿಕೆಯ ಆಕ್ಷೇಪಣೆಯ ಒಟ್ಟು ಮೊತ್ತ ರೂ.70,11,959/–ಗಳನ್ನು ತೀರುವಳಿಗೊಳಿಸುವಂತೆ ಕೋರಲಾಗಿದೆ. |

ಈ ವ್ಯವಹರಣೆಯಲ್ಲಿ ಕೆಳಕಂಡ ನ್ಯೂನತೆಗಳನ್ನು ಗಮನಿಸಲಾಗಿರುತ್ತದೆ.

- ಡೆಸ್ಕ್‌ಗಳ ಖರೀದಿ ಟೆಂಡರ್‌ನಲ್ಲಿ ಟೆಂಡರ್‌ಗಿಟ್ಟ ಮೊತ್ತ ಹಾಗೂ ನಮೂದಿಸಿದ ಮೊತ್ತಗಳ ನಡುವೆ ಶೇ.60.65ರಷ್ಟು ಹಾಗೂ ಅಣುಜೀವ ವಿಜ್ಞಾನ ಮತ್ತು ಸಾವಯವ ರಸಾಯನ ವಿಜ್ಞಾನ ಅಧ್ಯಯನ ವಿಭಾಗ ಹಾಗೂ ಜೆನೆಟಿಕ್ಸ್ ಮತ್ತು ಜೀನೊಮಿಕ್ಸ್ ಅಧ್ಯಯನ ವಿಭಾಗಕ್ಕೆ ಪೀಠೋಪಕರಣಗಳ ಖರೀದಿಯಲ್ಲಿ ಈ ವ್ಯತ್ಯಾಸದ ಮೊತ್ತ ಶೇ.17.32ರಷ್ಟಿರುತ್ತದೆ. ಇಷ್ಟೊಂದು ಬೃಹತ್ ವ್ಯತ್ಯಾಸವನ್ನು ಗಮನಿಸಿದಾಗ ಅಂದಾಜು ಪಟ್ಟಿಯನ್ನು ಕರಾರುವಕ್ಕಾದ ನಿರ್ದಿಷ್ಟತೆಯೊಡನೆ ವೈಜ್ಞಾನಿಕವಾಗಿ ತಯಾರಿಸದಿರುವುದು ಸ್ಪಷ್ಟವಾಗುತ್ತದೆ.
- ಅಣುಜೀವ ವಿಜ್ಞಾನ ಮತ್ತು ಸಾವಯವ ರಸಾಯನ ವಿಜ್ಞಾನ ಅಧ್ಯಯನ ವಿಭಾಗ ಹಾಗೂ ಜೆನೆಟಿಕ್ಸ್ ಮತ್ತು ಜೀನೊಮಿಕ್ಸ್ ಅಧ್ಯಯನ ವಿಭಾಗಕ್ಕೆ ಪೀಠೋಪಕರಣಗಳ ಖರೀದಿಯಲ್ಲಿ ಟೆಂಡರ್‌ನಲ್ಲಿ ನಮೂದಿಸಿದ ಮೊತ್ತ ರೂ.41,24,019/–ಗಳಿದ್ದು, ಬಿಲ್ಲಿನ ಮೊತ್ತ ರೂ.ರೂ.31,17,709/–.
- ಡೆಸ್ಕ್‌ಗಳ ಖರೀದಿ ಟೆಂಡರ್‌ನಲ್ಲಿ ಟೆಂಡರ್‌ಗಿಟ್ಟ ಮೊತ್ತಕ್ಕಿಂತ ಸರಬರಾಜುದಾರರು ಕಡಿಮೆ ಮೊತ್ತವನ್ನು ನಮೂದಿಸಿದಾಗ, ಕರಾರು ಮಾಡಿಕೊಳ್ಳುವಾಗ ಕಟ್ಟಿಸಿಕೊಳ್ಳಬೇಕಾದ ಟೆಂಡರ್‌ಗಿಟ್ಟ ಮೊತ್ತ ಹಾಗೂ ನಮೂದಿಸಿದ ಮೊತ್ತಗಳ ವ್ಯತ್ಯಾಸದ ಮೊತ್ತವನ್ನು ಭದ್ರತಾ ಮೊತ್ತವಾಗಿ ಭದ್ರತಾಠೇವಣಿಯ ಜೊತೆ ಕಟ್ಟಿಸಿಕೊಂಡಿರುವುದಿಲ್ಲ.
- ಎರಡೂ ಪ್ರಕರಣಗಳಲ್ಲಿ ಸರಬರಾಜಾದ ಪೀಠೋಪಕರಣಗಳ ಗುಣಮಟ್ಟ ಪರಿಶೀಲನಾ ಪ್ರಮಾಣಪತ್ರವನ್ನು ಸಕ್ಷಮ ಪ್ರಾಧಿಕಾರದಿಂದ ಪಡೆದುಕೊಂಡು ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲ.

ಈ ಸಂಬಂಧ ವಿಚಾರಣೆ ಪತ್ರ ಸಂಖ್ಯೆ:14/02.07.2020 ಹಾಗೂ ಸಂಖ್ಯೆ: 34/22.07.2020ರಲ್ಲಿ ವಿವರಣೆ ಕೋರಿದ್ದರೂ ಸಹ ಯಾವುದೇ ಉತ್ತರ ನೀಡಿರುವುದಿಲ್ಲ. ಆದುದರಿಂದ ಈ ಎರಡೂ ವ್ಯವಹರಣೆಗಳಲ್ಲಿ ಪಾವತಿಸಿರುವ ಒಟ್ಟು ಮೊತ್ತ **ರೂ.70,11,959/– (ರೂ.38,94,250/–+ ರೂ.31,17,709/–)**ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.

| | |
|---|---|
| **11.9. ಅಧ್ಯಾಪಕೇತರ ತಾತ್ಕಾಲಿಕ ನೌಕರರಿಂದ ವಸತಿ ಗೃಹಗಳ ಬಾಡಿಗೆ ವಸೂಲಿ ಬಗ್ಗೆ ದಾಖಲೆಗಳನ್ನು ಹಾಜರುಪಡಿಸದಿರುವುದು :**<br><br>ವಿಶ್ವವಿದ್ಯಾನಿಲಯದಲ್ಲಿ ತಾತ್ಕಾಲಿಕ ನೌಕರರಾಗಿ ಸೇವೆ ಸಲ್ಲಿಸುತ್ತಿರುವ 33 ಮಂದಿ ಅಧ್ಯಾಪಕೇತರ ನೌಕರರಿಗೆ ವಸತಿ ಗೃಹಗಳನ್ನು ಬಾಡಿಗೆಗೆ ಹಂಚಿಕೆ ಮಾಡಲಾಗಿದೆ. ಈ ಸಂಬಂಧ ಅವರಿಂದ ವೇತನದಲ್ಲಿ ಪ್ರತಿ ತಿಂಗಳು ಬಾಡಿಗೆ/ಹೆಚ್.ಆರ್.ಎ ಕಟಾಯಿಸಿರುವ ವಿವರಗಳನ್ನು ಲೆಕ್ಕತಪಾಸಣೆಗೆ ಹಾಜರುಪಡಿಸಿರುವುದಿಲ್ಲ.<br><br>ಅಧ್ಯಾಪಕರಿಗೆ ಮೀಸಲಿಟ್ಟಿರುವ ವಸತಿ ಗೃಹಗಳನ್ನು ಅಧ್ಯಾಪಕೇತರರಿಗೆ/ತಾತ್ಕಾಲಿಕ ನೌಕರರುಗಳಿಗೆ ಹಂಚಿಕೆ ಮಾಡಿರುವ ಬಗ್ಗೆ ವಸತಿ ಗೃಹಗಳ ವಿವರಗಳನ್ನು ಹಾಜರುಪಡಿಸಿರುವುದಿಲ್ಲ. ಇದರಿಂದಾಗಿ ಈ ವಸತಿ ಗೃಹಗಳಲ್ಲಿರುವವರಿಂದ ಸಂದಾಯವಾಗಬೇಕಾದ ಬಾಡಿಗೆ ಎಷ್ಟು? ಸಂದಾಯವಾದದ್ದೆಷ್ಟು? ಬಾಕಿ ಎಷ್ಟಿದೆ? ಎಂಬ ಬಗೆಗಿನ ವಿವರಗಳನ್ನು ಖಚಿತಪಡಿಸಿಕೊಳ್ಳಲು ಆಗಿರುವುದಿಲ್ಲ. | ವಿಶ್ವವಿದ್ಯಾನಿಲಯದಲ್ಲಿ ತಾತ್ಕಾಲಿಕ ನೌಕರರಾಗಿ ಸೇವೆ ಸಲ್ಲಿಸುತ್ತಿರುವ 33 ಮಂದಿ ಅಧ್ಯಾಪಕೇತರ ನೌಕರರಿಗೆ ವಸತಿ ಗೃಹಗಳನ್ನು ಬಾಡಿಗೆಗೆ ಹಂಚಿಕೆ ಮಾಡಲಾಗಿದೆ. ಈ ಸಂಬಂಧ ಅವರಿಂದ ವೇತನದಲ್ಲಿ ಪ್ರತಿ ತಿಂಗಳು ಬಾಡಿಗೆ/ಹೆಚ್.ಆರ್.ಎ ಕಟಾಯಿಸಿರುವ ವಿವರಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲವಾಗಿ ಕಂಡಿಕೆಯಲ್ಲಿ ಪ್ರಸ್ತಾಪಿಸಲಾಗಿರುತ್ತದೆ.<br><br>ವಿಶ್ವವಿದ್ಯಾನಿಲಯದ ತಾತ್ಕಾಲಿಕ ಭೋಧಕೇತರ ನೌಕರರುಗಳಲ್ಲಿ ಅವಶ್ಯಕವಿರುವವರಿಗೆ ವಸತಿ ಗೃಹಗಳನ್ನು ಹಂಚಿಕೆ ಮಾಡಿದ್ದು ಇವರುಗಳಿಗೆ ಯಾವುದೇ ಹೆಚ್,ಆರ್,ಎ ನೀಡದೆ ನಿಗಧಿತ ಮನೆ ಬಾಡಿಗೆಯನ್ನು ಅವರುಗಳ ಮಾಸಿಕ ವೇತನದಿಂದ ಕಡಿತಗೊಳಿಸಲಾಗುತ್ತಿದೆ ಹಾಗೂ ಇವರುಗಳಿಗೆ ಪ್ರತ್ಯೇಕವಾಗಿ ವಸತಿ ಗೃಹದ ಡಿ,ಸಿ,ಬಿ ವಹಿ ನಿರ್ವಹಿಸಿರುವುದಿಲ್ಲವಾಗಿ ತಮ್ಮಲ್ಲಿ ನಿವೇದಿಸುತ್ತಾ 2018–19ನೇ ಸಾಲಿನ **ಕಂಡಿಕೆ ಸಂಖ್ಯೆ:– 11.6 ಅನುಬಂಧ–59ರ ಅಂಕಣ (3) ರಲ್ಲಿರುವ** ಒಟ್ಟು 309 ವಸತಿ ಗೃಹಗಳಲ್ಲಿ ವಾಸಿಸುತ್ತಿರುವ ನೌಕರರಗಳಲ್ಲಿ ಪ್ರಸ್ತುತ ಕಂಡಿಕೆಯಲ್ಲಿ ಪ್ರಸ್ತಾಪಿಸಿರುವ 33 ಮಂದಿ ತಾತ್ಕಾಲಿಕ ಭೋಧಕೇತರ ನೌಕರರು ಸಹ ಸೇರಿರುತ್ತಾರೆ ಇವರುಗಳಿಂದ 2018–19ನೇ ಸಾಲಿಗೆ ಸಂದಾಯವಾಗಬೇಕಾದ ಬಾಡಿಗೆ ರೂ.10,16,047/–ಗಳು ಹಿಂದಿನ ಸಾಲಿನ ಬಾಕಿ ರೂ.1,72,805/–ಗಳು ಸೇರಿದಂತೆ ಒಟ್ಟು ರೂ.11,88,852/–ಗಳಲ್ಲಿ 2018–19ನೇ ಸಾಲಿನಲ್ಲಿ ಒಟ್ಟು ರೂ.11,47,602/–ಗಳು ಬಾಡಿಗೆ ವಸೂಲಾಗಿದ್ದು ರೂ.41,250/–ಗಳು ಬಾಕಿ ಉಳಿದಿದ್ದು ಮುಂದಿನ ದಿನಗಳಲ್ಲಿ ಸದರಿ ಮೊತ್ತವನ್ನು ಕಡಿತಗೊಳಿಸಲಾಗಿರುತ್ತದೆ. ಈ 33 ಮಂದಿ ತಾತ್ಕಾಲಿಕ ಅಧ್ಯಾಪಕೇತರ ನೌಕರರುಗಳ ವಸತಿ ಗೃಹಗಳ ಡಿ,ಸಿ,ಬಿ ವಿವರಣಾ ಪಟ್ಟಿಯನ್ನು ಲಗತ್ತಿಸಿ ಸಲ್ಲಿಸಿದೆ. |
| **ಅಧ್ಯಾಯ–12**<br>**ಯುವರಾಜ ಕಾಲೇಜು (ಸ್ವಾಯತ್ತ)**<br>**12.1. ಯುವರಾಜ ಕಾಲೇಜು ಕಾಮಗಾರಿ ಬಿಲ್ಲುಗಳಲ್ಲಿ ಕಾರ್ಯಪಾಲಕ ಇಂಜಿನಿಯರ್ ರವರು ಅಳತೆ ಪರಿಶೀಲನೆ ದಾಖಲಿಸದಿರುವುದು :**<br><br>ಕ್ರೀಡಾ ಪೆವಿಲಿಯನ್ ಬಳಿಯ ವಾಣಿವಿಲಾಸ ನೀರು ಪೂರೈಕೆ ಪೈಪ್ಲೈನ್‌ನಿಂದ ಕಾಲೇಜಿನ ಹಳೆಯ ಬ್ಲಾಕ್ ಹಾಗೂ ಪ್ರಯೋಗಾಲಯ ಬ್ಲಾಕ್‌ಗೆ ನೀರು ಪಡೆಯಲು ನಿರ್ವಹಿಸಿದ ಕಾಮಗಾರಿ ಬಿಲ್‌ಗಳನ್ನು ಪರಿಶೀಲಿಸಲಾಗಿ, ಕಾಮಗಾರಿಯ ಅಂದಾಜು ಮೊತ್ತ ರೂ.1,98,000/–ಆಗಿದ್ದು, ಕರಾರು ಸಂಖ್ಯೆಯ:41/05.07.2018 ಬಿಲ್ ಮೊತ್ತ ರೂ.1,65,403/– ಗುತ್ತಿಗೆದಾರರು ಪಿ.ಪುಟ್ಟಸ್ವಾಮಿರವರಿಂದ | ಕಂಡಿಕೆಯಲ್ಲಿ ಕ್ರೀಡಾ ಪೆವಿಲಿಯನ್ ಬಳಿಯ ವಾಣಿವಿಲಾಸ ನೀರು ಪೂರೈಕೆ ಪೈಪ್ಲೈನ್‌ನಿಂದ ಕಾಲೇಜಿನ ಹಳೆಯ ಬ್ಲಾಕ್ ಹಾಗೂ ಪ್ರಯೋಗಾಲಯ ಬ್ಲಾಕ್‌ಗೆ ನೀರು ಪಡೆಯಲು ನಿರ್ವಹಿಸಿದ ಕಾಮಗಾರಿಯನ್ನು ಗುತ್ತಿಗೆದಾರರಾದ ಶ್ರೀ. ಪಿ.ಪುಟ್ಟಸ್ವಾಮಿಯವರು ನಿರ್ವಹಿಸಿದ ಸಂಬಂಧವಾಗಿ ಕಾರ್ಯಪಾಲಕ ಅಭಿಯಂತರು ಕರ್ನಾಟಕ ಕರ್ನಾಟಕ ಲೋಕೋಪಯೋಗಿ ನಿಯಮಾನುಸಾರ ಶೇ 10 |

| | |
|---|---|
| ನಿರ್ವಹಿಸಲಾಗಿರುತ್ತದೆ. ಕರ್ನಾಟಕ ಲೋಕೋಪಯೋಗಿ ಇಲಾಖಾ ಸಂಹಿತೆಯ ನಿಯಮ–110(9) ರಂತೆ ಕಾಮಗಾರಿಯ ಅಂದಾಜು ಮೊತ್ತ ರೂ.25.00 ಲಕ್ಷಕ್ಕಿಂತ ಕಡಿಮೆಯಿರುವ ಕಾಮಗಾರಿಗಳ ಸಂದರ್ಭದಲ್ಲಿ ಕಾರ್ಯಪಾಲಕ ಇಂಜಿನಿಯರ್‌ರವರು ಶೇ.10%ರಷ್ಟು ಅಳತೆ ಪರಿಶೀಲನೆ ಮಾಡಿ ಅಳತೆ ಪುಸ್ತಕದಲ್ಲಿ ದಾಖಲಿಸಬೇಕಾಗಿರುತ್ತದೆ. ಆದರೆ ಕಾಮಗಾರಿಯ ಅಳತೆ ಪುಸ್ತಕವನ್ನು ಪರಿಶೀಲಿಸಿದಾಗ ಅಳತೆ ಪರಿಶೀಲನೆ ಮಾಡಿ ದಾಖಲಿಸದಿರುವುದು ಕಂಡು ಬಂದಿರುತ್ತದೆ. ಹೀಗಾಗಿ ಈ ಬಾಬ್ತು ಪಾವತಿಸಿರುವ ಮೊತ್ತ **ರೂ.1,65,043/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.** | ರಷ್ಟು ಅಳತೆ ಪರಿಶೀಲನೆ ಮಾಡಿ ಅಳತೆ ಪುಸ್ತಕದಲ್ಲಿ ದಾಖಾಲಿಸದಿರುವ ಬಗ್ಗೆ ಪ್ರಸ್ತಾಪಿಸಲಾಗಿರುತ್ತದೆ.<br><br>ಸದರಿ ಕಾಮಗಾರಿಯ ಬಿಲ್‌ನ ಬಿ.ಆರ್.ನಂ.305/2018–19 ದಿನಾಂಕ:11.07.2018 ರ ಅಳತೆ ಪುಸ್ತಕ ಸಂಖ್ಯೆ:–2195 ಪುಟ ಸಂಖ್ಯೆ:–51ರಲ್ಲಿ ಕಾಮಗಾರಿ ಕ್ರಮ ಸಂಖ್ಯೆ:–02 ಮತ್ತು 03ರ (99,000+9,250) ಒಟ್ಟು ಮೊತ್ತ ರೂ.1,08,250/–ಗಳಿಗೆ ಅಳತೆ ಪರಿಶೀಲಿಸಿ ಧೃಢೀಕರಿಸಿ ದಾಖಲಿಸಲಾಗಿರುತ್ತದೆ. ಈ ಸಂಬಂಧ ಧೃಢೀಕರಿಸಿದ ಜೆರಾಕ್ಸ್ ಪ್ರತಿಗಳನ್ನು ಲಗತ್ತಿಸಿದ್ದು ಹಾಗೂ ಮೂಲ ಅಳತೆ ಪುಸ್ತಕವನ್ನು ಮುಂದಿನ ಲೆಕ್ಕಪರಿಶೋಧನೆಗೆ ಹಾಜರುಪಡಿಸುವುದಾಗಿ ನಿವೇದಿಸುತ್ತಾ ಕಂಡಿಕೆಯ ಆಕ್ಷೇಪಣೆ ಮೊತ್ತ ರೂ.1,65,403/–ಗಳನ್ನು ತೀರುವಳಿಗೊಳಿಸುವಂತೆ ಕೋರಲಾಗಿದೆ. |
| **12.2. ಯುವರಾಜ ಕಾಲೇಜಿನಲ್ಲಿ ಅಂಕಪಟ್ಟಿಗಳ ಮುದ್ರಣ ವೆಚ್ಚದ ವಿವರಗಳು ಹಾಗೂ ದಾಸ್ತಾನು ಸ್ವೀಕೃತಿ ಮತ್ತು ವಿತರಣಾ ವಹಿಯನ್ನು ಲೆಕ್ಕಪರಿಶೋಧನಗೆ ಹಾಜರುಪಡಿಸದಿರುವುದು :**<br><br>2018–19ನೇ ಸಾಲಿನ ಯುವರಾಜ ಕಾಲೇಜಿನ ಲೆಕ್ಕಪರಿಶೋಧನೆಗೆ ಅಂಕಪಟ್ಟಿಗಳ ಮುದ್ರಣ ವೆಚ್ಚ ಹಾಗೂ ದಾಸ್ತಾನು ಸ್ವೀಕೃತಿ/ವಿತರಣಾ ವಹಿಯನ್ನು ಪೂರಕ ಲೆಕ್ಕಪತ್ರ ದಾಖಲೆಗಳೊಂದಿಗೆ ಲೆಕ್ಕಪರಿಶೋಧನೆಗೆ ಹಾಜರುಪಡಿಸುವಂತೆ ವಿಚಾರಣೆ ಪತ್ರ:09/2020–21 ದಿನಾಂಕ:31.08.2020, 24/2020–21, ದಿನಾಂಕ:10.09.2020 ಹಾಗೂ 43/2020–21 ದಿನಾಂಕ:18.09.2020ರಲ್ಲಿ ಕೋರಲಾಗಿತ್ತು. ಕೊನೆಯ ದಿನದವರೆಗೂ ಈ ಸಂಬಂಧ ಯಾವುದೇ ವೋಚರ್‌ಗಳು, ದಾಖಲೆಗಳ ವಿವರಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲ. ಇದರಿಂದಾಗಿ ಸದರಿ ಸಾಲಿನಲ್ಲಿ ಸ್ನಾತಕ ಹಾಗೂ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ವಿತರಿಸಲಾದ ಅಂಕಪಟ್ಟಿಗಳ ಮುದ್ರಣ ವೆಚ್ಚ ಹಾಗೂ ದಾಸ್ತಾನಿನ ಖಚಿತ ವಿವರವನ್ನು ಪಡೆಯಲು ಸಾಧ್ಯವಾಗಿರುವುದಿಲ್ಲ. ಹಾಗೂ ಹಿಂದಿನ ಸಾಲುಗಳಲ್ಲಿ ಬಾಕಿ ಉಳಿದ ಅಂಕಪಟ್ಟಿಗಳ ದಾಸ್ತಾನು, ಪ್ರಸ್ತುತ ಸಾಲಿನ ಅಂಕಪಟ್ಟಿಗಳ ಮುದ್ರಣ ವಿವರವನ್ನು ಪಡೆಯಲು ಕೂಡ ಸಾಧ್ಯವಾಗಿರುವುದಿಲ್ಲ. ಅಂಕಪಟ್ಟಿಗಳ ದಾಸ್ತಾನು ಹಾಗೂ ಸ್ವೀಕೃತಿ ವಹಿ ಪರೀಕ್ಷಾಂಗ ವಿಭಾಗದ ಪ್ರಮುಖ ದಾಖಲೆಗಳಲ್ಲೊಂದಾಗಿದ್ದು, ಲೆಕ್ಕಪರಿಶೋಧನಾ ಅವಧಿಯಲ್ಲಿ ಸದರಿ ದಾಖಲೆಗಳನ್ನು ಹಾಜರುಪಡಿಸದಿರುವುದರಿಂದ ಈ ಸಂಬಂಧ ಮುಂದಿನ ದಿನಗಳಲ್ಲಿ ಯಾವುದಾದರೂ ಸಮಸ್ಯೆಗಳುಂಟಾದಲ್ಲಿ, ಅದಕ್ಕೆ ಸಂಬಂಧಿಸಿದ ಅಧಿಕಾರಿ/ಸಿಬ್ಬಂದಿ ವರ್ಗದವರೇ ನೇರ ಹೊಣೆಗಾರರಾಗುತ್ತಾರೆ. ಈ ಸಂಬಂಧ ಸೂಕ್ತ ಆಡಳಿತಾತ್ಮಕ ಕ್ರಮ ಕೈಗೊಳ್ಳಲು ಕಾಲೇಜಿನ ಮುಖ್ಯಸ್ಥರಿಗೆ ತಿಳಿಸಿ, ದಾಖಲೆಗಳನ್ನು ಅನುಪಾಲನಾ ವರದಿಯೊಡನೆ ಸಲ್ಲಿಸುವಂತೆ ಸೂಚಿಸಿದೆ. | ಕಂಡಿಕೆಯಲ್ಲಿ 2018–19ನೇ ಸಾಲಿನ ಅಂಕಪಟ್ಟಿಗಳ ಮುದ್ರಣ ವೆಚ್ಚ ಹಾಗೂ ದಾಸ್ತಾನು ಸ್ವೀಕೃತಿ/ವಿತರಣಾ ವಹಿಯನ್ನು ಪೂರಕ ಲೆಕ್ಕಪತ್ರಗಳನ್ನು ಹಾಜರು ಪಡಿಸದಿರುವ ಬಗ್ಗೆ ಪ್ರಸ್ತಾಪಿಸಲಾಗಿರುತ್ತದೆ.<br><br>2017–18ನೇ ಸಾಲಿನಿಂದ ಪರೀಕ್ಷಾ ಅಂಕಪಟ್ಟಿಗಳ ಮುದ್ರಣ ಕಾರ್ಯವನ್ನು ನಿರ್ವಹಿಸಲು M/s Logisys Pvt Ltd Bangalore ರವರ ಜೊತೆ ಒಟಬಂಡಿಕೆ ಮಾಡಿಕೊಂಡಿದ್ದು ಅಂಕಪಟ್ಟಿಗಳನ್ನು ಸದರಿ ಸಂಸ್ಥೆಯು ಮುದ್ರಿಸಿ ಸರಬರಾಜು ಮಾಡಿರುತ್ತದೆ. ವ2018–19ನೇ ಸಾಲಿನ ಅಂಕಪಟ್ಟಿಗಳ ಮುದ್ರಣ ವೆಚ್ಚ ಹಾಗೂ ಅಂಕಪಟ್ಟಿಗಳ ದಾಸ್ತಾನು ಮತ್ತು ವಿತರಣಾ ವಹಿಯ ಪೂರಕ ಲೆಕ್ಕಪತ್ರವನ್ನು ಮುಂದಿನ ಲೆಕ್ಕಪರಿಶೋಧನಾ ವೇಳೆಯಲ್ಲಿ ಹಾಜರು ಪಡಿಸುವುದಾಗಿ ಕೋರಿದೆ. |

**12.3. ಯುವರಾಜ ಕಾಲೇಜು ಕಾಮಗಾರಿಗಳ ಅಳತೆ ಪುಸ್ತಕಗಳನ್ನು ಪರಿಶೀಲನೆಗೆ ಹಾಜರುಪಡಿಸದಿರುವುದು :**

ಯುವರಾಜ ಕಾಲೇಜಿನ ಜಿ.ಆರ್.ಎ ಖಾತೆಯಲ್ಲಿ ವೆಚ್ಚ ಭರಿಸಿದ ಕಾಮಗಾರಿ ಬಿಲ್ಲುಗಳನ್ನು ಪರಿಶೀಲಿಸಲಾಗಿ ಈ ಕೆಳಕಂಡ ಕಾಮಗಾರಿಗಳ ಅಳತೆ ಪುಸ್ತಕಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲ.

| ಕ್ರಸಂ | ಬಿಲ್ಲಿನ ಸಂಖ್ಯೆ | ಬಿ.ಆರ್ ಸಂಖ್ಯೆ/ ದಿನಾಂಕ | ಕಾಮಗಾರಿ ಹೆಸರು | ಗುತ್ತಿಗೆದಾರರ ಹೆಸರು | ಪಾವತಿ ಮೊತ್ತ (ರೂ.ಗಳಲ್ಲಿ) |
|---|---|---|---|---|---|
| 1 | 1st and Final | 758/ 13.03.2018 | ಆಹಾರ & ಪೋಷಕಾಂಶ ವಿಭಾಗದ ಪ್ರಯೋಗಾಲಯದಲ್ಲಿ ಅನಿಲ ಕೊಳವೆ ಮಾರ್ಗ | ಆರ್.ಉದಯಕುಮಾರ್ | 45,900 |
| 2 | 1st and Final | 894/ 27.03.2018 | Providing Chain link fencing for sericulture plantation behind yuvaraja's canteen | ನಾಗರಾಜು | 99,600 |
| | | | | **ಒಟ್ಟು** | **1,45,500** |

ಮೇಲ್ಕಂಡ ಪಾವತಿಗೆ ಸಂಬಂಧಿಸಿದಂತೆ ಅಳತೆ ಪುಸ್ತಕಗಳನ್ನು ಹಾಜರುಪಡಿಸುವಂತೆ ವಿಚಾರಣೆ ಸಂಖ್ಯೆ:27/ದಿನಾಂಕ:11.09.2020ನ್ನು ನೀಡಲಾಗಿದ್ದರೂ, ಕೋರಿರುವ ಮಾಹಿತಿ/ದಾಖಲೆಯನ್ನು ಹಾಜರುಪಡಿಸದಿರುವುದರಿಂದ ಪಾವತಿಸಲಾಗಿರುವ **ಒಟ್ಟು ಮೊತ್ತ ರೂ.1,45,500/-ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.**

ಯುವರಾಜ ಕಾಲೇಜಿನ ಜಿ.ಆರ್.ಎ ಖಾತೆಯಲ್ಲಿ ವೆಚ್ಚ ಭರಿಸಿದ ಕಾಮಗಾರಿ ಬಿಲ್ಲುಗಳ ಅಳತೆ ಪುಸ್ತಕಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸದಿರುವ ಬಗ್ಗೆ ಕಂಡಿಕೆಯಲ್ಲಿ ಪ್ರಸ್ತಾಪಿಸಲಾಗಿರುತ್ತದೆ.

ಕಂಡಿಕೆಯ ಅಂಕಣದಲ್ಲಿ ಪ್ರಸ್ತಾಪಿಸಿರುವ ಕಾಮಗಾರಿಯ ಅಳತೆ ಪುಸ್ತಕಗಳು ಇಂಜಿನಿಯರಿಂಗ್ ವಿಭಾಗದದಿಂದ ಲೆಕ್ಕಪರಿಶೋಧನೆಗೆ ಹಾಜರುಪಡಿಸಲು ಸಾಧ್ಯವಾಗಿರುವುದಿಲ್ಲ ಕ್ರಮಸಂಖ್ಯೆ(1)ರ ಅಳತೆ ಪುಸ್ತಕ ಸಂಖ್ಯೆ:-2148 ಪುಟಸಂಖ್ಯೆ:-84 ರಿಂದ 85 ಮತ್ತು ಕ್ರಮಸಂಖ್ಯೆ (2)ರ ಅಳತೆ ಪುಸ್ತಕ ಸಂಖ್ಯೆ:-2100 ಪುಟಸಂಖ್ಯೆ:-96 ರಿಂದ 98ರ ಜೆರಾಕ್ಸ್ ಪ್ರತಿಗಳನ್ನು ಲಗತ್ತಿಸಿ ಸಲ್ಲಿಸುತ್ತಾ ಮೂಲ ಅಳತೆ ಪುಸ್ತಕಗಳನ್ನು ಮುಂದಿನ ಲೆಕ್ಕ ತಪಾಸಣೆ/ಅಡಹಾಕ್ ಸಮಿತಿ ಸಭೆಗೆ ಮಂಡಿಸುವುದಾಗಿ ನಿವೇದಿಸುತ್ತಾ ಕಂಡಿಕೆಯ ಆಕ್ಷೇಪಣೆ ಕೈ ಬಿಡುವಂತೆ ಕೋರಲಾಗಿದೆ.

**12.4. ಯುವರಾಜ ಕಾಲೇಜಿನಲ್ಲಿ ವಿದ್ಯಾರ್ಥಿ ವೇತನಕ್ಕೆ ಸಂಬಂಧಿಸಿದ ಲೆಕ್ಕಪತ್ರ ದಾಖಲೆಗಳನ್ನು ಹಾಜರುಪಡಿಸದಿರುವುದು :**

ಯುವರಾಜ ಕಾಲೇಜಿನಲ್ಲಿ (ಸ್ವಾಯತ್ತ), 2018-19ನೇ ಶೈಕ್ಷಣಿಕ ಸಾಲಿನಲ್ಲಿ ವಿವಿಧ ಸ್ನಾತಕ ಹಾಗೂ ಸ್ನಾತಕೋತ್ತರ ಪದವಿ ಕೋರ್ಸ್‌ಗಳಲ್ಲಿ ವ್ಯಾಸಂಗ ಮಾಡಿರುವ ಪ.ಜಾತಿ ಹಾಗೂ ಪ.ಪಂಗಡ (SC/ST) ಹಾಗೂ ಹಿಂದುಳಿದ ವರ್ಗ (OBC) ಗಳ ವಿದ್ಯಾರ್ಥಿಗಳ ವಿದ್ಯಾರ್ಥಿ ವೇತನದಿಂದ ಕಾಲೇಜಿನ ಶುಲ್ಕವನ್ನು ಮರುಭರಿಕೆ ಮಾಡಿಕೊಂಡಿರುವ ಸಂಬಂಧ ಪರಿಶೀಲಿಸಲು ವಿದ್ಯಾರ್ಥಿಗಳ ಸಂಖ್ಯೆ, ಸರಕಾರದಿಂದ ಮಂಜೂರಾಗಿರುವ ವಿದ್ಯಾರ್ಥಿ ವೇತನದ ವಿವರಗಳು ಹಾಗೂ ವಿದ್ಯಾರ್ಥಿ ವೇತನವನ್ನು ಮರುಭರಿಕೆ ಮಾಡಿಕೊಂಡಿರುವುದಕ್ಕೆ ಸಂಬಂಧಿಸಿದಂತೆ ಪೂರಕ ಲೆಕ್ಕಪತ್ರ ದಾಖಲೆಗಳನ್ನು

2018-19ನೇ ಶೈಕ್ಷಣಿಕ ಸಾಲಿನಲ್ಲಿ ವಿವಿಧ ಸ್ನಾತಕ/ಸ್ನಾತಕೋತ್ತರ ಪದವಿಗಳಲ್ಲಿ ವ್ಯಾಸಂಗ ಮಾಡುತ್ತಿರುವ SC/ST ಒಟ್ಟು ವಿದ್ಯಾರ್ಥಿಗಳ ಸಂಖ್ಯೆ:-787 ಆಗಿದ್ದು ಇದರಲ್ಲಿ 622 ವಿದ್ಯಾರ್ಥಿಗಳಿಗೆ ಮಾತ್ರ ವಿದ್ಯಾರ್ಥಿ ವೇತನವು ಸರ್ಕಾರದಿಂದ ಮಂಜೂರಾಗಿರುವ ಮೊತ್ತ ರೂ.1,18,76,605/-ಗಳಾಗಿರುತ್ತದೆ. ಇದನ್ನು ಮುಂದಿನ ದಿನಗಳಲ್ಲಿ ಸಂಬಂಧಪಟ್ಟ ಕಾಲೇಜಿನ ಅನ್ಯ ಖಾತೆಗಳಿಗೆ ವಿಂಗಡಣೆ ಮಾಡಿ ಮಾಹಿತಿಯನ್ನು ಒದಗಿಸಲಾಗುವುದು.

| | |
|---|---|
| ಹಾಜರುಪಡಿಸುವಂತೆ ವಿಚಾರಣೆ ಪತ್ರ:01/2020–21, ದಿನಾಂಕ:17.08.2020, 03/2020–21 ದಿನಾಂಕ:18.08.2020, 20/2020–21, ದಿನಾಂಕ:08.09.2020 ಹಾಗೂ 30/2020–21, ದಿನಾಂಕ:14.09.2020ರ ಮೂಲಕ ಕೋರಲಾಗಿ, ಹಿಂದುಳಿದ ವರ್ಗದ ವಿದ್ಯಾರ್ಥಿಗಳಿಗೆ ಸಂಬಂಧಿಸಿದ ವಿವರ ಹಾಗೂ ವಿದ್ಯಾರ್ಥಿ ವೇತನದ ವಿವರವನ್ನು ಲೆಕ್ಕ ಪರಿಶೋಧನೆಗೆ ಹಾಜರುಪಡಿಸಲಾಗಿರುತ್ತದೆ. ಆದರೆ ಪರಿಶಿಷ್ಟ–ಜಾತಿ ಹಾಗೂ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳ ವಿದ್ಯಾರ್ಥಿ ವೇತನಕ್ಕೆ ಸಂಬಂಧಿಸಿದ ಯಾವುದೇ ದಾಖಲೆಗಳನ್ನು ಲೆಕ್ಕ ಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲ. ಆದ್ದರಿಂದ ಪರಿಶಿಷ್ಟ–ಜಾತಿ ಹಾಗೂ ಪರಿಶಿಷ್ಟ ಪಂಗಡಗಳ ವಿದ್ಯಾರ್ಥಿ ವೇತನದಿಂದ ಕಾಲೇಜಿಗೆ ಮರುಭರಿಕೆಯಾದ ಮೊತ್ತ ವೆಷ್ಟು ಎಂಬುದನ್ನು ಖಚಿತಪಡಿಸಿಕೊಳ್ಳಲು ಆಗಿರುವುದಿಲ್ಲ. ಮರುಭರಿಕೆಯಾಗದಿರುವಷ್ಟು ಮೊತ್ತ ಕಾಲೇಜಿಗೆ ನಷ್ಟವಾಗಿರುವ ಸಂಭವವಿರುವುದರಿಂದ, ಈ ನ್ಯೂನತೆಗೆ ಕಾರಣರಾದವರ ವಿರುದ್ಧ ಆಡಳಿತಾತ್ಮಕ ಕ್ರಮ ಜರುಗಿಸಿ, ಲೆಕ್ಕಪತ್ರ ದಾಖಲೆಗಳನ್ನು ವ್ಯವಸ್ಥಿತವಾಗಿ ನಿರ್ವಹಿಸಿರುವ ಬಗ್ಗೆ ಅನುಪಾಲನಾ ವರದಿಯನ್ನು ಸಲ್ಲಿಸಲು ಸೂಚಿಸಿದೆ. | ಉಳಿದ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ವಿದ್ಯಾರ್ಥಿಗಳ ಆದಾಯ ಮಿತಿ ಮೀರಿದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನವು ಅನ್ವಯವಾಗುವುದಿಲ್ಲ ಹಾಗೂ ಮಂಜೂರಾಗದೆ ಇರುವ ವಿದ್ಯಾರ್ಥಿಗಳಿಂದ ಶುಲ್ಕವನ್ನು ವಸೂಲಾತಿ ಮಾಡಿ ನಂತರ ದಾಖಲೆಗಳನ್ನು ಹಿಂದಿರುಗಿಸಲಾಗುತ್ತದೆ. ಒಂದು ವೇಳೆ ವಿದ್ಯಾರ್ಥಿ ವೇತನ ಸರ್ಕಾರದಿಂದ ಮಂಜೂರಾಗದಿದ್ದಲ್ಲಿ ಸಂಬಂಧಪಟ್ಟ ವಿದ್ಯಾರ್ಥಿಗಳಿಂದಲ್ಲೇ ವಸೂಲಾತಿ ಮಾಡಿ ಕಾಲೇಜಿನ ಖಾತೆಗೆ ಸಂದಾಯ ಮಾಡಿದ ನಂತರ NOC ಮೂಲ ದಾಖಲಾತಿಗಳನ್ನು (ಅಂಕಪಟ್ಟಿ) ನೀಡಲಾಗಿತ್ತಿರುವ ಪದ್ಧತಿಯನ್ನು ತಮ್ಮ ಗಮನಕ್ಕೆ ತರುತ್ತಾ, ಸದರಿ ಆಕ್ಷೇಪಣೆ ಕೈ ಬಿಡುವಂತೆ ಈ ಮೂಲಕ ಕೋರಲಾಗಿದೆ. |

| ಸಾಮಾನ್ಯ ಅಭಿಪ್ರಾಯ | |
|---|---|
| 1. ವಿಶ್ವವಿದ್ಯಾನಿಲಯದಲ್ಲಿ ಏಕ ನಮೂದು ಅಥವಾ ಜೋಡಿ ನಮೂದು ತರಹದ ಯಾವುದೇ ರೀತಿಯ ಗುಣಮಟ್ಟದ ಲೆಕ್ಕ ನಿರ್ವಹಣಾ ಪದ್ಧತಿಯನ್ನು ಅನುಸರಿಸುತ್ತಿಲ್ಲ.<br>2. ಅನುಮೋದಿತವಾದ ನಿರ್ದಿಷ್ಠ ನಮೂನೆಗಳನ್ನು ಲೆಕ್ಕ ನಿರ್ವಹಣೆಗೆ ಬಳಸುತ್ತಿಲ್ಲ.<br>3. ಬ್ಯಾಂಕ್‌ವಾರು ಸ್ವೀಕೃತಿ ಮತ್ತು ಪಾವತಿ ಲೆಕ್ಕಗಳನ್ನು ಮಾಡುತ್ತಿದ್ದು, ಇದರಲ್ಲಿ ಭದ್ರತಾ/ನಂಬುಗೆ ಹಣ, ಪರಸ್ಪರ ಖಾತೆಗಳಿಂದ ಮಾಡಿಕೊಂಡ ತಾತ್ಕಾಲಿಕ ವರ್ಗಾವಣೆಗಳನ್ನು ಕೂಡ ಸ್ವೀಕೃತಿ ಮತ್ತು ಪಾವತಿಎಂದು ಲೆಕ್ಕಕ್ಕೆ ತೆಗೆದುಕೊಳ್ಳಲಾಗುತ್ತಿದೆ.<br>4. ಆದಾಯ ಮತ್ತು ವೆಚ್ಚ ತಃಖ್ತೆ, ಸ್ಥಿತಿ ವಿವರಣಾ ಪಟ್ಟಿ ಹಾಗೂ ಆಸ್ತಿ ಮತ್ತು ಹೊಣೆಗಾರಿಕೆ ಪಟ್ಟಿಯನ್ನು ತಯಾರಿಸಿ ಲೆಕ್ಕಪರಿಶೋಧನೆಗೆ ನೀಡುತ್ತಿಲ್ಲ.<br>5. ವಿಶ್ವವಿದ್ಯಾನಿಲಯವು ಲೆಕ್ಕಪತ್ರ ನಿರ್ವಹಣೆಗೆ ಅಂಗೀಕೃತವಾದ ಯಾವುದೇ ನಿರ್ದಿಷ್ಟ ನಮೂನೆಗಳನ್ನು ಬಳಸಿರುವುದಿಲ್ಲ. ಹಾಗೂ ಲೆಕ್ಕಪತ್ರ ನಿರ್ವಹಣೆಯನ್ನು ಸಹಮನ್ನಣೆ ಪಡೆದ ವಿಧಾನದಲ್ಲಿ (ಏಕನಮೂದು ಅಥವಾ ಜೋಡಿ ನಮೂದು ಲೆಕ್ಕಪದ್ಧತಿ) ನಿರ್ವಹಿಸಿರುವುದಿಲ್ಲ. ಹೀಗಾಗಿ ಹಾಜರುಪಡಿಸಿದ ನಗದು ಪುಸ್ತಕ ಮತ್ತು ಬ್ಯಾಂಕ್ ಪಾಸ್ ಪುಸ್ತಕಗಳ ಅಂಕಿಅಂಶಗಳ ಆಧಾರದಲ್ಲಿ ಲೆಕ್ಕಪತ್ರಗಳ ತಪಾಸಣೆಯನ್ನು ನಡೆಸಲಾಗಿರುತ್ತದೆ. ಹೀಗಾಗಿ ಅಂಕಿಅಂಶಗಳ ಖಚಿತತೆಯನ್ನು ನಿಖರವಾಗಿ ಪರಿಶೀಲಿಸಲು ಆಗಿರುವುದಿಲ್ಲ. ಈ ಕಾರಣಗಳಿಂದ ಲೆಕ್ಕಪತ್ರಗಳನ್ನು ಪ್ರಮಾಣೀಕರಿಸಲು ಕಷ್ಟಸಾಧ್ಯವಾಗಿರುತ್ತದೆ.<br>6. ನಗದಾಗದ ಧನಾದೇಶಗಳನ್ನು ವರ್ಷಗಳು ಕಳೆದರೂ (ಅವುಗಳ ಮಾನ್ಯತೆಅವಧಿ 3 ತಿಂಗಳು ಇದ್ದರೂ) ಅವುಗಳನ್ನು ಸ್ವೀಕೃತಿಯಲ್ಲಿ ಪ್ರತಿ ನಮೂದಾಗಿ ತೆಗೆದುಕೊಳ್ಳದೆಯೇ ನಗದಾಗದ ಧನಾದೇಶಗಳು ಎಂದೇತೋರಿಸಲಾಗುತ್ತಿದೆ.<br>7. ಸಿಂಡಿಕೇಟ್ ರಚಿಸಿದ ಪರಿನಿಯಮಗಳಿಗೆ (ಸ್ಟಾಟ್ಯೂಟ್ಸ್) ಕುಲಾಧಿಪತಿಗಳ ಅನುಮೋದನೆ ಪಡೆಯದೇ ವೇತನ ಹೆಚ್ಚಳ, ಹೆಚ್ಚುವರಿ ಸಂಭಾವನೆ, ನೌಕರರ ಪದೋನ್ನತಿ ಮುಂತಾದ ತೀರ್ಮಾನಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.<br>8. ಶ್ರೇಣಿ ವಹಿ, ಕಾರ್ಯ ನಿರ್ವಹಣಾ ವರದಿ, ವೃಂದ ಮತ್ತು ನೇಮಕಾತಿ ನಿಯಮಗಳ ಪರಿಷ್ಕರಣೆ ಕಾಲಿಕವಾಗಿ ಆಗಿರುವುದಿಲ್ಲ.<br>9. ಸರ್ಕಾರದಆದೇಶಕ್ಕೆ ವಿರುದ್ಧವಾಗಿಗುತ್ತಿಗೆಆಧಾರದಲ್ಲಿ ಲಿಪಿಕ ನೌಕರರ ನೇಮಕಾತಿ ಮಾಡಿಕೊಳ್ಳಲಾಗಿರುತ್ತದೆ. | 2018–19ನೇ ಸಾಲಿನ ಲೆಕ್ಕಪರಿಶೋಧನಾ ವರದಿಯಲ್ಲಿನ ಹಾಗೂ ಸಾಮಾನ್ಯ ಅಭಿಪ್ರಾಯದಲ್ಲಿ ಪ್ರಸ್ತಾಪಿಸಿ ವ್ಯಕ್ತಪಡಿಸಿರುವ ಸೂಚನೆ ಸಲಹೆಗಳನ್ನು ಸರಿಪಡಿಸಿಕೊಳ್ಳವ ನಿಟ್ಟಿನಲ್ಲಿ ಅಗತ್ಯ ಕ್ರಮ ತೆಗೆದುಕೊಂಡು ವರದಿಯಲ್ಲಿನ ನ್ಯೂನತೆಗಳನ್ನು ಸರಿಪಡಿಸಿಕೊಂಡು ಲೆಕ್ಕಪತ್ರಗಳನ್ನು ಸಮರ್ಪಕವಾಗಿ ನಿರ್ವಹಿಸಲು ಕ್ರಮವಹಿಸಲಾಗುವುದು.<br><br>ವಾರ್ಷಿಕ ಲೆಕ್ಕಪರಿಶೋಧನಾ ವರದಿಗಳ ಆಕ್ಷೇಪಣೆ ಮತ್ತು ವಸೂಲಾತಿ ಕಂಡಿಕೆಗಳಿಗೆ ಸೂಕ್ತ ಮಾಹಿತಿಯೊಂದಿಗೆ ಅನುಪಾಲನಾ ವರದಿಯನ್ನು ವಿಶ್ವವಿದ್ಯಾನಿಲಯದ ಅಧಿನಿಯಮದ ಪ್ರಕಾರ ಸಿದ್ಧಪಡಿಸಿ ಸರ್ಕಾರಕ್ಕೆ ಹಾಗೂ ಅಪರ ನಿರ್ದೇಶಕರು ಕ.ರಾ.ಲೆ.ಪ ಇಲಾಖೆ ಪ್ರಾಂತೀಯ ಕಛೇರಿ, ಮೈಸೂರು. ಇವರಿಗೆ ಸಲ್ಲಿಸಲಾಗುತ್ತಿದೆ ಹಾಗೂ ಸರ್ಕಾರದ ಆದೇಶದ ಪ್ರಕಾರ ಅಡ್‌ಹಾಕ್ ಸಮಿತಿಯ ಸಭೆ, ನಡೆಸಿ ಬಾಕಿ ಇರುವ ಕಂಡಿಕೆಗಳ ತೀರುವಳಿ ಬಗ್ಗೆ ಸೂಕ್ತ ಕ್ರಮವಹಿಸಲಾಗುವುದು ಎಂಬ ಅಂಶವನ್ನು ನಿವೇದಿಸಲಾಗಿದೆ. |

| | |
|---|---|
| 10. ಪ.ಜಾತಿ/ಪ.ವರ್ಗ/ಹಿಂ.ವರ್ಗ ಮತ್ತುಅಲ್ಪ ಸಂಖ್ಯಾತ ವಿದ್ಯಾರ್ಥಿಗಳಿಗೆ ನೀಡಿರುವ ಶುಲ್ಕ ರಿಯಾಯಿತಿ ಮೊತ್ತಗಳನ್ನು ಸಂಬಂಧಿತ ಇಲಾಖೆಗಳಿಂದ ಶೀಘ್ರವಾಗಿ ಪೂರ್ಣ ಪ್ರಮಾಣದಲ್ಲಿ ಮರುಭರಿಕೆ ಮಾಡಿಕೊಳ್ಳಲು ಕ್ರಮ ಕೈಗೊಂಡಿರುವುದಿಲ್ಲ.<br>11. ಯು.ಜಿ.ಸಿ/ಡಿ.ಆರ್.ಡಿ.ಒ/ವಿದೇಶಿ ನೆರವಿನ ಸಂಶೋಧನಾ ಯೋಜನೆಗಳ ಅನುದಾನವನ್ನು ಪೂರ್ಣವಾಗಿ ಮತ್ತು ಸಕಾಲದಲ್ಲಿ ಬಳಕೆ ಮಾಡದಿರುವುದನ್ನು ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಗಿದೆ.<br>12. ಸಂಶೋಧನಾ ವಿದ್ಯಾರ್ಥಿಗಳು ವಿದ್ಯಾರ್ಥಿನಿಲಯಗಳಲ್ಲಿದ್ದರೆ, ಶಿಷ್ಯವೇತನದಿಂದ ಮನೆ ಬಾಡಿಗೆ ಕಟಾಯಿಸುವಂತೆ ಮಾರ್ಗಸೂಚಿಗಳಿದ್ದರೂ ಕಟಾಯಿಸದೆ ಪೂರ್ಣ ಮೊತ್ತ ಪಾವತಿಸಲಾಗಿದೆ.<br>13. ವಿಶ್ವವಿದ್ಯಾನಿಲಯಗಳ ವಾಣಿಜ್ಯ ಉದ್ದೇಶದ ಕಟ್ಟಡಗಳನ್ನು ಹರಾಜು/ಟೆಂಡರ್ ಮಾಡಿ ಪಾರದರ್ಶಕವಾಗಿ ಬಾಡಿಗೆಗೆ ಕೊಡದೆ ನಷ್ಟವಾಗುತ್ತಿರುವುದು ಕಂಡು ಬಂದಿರುತ್ತದೆ.<br>14. ವಿಶ್ವವಿದ್ಯಾನಿಲಯದ ವಿವಿಧ ವಿಭಾಗಗಳು/ಕಛೇರಿಗಳಲ್ಲಿ ವಾರ್ಷಿಕ ದಾಸ್ತಾನು ಪರಿಶೀಲನೆ ನಿಯಮಿತವಾಗಿ ನಡೆಯದಿರುವುದು ಹಾಗೂ ಅನುಪಯುಕ್ತ ವಸ್ತುಗಳನ್ನು ವಿಲೇವಾರಿ ಮಾಡಲು ಕ್ರಮ ಕೈಗೊಳ್ಳದಿರುವುದು ಲೆಕ್ಕಪರಿಶೋಧನೆಯಲ್ಲಿ ಕಂಡುಬಂದಿರುತ್ತದೆ.<br>15. ಕ್ರಿಯಾಯೋಜನೆ ತಯಾರಿಸಿ ಅನುಮೋದನೆ ಪಡೆಯದೇ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗಿರುತ್ತದೆ.<br>16. ಪರೀಕ್ಷಾ ಕಾರ್ಯಗಳಿಗಾಗಿ ಗುತ್ತಿಗೆ ಕರಾರುಗಳನ್ನು ಒಂದು ವರ್ಷಕ್ಕಿಂತ ಹೆಚ್ಚಿನ ಅವಧಿಗೆ ಮಾಡಿಕೊಳ್ಳಲಾಗುತ್ತಿದೆ.<br>17. ವಿಶ್ವವಿದ್ಯಾನಿಲಯದ ವಿವಿಧ ಕಛೇರಿಗಳು ಲೆಕ್ಕಪತ್ರ ದಾಖಲೆಗಳನ್ನು ಪೂರ್ಣವಾಗಿ ಹಾಜರುಪಡಿಸದೆ ನಿರ್ಲಕ್ಷಿಸುತ್ತಿರುವುದು.<br>18. ಆಯವ್ಯಯ ಅಂದಾಜು ಪಟ್ಟಿಯನ್ನು ವೈಜ್ಞಾನಿಕವಾಗಿ ತಯಾರಿಸುವ ಕ್ರಮ ಅನುಸರಿಸುತ್ತಿಲ್ಲ.<br>19. ವಿಶ್ವವಿದ್ಯಾನಿಲಯದ ಅಧಿಕಾರಿಗಳಿಗೆ ಆರ್ಥಿಕ ಅಧಿಕಾರಗಳ ಪ್ರತ್ಯಾಯೋಜನೆ ಮಾಡಿಕೊಂಡಿರುವುದಿಲ್ಲ.<br>20. ಕ.ಸಾ.ಸಂ.ಪಾ ಅಧಿನಿಯಮ 1999ರ ಅನುಸಾರ ವಿಶ್ವವಿದ್ಯಾನಿಲಯವು ಟೆಂಡರ್ ಆಹ್ವಾನಿಸುವ ಪ್ರಾಧಿಕಾರ ಹಾಗೂ ಅಂಗೀಕರಿಸುವ ಪ್ರಾಧಿಕಾರವನ್ನು ಅಧಿಸೂಚಿಸದಿರುವುದು.<br>21. ಎ.ಸಿ ಬಿಲ್ಲುಗಳಿಗೆ ಮಂಜೂರಾತಿ ನೀಡುವ ಅಧಿಕಾರಿಗಳಿಂದ ಎನ್.ಡಿ.ಸಿ ವೋಚರ್‌ಗಳಿಗೆ ಮೇಲು ಸಹಿಯಾಗದಿರುವುದು ಹಾಗೂ ಅನಗತ್ಯವಾಗಿ ಎ.ಸಿ ಬಿಲ್ಲುಗಳಿಂದ ಹಣ ಡ್ರಾ ಮಾಡಿರುವುದು.<br>22. ಖಾತೆವಾರು/ಯೋಜನೆವಾರು ನಗದ ಪುಸ್ತಕಗಳನ್ನು ನಿರ್ವಹಿಸದಿರುವುದು/ನಿಯಮಾನುಸಾರ | |

| | |
|---|---|
| ನಿರ್ವಹಿಸದಿರುವುದು.<br>23. ಉಪಯುಕ್ತತಾ ಪ್ರಮಾಣಪತ್ರಗಳನ್ನು ಸಕಾಲದಲ್ಲಿ ಸಕ್ಷಮ ಪ್ರಾಧಿಕಾರಕ್ಕೆ ಸಲ್ಲಿಸದಿರುವುದು.<br>24. ಮಾರ್ಗಸೂಚಿಗಳನುಸಾರ ಯೋಜನೆವಾರು ಪ್ರಾಯೋಜಿತ ಕಾರ್ಯಕ್ರಮಗಳ ಪ್ರತ್ಯೇಕ ಬ್ಯಾಂಕ್‌ಖಾತೆ ನಿರ್ವಹಿಸಲು ಕ್ರಮ ಕೈಗೊಳ್ಳದಿರುವುದು.<br>25. ದರಪಟ್ಟಿ/ಟೆಂಡರ್ ಕರೆಯುವುದನ್ನು ತಪ್ಪಿಸಲು ಉದ್ದೇಶ ಪೂರ್ವಕವಾಗಿ ಬಿಲ್ಲುಗಳನ್ನು ವಿಭಜಿಸಿರುವುದು.<br>26. ವ್ಯವಹರಣೆ ಇಲ್ಲದಿರುವ ಖಾತೆಗಳನ್ನು ಮುಕ್ತಾಯಗೊಳಿಸಲು ಕ್ರಮ ಕೈಗೊಳ್ಳದಿರುವುದು.<br>27. ಅತಿಥಿಗಳ ವಾಸ್ತವ್ಯಕ್ಕೆ ಹೋಟೆಲಗಳ ಬದಲಾಗಿ ವಿಶ್ವವಿದ್ಯಾನಿಲಯದ ಅತಿಥಿ ಗೃಹದಲ್ಲಿ ವ್ಯವಸ್ಥೆ ಮಾಡುವ ಮೂಲಕ ಆರ್ಥಿಕ ಮಿತವ್ಯಯ ಸಾಧಿಸುವುದು.<br>28. ಮುದ್ರಣಾಲಯವನ್ನು ಆಧುನೀಕರಣಗೊಳಿಸಿ ವಿಶ್ವವಿದ್ಯಾನಿಲಯದ ಮುದ್ರಣಾ ಕಾರ್ಯಗಳಿಗಾಗಿ ಬಳಕೆ ಮಾಡಲು ಹಾಗೂ ಅದನ್ನು ಆದಾಯದ ಮೂಲವನ್ನಾಗಿಸಲು ಕ್ರಮ ಕೈಗೊಳ್ಳಬಹುದು.<br>29. ವಿಶ್ವವಿದ್ಯಾನಿಲಯದ ವಸ್ತುಸಂಗ್ರಹಾಲಯವನ್ನು ಪುನಶ್ಚೇತನಗೊಳಿಸಿ ಸಂಸ್ಥೆಯ ಆದಾಯದ ಮೂಲವನ್ನಾಗಿಸಲು ಕ್ರಮ ಕೈಗೊಳ್ಳಬಹುದು.<br>30. ಕಾಲಕಾಲಕ್ಕೆ ವಿಶ್ವವಿದ್ಯಾನಿಲಯದ ಕಟ್ಟಡ, ಸಭಾಂಗಣಗಳು ಹಾಗೂ ಮೈದಾನಗಳ ಬಾಡಿಗೆ/ನಿರ್ವಹಣಾ ವೆಚ್ಚದ ದರಗಳನ್ನು ಪರಿಷ್ಕರಿಸುವುದರ ಮೂಲಕ ಆದಾಯ ವೃದ್ಧಿಗೆ ಕ್ರಮ ಕೈಗೊಳ್ಳಬಹುದಾಗಿದೆ.<br>31. ವೈದ್ಯಕೀಯ ವೆಚ್ಚದ ಮರುಪಾವತಿ ಹುಂಡಿಗಳನ್ನು ಪಾವತಿಸುವಾಗ ಕರ್ನಾಟಕ ಸರ್ಕಾರಿ ನೌಕರರ (ವೈದ್ಯಕೀಯ ಹಾಜರಾತಿ) ನಿಯಮಗಳು–1963 ನ್ನು ಪಾಲಿಸುವುದು.<br><br>–ಸಹಿ–<br>ಅಪರ ನಿರ್ದೇಶಕರು<br>ಕರ್ನಾಟಕರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ<br>ಪ್ರಾಂತೀಯಕಛೇರಿ, ಮೈಸೂರು ವಿಭಾಗ, ಮೈಸೂರು | |

**ಅನುಬಂಧ – 1 ಕಂಡಿಕೆ – 1**

**ಮೈಸೂರು ವಿಶ್ವವಿದ್ಯಾನಿಲಯ, ಮೈಸೂರಿನ ಲೆಕ್ಕಪರಿಶೋಧನಾ ವರದಿಗಳಲ್ಲಿ ಸೂಚಿಸಿರುವ ಆಕ್ಷೇಪಣಾ ಮತ್ತು ವಸೂಲಾತಿ ಮೊತ್ತದ ವಿವರ.**

| ಕ್ರಸಂ | ಲೆಕ್ಕ ಪರಿಶೋಧನಾ ವರ್ಷ | ಕಂಡಿಕೆ ಸಂಖ್ಯೆ | ಆಕ್ಷೇಪಣೆ ಮೊತ್ತ | ಕಂಡಿಕೆ ಸಂಖ್ಯೆ | ವಸೂಲಾತಿ ಮೊತ್ತ |
|---|---|---|---|---|---|
| 1 | 1988–1989 | 44 | 7,716,771.35 | 12 | 421,226.65 |
| 2 | 1989–1990 | 11 | 1,237,128.95 | 23 | 2,135,948.75 |
| 3 | 1990–1991 | 16 | 2,524,105.68 | 15 | 1,394,152.90 |
| 4 | 1991–1992 | 30 | 5,896,787.51 | 46 | 2,537,560.48 |
| 5 | 1992–1993 | 21 | 9,807,670.80 | 36 | 1,636,563.00 |
| 6 | 1993–1994 | 2 | 1,160,118.40 | 9 | 2,813,562.95 |
| 7 | 1994–1995 | 5 | 8,480,759.06 | 9 | 3,760,964.90 |
| 8 | 1995–1996 | 7 | 17,653,800.60 | 6 | 4,724,661.25 |
| 9 | 1996–1997 | 5 | 6,026,341.50 | 14 | 2,914,051.40 |
| 10 | 1997–1998 | 7 | 10,223,404.75 | 16 | 1,481,004.15 |
| 11 | 1998–1999 | 13 | 33,099,030.50 | 24 | 4,162,909.75 |
| 12 | 1999–2000 | 12 | 50,002,865.75 | 19 | 3,992,803.00 |
| 13 | 2000–2001 | 8 | 17,735,647.00 | 16 | 8,168,050.00 |
| 14 | 2001–2002 | 11 | 28,446,401.00 | 10 | 5,679,894.00 |
| 15 | 2002–2003 | 23 | 39,581,695.15 | 29 | 8,925,176.00 |
| 16 | 2003–2004 | 30 | 51,594,598.00 | 13 | 6,956,125.00 |
| 17 | 2004–2005 | 5 | 26,310,140.00 | 5 | 7,955,506.00 |
| 18 | 2005–2006 | 19 | 35,832,214.00 | 10 | 8,593,504.00 |
| 19 | 2006–2007 | 20 | 33,305,435.00 | 12 | 12,398,203.00 |
| 20 | 2007–2008 | 5 | 2,895,868.00 | 6 | 6,254,170.00 |
| 21 | 2008–2009 | 12 | 43,436,390.00 | 5 | 683,769.00 |
| 22 | 2009–2010 | 18 | 32,477,618.00 | 12 | 3,306,364.00 |
| 23 | 2010–2011 | 20 | 27,374,654.00 | 9 | 13,697,902.00 |
| 24 | 2011–2012 | 10 | 73,432,361.00 | 2 | 679,839.00 |
| 25 | 2012–2013 | 18 | 66,384,098.00 | 3 | 222,750.00 |
| 26 | 2013–2014 | 77 | 566,436,428.00 | 21 | 29,263,321.00 |
| 27 | 2014–2015 | 127 | 682,207,312.00 | 68 | 137,866,206.00 |
| 28 | 2015–2016 | 102 | 1,540,009,298.00 | 92 | 184,753,417.00 |
| 29 | 2016–2017 | 102 | 1,114,633,815.00 | 35 | 8,433,586.00 |
| 30 | 2017–2018 | 95 | 911,080,864.00 | 68 | 40,150,497.00 |
| | **ಒಟ್ಟು** | **875** | **5,447,003,621.00** | **645** | **515,963,688.18** |
| | **ತೀರುವಳಿಯಾದ ಕಂಡಿಕೆ ಮೊತ್ತ** | **50** | **475,345,896.00** | **32** | **61,551,173.00** |
| | **ಒಟ್ಟು** | **825** | **497,16,57,725.00** | **613** | **45,44,12,515.18** |

–ಸಹಿ–

ಅಪರ ನಿರ್ದೇಶಕರು

ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ

ಪ್ರಾಂತೀಯ ಕಛೇರಿ, ಮೈಸೂರು ವಿಭಾಗ, ಮೈಸೂರು.

| ಅನುಬಂಧ – 1(ಎ) ಕಂಡಿಕೆ – 1 | | | | | |
|---|---|---|---|---|---|
| ಮೈಸೂರು ವಿಶ್ವವಿದ್ಯಾಲಯ, ಮೈಸೂರು ವರದಿಗಳಲ್ಲಿನ ಅನುಸರಣೆ ಒಪ್ಪಿ ತೀರುವಳಿ ಮಾಡಿದ ಕಂಡಿಕೆಗಳ ವಿವರ | | | | | |
| ಕ್ರ.ಸಂ | ಲೆಕ್ಕ ಪರಿಶೋಧನಾ ವರ್ಷ | ಆಕ್ಷೇಪಣೆ | | ವಸೂಲಾತಿ | |
| | | ಕಂಡಿಕೆ ಸಂಖ್ಯೆ | ಮೊತ್ತ | ಕಂಡಿಕೆ ಸಂಖ್ಯೆ | ಮೊತ್ತ |
| 1 | 1988–1989 | – | – | – | – |
| 2 | 1989–1990 | – | – | – | – |
| 3 | 1990–1991 | – | – | – | – |
| 4 | 1991–1992 | – | – | – | – |
| 5 | 1992–1993 | – | – | – | – |
| 6 | 1993–1994 | – | – | – | – |
| 7 | 1994–1995 | – | – | – | – |
| 8 | 1995–1996 | – | – | – | – |
| 9 | 1996–1997 | – | – | – | – |
| 10 | 1997–1998 | – | – | – | – |
| 11 | 1998–1999 | – | – | – | – |
| 12 | 1999–2000 | – | – | – | – |
| 13 | 2000–2001 | – | – | – | – |
| 14 | 2001–2002 | – | – | – | – |
| 15 | 2002–2003 | 10 | 96,000.00 | 24 | 47,551.00 |
| | | 22 | 383,518.00 | 50 | 7,700.00 |
| | | 28 | 67,827.00 | – | – |
| | | 50 | 11,000.00 | – | – |
| | | **ಒಟ್ಟು** | **558,345.00** | **ಒಟ್ಟು** | **55,251.00** |
| 16 | 2003–2004 | 32 | 982,687.00 | – | – |
| | | 54 | 869,377.00 | – | – |
| | | **ಒಟ್ಟು** | **1,852,064.00** | – | – |
| 17 | 2004–2005 | 23 | 452,223.00 | – | – |
| | | **ಒಟ್ಟು** | **452,223.00** | – | – |
| 18 | 2005–2006 | 9 | 20,000.00 | – | – |
| | | 14 | 164,614.00 | – | |
| | | **ಒಟ್ಟು** | **184,614.00** | – | – |
| 19 | 2006–2007 | 10 | 780,278.00 | 14 | 6,336,625.00 |
| | | 25 | 129,508.00 | 15 | 1,592,125.00 |
| | | 26 | 167,237.00 | 20 | 11,545.00 |
| | | 33 | 600,000.00 | 28 | 8,183.00 |
| | | 34 | 49,990.00 | 37 | 15,000.00 |

| | | | | | |
|---|---|---|---|---|---|
| | | 38 | 255,639.00 | – | – |
| | | | | | |
| | | 43 | 107,011.00 | – | – |
| | | | | | |
| | | | | | |
| | | 44 | 625,758.00 | – | – |
| | | 49 | 151,703.00 | – | – |
| | | **ಒಟ್ಟು** | **2,867,124.00** | **ಒಟ್ಟು** | **7,963,478.00** |
| 20 | 2007–08 | 7 | 379,070.00 | 15 | 100,000.00 |
| | | 10 | 688,450.00 | 17 | 200,000.00 |
| | | 19 | 1,702,572.00 | 24 | 2,400.00 |
| | | **ಒಟ್ಟು** | **2,770,092.00** | **ಒಟ್ಟು** | **302,400.00** |
| 21 | 2008–2009 | – | – | – | – |
| 22 | 2009–2010 | – | – | – | – |
| 23 | 2010–2011 | – | – | – | – |
| 24 | 2011–2012 | – | – | – | – |
| 25 | 2012–2013 | – | – | – | – |
| 26 | 2013–14 | – | – | – | – |
| 27 | 2014–15 | – | – | – | – |
| 28 | 2015–16 | **(ಭಾಗ–2)** 19 | 20,349,911.00 | **(ಭಾಗ–2)** 24 | 51,504.00 |
| | | **(ಭಾಗ–3)** 14 | 315,052.00 | **(ಭಾಗ–3)** 1 | 145,265.00 |
| | | 17 | 67,025,766.00 | 3 | 168,000.00 |
| | | 45 | 568,520.00 | 9 | 21,072,876.00 |
| | | 46 | 188,910.00 | 10 | 23,577,218.00 |
| | | 59 | 83,755.00 | 12 | 44,355.00 |
| | | 61 | 17,353,304.00 | 19 | 50,120.00 |
| | | 66 | 562,849.00 | 23 | 261,450.00 |
| | | 71 | 1,706,639.00 | 33 | 173,812.00 |
| | | 73 | 1,037,172.00 | 41 | 5,413.00 |
| | | 72 | 3,105,640.00 | 42 | 66,022.00 |
| | | 76 | 176,476.00 | 55 | 57,483.00 |
| | | 77 | 196,000.00 | 61 | 804,068.00 |
| | | 81 | 256,181.00 | 66 | 8,903.00 |

| | | | | | |
|---|---|---|---|---|---|
| | | 82 | 171,750.00 | 93 | 57,155.00 |
| | | 88 | 448,750.00 | 98 | 4,589,792.00 |
| | | 92 | 58,291.00 | 132 | 200,000.00 |
| | | 96 | 5,191,255.00 | 153 | 28,418.00 |
| | | 101 | 282,008,424.00 | 155 | 11,761.00 |
| | | 107 | 2,617,919.00 | 157 | 350.00 |
| | | 111 | 8,193,447.00 | 163 | 1,385,760.00 |
| | | 158 | 296,225.00 | – | – |
| | | 160 | 50,000,000.00 | – | – |
| | | 170 | 7,533.00 | – | – |
| | | **(ಭಾಗ–4)** 4 | 749,000.00 | 5 | 470,319.00 |
| | | 8 | 3,164,369.00 | – | – |
| | | 23 | 480,200.00 | – | – |
| | | 28 | 16,480.00 | – | – |
| | | 29 | 43,587.00 | - | - |
| | | 175 | 288,029.00 | - | - |
